ಬುಧವಾರ, ನವೆಂಬರ್ 8, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ

ನವದೆಹಲಿಯಲ್ಲಿ ನಡೆದ 'ಸ್ಯಾಮ್ ಬಹದೂರ್' ಸಿನಿಮಾ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಸಾನ್ಯಾ ಮಲ್ಹೋತ್ರಾ ಹೀಗೆ ಕಾಣಿಸಿಕೊಂಡರು

ಸಿ. ಕೃಷ್ಣಯ್ಯ ಚೆಟ್ಟಿ™ ಗ್ರೂಪ್ ಆಫ್ ಜ್ಯುವೆಲರ್ಸ್

ಬೆಂಗಳೂರಿನಾದ್ಯಂತ 5 ಬೃಹತ್ ಷೋರೂಮ್‌ಗಳು ಮತ್ತು ಬೊಟಿಕ್‌ಗಳು: ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರೋಡ್ • ಜಯನಗರ • ಮಲ್ಲೇಶ್ವರಂ • ಫೀನಿಕ್ಸ್ ಮಾರ್ಕೆಟ್ ಸಿಟಿ

Dedicated relationship manager: +91 95131 31869 | Tel: 080-4000 1869 / 4100 1869 | www.ckcjewellers.com

*ಷರತ್ತು ಮತ್ತು ನಿಬಂಧನೆಗಳು ಅನ್ವಯ. ಎಲ್ಲಾ ಟ್ರೇಡ್‌ಮಾರ್ಕ್ಸ್ ಹಾಗೂ ಲೋಗೊಗಳು ಸಂಬಂಧಿತ ಸಂಸ್ಥೆಯದ್ದಾಗಿರುತ್ತವೆ ಮತ್ತು ಇವನ್ನು ದುರುಪಯೋಗ ಮಾಡಿಕೊಳ್ಳುವುದನ್ನು ನಿರ್ಬಂಧಿಸಲಾಗಿದೆ.

ಸಿಕೆಸಿ ಸಮೂಹ ಕಂಪನಿಗಳು: C. Krishniah Chetty & Sons™ | C. Krishniah Chetty Jewellers® | The 1869 Guild | C. Krishniah Chetty & Sons | C. Krishniah Chetty Charitable Trust | C. Krishniah Chetty Foundation

*ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ: * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಾಗಗದಿರಿ. ವಾಸ್ತವವಾಗಿ ಅದು ಸಿಕೆಸಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೊ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ. ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು–ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ.*

CKC GROUP

155 YEARS

ಪರಿಚಯಿಸಲಾಗುತ್ತಿದೆ

ದಿ ದರ್ಬಾರ್

ASSEMBLAGE MDCCCLXIX

ಒಡೆಯರ್ ರಾಜವಂಶ ಮತ್ತು ಮೈಸೂರು ಸಾಮ್ರಾಜ್ಯದ ಪ್ರೇರಣೆಯಿಂದ ರೂಪಿಸಲಾದ ಕೌಶಲ್ಯದಿಂದ ರೂಪಗೊಂಡಿರುವ ಚಿನ್ನಾಭರಣಗಳ ಶ್ರೇಣಿ.

ಈ ಐತಿಹಾಸಿಕ ಅರಮನೆಯು ಇಂಡೋ-ಸಾರ್ಸೆನಿಕ್, ಗೋಥಿಕ್, ರಜಪೂತ ಮತ್ತು ಮುಘಲ್ ವಾಸ್ತುಶಿಲ್ಪ ಮಿಶ್ರಿತ ಕಲಾತ್ಮಕತೆಯ ಶ್ರೀಮಂತಿಕೆಯಿಂದ ಕಂಗೊಳಿಸುತ್ತಿದ್ದು, ನೋಡುಗರ ಮನತಣಿಸುವಂತಿದೆ. ಈ ಸಾಂಪ್ರದಾಯಿಕ ಕಟ್ಟಡದ ವೈಭವಯುತ ಕಲಾತ್ಮಕತೆಯನ್ನು ಪ್ರತಿಫಲಿಸುತ್ತವೆ ನಮ್ಮ ಚಿನ್ನಾಭರಣಗಳ ಸಂಗ್ರಹ. ಈ ಸಂಗ್ರಹದಲ್ಲಿ ಚೋಕರ್ಸ್, ಕಂಠಾಭರಣ, ಕಿವಿಯೋಲೆ, ಬ್ರೇಸ್‌ಲೆಟ್, ಬಳೆಗಳು, ತಾಯತಗಳು ಮತ್ತು ಉಂಗುರಗಳಿವೆ. ಸಿ. ಕೃಷ್ಣಯ್ಯ ಚೆಟ್ಟಿಯವರ ಕಲಾವಿದರು ಹಾಗೂ ಕುಶಲಕರ್ಮಿಗಳ ಕರಕುಶಲ ನೈಪುಣ್ಯತೆಯಿಂದ, ಸೂಕ್ಷ್ಮ ವಿನ್ಯಾಸಗಳೊಂದಿಗೆ ರೂಪಗೊಂಡಿರುವ, ಅದ್ಭುತ ಕಲಾವಂತಿಕೆಯನ್ನು ನಿರೂಪಿಸುವ, ದರ್ಬಾರ್ ಸಂಗ್ರಹದಲ್ಲಿರುವ ಪ್ರತಿಯೊಂದು ಆಭರಣವೂ ಕಣ್ಣುಗಳಿಗೆ ಹಬ್ಬವನ್ನುಂಟು ಮಾಡುತ್ತವೆ.

ಭವ್ಯ ಅರಮನೆಯ ಒಳಾಂಗಣ ಮತ್ತು ಹೊರಾಂಗಣದ ಕಲಾವಂತಿಕೆಯ ಸ್ಫೂರ್ತಿಯಿಂದ ರೂಪಿತ ಈ ಸಂಗ್ರಹವು, 1927ರಲ್ಲಿ ಸಿ. ಕೃಷ್ಣಯ್ಯ ಚೆಟ್ಟಿಯವರ ಕೌಶಲ್ಯದಿಂದ ಮೂಡಿ ಬಂದಿರುವ ಅರಮನೆಯ ಮುಂಭಾಗ, ಬಾಗಿಲುಗಳು, ದರ್ಬಾರ್ ಹಜಾರಗಳು, ಕಮಾನುಗಳು, ಮೇಲ್ಛಾವಣಿಗಳು, ಗುಮ್ಮಟ, ಕಾಲಂ, ಕಿಟಕಿ, ನೆಲಹಾಸು ಮತ್ತು ಅನೇಕ ರಾಜವಂಶ ಸಂಗ್ರಹಣೆಗಳ ಪ್ರತೀಕವಾಗಿದೆ. ಪ್ರತಿ ಆಭರಣದಲ್ಲೂ ಮೈಸೂರು ರಾಜ್ಯದ ಲಾಂಛನವಾಗಿದ್ದ ಗಂಡಭೇರುಂಡದ ಚಿಹ್ನೆಯು ರಾರಾಜಿಸುತ್ತದೆ. ಮುತ್ತು, ರತ್ನ, ಹವಳ ಎಲ್ಲವೂ ಈ ಚಿನ್ನಾಭರಣಗಳಲ್ಲಿ ಎರಕಗೊಂಡು ಜೀವಂತಿಕೆಯಿಂದ ಕಂಗೊಳಿಸುತ್ತಿವೆ. ಇದೊಂದು ಸಂಪ್ರದಾಯಕ, ಪರಂಪರಾಗ, ಕರಕುಶಲತೆಯುಳ್ಳ ಭವಿಷ್ಯದ ಆಭರಣಗಳ ಕಾಲಾತೀತ ಕಲಾತ್ಮಕ ಸೌಂದರ್ಯದ ಆಚರಿಸುವ ಸಂಗ್ರಹವಾಗಿದೆ.

ನಮಗೆ ಸ್ಫೂರ್ತಿ ನೀಡಿದ್ದಕ್ಕಾಗಿ ಧನ್ಯವಾದಗಳು

ರಾಯಲ್ ಪ್ರಿನ್ಸೆಸ್ ಕಾಮಾಕ್ಷಿ ದೇವಿ ಒಡೆಯರ್ ಮತ್ತು ರಾಯಲ್ ಪ್ರಿನ್ಸೆಸ್ ದರ್ಶಿಕಾ ಕುಮಾರಿ

ಸಿ. ಕೃಷ್ಣಯ್ಯ ಚೆಟ್ಟಿ™
ಗ್ರೂಪ್ ಆಫ್ ಜ್ಯುವೆಲರ್ಸ್

ಬೆಂಗಳೂರಿನಾದ್ಯಂತ 5 ಬೃಹತ್ ಶೋರೂಮ್‌ಗಳು ಮತ್ತು ಬೊಟಿಕ್‌ಗಳು: ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರೋಡ್ • ಜಯನಗರ • ಮಲ್ಲೇಶ್ವರಂ • ಫೀನಿಕ್ಸ್ ಮಾರ್ಕೆಟ್ ಸಿಟಿ

Dedicated relationship manager: +91 95131 31869 | Tel: 080-4000 1869 / 4100 1869 | www.ckcjewellers.com

*ಷರತ್ತು ಮತ್ತು ನಿಬಂಧನೆಗಳು ಅನ್ವಯ. ಎಲ್ಲಾ ಟ್ರೇಡ್‌ಮಾರ್ಕ್ಸ್ ಹಾಗೂ ಲೋಗೋಗಳು ಸಂಬಂಧಿತ ಸಂಸ್ಥೆಯದ್ದಾಗಿರುತ್ತವೆ ಮತ್ತು ಇವನ್ನು ದುರುಪಯೋಗ ಮಾಡಿಕೊಳ್ಳುವುದನ್ನು ನಿರ್ಬಂಧಿಸಲಾಗಿದೆ.

ಸಿಕೆಸಿ ಸಮೂಹ ಕಂಪನಿಗಳು C. Krishniah Chetty & Sons™ | C. Krishniah Chetty Jewellers® | The 1869 Guild – C. Krishniah Chetty & Sons Manufacturers | C. Krishniah Chetty & Sons | C. Krishniah Chetty Charitable Trust | C. Krishniah Chetty Foundation

ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ:** * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಗಾಗದಿರಿ. ವಾಸ್ತವವಾಗಿ ಅದು ಸಿಕೆಸಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೋ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ. **ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು-ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಸೊಳ್ಳೆಗಳ ಮೊಟ್ಟೆಗಳು ಒಣಗಿದಮೇಲೂ ಜೀವಂತವಾಗಿರುತ್ತವೆಯಂತೆ!

ಆಳ-ಅಗಲ
ಡೀಪ್‌ಫೇಕ್ ಕೃತಕ ಬುದ್ಧಿಮತ್ತೆಯ 'ಅತಿಬುದ್ಧಿ'
ತಿರುಚಿದ ವಿಡಿಯೊ ತೆರವಿಗೆ ಗಡುವು 10
ಛತ್ತೀಸಗಢ: ಶೇ 71ರಷ್ಟು ಮತದಾನ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
64,942	19,406	₹62,660 (ಬೆಂಗಳೂರು)	₹73,500 (ಬೆಂಗಳೂರು)	83.27

ಸಮೀಪಿಸುತ್ತಿರುವ ಲೋಕಸಭಾ ಚುನಾವಣೆ: ಮೀಸಲು ಅಸ್ತ್ರ ಪ್ರಯೋಗಿಸಿದ ಸಿ.ಎಂ ನಿತೀಶ್

ಬಿಹಾರ: ಮೀಸಲಾತಿ ಹೆಚ್ಚಳಕ್ಕೆ ಅಸ್ತು

ಪಟ್ನಾ (ಪಿಟಿಐ): ರಾಜ್ಯದಲ್ಲಿ ಇತರೆ ಹಿಂದುಳಿದ ಸಮುದಾಯದವರು (ಒಬಿಸಿ), ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಈಗಿರುವ ಶೇ 50ರಿಂದ ಶೇ 65ಕ್ಕೆ ಹೆಚ್ಚಿಸುವ ಪ್ರಸ್ತಾವಕ್ಕೆ ಬಿಹಾರ ಸಚಿವ ಸಂಪುಟ ಮಂಗಳವಾರ ಒಪ್ಪಿಗೆ ನೀಡಿದೆ.

ಇದಕ್ಕೆ ಅಗತ್ಯವಿರುವ ಮಸೂದೆಯನ್ನು ಪ್ರಸಕ್ತ ಅಧಿವೇಶನದಲ್ಲಿಯೇ ಮಂಡಿಸಲಾಗುವುದು ಎಂದು ಮುಖ್ಯಮಂತ್ರಿ ನಿತೀಶ್ ಕುಮಾರ್ ಹೇಳಿದ್ದಾರೆ. ಸದನದಲ್ಲಿ ಮಂಡನೆಯಾದ, ಬಿಹಾರ ಸರ್ಕಾರದ ಜಾತಿ ಸಮೀಕ್ಷೆಯ ವರದಿ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸಿದ ವೇಳೆ ಅವರು ಈ ವಿಷಯ ಪ್ರಕಟಿಸಿದರು.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಒಟ್ಟು ಮೀಸಲಾತಿ ಪ್ರಮಾಣ ಈಗ ಶೇಕಡ 17ರಷ್ಟಿದೆ. ಇದು ಶೇ 22 ಆಗಲಿದೆ. ಅದೇ ರೀತಿಯಲ್ಲಿ, ಒಬಿಸಿ ಸಮುದಾಯಗಳಿಗೆ ಈಗಿರುವ ಮೀಸಲಾತಿ ಪ್ರಮಾಣ ಶೇ 30ರಿಂದ ಶೇ 43ಕ್ಕೆ ಹೆಚ್ಚಲಿದೆ.

ಬಿಹಾರ ವಿಧಾನಸಭೆಯ ಚಳಿಗಾಲದ ಅಧಿವೇಶನದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಮಾತನಾಡಿದರು ಪಿಟಿಐ ಚಿತ್ರ

ಆರ್ಥಿಕ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಶೇ 10ರಷ್ಟು ಮೀಸಲಾತಿ ಇದೆ. ಇದೂ ಸೇರಿದಂತೆ ರಾಜ್ಯದಲ್ಲಿನ ಒಟ್ಟಾರೆ ಮೀಸಲಾತಿ ಪ್ರಮಾಣ ಶೇ 75ರಷ್ಟು ಆಗಲಿದೆ.

ಬಿಹಾರದ ಜಾತಿ ಗಣತಿಯ ವರದಿ ಪ್ರಕಾರ, ಅತ್ಯಂತ ಹಿಂದುಳಿದ ವರ್ಗಗಳು ಸೇರಿದಂತೆ ಒಬಿಸಿ ಸಮುದಾಯದ ಪಾಲು ಒಟ್ಟು ಜನಸಂಖ್ಯೆಯಲ್ಲಿ ಶೇ 63ರಷ್ಟು ಇದೆ. ಎಸ್‌ಸಿ, ಎಸ್‌ಟಿ ಸಮುದಾಯಗಳ ಜನಸಂಖ್ಯೆಯು ಒಟ್ಟು ಜನ ಸಂಖ್ಯೆಯಲ್ಲಿ ಶೇ 21ಕ್ಕಿಂತ ತುಸು ಹೆಚ್ಚು ಇದೆ.

10ನೇ ಪುಟ ನೋಡಿ

'ಒಳ ಮೀಸಲು' ಪಟ್ಟು ಸಿ.ಎಂಗೆ ಇಕ್ಕಟ್ಟು

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಮೀಸಲಾತಿ ಮರು ವರ್ಗೀಕರಣ (ಒಳ ಮೀಸಲಾತಿ) ಕಲ್ಪಿಸಲು ರಚಿಸಲಾದ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಬೇಕೆಂಬ ಮಾದಿಗ (ಪರಿಶಿಷ್ಟ ಎಡಗೈ) ಸಮುದಾಯದ ಕಾಂಗ್ರೆಸ್ ಸಚಿವರ, ಮುಖಂಡರ ಪಟ್ಟು ರಾಜ್ಯ ಸರ್ಕಾರದ ಪಾಲಿಗೆ ಬಿಸಿತುಪ್ಪವಾಗಿ ಪರಿಣಮಿಸಿದೆ.

ಎಚ್.ಕಾಂತರಾಜು ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ಸ್ವೀಕರಿಸುವಂತೆ ಪರಿಶಿಷ್ಟ ಮತ್ತು ಹಿಂದುಳಿದ ಸಮುದಾಯದ ಒತ್ತಡ, ಒಕ್ಕಲಿಗ, ಲಿಂಗಾಯತರ ವಿರೋಧದ ಬೆನ್ನಲ್ಲೆ, ಇದೀಗ ಸದಾಶಿವ ಆಯೋಗದ ವರದಿ ಜಾರಿ ವಿಷಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಇಕ್ಕಟ್ಟಿಗೆ ಸಿಲುಕಿಸುವ ಸಾಧ್ಯತೆ ಇದೆ.

ವಿಧಾನಸಭೆ ಚುನಾವಣೆಗೂ ಮೊದಲು ಚಿತ್ರದುರ್ಗದಲ್ಲಿ ಕಾಂಗ್ರೆಸ್ ಆಯೋಜಿಸಿದ್ದ ಎಸ್‌ಸಿ- ಎಸ್‌ಟಿ 'ಐಕ್ಯತಾ ಸಮಾವೇಶ' ಮತ್ತು ಚುನಾವಣಾ ಪ್ರಣಾಳಿಕೆಯಲ್ಲಿ ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸುವ ಭರವಸೆಯನ್ನು ಕಾಂಗ್ರೆಸ್ ನೀಡಿತ್ತು. ಮೊದಲ ಸಚಿವ ಸಂಪುಟ ಸಭೆಗೆ ತಂದು, ಮೊದಲ ಅಧಿವೇಶನದಲ್ಲಿಯೇ ವರದಿ ಮಂಡಿಸುವುದಾಗಿ ಸಿದ್ದರಾಮಯ್ಯ ಭರವಸೆ ನೀಡಿದ್ದರು.

10ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಮಸ್ಯೆ ಸೃಷ್ಟಿಸುತ್ತಿರುವ ಕೇಂದ್ರದ ನಡೆ: 'ಸುಪ್ರೀಂ' ಕಳವಳ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನಾಗಿ ನೇಮಿಸಲು ಕೊಲಿಜಿಯಂ ಕಳುಹಿಸಿದ ಹೆಸರುಗಳ ಪೈಕಿ ಆಯ್ದ ಕೆಲವಕ್ಕೆ ಮಾತ್ರ ಕೇಂದ್ರ ಸರ್ಕಾರ ಒಪ್ಪಿಗೆ ನೀಡುವುದು ಸಮಸ್ಯೆ ಸೃಷ್ಟಿಸುವಂಥದ್ದು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಕಳವಳ ವ್ಯಕ್ತಪಡಿಸಿದೆ.

ಒಂದು ಹೈಕೋರ್ಟ್‌ನಿಂದ ಇನ್ನೊಂದು ಹೈಕೋರ್ಟ್‌ಗೆ ವರ್ಗಾವಣೆಗೆ ಶಿಫಾರಸು ಮಾಡಿದ್ದ ನ್ಯಾಯಮೂರ್ತಿಗಳ ಹೆಸರುಗಳು ಕೇಂದ್ರದ ಬಳಿ ಹಾಗೆಯೇ ಉಳಿದಿವೆ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸುಧಾಂಶು ಧುಲಿಯಾ ಅವರು ಇದ್ದ ನ್ಯಾಯಪೀಠವು ಹೇಳಿದೆ.

'ಸರ್ಕಾರಕ್ಕೆ ರುಚಿಸದ ರೀತಿಯಲ್ಲಿ ಈ ನ್ಯಾಯಾಲಯ ಅಥವಾ ಕೊಲಿಜಿಯಂ ತೀರ್ಮಾನ ತೆಗೆದುಕೊಳ್ಳಬೇಕಾಗುವ ಸಂದರ್ಭವು ಸೃಷ್ಟಿ ಆಗುವುದಿಲ್ಲ ಎಂಬುದು ನಮ್ಮ ಆಶಯ' ಎಂದು ಕೂಡ ಪೀಠವು ಹೇಳಿದೆ. ನ್ಯಾಯಮೂರ್ತಿಗಳ ನೇಮಕ ಹಾಗೂ ವರ್ಗಾವಣೆಗೆ ಸಂಬಂಧಿಸಿದ ಶಿಫಾರಸುಗಳ ವಿಚಾರದಲ್ಲಿ ಕೇಂದ್ರವು ತ್ವರಿತವಾಗಿ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸುತ್ತಿದೆ.

ಕೆಲವು ಹೆಸರುಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯೆಗಳು ತ್ವರಿತವಾಗಿ ನಡೆಯುತ್ತಿವೆ ಎಂದು ನ್ಯಾ. ಕೌಲ್ ಹೇಳಿದರು. ಆದರೆ ಕೆಲವರ ವಿಚಾರದಲ್ಲಿ ಮಾತ್ರ ತ್ವರಿತವಾಗಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವುದು ಸಮಸ್ಯೆಗಳನ್ನು ಸೃಷ್ಟಿಸಿದೆ. ಇಂತಹ ಕೆಲಸ ಮಾಡಬಾರದು ಎಂದು ಕೌಲ್ ಅವರು ಕಿವಿಮಾತು ಹೇಳಿದರು. ವಿಚಾರಣೆಯನ್ನು ನ. 20ಕ್ಕೆ ಮುಂದೂಡಲಾಗಿದೆ.

ಮಾಜಿ ಸಚಿವ ಡಿ.ಬಿ.ಚಂದ್ರೇಗೌಡ ನಿಧನ

ಪ್ರಜಾವಾಣಿ ವಾರ್ತೆ

ಮೂಡಿಗೆರೆ (ಚಿಕ್ಕಮಗಳೂರು): ಮಾಜಿ ಸಚಿವ ಡಿ.ಬಿ. ಚಂದ್ರೇಗೌಡ (87) ಮಂಗಳವಾರ ಬೆಳಿಗ್ಗೆ ದಾರದಹಳ್ಳಿಯ ತಮ್ಮ ನಿವಾಸ 'ಪೂರ್ಣಚಂದ್ರ'ದಲ್ಲಿ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಅವರಿಗೆ ಪತ್ನಿ ಪೂರ್ಣಿಮಾ, ನಾಲ್ವರು ಪುತ್ರಿಯರು ಇದ್ದಾರೆ.

10ನೇ ಪುಟ ನೋಡಿ

ನಗರದ ಬಹುತೇಕ ಭಾಗಗಳಲ್ಲಿ ಸೋಮವಾರ ರಾತ್ರಿ ಸುರಿದ ಧಾರಾಕಾರ ಮಳೆ

ಮಳೆ ಅಬ್ಬರ: ಸವಾರರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಎರಡು ದಿನ ಸುರಿದ ಹಿಂಗಾರು ಮಳೆಯು ತಂಪೆರೆಯುವ ಜೊತೆಗೆ ಜನರಿಗೆ ಹಿತಾನುಭವ ನೀಡಿತು. ಜತೆಗೆ ಅಲ್ಲಲ್ಲಿ ಸಮಸ್ಯೆಯನ್ನೂ ಸೃಷ್ಟಿಸಿತ್ತು. ರಸ್ತೆಯ ಮೇಲೆ ನೀರು ಹರಿದ ಪರಿಣಾಮ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು.

ಸೋಮವಾರ ರಾತ್ರಿಯಿಡಿ ಹಲವು ಬಡಾವಣೆಗಳಲ್ಲಿ ಧಾರಾಕಾರ ಮಳೆ ಸುರಿದಿದೆ. ಮಂಗಳವಾರ ಬೆಳಿಗ್ಗೆ ಬಿಡುವು ನೀಡಿತ್ತು. ಜತೆಗೆ ಬಿಸಿಲು ವಾತಾವರಣ ಕಂಡುಬಂದಿತ್ತು. ಮಂಗಳವಾರ ಮಧ್ಯಾಹ್ನ ಹಾಗೂ ಸಂಜೆ ಮತ್ತೆ ಹಲವೆಡೆ ಸುರಿದ ಧಾರಾಕಾರ ಮಳೆಗೆ ರಸ್ತೆಗಳಲ್ಲಿ ನದಿಯಂತೆ ನೀರು ಹರಿಯಿತು. ತಗ್ಗುಪ್ರದೇಶದ ಬಡಾವಣೆ, ಹೋಟೆಲ್ ಹಾಗೂ ಪೆಟ್ರೋಲ್ ಬಂಕ್‌ಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿತ್ತು.

ಜಕ್ಕೂರು ಹಾಗೂ ಯಲಹಂಕ, ಯಲಹಂಕ ನ್ಯೂಟೌನ್ ಭಾಗದಲ್ಲಿ ಸೋಮವಾರ ರಾತ್ರಿ ಭಾರಿ ಮಳೆ ಸುರಿಯಿತು. ಇದರಿಂದ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಸಮುಚ್ಚಯವೂ ಸೇರಿದಂತೆ ರಾಜಕಾಲುವೆ ಆಸುಪಾಸಿನ ಕೆಲವು ಅಪಾರ್ಟ್‌ಮೆಂಟ್ ಸಮುಚ್ಚಯಗಳ ಪ್ರಾಂಗಣಕ್ಕೆ ನೀರು ನುಗ್ಗಿತ್ತು. ನಿವಾಸಿಗಳು ಸಮಸ್ಯೆಗೆ ಸಿಲುಕಿದ್ದರು.

‘ಜೋರಾಗಿ ಮಳೆ ಸುರಿದ ಸಂದರ್ಭದಲ್ಲೂ ಸಂಕಷ್ಟ ತಪ್ಪುತ್ತಿಲ್ಲ’ ಎಂದು ಅಪಾರ್ಟ್‌ಮೆಂಟ್ ನಿವಾಸಿಗಳು ಅಳಲು ತೋಡಿಕೊಂಡರು. ಯಲಹಂಕದ ಕೋಗಿಲು ಕ್ರಾಸ್ ಜಲಾವೃತಗೊಂಡು ವಾಹನ ಸವಾರರು ಪರದಾಡಿದರು.

ಕುರುಬರಹಳ್ಳಿಯಲ್ಲಿ ಹಲವು ಮನೆಗಳಿಗೆ ನೀರು ನುಗ್ಗಿತ್ತು. ರೆಫ್ರಿಜ ರೇಟರ್, ಟಿ.ವಿ. ಮತ್ತಿತರ ಉಪಕರಣಗಳು ಹಾನಿಗೊಳಗಾಗಿವೆ. ಮಂಗಳವಾರ ಬೆಳಿಗ್ಗೆ ನಿವಾಸಿಗಳು ನೀರನ್ನು ಹೊರಹಾಕಿದರು. ಕೆಲವು ಭಾಗದಲ್ಲಿ ರಾಜಕಾಲುವೆ ನೀರು ಸರಾಗವಾಗಿ ಹರಿಯದೆ ಹಿಮ್ಮುಖವಾಗಿ ಬಂದು ರಸ್ತೆಗಳ ಮೇಲೆ ಹರಿಯಿತು.

ಹೆಬ್ಬಾಳ ಮೇಲ್ಸೇತುವೆಯಲ್ಲಿ ನೀರು ಸರಾಗವಾಗಿ ಹರಿಯದೇ ಅಲ್ಲಲ್ಲಿ ನಿಂತಿತ್ತು. ಇದರಿಂದ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಮಧ್ಯರಾತ್ರಿಯೇ ಸ್ಥಳಕ್ಕೆ ತೆರಳಿದ ಬಿಬಿಎಂಪಿ ಸಿಬ್ಬಂದಿ ಹಾಗೂ ಸಂಚಾರ ಪೊಲೀಸರು ನೀರು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಗಾಂಧಿನಗರ, ಮೆಜೆಸ್ಟಿಕ್, ಶೇಷಾದ್ರಿಪುರ, ಮಲ್ಲೇಶ್ವರ, ರಾಜಾಜಿನಗರ, ವಿಜಯನಗರ, ಬಸವೇಶ್ವರನಗರ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ಗಿರಿನಗರ, ಬಸವನಗುಡಿ, ಬನಶಂಕರಿ, ಕೆಂಗೇರಿ, ರಾಜರಾಜೇಶ್ವರಿ ನಗರ, ಕುಮಾರಸ್ವಾಮಿ ಲೇಔಟ್, ಹನುಮಂತನಗರ, ಜೆ.ಪಿ.ನಗರ ಹಾಗೂ ಜಯನಗರ ಪ್ರದೇಶದಲ್ಲೂ ಮಳೆ ಅಬ್ಬರಿಸಿತು. ಹಲವು ಕಡೆ ನೀರು ಸಂಗ್ರಹಗೊಂಡು ಸಮಸ್ಯೆ ಎದುರಾಗಿತ್ತು.

ಹೆಬ್ಬಾಳ, ಆರ್.ಟಿ.ನಗರ, ಸಂಜಯನಗರ, ವಸಂತನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಅಶೋಕನಗರ, ಎಂ.ಜಿ. ರಸ್ತೆ, ಹಲಸೂರು, ಇಂದಿರಾನಗರ, ಮಡಿವಾಳ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಸುರಿದಿದೆ. ಪ್ರಮುಖ ರಸ್ತೆಗಳಲ್ಲಿ ನೀರು ಹರಿದಿದ್ದು, ಅದರಲ್ಲೇ ವಾಹನಗಳು ಸಂಚರಿಸಿದವು.

ನಾಗಸಂದ್ರ, ದಾಬಸ್‌ಪೇಟೆ, ಎಚ್. ಗೊಲ್ಲಹಳ್ಳಿ, ಹೆಮ್ಮಿಗೆಪುರ, ಜಾಲಹಳ್ಳಿ, ಜ್ಞಾನಭಾರತಿ, ಎಚ್‌ಎಎಲ್ ವಿಮಾನ ನಿಲ್ದಾಣ, ಸುಂಕದಕಟ್ಟೆ, ನಾಯಂಡಹಳ್ಳಿ, ಸಾರಕ್ಕಿ, ದೊರೆಸಾನಿಪಾಳ್ಯ, ರಾಜ್‌ಮಹಲ್ ಗುಟ್ಟಹಳ್ಳಿ, ನಾಗಪುರ, ಬೆಳ್ಳಂದೂರು, ಮಾರತಹಳ್ಳಿ, ಪೀಣ್ಯ ಕೈಗಾರಿಕಾ ಪ್ರದೇಶ, ಅರೆಕೆರೆ, ಬೇಗೂರು, ಹೆಗ್ಗನಹಳ್ಳಿ, ಕೋರಮಂಗಲ, ವಿದ್ಯಾಪೀಠ ವ್ಯಾಪ್ತಿಯಲ್ಲೂ ಮಳೆಯಾಗಿದೆ.

ನಗರದ ಬಹುತೇಕ ಕೆಳಸೇತುವೆಗಳಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡಿದ್ದರಿಂದ ಮಂಗಳವಾರ ಬೆಳಿಗ್ಗೆ 10 ಗಂಟೆ ವರೆಗೂ ವಾಹನ ಸಂಚಾರ ಸಾಧ್ಯವಾಗಲಿಲ್ಲ. ಶಿವಾನಂದ ವೃತ್ತ ಸೇರಿದಂತೆ ನಗರದ ಹಲವು ರಸ್ತೆಗಳಲ್ಲಿ ವಾಹನ ದಟ್ಟಣೆಯಿಂದ ಸವಾರರು ಪರದಾಡಿದರು.

ಪಟ್ಟಣಗೆರೆ ಬಳಿಯಿರುವ ನೇತ್ರಾವತಿ ಪೆಟ್ರೋಲ್ ಬಂಕ್ ಕೆಸರಿನಿಂದ ತುಂಬಿದ್ದು, ಸಿಬ್ಬಂದಿ ಸ್ವಚ್ಛಗೊಳಿಸಿದರು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಹೆಬ್ಬಾಳ ಬಳಿಯ ದೇವಿನಗರ ರೈಲ್ವೆ ಕೆಳಸೇತುವೆಯಲ್ಲಿ ಸಂಗ್ರಹಗೊಂಡಿದ್ದ ನೀರಿನಲ್ಲಿ ಕಾರು ಮುಳುಗಿತ್ತು

ಎಲ್ಲೆಲ್ಲಿ ಸಮಸ್ಯೆ?

- ಶೇಷಾದ್ರಿಪುರ ರೈಲ್ವೆ ಕೆಳಸೇತುವೆಯಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡು ವಾಹನ ಸಂಚಾರಕ್ಕೆ ಅಡ್ಡಿ.
- ಕೆಂಪೇಗೌಡ ಕೆಳಸೇತುವೆಯಲ್ಲಿ ನೀರು ನಿಂತಿದ್ದರಿಂದ ವಿಜಿನಾಪುರ ಕಡೆಗೆ ತೆರಳುವ ವಾಹನಗಳು ಪರ್ಯಾಯ ಮಾರ್ಗದಲ್ಲಿ ಚಲಿಸಿದವು.
- ಪಣತ್ತೂರು ರೈಲ್ವೆ ಕೆಳಸೇತುವೆಯಲ್ಲಿ ನೀರು ನಿಂತು ಸಮಸ್ಯೆ.
- ಜಯಮಹಲ್ ರಸ್ತೆಯಲ್ಲಿ ಹೊಳೆಯಂತೆ ನೀರು ಹರಿಯಿತು.

ಜಲಪಾತದಂತೆ ಧುಮ್ಮಿಕ್ಕಿದ ನೀರು

ಪೀಣ್ಯ ಮೇಲ್ಸೇತುವೆಯ ಅಲ್ಲಲ್ಲಿ ಜಲಪಾತದಂತೆ ನೀರು ಧುಮ್ಮಿಕ್ಕಿತು. ಮೇಲ್ಸೇತುವೆ ಕೆಳಗಿನ ರಸ್ತೆಯಲ್ಲಿ ತೆರಳುತ್ತಿದ್ದ ಕಾರು, ಬಸ್‌ಗಳ ಮೇಲೆ ಹಾಗೂ ಬೈಕ್ ಸವಾರರ ಮೇಲೆ ನೀರು ಅಪ್ಪಳಿಸಿತು. ನಗರದ ಬಹುತೇಕ ಮೇಲ್ಸೇತುವೆಗಳ ಜಾಯಿಂಟ್‌ಗಳ ಸ್ಥಳಗಳಿಂದ ನೀರು ಜಲಪಾತದಂತೆ ಸುರಿದು ವಾಹನ ಸವಾರರಿಗೆ ಸಮಸ್ಯೆ ಉಂಟು ಮಾಡಿತು. ಮೆಟ್ರೊ ಮಾರ್ಗದ ಕೆಳಭಾಗದಲ್ಲೂ ಇಂತಹದ್ದೇ ಸಮಸ್ಯೆಯಿಂದ ಜನರು ಸಂಕಷ್ಟಕ್ಕೆ ಒಳಗಾದರು.

ಕೆಳ ಸೇತುವೆಯಲ್ಲೇ ವಾಹನ ಬಿಟ್ಟು ಪ್ರಾಣ ಉಳಿಸಿಕೊಂಡ ಸವಾರರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸೋಮವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ವಿಜಿನಾಪುರದಿಂದ ಟಿನ್ ಫ್ಯಾಕ್ಟರಿ ಕಡೆಗೆ ಸಂಪರ್ಕ ಕಲ್ಪಿಸುವ ವಿಜಿನಾಪುರದ ಎಫ್‌ಸಿಐ ಗೋದಾಮು ಬಳಿಯ ರೈಲ್ವೆ ಕೆಳಸೇತುವೆ ಜಲಾವೃತಗೊಂಡು ವಾಹನ ಸವಾರರು ಪರದಾಡಿದರು.

ಮಳೆ ನೀರು ಶೇಖರಣೆಗೊಂಡು ಕೆಳಸೇತುವೆ ಹೊಳೆಯಂತಾದ ಪರಿಣಾಮ ರೈಲ್ವೆ ಕೆಳಸೇತುವೆಯಲ್ಲಿ ನಾಲ್ಕು ಅಡಿಗೂ ಹೆಚ್ಚು ಮಳೆ ನೀರು ಸಂಗ್ರಹಗೊಂಡು ಒಂದು ಬೈಕ್ ಮತ್ತು ಕಾರು ನೀರಿನಲ್ಲಿ ಸಿಲುಕಿಕೊಂಡಿದ್ದವು. ಪ್ರಾಣ ಉಳಿಸಿಕೊಳ್ಳಲು ವಾಹನ ಸವಾರರು ಸ್ಥಳದಲ್ಲಿಯೇ ವಾಹನ ಬಿಟ್ಟು ಹೊರಬಂದರು.

ವಿಜಿನಾಪುರ ಕೆಳಸೇತುವೆ ಜಲಾವೃತ

ರೈಲ್ವೆ ಸೇತುವೆ ಕೆಳಗೆ ಅಪಾರ ಪ್ರಮಾಣದ ನೀರು ತುಂಬಿಕೊಂಡು ಸರಗವಾಗಿ ಹರಿಯದೆ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಮಂಗಳವಾರ ಬೆಳಿಗ್ಗೆಯಿಂದ ಸಂಜೆಯವರೆಗೆ ಅಗ್ನಿ ಶಾಮಕ ದಳದ ಸಿಬ್ಬಂದಿ ಮೋಟಾರ್ ಮೂಲಕ ನೀರು ಹೊರಹಾಕಿದರು. ಆದರೂ ನೀರಿನ ಪ್ರಮಾಣ ಕಡಿಮೆಯಾಗದೇ ವಾಹನ ಸವಾರರಿಗೆ ಈ ರಸ್ತೆಯಲ್ಲಿ ಸಂಚಾರ ಸಾಧ್ಯವಾಗದೆ ಬೇರೆ ಮಾರ್ಗದ ಮೂಲಕ ತೆರಳಿದವು.

ಹಲವು ವರ್ಷಗಳಿಂದ ಈ ಸಮಸ್ಯೆ ಇದೆ. ಪ್ರತಿ ಸಾರಿ ಮಳೆ ಬಂದಾಗ ರೈಲ್ವೆ ಸೇತುವೆ ಬಳಿ ಪ್ರವಾಹ ಸೃಷ್ಟಿಯಾಗುತ್ತದೆ. ನೀರು ಸಂಗ್ರಹಗೊಂಡು ತೊಂದರೆ ಆದಾಗ ಮಾತ್ರ ಅ ಕ್ಷಣಕ್ಕೆ ಬಿಬಿಎಂಪಿ ಅಧಿಕಾರಿಗಳು ಕಾಟಚಾರಕ್ಕೆ ನೀರು ತೆರವುಗೊಳಿಸಿ ಕೈತೊಳೆದುಕೊಳ್ಳುತ್ತಾರೆ. ಕೆಳ ಸೇತುವೆ ಅವೈಜ್ಞಾನಿಕವಾಗಿ ನಿರ್ಮಿಸಲಾಗಿದೆ. ಮಳೆ ನೀರು ಚರಂಡಿ ಮೂಲಕ ಹರಿದು ಹೋಗಲು ಸಮರ್ಪಕ ವ್ಯವಸ್ಥೆ ಇಲ್ಲ. ಹೀಗಾಗಿ ಮಳೆ ನೀರು ನಾಲ್ಕು ಅಡಿಗೂ ಹೆಚ್ಚು ಶೇಖರಣೆಗೊಳ್ಳುತ್ತದೆ ಎಂದು ವಾಹನ ಸವಾರ ಪ್ರದೀಪ್ ಹೇಳಿದರು.

ಕೆಳಸೇತುವೆ ಸಂಪರ್ಕವು ವಿಜಿನಾಪುರದಿಂದ ಹೆಬ್ಬಾಳ, ಮಾರತ್‌ಹಳ್ಳಿ, ವೈಟ್‌ಫೀಲ್ಡ್, ಹಲಸೂರು ಕಡೆಗೆ ಸಂಪರ್ಕ ಹೊಂದಿದೆ. ಸಾವಿರಾರು ವಾಹನ ಸವಾರರು ಈ ಕೆಳಸೇತುವೆಯನ್ನೇ ನೆಚ್ಚಿಕೊಂಡಿದ್ದಾರೆ. ಮಳೆ ಬಂದಾಗಲೆಲ್ಲ ಕೆಳಸೇತುವೆ ಜಲಾವೃತಗೊಂಡು ವಾಹನ ಸವಾರರು ತೊಂದರೆ ಅನುಭವಿಸುವಂತಾಗಿದೆ.

ಸೋಮವಾರ ರಾತ್ರಿ ಸುರಿದ ಮಳೆಗೆ ವಾಹನ ಸವಾರರು ವಾಹನಗಳನ್ನು ನಡುನೀರಿನಲ್ಲಿ ಬಿಟ್ಟು ಪ್ರಾಣ ಉಳಿಸಿಕೊಳ್ಳಲು ಪರದಾಡಿದ್ದಾರೆ. ಜನಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ಎಷ್ಟು ಬಾರಿ ಮನವಿ ಮಾಡಿಕೊಂಡರು ಶಾಶ್ವತ ಪರಿಹಾರಕ್ಕೆ ಮುಂದಾಗಿಲ್ಲ ಎಂದು ಸ್ಥಳೀಯ ರಮೇಶ್ ದೂರಿದರು. ಬೆಳ್ಳಂದೂರು, ವರ್ತೂರು, ಮಾರತ್‌ಹಳ್ಳಿ, ವೈಟ್‌ಫೀಲ್ಡ್ ಭಾಗದ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದರಿಂದ ಜನರು ಪರದಾಡಿದರು.

ಕರಿಯಮ್ಮ ಅಗ್ರಹಾರದ ಬಳಿ ರಸ್ತೆಯು ಜಲಾವೃತ್ತವಾಗಿದ್ದು ವಾಹನ ಸವಾರರು ಹೈರಾಣರಾದರು. ಪಾಣತ್ತೂರು ಬಳಗೆರೆ ರಸ್ತೆಯಲ್ಲಿ ಗುಂಡಿಗಳು ಬಿದ್ದು ಅದರಲ್ಲಿ ಮಳೆ ನೀರು ಆವರಿಸಿದ್ದರಿಂದ ವಾಹನಗಳು ಸಾಲುಸಾಲಾಗಿ ನಿಂತಿದ್ದವು.

ವಿಜಿನಾಪುರ ರೈಲ್ವೆ ಕೆಳ ಸೇತುವೆಯಲ್ಲಿ ಕಾರು ಮುಳುಗಿರುವುದು

ಅವೈಜ್ಞಾನಿಕ ಕಾಮಗಾರಿ: ರಸ್ತೆಯಲ್ಲೇ ನೀರು

ದಾಬಸ್‌ಪೇಟೆ: ಪಟ್ಟಣದ ಶಿವಗಂಗೆ ವೃತ್ತದ ಕೆಇಬಿ ಮುಂಭಾಗದಲ್ಲಿ ಮಳೆ ಬಂದಾಗ ರಸ್ತೆಯಲ್ಲೇ ನೀರು ನಿಂತು ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ.

‘ಎರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ನೀರು ರಸ್ತೆಯಲ್ಲಿ ನಿಂತಿದೆ. ಸಾರ್ವಜನಿಕರಿಗೆ ವಾಹನಗಳಲ್ಲಿ ಓಡಾಡಲು ಅಡಚಣೆಯಾಗಿದೆ. ರಸ್ತೆ ಎತ್ತರಿಸಿ, ಮೋರಿ ಮಾಡಿದರು ಸಮಸ್ಯೆ ಬಗೆಹರಿದಿಲ್ಲ’ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

‘ಮಳೆ ಬಂದರೆ ಸಾಕು ಇಲ್ಲಿ ಸಂಚರಿಸಲು ಭಯವಾಗುತ್ತದೆ. ನೀರು ನಿಂತು ಗುಂಡಿ ಬಿದ್ದಿದ್ದು, ಸ್ವಲ್ಪ ಆಯ ತಪ್ಪಿದರೆ ಅನಾಹುತವಾಗುತ್ತದೆ’ ಎಂದು ವಾಹನ ಚಾಲಕ ರುದ್ರೇಶ್ ಹೇಳಿದರು.

‘ಈ ರಸ್ತೆ ಯಾತ್ರಾ ಸ್ಥಳ ಶಿವಗಂಗೆ, ರಾಮನಗರ, ಮಾಗಡಿ, ಕುದೂರು ಪಟ್ಟಣಗಳು ಹಾಗೂ ಮಂಗಳೂರು ಹೈವೇ ಸಂಪರ್ಕ ಕಲ್ಪಿಸುವ ರಸ್ತೆಯಾಗಿದೆ. ನಿತ್ಯ ಸಾವಿರಾರು ವಾಹನಗಳು ಓಡಾಡುತ್ತವೆ. ಅಪಘಾತಕ್ಕೆ ಆಹ್ವಾನ ನೀಡುತ್ತಿದೆ’ ಎಂದು ಕಾರ್ಮಿಕ ಮಂಜುನಾಥ್ ತಿಳಿಸಿದರು.

ಶಿವಗಂಗೆ ರಸ್ತೆಯಲ್ಲಿ ನೀರು ನಿಂತಿದ್ದು ವಾಹನ ಸವಾರರಿಗೆ ಸಮಸ್ಯೆಯಾಗಿದೆ

ಮಳೆ ಮುನ್ಸೂಚನೆ: ಮುಂಜಾಗ್ರತೆಗೆ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಸೂಚನೆ

ವಾರ್ಡ್‌ಗೊಬ್ಬ ಎಂಜಿನಿಯರ್‌ಗೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಇನ್ನೂ ಎರಡು–ಮೂರು ದಿನ ಮಳೆಯಾಗುವ ಮುನ್ಸೂಚನೆಯಿದ್ದು, ವಿಪತ್ತು ನಿರ್ವಹಣೆಗೆ ಪ್ರತಿ ವಾರ್ಡ್‌ನಲ್ಲಿ ಒಬ್ಬ ಎಂಜಿನಿಯರ್‌ಗೆ ಜವಾಬ್ದಾರಿ ವಹಿಸಬೇಕು ಎಂದು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಸೂಚಿಸಿದ್ದಾರೆ.

ಸತತ ಮಳೆಯ ಹಿನ್ನೆಲೆಯಲ್ಲಿ ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ, ಪೊಲೀಸ್ ಇಲಾಖೆ, ನಮ್ಮ ಮೆಟ್ರೊದ ಅಧಿಕಾರಿಗಳೊಂದಿಗೆ ಮಂಗಳವಾರ ನಡೆದ ವರ್ಚ್ಯುವಲ್ ಸಭೆಯಲ್ಲಿ ಮುಂಜಾಗ್ರತೆ ವಹಿಸಲು ವಲಯ ಆಯುಕ್ತರಿಗೆ ಆದೇಶಿಸಿದರು.

ವಿಪತ್ತು ನಿರ್ವಹಣೆ, ರಸ್ತೆ ಗುಂಡಿ, ಕಸದ ಸಮಸ್ಯೆ, ಪಾದಚಾರಿ ಮಾರ್ಗ ದುರಸ್ತಿಪಡಿಸಲು ಪ್ರತಿ ವಾರ್ಡ್‌ನಲ್ಲೂ ಪ್ರತ್ಯೇಕವಾಗಿ ಒಬ್ಬ ಎಂಜಿನಿಯರ್‌ಗೆ ಜವಾಬ್ದಾರಿ ನೀಡಬೇಕು. ಮೆಟ್ರೊ, ಬೆಸ್ಕಾಂ, ಜಲಮಂಡಳಿ ಕೆಲಸ ನಡೆಯುವ ಸ್ಥಳದಲ್ಲಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಎಲ್ಲಾದರೂ ಸಮಸ್ಯೆ ಇದ್ದರೆ ಅದಕ್ಕೆ ತಾತ್ಕಾಲಿಕ ಪರಿಹಾರ ನೀಡಿ, ನಂತರ ಶಾಶ್ವತ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು ಎಂದರು.

ತೂಬು ತೆಗೆಯಲು ಸೂಚನೆ: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಹೆಚ್ಚು ಮಳೆಯಾಗುವ ಸಾಧ್ಯತೆಯಿರುವುದರಿಂದ ಬೆಳ್ಳಂದೂರು ಹಾಗೂ ವರ್ತೂರು ಕೆರೆಯ ಸ್ಲೂಯಿಸ್ ಗೇಟ್‌ಗಳನ್ನು (ತೂಬು) ಕೂಡಲೇ ತೆಗೆದು ನೀರನ್ನು ಹೊರಬಿಡಬೇಕು ಎಂದು ಬಿಡಿಎ ಅಧಿಕಾರಿಗಳಿಗೆ ರಾಕೇಶ್ ಸಿಂಗ್ ಸೂಚಿಸಿದರು.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, ಜೋರು ಮಳೆಯಾಗುವ ಸಮಯದಲ್ಲಿ ರಸ್ತೆಗಳ ಮೇಲೆ ಹೆಚ್ಚು ನೀರು ನಿಂತು ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ರಸ್ತೆ ಮೇಲೆ ಬೀಳುವ ನೀರು ಚರಂಡಿಗಳಿಗೆ ಸರಾಗವಾಗಿ ಹರಿದು ಹೋಗುವ ನಿಟ್ಟಿನಲ್ಲಿ ಶೋಲ್ಡರ್ ಡ್ರೈನ್‌ಗಳ ಬಳಿ ಸ್ವಚ್ಛತೆ ಕಾಪಾಡಬೇಕು ಎಂದು ಆದೇಶಿಸಿದರು. ಮೆಟ್ರೊ ಕಾಮಗಾರಿ ನಡೆಯುವ ಸ್ಥಳಗಳಲ್ಲಿನ ಬ್ಯಾರಿಕೇಡ್‌ಗಳಿಂದ ಮಳೆ ನೀರು ನಿಲ್ಲುತ್ತಿದೆ. ಇದರಿಂದ ವಾಹನ ಸಂಚಾರಕ್ಕೆ ಸಾಕಷ್ಟು ಸಮಸ್ಯೆಯಾಗಿದ್ದು, ಮೆಟ್ರೊ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿ ಸಮಸ್ಯೆ ಬಗೆಹರಿಸಬೇಕು ಎಂದರು.

ಮನೆಗಳಿಗೆ ನೀರು, ಪಟ್ಟಿಗೆ ಸೂಚನೆ: ಸೋಮವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಎಷ್ಟು ಮನೆಗಳಿಗೆ ನೀರು ನುಗ್ಗಿದೆ ಎಂಬುದನ್ನು ವಲಯವಾರು ಪಟ್ಟಿಮಾಡಬೇಕು. ಅದಕ್ಕೆ ಪರಿಹಾರ ತ್ವರಿತವಾಗಿ ಪರಿಹಾರ ನೀಡಬೇಕು ಎಂದರು. ಮಳೆಗಾಲದ ವೇಳೆ ಪಾಲಿಕೆಯ ಜೊತೆ ಅಗ್ನಿ ಶಾಮಕ ಇಲಾಖೆ, ಎಸ್.ಡಿ.ಆರ್.ಎಫ್ ಹಾಗೂ ಎನ್.ಡಿ.ಆರ್.ಎಫ್ ಇಲಾಖೆಗಳು ಕೈಜೋಡಿಸಲಿದ್ದಾರೆ. ಈ ಸಂಬಂಧ ಆಯಾ ವಲಯ ಆಯುಕ್ತರು ಸದರಿ ಇಲಾಖೆಗಳ ಜೊತೆ ನಿತ್ಯ ಸಂಪರ್ಕದಲ್ಲಿದ್ದು, ತುರ್ತು ಪರಿಸ್ಥಿತಿಯ ವೇಳೆ ಸದರಿ ಇಲಾಖೆಗಳ ಸಹಾಯ ಪಡೆದು ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು ಎಂದರು.

ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳನ್ನು ತ್ವರಿತಗತಿಯಲ್ಲಿ ಮುಚ್ಚಬೇಕು. ಮಳೆಗಾಲದ ವೇಳೆ ಕೋಲ್ಡ್ ಮಿಕ್ಸ್ ಅನ್ನು ಬಳಸಿ ರಸ್ತೆ ಗುಂಡಿಗಳನ್ನು ಮುಚ್ಚಲು ಸೂಚಿಸಿದರು.

ಯೋಜನಾ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ಇದ್ದರು.

ನೋಡಲ್ ಅಧಿಕಾರಿಗಳ ನೇಮಕ

ಮಳೆ ಸಂದರ್ಭದಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲು ದಕ್ಷಿಣ ವಲಯದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ರಸ್ತೆ ಬದಿಯಲ್ಲಿ ನೀರು ನಿಲ್ಲದಂತೆ, ಮರದ ರಂಬೆ-ಕೊಂಬೆಗಳ ತೆರವು, ರಸ್ತೆ ಗುಂಡಿ ಮುಚ್ಚಲು, ಶೋಲ್ಡರ್ ಡ್ರೈನ್‌ನಲ್ಲಿರುವ ಹೂಳನ್ನು ತೆಗೆಯಲು, ಬೆಸ್ಕಾಂ, ಜಲಮಂಡಳಿ, ಅಗ್ನಿಶಾಮಕ ದಳ, ಅರಣ್ಯ ಇಲಾಖೆ ಹಾಗೂ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ನೋಡಲ್ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ದಕ್ಷಿಣ ವಲಯ ಜಂಟಿ ಆಯುಕ್ತ ಕೆ. ಜಗದೀಶ್ ನಾಯ್ಕ್ ಸೂಚಿಸಿದ್ದಾರೆ.

ಕಾಸಿಯಾ: ಕೈಗಾರಿಕಾ ವಸ್ತು ಪ್ರದರ್ಶನ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದಿಂದ ಇದೇ 9 ಮತ್ತು 10ರಂದು ಮಾರಾಟಗಾರರ ಅಭಿವೃದ್ಧಿ ಕಾರ್ಯಕ್ರಮ ಮತ್ತು ಕೈಗಾರಿಕಾ ವಸ್ತುಪ್ರದರ್ಶನವು ವಿಜಯನಗರದಲ್ಲಿ ಕಾಸಿಯಾ ಉದ್ಯೋಗ ಭವನದಲ್ಲಿ ನಡೆಯಲಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಸಿಯಾ ಅಧ್ಯಕ್ಷ ಶಶಿಧರ್ ಶೆಟ್ಟಿ, ‘ಸಾರ್ವಜನಿಕ ವಲಯದ ಘಟಕಗಳು ಮತ್ತು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ನಡುವೆ ಮಾರುಕಟ್ಟೆ ಸಂಪರ್ಕಗಳನ್ನು ಒದಗಿಸುವ ಉದ್ದೇಶದಿಂದ ಈ ಪ್ರದರ್ಶನ ಆಯೋಜಿಸಲಾಗಿದೆ’ ಎಂದು ತಿಳಿಸಿದರು.

ಪ್ರದರ್ಶನದಲ್ಲಿ ಸಾರ್ವಜನಿಕ ವಲಯದ ಘಟಕಗಳು, ಸರ್ಕಾರಿ ಇಲಾಖೆಗಳು ಭಾಗವಹಿಸಲಿವೆ. ಖರೀದಿ ನೀತಿ ಮತ್ತು ಕಾರ್ಯವಿಧಾನ, ನಿರ್ಣಾಯಕ ಮತ್ತು ಪ್ರಮುಖ ಕೌಶಲಯುಕ್ತ ವಸ್ತುಗಳನ್ನು ಸ್ವದೇಶಿಕರಣ, ಮಾರಾಟಗಾರರ ನೋಂದಣಿ ಮತ್ತು ರೇಟಿಂಗ್, ಗುಣಮಟ್ಟದ ಮಾನದಂಡಗಳು, ವಿಶೇಷಣಗಳ ಕುರಿತು ಮಾಹಿತಿ ಇರಲಿದೆ ಎಂದು ಹೇಳಿದರು.

ಇದೇ 9ರಂದು ಸಣ್ಣ ಕೈಗಾರಿಕೆಗಳ ಸಚಿವ ಶರಣಬಸಪ್ಪ ದರ್ಶನಾಪುರ ಅವರು ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ.

ಹೆಬ್ಬಾಳದ ಫಿನಿಕ್ಸ್ ಮಾಲ್‌ನಲ್ಲಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಹೊಸ ಮಳಿಗೆ ಆರಂಭ ಆಗಿದೆ. ಸಮೂಹದ ಅಧ್ಯಕ್ಷ ಎಂ.ಪಿ. ಅಹ್ಮದ್ ಅವರು ಮಳಿಗೆಯನ್ನು ಉದ್ಘಾಟಿಸಿದರು. ಸಮೂಹದ ಭಾರತದ ಕಾರ್ಯಾಚರಣೆಗಳ ವ್ಯವಸ್ಥಾಪಕ ನಿರ್ದೇಶಕ ಆಶರ್ ಒ., ನಟಿ ಶ್ರೀನಿಧಿ ಶೆಟ್ಟಿ ಹಾಗೂ ಮಲಬಾರ್ ಗೋಲ್ಡ್‌ನ ಅಧಿಕಾರಿಗಳು ಇದ್ದರು.

ಪ್ಯಾಲೆಸ್ಟೀನ್ ಪರವಾಗಿ ಮತ ಚಲಾಯಿಸದ ಭಾರತ: ಖಂಡನೆ

ಬೆಂಗಳೂರು: ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಮಧ್ಯೆ ನಡೆಯುತ್ತಿರುವ ಯುದ್ಧಕ್ಕೆ ಕದನ ವಿರಾಮ ಘೋಷಿಸುವ ಬಗ್ಗೆ ವಿಶ್ವಸಂಸ್ಥೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಭಾರತ, ಪ್ಯಾಲೆಸ್ಟೀನ್ ಪರವಾಗಿ ಮತ ಚಲಾಯಿಸದೇ ಇರುವುದನ್ನು ನ್ಯಾಯ ಮತ್ತು ಶಾಂತಿಗಾಗಿ ಬೆಂಗಳೂರು ಸಂಘಟನೆ ಖಂಡಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪತ್ರಕರ್ತ ಆಕಾರ್ ಪಟೇಲ್, ‘ತಮ್ಮನ್ನು ತಾವೇ ವಿಶ್ವಗುರು ಅಂತ ಹೇಳಿಕೊಳ್ಳುವ ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಸಂಸ್ಥೆಯಲ್ಲಿ ಪ್ಯಾಲೆಸ್ಟೀನ್ ಪರವಾಗಿ ಮತ ಚಲಾಯಿಸದೇ ಇರುವುದಕ್ಕೆ ಕಾರಣವೇನು? ನಮ್ಮ ಅಕ್ಕಪಕ್ಕದ ದೇಶಗಳಲ್ಲೆ ಪ್ಯಾಲೆಸ್ಟೀನ್ ಪರವಾಗಿ ಮತ ಚಲಾಯಿಸಿವೆ. ನೀವು ಸ್ಥಳೀಯವಾಗಿ ನೇತೃತ್ವ ವಹಿಸಿಕೊಳ್ಳದೇ ಇದ್ದರೆ ಹೇಗೆ ವಿಶ್ವಗುರು ಆಗುತ್ತೀರಿ’ ಎಂದು ಪ್ರಶ್ನಿಸಿದರು.

ಸಾಲಿಡಾರಿಟಿ ಯೂಥ್ ಮೂವ್‌ಮೆಂಟ್‌ನ ರಾಜ್ಯ ಘಟಕದ ಅಧ್ಯಕ್ಷ ಲಬೀದ್ ಶಾಫಿ, ‘ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಮಧ್ಯೆ ನಡೆಯುತ್ತಿರುವುದು ಯುದ್ಧವಲ್ಲ. ಒಂದು ಸರ್ಕಾರ ಒಂದು ಇಡೀ ಜನಾಂಗದ ಮೇಲೆ ಮಾಡುತ್ತಿರುವ ವ್ಯವಸ್ಥಿತ ದಾಳಿಯಾಗಿದೆ. ನಾವು ಪ್ಯಾಲೆಸ್ಟೀನ್ ಪರವಾಗಿ ನಿಲ್ಲಬೇಕಾಗಿದೆ. ಆದರೆ ನಮ್ಮ ರಾಜ್ಯ ಸರ್ಕಾರ ಪ್ರತಿಭಟಿಸಲು ಅವಕಾಶ ಕಲ್ಪಿಸುತ್ತಿಲ್ಲ. ಪ್ಯಾಲೆಸ್ಟೀನ್ ಪರವಾಗಿ ಪ್ರತಿಭಟನೆ ಮಾಡಿದವರ ಮೇಲೆ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ದೂರಿದರು. ಎಐಸಿಸಿಟಿಯು ರಾಷ್ಟ್ರೀಯ ಕಾರ್ಯದರ್ಶಿ ಕ್ಲಿಫ್ಟನ್ ಡಿ ರೋಜಾರಿಯೋ, ಕರ್ನಾಟಕ ಜನಶಕ್ತಿಯ ಗೌರಿ, ಪಿಯುಸಿಎಲ್ ಅಧ್ಯಕ್ಷ ಅರವಿಂದ್ ನಾರಾಯಣ್ ಇದ್ದರು.

‘ಸಾವಿರ ಸ್ಮಾರಕಗಳ ದತ್ತು ನೀಡಲು ನಿರ್ಧಾರ’

ಕಲಬುರಗಿ: ‘ರಾಜ್ಯದಲ್ಲಿ ಸುಮಾರು 5 ಸಾವಿರ ಅತ್ಯಂತ ಮಹತ್ವದ ಸ್ಮಾರಕಗಳಿದ್ದು, ಅದರಲ್ಲಿ ಒಂದು ಸಾವಿರ ಸ್ಮಾರಕಗಳನ್ನು ನಿರ್ವಹಣೆ ಮಾಡಲು ಆಸಕ್ತಿ ಇರುವವರಿಗೆ ದತ್ತು ನೀಡಲು ತೀರ್ಮಾನಿಸಲಾಗಿದೆ’ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ರಾಮನ್ ಸಂಶೋಧನಾ ಸಂಸ್ಥೆ 75 ವರ್ಷ ಪೂರ್ಣಗೊಳಿಸುತ್ತಿರುವ ಗೌರವಾರ್ಥ ಮಂಗಳವಾರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಂಚೆಚೀಟಿ ಬಿಡುಗಡೆ ಮಾಡಿದರು. ತರುಣ್ ಸೌರದೀಪ್, ಕೆ.ಕಸ್ತೂರಿ ರಂಗನ್, ಎ.ಎಸ್‌ಕಿರಣ್ ಕುಮಾರ್, ಕೆ. ಪ್ರಕಾಶ್ ಇದ್ದರು —ಪ್ರಜಾವಾಣಿ ಚಿತ್ರ.

ಶಿರೂರ, ಪ್ರಕಾಶಗೆ ‘ವಿದ್ಯಾಶಂಕರ’ ಪ್ರಶಸ್ತಿ

ಬೆಂಗಳೂರು: ಡಾ.ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ 2023ನೇ ಸಾಲಿನ ‘ವಿದ್ಯಾಶಂಕರ ಪ್ರಶಸ್ತಿ’ಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಬಿ.ವಿ. ಶಿರೂರ, ‘ವಿದ್ಯಾಶಂಕರ ಪುರಸ್ಕಾರ’ಕ್ಕೆ ಬೆಳಗಾವಿಯ ಗ್ರಂಥಪಾಲಕ ಪ್ರಕಾಶ ಗಿರಿಮಲ್ಲನವರ ಆಯ್ಕೆಯಾಗಿದ್ದಾರೆ.

ಹಿರಿಯ ಸಂಶೋಧಕರಿಗೆ ನೀಡುವ ವಿದ್ಯಾಶಂಕರ ಪ್ರಶಸ್ತಿಯು ₹35 ಸಾವಿರ ನಗದು ಹಾಗೂ ಯುವ ಸಂಶೋಧಕರಿಗೆ ಕೊಡುವ ವಿದ್ಯಾಶಂಕರ ಪುರಸ್ಕಾರವು ₹15 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ಇದೇ 17 ರಂದು ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ರುದ್ರೇಶ್ ಅದರಂಗಿ ತಿಳಿಸಿದ್ದಾರೆ.



ಬಿ.ವ್ಹಿ. ಶಿರೂರ

ಪ್ರಕಾಶ ಗಿರಿಮಲ್ಲನವರ

ಅಧಿಕಾರಿಗಳ ಮೇಲೆ ಕ್ರಮಕ್ಕೆ ಕೆಆರ್‌ಎಸ್ ಆಗ್ರಹ

‘ಜನರಿಗೆ ವಿಷವುಣಿಸುತ್ತಿರುವ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರಕ್ಕೆ ಸರಬರಾಜಾಗುತ್ತಿರುವ ತರಕಾರಿಗಳಲ್ಲಿ ಅಪಾಯಕಾರಿ ಮಟ್ಟದಲ್ಲಿ ಭಾರ ಲೋಹ ಇರುವುದು ಎಂಪ್ರಿ ಅಧ್ಯಯನದಿಂದ ದೃಢಪಟ್ಟಿದೆ. ಈ ಪರಿಸ್ಥಿತಿಗೆ ಕಾರಣವಾಗಿರುವ ಬೆಂಗಳೂರು ಜಲ ಮಂಡಳಿ, ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್) ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿಕೃಷ್ಣಾ ರೆಡ್ಡಿ, ‘ಕೊಳಚೆ ನೀರು ಬಳಸಿ ಬೆಳೆಯಲಾಗುತ್ತಿರುವ ತರಕಾರಿಗಳಲ್ಲಿ ಭಾರ ಲೋಹದ ಸಾಂದ್ರತೆ ಹೆಚ್ಚಾಗಿದ್ದು, ಇಂಥ ತರಕಾರಿ ತಿನ್ನುವುದರಿಂದ ಮಾನವನ ದೇಹಕ್ಕೆ ವಿಷಕಾರಿ ಅಂಶ ಸೇರ್ಪಡೆಯಾಗುವ ಅಪಾಯವಿದೆ ಎಂದು ಅರಣ್ಯ ಇಲಾಖೆಯ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ (ಎಂಪ್ರಿ) ಅಧ್ಯಯನ ತಿಳಿಸಿದೆ. ಜನರ ಆರೋಗ್ಯದ ಮೇಲೆ ವ್ಯಾಪಕ ದುಷ್ಪರಿಣಾಮ ಬೀರುವ ಈ ವಿಚಾರದ ಬಗ್ಗೆ ಸರ್ಕಾರ ಮತ್ತು ಜನಪ್ರತಿನಿಧಿಗಳು ನಿಷ್ಕಾಳಜಿ ತೋರುತ್ತಿರುವುದು ದುರದೃಷ್ಟಕರ. ಈ ಪರಿಸ್ಥಿತಿಗೆ ಕಳೆದ ಎರಡು ದಶಕಗಳ ಕಾಲ ಆಡಳಿತ ನಡೆಸಿರುವ ಸರ್ಕಾರಗಳೇ ನೇರ ಕಾರಣ. ಇನ್ನಾದರೂ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು’ ಎಂದು ತಿಳಿಸಿದರು.

‘ಬೆಂಗಳೂರಿಗೆ ಬಹುಪಾಲು ತರಕಾರಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಿಂದ ಸರಬರಾಜಾಗುತ್ತಿದೆ. ಈ ಜಿಲ್ಲೆಗಳು ನೀರಾವರಿಯಿಂದ ವಂಚಿತವಾಗಿವೆ. ರಾಮನಗರ ಜಿಲ್ಲೆ ಹೊರತುಪಡಿಸಿ ಉಳಿದ ಮೂರು ಜಿಲ್ಲೆಗಳಿಗೆ ಕೊಳಚೆ ನೀರು ಸಂಸ್ಕರಿಸಿ, ಕೆರೆಗಳನ್ನು ತುಂಬಿಸಲಾಗುತ್ತಿದೆ. ನೀರಾವರಿಯಿಂದ ವಂಚಿತವಾಗಿರುವ ಈ ಜಿಲ್ಲೆಗಳಲ್ಲಿನ ಬಹುಪಾಲು ರೈತರು ಅರೆ ಬರೆ ಸಂಸ್ಕರಿಸಿದ ಬೆಂಗಳೂರಿನ ಕೊಳಚೆ ನೀರು ಬಳಸಿ, ತರಕಾರಿಗಳನ್ನು ಬೆಳೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ’.

‘ಮಳೆಯಾಶ್ರಿತ ಬಯಲು ಪ್ರದೇಶದ ಜಿಲ್ಲೆಗಳ ರೈತರು ನೀರಾವರಿ ಸಮಸ್ಯೆ ಮತ್ತು ಮಳೆ ಕೊರತೆಯಿಂದ ವಿಧಿಯಿಲ್ಲದೆ ಕೊಳಚೆ ನೀರನ್ನು ಬಳಸಿ ಕೃಷಿಯಲ್ಲಿ ತೊಡಗಿದ್ದಾರೆ. ಸರ್ಕಾರದ ನಿಷ್ಕಾಳಜಿ, ಭ್ರಷ್ಟಾಚಾರ ಮತ್ತು ಅಕ್ರಮಗಳಿಂದ ಪ್ರಸ್ತುತ ಬೆಂಗಳೂರು ಮತ್ತು ಈ ಮೂರು ಜಿಲ್ಲೆಗಳ ಜನರು ವಿಷಯುಕ್ತ ಆಹಾರ ಸೇವಿಸುವಂತಾಗಿದೆ. ಸರ್ಕಾರವೇ ಮುಂದೆ ನಿಂತು ಜನರಿಗೆ ವಿಷವುಣಿಸುತ್ತಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯು ಕಣ್ಮುಚ್ಚಿ ಕುಳಿತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವ್ಯವಸ್ಥಾಪಕ ನಿರ್ದೇಶಕ ಸಂಗಪ್ಪ ವಿರುದ್ಧ ಆರೋಪ

ಕಿಯೋನಿಕ್ಸ್‌ನಲ್ಲಿ ಬಿಲ್‌ಗೆ ತಡೆ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ವಿದ್ಯುನ್ಮಾನ ಅಭಿವೃದ್ಧಿ ನಿಗಮದ (ಕಿಯೋನಿಕ್ಸ್) ವ್ಯವಸ್ಥಾಪಕ ನಿರ್ದೇಶಕ ಸಂಗಪ್ಪ ಅವರು ಲಂಚಕ್ಕಾಗಿ ಬಾಕಿ ಬಿಲ್ ಪಾವತಿಯನ್ನು ತಡೆಹಿಡಿದು ವೆಂಡರ್‌ಗಳಿಗೆ ಕಿರುಕುಳ ನೀಡುತ್ತಿದ್ದಾರೆ. ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು’ ಎಂದು ಕಿಯೋನಿಕ್ಸ್ ವೆಂಡರ್‌ದಾರರ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ವಸಂತ ಬಂಗೇರ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಕಿಯೋನಿಕ್ಸ್‌ನಲ್ಲಿ ಯಾವುದೇ ಸಮಸ್ಯೆಗಳಿರಲಿಲ್ಲ. ಸಂಗಪ್ಪ ಅವರು ಎರಡು ತಿಂಗಳ ಹಿಂದಷ್ಟೇ ವ್ಯವಸ್ಥಾಪಕ ನಿರ್ದೇಶಕರಾಗಿ ಬಂದರು. ವರ್ಗಾವಣೆಗೆ ಕೋಟ್ಯಂತರ ರೂಪಾಯಿ ಕೊಟ್ಟು ಬಂದಿದ್ದೇನೆ. ಬಿಲ್ ಪಾವತಿಗೆ ಶೇಕಡ 12ರಷ್ಟು ಲಂಚ ಕೊಡಿ ಎಂಬ ಬೇಡಿಕೆಯನ್ನು ನಮ್ಮ ಮುಂದಿಟ್ಟರು. ನಾವು ನಿರಾಕರಿಸಿದ್ದಕ್ಕೆ ಬಿಲ್ ತಡೆಹಿಡಿದು ಕಿರುಕುಳ ನೀಡುತ್ತಿದ್ದಾರೆ’ ಎಂದರು.

ಕಿಯೋನಿಕ್ಸ್‌ಗೆ ಸರಕು ಮತ್ತು ಸೇವೆಗಳನ್ನು ಒದಗಿಸುವ ವೆಂಡರ್‌ಗಳು ಶೇ 5ರಷ್ಟು ಶುಲ್ಕ ಪಾವತಿಸುತ್ತಾರೆ. ಅದೇ ಮೊತ್ತವನ್ನು ಸಂಸ್ಥೆಯ ಸಿಬ್ಬಂದಿಯ ವೇತನ, ಭತ್ಯೆ ಮತ್ತು ಇತರ ವೆಚ್ಚಗಳಿಗೆ ಬಳಸಲಾಗುತ್ತಿದೆ. ಈಗ ದಿಢೀರನೆ ಶೇ 12ರಷ್ಟು ಲಂಚದ ಬೇಡಿಕೆ ಇಟ್ಟು ಇಡೀ ನಿಗಮವನ್ನು ಸಮಸ್ಯೆಗೆ ಸಿಲುಕಿಸಿದ್ದಾರೆ. 450 ಮಂದಿ ವೆಂಡರ್‌ಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಇದಕ್ಕೆ ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕರೇ ಕಾರಣ ಎಂದು ಆರೋಪಿಸಿದರು.

‘ಅಕೌಂಟೆಂಟ್ ಜನರಲ್ ವರದಿಯನ್ನು ಮುಂದಿಟ್ಟುಕೊಂಡು ಮೂರನೇ ವ್ಯಕ್ತಿಯ ತಪಾಸಣೆ ಹೆಸರಿನಲ್ಲಿ ಬಿಲ್ ಪಾವತಿ ವಿಳಂಬ ಮಾಡುತ್ತಿದ್ದಾರೆ. ಯಾವುದೇ ವೆಂಡರ್‌ಗಳು ಅಕ್ರಮ ಎಸಗಿದ್ದರೆ ಅವರನ್ನು ಕಪ್ಪುಪಟ್ಟಿಗೆ ಸೇರಿಸಲಿ. ಎಲ್ಲ ಕ್ರಮಕ್ಕೂ ಸಂಘ ಬೆಂಬಲ ನೀಡುತ್ತದೆ. ಆದರೆ, ಮೂರನೇ ವ್ಯಕ್ತಿ ತಪಾಸಣೆ ಮುಗಿದು, ವರದಿ ಸಲ್ಲಿಸಿದ ಪ್ರಕರಣಗಳಲ್ಲೂ ಬಿಲ್ ತಡೆ ಹಿಡಿದು ಸತಾಯಿಸುತ್ತಿರುವುದರ ಹಿಂದೆ ಯಾವ ಉದ್ದೇಶವಿದೆ’ ಎಂದು ವಸಂತ್ ಪ್ರಶ್ನಿಸಿದರು.

‘ಆರೋಪದಲ್ಲಿ ಹುರುಳಿಲ್ಲ’: ಆರೋಪ ಕುರಿತು ಪ್ರತಿಕ್ರಿಯಿಸಿದ ಸಂಗಪ್ಪ, ‘ವೆಂಡರ್‌ದಾರರ ಸಂಘವು ನನ್ನ ವಿರುದ್ಧ ಮಾಡುತ್ತಿರುವ ಆರೋಪ ಗಳಲ್ಲಿ ಹುರುಳಿಲ್ಲ. ಅಕೌಂಟೆಂಟ್ ಜನರಲ್ ವರದಿಯಲ್ಲಿ ಆಕ್ಷೇಪಗಳಿವೆ. ಆ ಕುರಿತು ಪರಿಶೀಲನೆ ಅಗತ್ಯ ಇರುವುದರಿಂದ ಬಿಲ್ ತಡೆ ಹಿಡಿಯಲಾಗಿದೆ’ ಎಂದರು.

‘ಪ್ರಿಯಾಂಕ್ ಸಮಸ್ಯೆ ಬಗೆಹರಿಸಬೇಕು’

‘ಕಿಯೋನಿಕ್ಸ್‌ನಲ್ಲಿ ಬಿಲ್ ಪಾವತಿಗೆ ಕಮಿಷನ್ ಕೇಳುತ್ತಿದ್ದಾರೆ ಎಂಬ ಆರೋಪ ಬಂದಿರುವುದು ಗಂಭೀರ ವಿಚಾರ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಈ ಕುರಿತು ಪರಿಶೀಲಿಸಿ, ಕ್ರಮ ಕೈಗೊಳ್ಳಬೇಕಾಗಿದೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ವರ್ಗಾವಣೆಗೆ, ಬಿಲ್ ಪಾವತಿಗೆ ಲಂಚ ಕೊಡುವ ವ್ಯವಸ್ಥೆ ಇಲ್ಲ ಎನ್ನಲಾಗದು. ನಮ್ಮ ಇಲಾಖೆಯಲ್ಲಿ ಅಂತಹದ್ದಕ್ಕೆ ಅವಕಾಶವಿಲ್ಲ. ಕಿಯೋನಿಕ್ಸ್ ನನ್ನ ವ್ಯಾಪ್ತಿಯಲ್ಲಿಲ್ಲ. ನನ್ನ ವ್ಯಾಪ್ತಿಯಲ್ಲಿದ್ದಿದ್ದರೆ ಸಮಸ್ಯೆ ಬಗೆಹರಿಸುತ್ತಿದ್ದೆ’ ಎಂದರು. ‘ಲಂಚಕ್ಕೆ ಬೇಡಿಕೆ ಇಟ್ಟಿದ್ದು ನಿಜವಾಗಿದ್ದರೆ ಇಲಾಖೆಯ ಸಚಿವರು, ಮುಖ್ಯ ಕಾರ್ಯದರ್ಶಿ ಅಥವಾ ಲೋಕಾಯುಕ್ತರಿಗೆ ದೂರು ನೀಡಲಿ’ ಎಂದು ಸಲಹೆ ನೀಡಿದರು.

ಜಯನಗರ ವಾಣಿಜ್ಯ ಸಂಕೀರ್ಣ ಸುತ್ತಮುತ್ತಲಿನ ಸ್ಥಳಗಳಲ್ಲಿ ಕಾರ್ಯಾಚರಣೆ

ಪಾದಚಾರಿ ಮಾರ್ಗ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ವಾಣಿಜ್ಯ ಸಂಕೀರ್ಣ ಸುತ್ತಮುತ್ತಲಿನ 9, 10ನೇ ಮುಖ್ಯರಸ್ತೆ ಹಾಗೂ 27, 27ನೇ ಎ, 30ನೇ ಅಡ್ಡರಸ್ತೆಗಳ ಪಾದಚಾರಿ ಮಾರ್ಗದಲ್ಲಿ ಬಿಬಿಎಂಪಿ ಸಿಬ್ಬಂದಿ ಮಂಗಳವಾರ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದರು.

ಹೈಕೋರ್ಟ್ ಆದೇಶ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತರ ಆದೇಶದಂತೆ ಒತ್ತುವರಿ ತೆರವು ಕಾರ್ಯಚರಣೆ ನಡೆಸಲಾಗಿದೆ. ಪಾದಚಾರಿ ಮಾರ್ಗದಲ್ಲಿದ್ದ ಪೆಟ್ಟಿ ಅಂಗಡಿ, ಅಂಗಡಿ, ಅನುಪಯುಕ್ತ ತಳ್ಳುವ ಗಾಡಿಗಳು, ಹಣ್ಣಿನ ಬಾಕ್ಸ್‌ಗಳನ್ನು ಮಂಗಳವಾರ ತೆರವುಗೊಳಿಸಲಾಗಿದೆ.

ಕಾರ್ಯಾಚರಣೆ ನಡೆಯುವ ಮುನ್ನ ವ್ಯಾಪಾರಿಗಳಿಗೆ ಒತ್ತುವರಿ ತೆರವು ಮಾಡಲಾಗುತ್ತದೆ ಎಂದು ತಿಳಿಸಲಾಗಿತ್ತು. ಸುಮಾರು ಒಂದು ಕಿ.ಮೀ ಉದ್ದ ಪಾದಚಾರಿ ಮಾರ್ಗದ ಒತ್ತುವರಿಯನ್ನು ತೆರವು ಮಾಡಲಾಗಿದೆ ಎಂದು ಜಯನಗರ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ್ ತಿಳಿಸಿದರು.

ಸುಮಾರು 30 ಅಂಗಡಿಗಳು ಹಾಗೂ ತಾತ್ಕಾಲಿಕ ನಿರ್ಮಾಣಗಳನ್ನು ತೆರವುಗೊಳಿಸಲಾಗಿದ್ದು, ಇದು ಮರುಕಳಿಸದಂತೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಪಾದಚಾರಿ ಒತ್ತುವರಿ ಮಾರ್ಗದ ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ವ್ಯಾಪಾರಿಗಳು ಬಿಬಿಎಂಪಿ ಸಿಬ್ಬಂದಿ ಹಾಗೂ ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಪೊಲೀಸರು ಸ್ಥಳದಲ್ಲಿ ಹಾಜರಿದ್ದು, ಬಿಬಿಎಂಪಿ ಸಿಬ್ಬಂದಿಗೆ ನೆರವಾದರು.

ಜಯನಗರ ವಾಣಿಜ್ಯ ಸಂಕೀರ್ಣ ಸುತ್ತಮುತ್ತಲಿನ ರಸ್ತೆಗಳ ಪಾದಚಾರಿ ಮಾರ್ಗದಲ್ಲಿನ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ಮಂಗಳವಾರ ತೆರವುಗೊಳಿಸಿದರು

ಟಿಮ್ ಜೋನ್ಸ್, ಡಾ. ಪ್ರತಿಮಾ ಮೂರ್ತಿ ಹಾಗೂ ಕ್ರಿಸ್ ಗೋಪಾಲಕೃಷ್ಣನ್ ಪರಸ್ಪರ ಒಪ್ಪಂದ ಮಾಡಿಕೊಂಡರು.

ಮಕ್ಕಳ ಮನೋವಿಕಾಸದ ಬಗ್ಗೆ ಅಧ್ಯಯನ

ಬೆಂಗಳೂರು: ಬೆಂಗಳೂರು ಹಾಗೂ ಲಂಡನ್‌ನಲ್ಲಿನ ತಾಯಿ–ಮಗುವಿನ ಮಾನಸಿಕ ಆರೋಗ್ಯ ಮತ್ತು ಮನೋವಿಕಾಸದ ಬಗ್ಗೆ ಅಧ್ಯಯನ ನಡೆಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಹಾಗೂ ಲಂಡನ್‌ನ ಲಿವರ್‌ಪೂಲ್ ವಿಶ್ವವಿದ್ಯಾಲಯ ಒಪ್ಪಂದ ಮಾಡಿಕೊಂಡಿವೆ.

ಈ ಅಧ್ಯಯನ ಯೋಜನೆಗೆ ಪ್ರತೀಕ್ಷಾ ಟ್ರಸ್ಟ್ ₹15.34 ಕೋಟಿ ಧನಸಹಾಯ ಮಾಡಲಿದೆ. ಈ ಒಪ್ಪಂದದಡಿ ಮಿದುಳಿನ ಸೋಂಕು, ಅಪಸ್ಮಾರ ಹಾಗೂ ಸಾಮಾನ್ಯ ನರವಿಜ್ಞಾನದ ಬಗ್ಗೆಯೂ ಅಧ್ಯಯನ ಹಾಗೂ ಸಂಶೋಧನೆ ನಡೆಸಲಾಗುತ್ತದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ‘ಸಂಸ್ಥೆಯು ‘ಪ್ಲಾಟಿನಮ್ ಜುಬಲಿ’ ಸಂಭ್ರಮದಲ್ಲಿದೆ. ಈ ಅವಧಿಯಲ್ಲಿ ಅಧ್ಯಯನಕ್ಕೆ ಆರ್ಥಿಕ ಬೆಂಬಲ ಸಿಕ್ಕಿರುವುದು ಉತ್ತಮ ಬೆಳವಣಿಗೆ. ನಮ್ಮ ಸಂಸ್ಥೆಯು 2002ರಿಂದಲೂ ಲಿವರ್‌ಪೂಲ್ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಮಿದುಳು ಆರೋಗ್ಯಕ್ಕೆ ಸಂಬಂಧಿಸಿದಂತೆ ವಿವಿಧ ಅಧ್ಯಯನ ನಡೆಸುತ್ತಿದೆ. ಎರಡು ದೇಶಗಳ ನಡುವೆ ಶೈಕ್ಷಣಿಕ ವಿನಿಮಯಕ್ಕೂ ಇದು ಸಹಕಾರಿಯಾಗಿದ್ದು, ಒಪ್ಪಂದದಡಿ ಮಿದುಳು ಸೋಂಕು ಸೇರಿ ಮೂರು ವಿಭಾಗಗಳಲ್ಲಿ ಅಧ್ಯಯನ ನಡೆಸಲಾಗುತ್ತದೆ. ಈ ಸಹಭಾಗಿತ್ವ ಪಿಎಚ್‌.ಡಿ ಕಾರ್ಯಕ್ರಮ ಹಾಗೂ ವಿವಿಧ ಸಂಶೋಧನೆಗಳನ್ನು ಒಳಗೊಂಡಿದೆ’ ಎಂದರು.

ದೀರ್ಘಾವಧಿಯ ಅಧ್ಯಯನ: ನಿಮ್ಹಾನ್ಸ್ ಪ್ರಾಧ್ಯಾಪಕಿ ಡಾ. ಪ್ರಭಾ ಚಂದ್ರ, ‘ತಾಯಿ ಮತ್ತು ಮಗುವಿನ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ 2014ರಿಂದಲೇ ಅಧ್ಯಯನ ನಡೆಸಲಾಗುತ್ತಿದೆ. ಈಗ ವಿಭಿನ್ನ ಸಾಂಸ್ಕೃತಿಕ ವಾತಾವರಣದ ಆಯಾಮದಲ್ಲಿ ಅಧ್ಯಯನ ನಡೆಸಲಾಗುತ್ತದೆ. ನಮ್ಮ ಹಾಗೂ ಲಂಡನ್‌ನ ಸಂಸ್ಕೃತಿ ವಿಭಿನ್ನವಾಗಿದೆ. ಇಲ್ಲಿ ಬಹುಭಾಷೆ ಹಾಗೂ ಪ್ರಾದೇಶಿಕ ವೈವಿಧ್ಯತೆಯನ್ನು ಕಾಣಬಹುದು. ಎರಡು ವಿಭಿನ್ನ ಪರಿಸರಗಳಲ್ಲಿ ಬೆಳೆಯುವ ಮಕ್ಕಳ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸದಂತೆ ಅಧ್ಯಯನ ನಡೆಸಲಾಗುತ್ತದೆ’ ಎಂದು ತಿಳಿಸಿದರು.

ಪ್ರತೀಕ್ಷಾ ಟ್ರಸ್ಟ್ ಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣನ್, ‘ನರವಿಜ್ಞಾನದ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಿದೆ. ನರರೋಗದಿಂದ ದೇಶದಲ್ಲಿ ಹಲವರು ಬಳಲುತ್ತಿದ್ದಾರೆ’ ಎಂದು ಹೇಳಿದರು.

ಲಿವರ್‌ಪೂಲ್ ವಿಶ್ವವಿದ್ಯಾಲಯದ ಕುಲಪತಿ ಟಿಮ್ ಜೋನ್ಸ್, ‘ಸಂಶೋಧನೆಗಳಿಗೆ ಆರ್ಥಿಕ ನೆರವು ನೀಡಲು ಸರ್ಕಾರಗಳಿಗೆ ಕೆಲವೊಂದು ನಿರ್ಬಂಧಗಳಿರುತ್ತವೆ. ಈ ಒಪ್ಪಂದದಡಿ ಮುಂದಿನ ಹಂತದಲ್ಲಿ ಪಿಎಚ್‌.ಡಿ ಕಾರ್ಯಕ್ರಮ ಪರಿಚಯಿಸಲಾಗುವುದು. ಇದರಿಂದ ವಿದ್ಯಾರ್ಥಿಗಳು ಏಕಕಾಲದಲ್ಲಿ ಎರಡು ಕಡೆ ಪಿಎಚ್‌.ಡಿ ಮಾಡಬಹುದು. ಅಲ್ಪಾವಧಿಯ ಫೆಲೋಶಿಪ್ ಕಾರ್ಯಕ್ರಮವನ್ನೂ ನಡೆಸಲಾಗುವುದು’ ಎಂದರು.

ನಗರದಲ್ಲಿ ಇಂದು

‘ಪ್ರಸ್ತುತ ವೈದ್ಯಕೀಯ ಸನ್ನಿವೇಶದಲ್ಲಿ ಆಯುರ್ವೇದದ ಮಹತ್ವ’ ವಿಚಾರಸಂಕಿರಣ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಅನಿಲ್ ಕುಮಾರ್ ಟಿ.ಕೆ., ಡಿ. ರಂದೀಪ್, ನವೀನ್ ಭಟ್ ವೈ., ಉಪನ್ಯಾಸ: ಡಾ. ಬಿ. ಗುರುಬಸವರಾಜ್, ಡಾ. ಲತಾ ದಾಮ್ಲೆ, ರಘು ಬಿ.ಎಸ್., ಆಯೋಜನೆ: ಆಯುಷ್ ಇಲಾಖೆ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 9ರಿಂದ

‘ಕನ್ನಡಿಗಳು’ ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ರೇವಂತ್ ಮಾಳಿಗೆ, ನಟವರ್ಗ: ರಾಣಿ ಪಿ. ವಿಶ್ವನಾಥ್, ಮಧು ಹವಾಲ್ದಾರ್, ಶಶಾಂಕ್ ಪ್ರಕಾಶ್, ಬೆಳಕು ವಿನ್ಯಾಸ, ನಿರ್ವಹಣೆ: ಸಚಿನ್ ರಂಗನಾಥ್, ಸಂಗೀತ: ರಚನ ಮಾಳಿಗೆ, ಆಯೋಜನೆ: ಕರಣ ಥಿಯೇಟರ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಅಂಜನಾ ಸಿಂಹ, ಸ್ವಾತಿ ಸಿಂಹ

ಸಹೋದರಿಯರ ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಅಂಜನಾ ಸಿಂಹ, ಸ್ವಾತಿ ಸಿಂಹ, ಅತಿಥಿಗಳು: ಶುಭಾ ಧನಂಜಯ್, ಪದ್ಮಿನಿ ಶ್ರೀಧರ್, ಆಯೋಜನೆ: ನಾಟ್ಯ ಭಾರತಿ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

Dr.AMBEDKAR INSTITUTE OF TECHNOLOGY
BDA Outer Ring Road, Mallathahally, Bengaluru – 560 056
Tel – 080- 23211232 & Mob No -9986003865

AIT/SS/1625/2023-24 Date: 07.11.2023

TENDER NOTIFICATION

Sealed quotations are invited from Reputed/ Authorized firms for supply & Installation of the following Items .
A) 300 Nos of Intel core i7 & 13th generation tower desktop Computer systems.
B) Uniform Cloth Material for U.G Students & Blazer sets for P.G Students. Details and specification of requirements can be downloaded from college website **www.drait.edu.in.** The sealed quotation shall be attached with a DD of **Rs. 500/-** for each item and the sealed quotations submitted on or before **29.11.2023 by 1.00 PM.** Quotations will be in two Parts. **1)** Technical Bid **2)** Financial Bid for sl no – (A). Qualified bidders are only allowed to submit sealed Financial Bid. Quotations will be opened on the same day i.e. **29.11.2023 at 4.00 PM.**

Sd/- Principal Sd/- Secretary, PVPWT

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬಾಶೆಟ್ಟಿಹಳ್ಳಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ – 561203

ಸಂಖ್ಯೆ:ಬಾಪಪಂ/ತಾಂ.ಶಾ/ಟೆ.ಪ್ರ /04/2023–24 ದಿನಾಂಕ: 06–11–2023

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು 2022–23ನೇ ಸಾಲಿನ 15ನೇ ಹಣಕಾಸು ಯೋಜನೆ, ಪಟ್ಟಣ ಪಂಚಾಯಿತಿ ನಿಧಿ, ಹಾಗೂ 2023–24ನೇ ಸಾಲಿನಲ್ಲಿ ಪಟ್ಟಣ ಪಂಚಾಯಿತಿ ನಿಧಿಯಡಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಪ್ಯಾಕೇಜ್ ಸಂ.	ಕೆಲಸದ ವಿವರ
ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ	
1	DMA/2023-24/OW/WORK_INDENT4875
ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ	
2	DMA/2023-24/WS/WORK_INDENT2673/CALL-3
ಸಾಮಾನ್ಯ ವರ್ಗದ ಕಾಮಗಾರಿಗಳು	
3	DMA/2023-24/OW/WORK_INDENT712/CALL-2
4	DMA/2023-24/OW/WORK_INDENT4117/CALL-2
5	DMA/2023-24/RD/WORK_INDENT4113/CALL-2
6	DMA/2023-24/OW/WORK_INDENT5151
7	DMA/2023-24/SE0543/CALL-3

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮುಖಾಂತರ ಕಾಮಗಾರಿ ಮಾಡಲು ಹಾಗೂ ಸೇವೆ ಒದಗಿಸಲು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಮೊತ್ತ ಕನಿಷ್ಠ 1.38 ಲಕ್ಷದಿಂದ ಗರಿಷ್ಠ 15.00 ಲಕ್ಷಗಳಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **18–11–2023 ರ 17.00 ಗಂಟೆಯವರೆಗೆ.** ಟೆಂಡರ್ ತೆರೆಯುವ ದಿನಾಂಕ: **20–11–2023 ರಂದು 17.15 ಗಂಟೆಗೆ** ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಯಿದ್ದಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/– ಆಡಳಿತಾಧಿಕಾರಿ, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ
ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ

ವಾಸಾಸಂಇ/ವಾಪ್ರ/2022/ಸ್ಪ್ಯಾನ್/2023–24

ಭಾರತೀಯ ಪ್ರಾಣಿ ವಿಜ್ಞಾನಿಗಳ ಪ್ರಯೋಗಾಲಯ ಸಂಘ ಆಯೋಜಿಸಿದ್ದ ಸಮಾವೇಶದಲ್ಲಿ ಡಾ. ವಿಜಯಪಾಲ್ ಸಿಂಗ್, ಡಾ. ಆರ್.ಕೆ. ಶಕ್ತಿದೇವನ್, ಡಾ. ಎಸ್. ಪಿ. ಮುತ್ತುಕುಮಾರ್ ಭಾಗವಹಿಸಿದ್ದರು

ಪ್ರಯೋಗಾಲಯಗಳಲ್ಲಿ ಪ್ರಾಣಿಗಳ ಬಳಕೆ ಕಡಿಮೆ ಮಾಡಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈಜ್ಞಾನಿಕ ಸಂಶೋಧನೆಗಾಗಿ ಪ್ರಯೋಗಾಲಯಗಳಲ್ಲಿ ಪ್ರಾಣಿಗಳ ಬಳಕೆ ಕಡಿಮೆಯಾಗಬೇಕು' ಎಂದು ಪ್ರಾಣಿ ವಿಜ್ಞಾನಿಗಳ ಪ್ರಯೋಗಾಲಯ ಸಂಘದ (ಎಲ್‌ಎಎಸ್‌ಎ) ಅಧ್ಯಕ್ಷ ಡಾ. ವಿಜಯಪಾಲ್ ಸಿಂಗ್ ಸಲಹೆ ನೀಡಿದರು.

ಪ್ರಾಣಿವಿಜ್ಞಾನಿಗಳ ಪ್ರಯೋಗಾಲಯ ಸಂಘ ಆಯೋಜಿಸಿದ್ದ 'ಜಾಗತಿಕ ಜೈವಿಕ ವೈದ್ಯಕೀಯ ಸಂಶೋಧನೆಯಲ್ಲಿ ಇತ್ತೀಚಿನ ಬೆಳವಣಿಗೆಗಳು ಮತ್ತು ಪ್ರಾಣಿ ವಿಜ್ಞಾನ ಪ್ರಯೋಗದ ಕಲ್ಯಾಣ' ಸಮಾವೇಶದಲ್ಲಿ ಅವರು ಮಾತನಾಡಿದರು.

'ಪ್ರಯೋಗ, ಸಂಶೋಧನೆಗಳಲ್ಲಿ 3ಆರ್ (ರಿಪ್ಲೇಸ್‌ಮೆಂಟ್, ರಿಡಕ್ಷನ್ ಮತ್ತು ರಿಫೈನ್‌ಮೆಂಟ್) ಪರಿಕಲ್ಪನೆಯಲ್ಲಿ ಪ್ರಾಣಿ ಬಳಕೆಯಾಗಬೇಕು. ಪ್ರಾಣಿ ವಿಜ್ಞಾನ ಪ್ರಯೋಗಾಲಯದ ಕೋರ್ಸ್‌ಗಳ ಬಗ್ಗೆ ಚರ್ಚೆಯಾಗಬೇಕು. ಪ್ರಾಣಿ ವಿಜ್ಞಾನಿಗಳು, ವೃತ್ತಿಪರರು, ಸಂಶೋಧಕರು ಮತ್ತು ವಿದ್ಯಾರ್ಥಿಗಳಿಗೆ ಈ ಸಮಾವೇಶ ವೇದಿಕೆ ಕಲ್ಪಿಸಿದೆ. ಪ್ರಯೋಗಗಳಲ್ಲಿ ಪ್ರಾಣಿಗಳ ಬಳಕೆ, ಶೈಕ್ಷಣಿಕವಾಗಿ ಅರಿವು ಮೂಡಿಸುವ ವಿಧಾನಗಳು, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯವಾಗಿ ಬಳಕೆಯಾಗುತ್ತಿರುವ ಪದ್ಧತಿಗಳ ಬಗ್ಗೆ ಚರ್ಚಿಸಬಹುದಾಗಿದೆ' ಎಂದು ಹೇಳಿದರು.

ಪಶುವೈದ್ಯರಾದ ಡಾ. ಅರವಿಂದ ಇಂಗ್ಲೆ ಮತ್ತು ಡಾ. ಎಸ್.ಜಿ ರಾಮಚಂದ್ರ ಅವರಿಗೆ 'ಡಿಪ್ಲೊಮೆಟ್ ಆಫ್ ಐಸಿಎಲ್‌ಎಎಂ' ಬಿರುದು ಪ್ರದಾನ ಮಾಡಲಾಯಿತು.

ಎಲ್‌ಎಎಸ್‌ಎನ ಸಂಘಟನಾ ಕಾರ್ಯದರ್ಶಿ ಡಾ. ಆರ್.ಕೆ. ಶಕ್ತಿದೇವನ್, ಖಜಾಂಚಿ ಡಾ. ಎಸ್.ಪಿ. ಮುತ್ತುಕುಮಾರ್ ಇದ್ದರು.

ಶಾಲಾ ಶಿಕ್ಷಣ ಇಲಾಖೆ
ಉಪನಿರ್ದೇಶಕರ ಕಛೇರಿ, 2 ನೇ ಮಹಡಿ, ಜಿಲ್ಲಾ ಪಂಚಾಯತ್ ಭವನ, ಬಿ. ಎಂ. ರಸ್ತೆ, ರಾಮನಗರ ಜಿಲ್ಲೆ, ರಾಮನಗರ – 562 159.

ಸಂಖ್ಯೆ : ಲೆಪ2/ಸ.ಶಾ.ಪೀ./ಜಿ.ಹ.ಸ./22/2023–24/3092 ದಿನಾಂಕ : 06–11–2023

ಇ-ಟೆಂಡರ್ ಅಧಿಸೂಚನೆ

ಜಿಲ್ಲಾ ಉಪನಿರ್ದೇಶಕರು, ಶಾ.ಶಿ. ಇಲಾಖೆ, ರಾಮನಗರ ಜಿಲ್ಲೆ, ಇವರು ಇ–ಪೋರ್ಟಲ್ ಮೂಲಕ ಇ–ಟೆಂಡರನ್ನು ಅಹ್ವಾನಿಸಿದ್ದು, ವಿವರ ಈ ಕೆಳಕಂಡಂತಿದೆ.

1) ಟೆಂಡರ್ ವಿವರ DPI/2023-24/IND0126 : 2023–24 ನೇ ಸಾಲಿಗೆ ರಾಮನಗರ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಡೆಸ್ಕ್‌ಗಳ ಖರೀದಿ ಸಂಬಂಧ ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 27–11–2023ರ ಸಂಜೆ 17.30 ಗಂಟೆಯೊಳಗೆ.

ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ಕೆಲಸದ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ ಅಥವಾ ಅಂತರ್ಜಾಲ ಮೂಲಕ **http://www.kppp.karnataka.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿದೆ.

ಸಹಿ/– ಜಿಲ್ಲಾ ಉಪನಿರ್ದೇಶಕರು, ಶಾ.ಶಿ. ಇಲಾಖೆ, ರಾಮನಗರ ಜಿಲ್ಲೆ,

ಡಿಐಪಿಆರ್/ರಾಮನಗರ/271/ಮಣಿಪಾಲ್/2023–24

ಜೆಎಸ್‌ಡಬ್ಲ್ಯು ಕಂಪನಿ ಸಲ್ಲಿಸಿದ ಮೇಲ್ಮನವಿ ವಿಚಾರಣೆ ನಡೆಸಿದ ಹೈಕೋರ್ಟ್

ವಿದ್ಯುತ್: ಅರ್ಜಿ ವಿಲೇವಾರಿಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯುತ್ ಖರೀದಿ ದರ ಸೇರಿದಂತೆ ಎಲ್ಲ ವಿವಾದಾತ್ಮಕ ಅಂಶಗಳನ್ನು ಏಕಸದಸ್ಯ ನ್ಯಾಯಪೀಠವು ವಿಚಾರಣೆ ನಡೆಸಿ ಈ ಕುರಿತಾದ ರಿಟ್ ಅರ್ಜಿಯನ್ನು ಒಂದು ವಾರದಲ್ಲಿ ಇತ್ಯರ್ಥಪಡಿಸಬೇಕು' ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಆದೇಶಿಸಿದೆ.

ಈ ಸಂಬಂಧ ಜೆಎಸ್‌ಡಬ್ಲ್ಯು ಕಂಪನಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠವು, ಯಾವುದೇ ಅಖೈರು ಆದೇಶ ನೀಡಲು ನಿರಾಕರಿಸಿದೆ.

'ಏಕಸದಸ್ಯ ಪೀಠದ ಮುಂದೆ ಬಾಕಿ ಇರುವ ಅರ್ಜಿ ಇತ್ಯರ್ಥವಾಗುವವರೆಗೂ ರಾಜ್ಯ ಸರ್ಕಾರವು ಜೆಎಸ್‌ಡಬ್ಲ್ಯು ಎನರ್ಜಿ ಲಿಮಿಟೆಡ್‌ಗೆ ಪ್ರತಿ ಯೂನಿಟ್ ವಿದ್ಯುತ್‌ಗೆ ₹7.25 ಪಾವತಿಸಬೇಕು' ಎಂಬ ಮಧ್ಯಂತರ ನಿರ್ದೇಶನ ನೀಡಿದೆ. 'ಈ ಆದೇಶವು ಏಕಸದಸ್ಯ ನ್ಯಾಯಪೀಠದ ಮುಂದಿರುವ ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದೂ ಹೇಳಿದೆ.

ವಿಚಾರಣೆ ವೇಳೆ ಜೆಎಸ್‌ಡಬ್ಲ್ಯು ಪರ ಹಾಜರಿದ್ದ ಸುಪ್ರೀಂ ಕೋರ್ಟ್ ಹಿರಿಯ ವಕೀಲ ಮುಕುಲ್ ರೋಹಟಗಿ, 'ರಾಜ್ಯ ಸರ್ಕಾರವು ಮಾರುಕಟ್ಟೆಯಲ್ಲಿ ಹಾಲಿ ಚಾಲ್ತಿಯಲ್ಲಿರುವ ದರಕ್ಕೆ ವ್ಯತಿರಿಕ್ತವಾಗಿ ಅರ್ಧ ಹಣ ಪಾವತಿಸುವುದಾಗಿ ತಿಳಿಸಿದೆ. ಇದರಿಂದ ಜೆಎಸ್‌ಡಬ್ಲ್ಯುಗೆ ದಿನವೊಂದಕ್ಕೆ ಅಂದಾಜು ₹10 ಕೋಟಿ ನಷ್ಟವಾಗಲಿದೆ' ಎಂದರು.

ಇದನ್ನು ಆಕ್ಷೇಪಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಬರ ಪರಿಸ್ಥಿತಿಯಿಂದಾಗಿ ರಾಜ್ಯವು ವಿದ್ಯುತ್ ಸಮಸ್ಯೆ ಎದುರಿಸುತ್ತಿದೆ. ರಾಜ್ಯದಲ್ಲಿನ ಎಲ್ಲಾ ವಿದ್ಯುತ್ ಉತ್ಪಾದಕರು ಕೆಲವು ಷರತ್ತಿಗೆ ಒಳಪಟ್ಟು ತಾವು ಉತ್ಪಾದಿಸಿದ ವಿದ್ಯುತ್ ಅನ್ನು ರಾಜ್ಯದ ಗ್ರಿಡ್‌ಗೆ ಪೂರೈಸುವಂತೆ ರಾಜ್ಯ ಸರ್ಕಾರ ಆದೇಶಿಸಿದೆ' ಎಂದರು.

'ವಿದ್ಯುತ್ ಕೊರತೆ ನೀಗಿಸಿಕೊಳ್ಳಲು ರಾಜ್ಯ ಸರ್ಕಾರ ಈ ಹಿಂದೆಯೂ ವಿದ್ಯುಚ್ಛಕ್ತಿ ಕಾಯ್ದೆ-2003ರ ಕಲಂ 11 ಅನ್ನು ಜಾರಿಗೊಳಿಸಿದೆ. ಹೀಗಾಗಿ, ರಾಜ್ಯದಲ್ಲಿನ ವಿದ್ಯುತ್ ಉತ್ಪಾದಕರು ರಾಜ್ಯದ ಗ್ರಿಡ್‌ಗೆ ಮಾತ್ರವೇ ವಿದ್ಯುತ್ ಪೂರೈಸಬೇಕು ಎಂದು ಕಾನೂನು ಪ್ರಕಾರ ತನ್ನ ಅಧಿಕಾರ ಚಲಾಯಿಸಿದೆ' ಎಂದರು.

'ಕರ್ನಾಟಕ ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಮುಂದಿರುವ ಪ್ರಕ್ರಿಯೆಗೆ ಒಳಪಟ್ಟು ಎಲ್ಲಾ ಎಸ್ಕಾಂಗಳು ತಾತ್ಕಾಲಿಕವಾಗಿ ಪ್ರತಿ ಯೂನಿಟ್‌ಗೆ ₹4.86 ಪಾವತಿಸಬೇಕು' ಎಂಬುದು ಸರ್ಕಾರ ವಿಧಿಸಿದ್ದ ಷರತ್ತುಗಳಲ್ಲಿ ಒಂದಾಗಿತ್ತು.

'ಹಾಲು ಉತ್ಪಾದಕರ ನೆರವಿಗೆ ಸರ್ಕಾರ ನಿಲ್ಲಲಿ'

ಬೆಂಗಳೂರು: 'ತೀವ್ರ ಬರಗಾಲದಿಂದ ಸಂಕಷ್ಟಕ್ಕೆ ಸಿಲುಕಿರುವ ಹಾಲು ಉತ್ಪಾದಕರ ನೆರವಿಗೆ ರಾಜ್ಯ ಸರ್ಕಾರ ನಿಲ್ಲಬೇಕು. ಪಶು ಆಹಾರಕ್ಕೆ ಶೇಕಡ 50 ರಷ್ಟು ಸಹಾಯಧನ ಮತ್ತು ಉಚಿತವಾಗಿ ರಾಸು ವಿಮೆ ಒದಗಿಸಬೇಕು' ಎಂದು ಬಿಜೆಪಿ ಹಾಲು ಉತ್ಪಾದಕರ ಪ್ರಕೋಷ್ಠ ಆಗ್ರಹಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಬಿಜೆಪಿ ಹಾಲು ಉತ್ಪಾದಕರ ಪ್ರಕೋಷ್ಠದ ರಾಜ್ಯ ಘಟಕದ ಸಂಚಾಲಕ ಎಂ.ಆರ್. ವೆಂಕಟೇಶ್, 'ಬರ, ಜಾನುವಾರುಗಳ ಚರ್ಮರೋಗ, ಗಂಟು ರೋಗದಿಂದ ಹಾಲು ಉತ್ಪಾದಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಾಲು ಉತ್ಪಾದನೆಯೂ ಕುಸಿಯುತ್ತಿದೆ. ಈ ವೇಳೆ ಹಾಲು ಒಕ್ಕೂಟಗಳು ಹಾಲು ಉತ್ಪಾದಕರಿಗೆ ನೀಡುವ ದರದಲ್ಲಿ ಪ್ರತಿ ಲೀಟರ್‌ಗೆ ₹2 ರಷ್ಟು ಕಡಿತ ಮಾಡಿರುವುದರಿಂದ ಗಾಯದ ಮೇಲೆ ಬರೆ ಎಳೆದಂತಾಗಿದೆ' ಎಂದಿದ್ದಾರೆ.

'ರಾಜ್ಯದ ಎಲ್ಲ ರಾಸುಗಳಿಗೆ ಉಚಿತವಾಗಿ ವಿಮೆ ಸೌಲಭ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ರಾಜ್ಯದಾದ್ಯಂತ ಮೇವು ವಿತರಣಾ ಕೇಂದ್ರಗಳನ್ನು ತೆರೆದು, ರಿಯಾಯ್ತಿ ದರದಲ್ಲಿ ಮೇವು ಒದಗಿಸಬೇಕು' ಎಂದು ಒತ್ತಾಯಿಸಿದ್ದಾರೆ.

₹480 ಕೋಟಿ ವೆಚ್ಚದಲ್ಲಿ ರೈಲು ನಿಲ್ದಾಣ ವಿಶ್ವದರ್ಜೆಗೆ

ಅಭಿವೃದ್ಧಿ ಕಾಮಗಾರಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಯನ್ನು ಸಂಸದ ಪಿ.ಸಿ.ಮೋಹನ್ ಅವರು ಮಂಗಳವಾರ ಪರಿಶೀಲಿಸಿದರು.

ಬೆಂಗಳೂರು: ನಗರದ ಕಂಟೋನ್ಮೆಂಟ್ ರೈಲು ನಿಲ್ದಾಣವನ್ನು ₹480 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಸಂಸದ ಪಿ.ಸಿ.ಮೋಹನ್ ಅವರು ಮಂಗಳವಾರ ಕಾಮಗಾರಿ ಪರಿಶೀಲಿಸಿದರು.

ಕಾಮಗಾರಿ ತ್ವರಿತಗೊಳಿಸುವಂತೆ ಗುತ್ತಿಗೆದಾರರು ಹಾಗೂ ರೈಲ್ವೆ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

'2022ರ ಜೂನ್ 20ರಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ಕಾಮಗಾರಿಗೆ ಚಾಲನೆ ನೀಡಿದ್ದರು. ಕಾಮಗಾರಿ ಪೂರ್ಣಗೊಂಡ ಮೇಲೆ ಕಂಟೋನ್ಮೆಂಟ್ ನಿಲ್ದಾಣ ಹೈಟೆಕ್ ಆಗಲಿದೆ. ಪ್ರಯಾಣಿಕರಿಗೆ ವಿಶ್ವದರ್ಜೆಯ ಸೌಲಭ್ಯಗಳು ದೊರೆಯಲಿವೆ' ಎಂದು ಸಂಸದರು ವಿಶ್ವಾಸ ವ್ಯಕ್ತಪಡಿಸಿದರು.

'ಈ ನಿಲ್ದಾಣವು ಉಪ ನಗರ ರೈಲು ಹಾಗೂ ದೂರಕ್ಕೆ ತೆರಳುವ ರೈಲುಗಳ ಸಂಪರ್ಕ ಕೊಂಡಿ ಆಗಲಿದೆ. ವಸಂತನಗರ ಕಡೆಯಿಂದ ಮುಖ್ಯಪ್ರವೇಶ ದ್ವಾರ ಹಾಗೂ ಮಿಲ್ಲರ್ಸ್ ರಸ್ತೆಯಿಂದ ಎರಡನೇ ಪ್ರವೇಶ ದ್ವಾರ ಹೊಂದಿದೆ. ಪ್ರಸ್ತುತ 25 ಸಾವಿರ ಚದರ ಅಡಿಯಲ್ಲಿ ನಿಲ್ದಾಣವಿದೆ. ಇದಕ್ಕೆ 75 ಸಾವಿರ ಚದರ ಅಡಿ ಜಾಗವನ್ನು ಹೆಚ್ಚುವರಿಯಾಗಿ ಸೇರಿಸಿಕೊಂಡು 1 ಲಕ್ಷ ಚದರ ಅಡಿಯಲ್ಲಿ ವಿಶ್ವದರ್ಜೆ ಗುಣಮಟ್ಟದ ನಿಲ್ದಾಣ ನಿರ್ಮಿಸಲಾಗುತ್ತಿದೆ. ಹವಾನಿಯಂತ್ರಣ ಕೊಠಡಿ, ಹೆಚ್ಚಿನ ಟಿಕೆಟ್ ಕೌಂಟರ್‌ಗಳು, ಚಾವಣಿಗೆ ಸೋಲಾರ್ ಅಳವಡಿಕೆ ಮಾಡಲಾಗುತ್ತಿದೆ. ಬಹುಮಹಡಿ ವಾಹನ ಪಾರ್ಕಿಂಗ್ ಸೌಲಭ್ಯವುಳ್ಳ ಕಟ್ಟಡ ನಿರ್ಮಿಸಲಾಗುತ್ತಿದೆ. ಈ ಕಟ್ಟಡದಲ್ಲಿ 1 ಸಾವಿರ ಕಾರು ಹಾಗೂ 1 ಸಾವಿರ ಬೈಕ್‌ಗಳ ನಿಲುಗಡೆಗೆ ವ್ಯವಸ್ಥೆ ಆಗಲಿದೆ' ಎಂದು ಹೇಳಿದರು.

'ಪ್ರಯಾಣಿಕರ ಅನುಕೂಲಕ್ಕೆ ರೈಲು ನಿಲ್ದಾಣದ ಎದುರು ಬಿಎಂಟಿಸಿ ಫೀಡರ್ ಬಸ್‌ಗಳಿಗೆ 'ಬಸ್ ಬೇ' ನಿರ್ಮಿಸುವಂತೆ ಸೂಚನೆ ನೀಡಿದ್ದೇನೆ. ಜತೆಗೆ, ಉಪ ನಗರ ರೈಲು ಯೋಜನೆಗಾಗಿಯೇ ನಾಲ್ಕು ಪ್ರತ್ಯೇಕ ಫ್ಲಾಟ್‌ಫಾರಂ ನಿರ್ಮಿಸಲಾಗುತ್ತಿದೆ. ರೈಲು ನಿಲ್ದಾಣದಿಂದ ಬಂಬೂ ಬಜಾರ್ ಮೆಟ್ರೊ ನಿಲ್ದಾಣಕ್ಕೆ ವಾಕ್‌ವೇ ನಿರ್ಮಿಸಲಾಗುತ್ತಿದೆ. ಬಿಎಂಆರ್‌ಸಿಎಲ್ ಅಧಿಕಾರಿಗಳು ಪ್ರಥಮ ಹಂತದ ಕೆಲಸ ಆರಂಭಿಸಿದ್ದಾರೆ. ವಾಕ್‌ವೇ ಸಂಪರ್ಕಿಸಲು ಎಲ್ಲ ಫ್ಲಾಟ್‌ಫಾರಂಗೆ ಹೆಚ್ಚುವರಿ ಎಫ್‌ಒಬಿ ಸ್ಥಾಪಿಸುವಂತೆ ಸೂಚಿಸಿದ್ದೇನೆ' ಎಂದು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

My client intends to purchase the Property mentioned and described in the Schedule hereunder from **(1) Smt. Geethanjali Devi**, wife of Sri. S. Ghyanchand and **(2) Sri. S. Ghyanchand**, son of Late Sukhraj, **(3) Ms. Anju Ghyanchand,** daughter of Sri. S. Ghyanchand, **(4) Ms. Muskaan Pramod Jain,** daughter of Late Pramod Kumar Jain, **(5) Ms. Kashish Jain,** daughter of Late Pramod Kumar Jain, and **(6) Mrs. Usha Pramod Kumar Jain,** wife of Late Pramod Kumar Jain ("**Owners**"). The Owners represent that they are the absolute owners of the Schedule Property and have a good marketable, right, title and interest therein and that apart from them there are no other person/s having any right or claim over the Schedule Property. The Owners further represents that, they have not entered into any Agreements/MoU with any third party and that the Owners have not mortgaged, created any right, interest, lien or encumbered the Schedule Property or any part thereof in any manner with any person/s. Any person/s having objection/s or claims, shall with documentary evidence lodge their objection/s or claims **within Fifteen (15) days** from the date of this Notice with the Undersigned, failing which, my client shall proceed with the above-mentioned transaction.

SCHEDULE

All that piece and parcel of the property bearing BBMP Khata No. 10/4-2 (earlier bearing Premises No. 7/10 and much earlier bearing Property No.8), BBMP PID No. 77-103-10/4-2, situated at Kumara Krupa Road, Sampangiramnagar, in BBMP Ward No. 93, Bengaluru, measuring East to West 60 feet and North to South 161 feet, totally measuring 9,604 square feet and bounded on the:

East by : Plot No. 9 in premises No. 7/10
West by : Kumara Krupa Road
North by: Plot No. 7 in premises No. 7/10
South by: Sites belonging to Sri. Gobindram Atmaram & family.

Jayanth M Pattanshetti
Advocate,
Jayanth Pattanshetti Associates LLP
102, Ground Floor, "Rams Infantry Manor", No. 70, Infantry Road, Bengaluru-560 001.
Ph: 080 25593195/25581469
Bengaluru
Date : 07-11-2023

JOB OPPORTUNITIES

Hospital & Medical Jobs

NABH Accredited P. D. Hinduja Sindhi Multispeciality Hospital, Bangalore Requires
- Hospital Physician M.D-150 K
- Hospital Gynaecologist M.S-150K
- Ophthalmologist on Doctor Share
- Medical Officers MBBS, 40K
- Patient Care Co-ordinator

Mail Resume to sandhya@hindujasindhihospital.com
Ph: 78995 85377 080-49030307

Teachers/ Professors

WANTED URGENTLY Full-Time Lecturers in English, Hindi, Computer Science, & Political Science Candidates with P.G, & B.Ed, Preferably with 2 Years of Experience, can apply to the Secretary Vidyavahini PU College, Anandanagar, Near Hebbal, Bangalore-24. Email: vvpucollege@gmail.com PH:9606516854 080-23433507

SHEILA KOTHAVALA Institute for Deaf is inviting RCI registered trained graduate teachers for teaching hearing impaired children in Primary, Secondary and High school classes as per Karnataka State syllabus and one trained Crafts teacher. Need Sign language skills. Eligible candidates may apply by email to skid_71@yahoo.com before 20th November, 2023.

REQUIRED TEACHERS for 2nd to 4th class for Maths and Computer Science subjects. Contact Amaravani High School. Basaweshwara Nagar. Bangalore-79. from 9/11/23 to 11/11/23. Time: 9.30am to 1.00pm. Ph: 9986973295/ 080-23482666

APPLICATIONS ARE INVITED FOR — PES UNIVERSITY

Ph.D. Programs (Full Time/Part Time) in the following Disciplines
Computer Science & Engineering
Electronics & Communication Engineering
Electrical & Electronics Engineering
Mechanical Engineering
Biotechnology
Computer Application
Management Studies
Commerce
Science (Physics/Chemistry/Mathematics)
Pharmaceutical Sciences

M.Tech. by Research Programs (Full Time / Part Time) in the following Disciplines
Computer Science & Engineering
Electronics & Communication Engineering
Electrical & Electronics Engineering
Mechanical Engineering
Biotechnology

15 November, 2023
Last Date for Submission of Application Form

18 November, 2023
Date of Ph.D. / M.Tech. by Research Entrance Test

Research Fellowship of upto Rs. 27,000/- per month for Meritorious Full Time Scholars.

For more details visit: www.pes.edu/phd
Or contact Dean of Research, PES University at dean.research@pes.edu

Interested and Eligible candidates can download the application form at www.pes.edu/phd

Instructions for submitting the application, documents and application fee details are in the website www.pes.edu/phd

SILICON CITY COLLEGE AUTONOMOUS (A Unit of MJ Education Trust)
Autonomous Re-Accredited By NAAC with 'A' Grade
Re-Accredited By NAAC with 'A' Grade. Recognised under Section 2(f) & 12(B) by UGC, Affiliated to Bengaluru North University
#26/2 Ravindra Layout, K R Puram, Bengaluru 560036, Karnataka.
Ph: 81470 93466, 81470 93467
Email: chairman@siliconcitycollege.ac.in, www.siliconcitycollege.ac.in
Empowerment Through Knowledge
Walk-in-Interview
Eligible candidates having minimum 2 years of teaching experience are invited to attend Walk-in-Interview for the post of **Assistant/Associate/Professors in Computer Science** on 10th & 11th November, 2023 (Friday & Saturday) between 9AM to 2PM along with their testimonials, updated resume and recent passport size photograph.
Qualification: MCA/M.Sc/M.TECH in Computer Science with/without PhD.

WANTED LECTURERS in English, Computer Science, Commerce and Biology for Vidyavana PU College, Tirumalashettyhalli Cross, Bengaluru- 560067. 9663389388

VIDYA NIKETAN SCHOOL, HEBBAL, Affiliated to I.C.S.E / ISC Invites applications of Montessori trained Experienced Teachers for Pre Primary School. Please apply immediately to: vnspreprimary@gmail.com Vidya Niketan School No.30, Kempapura, Hebbal Bangalore-560024. Ph:23331531 23531340

MS PU COLLEGE
No. 35, 6th Cross, Gopalappa Layout, Manorayanapalya, R.T. Nagar Post, Bangalore-560 032
REQUIRED
Lecturer for English Chemistry and Biology
Qualification: M.Sc, M.A, B.Ed Fulltime/Part time
For Details Contact: 9844456549 9986006003

MODERN PUBLIC ENGLISH SCHOOL, Ganganagar, Bangalore-32 Requires Experienced Qualified ENGLISH TEACHERS With B.A.B.Ed. Send CV: mpes.ganganagar@gmail.com Mobile: 7899296839

REQUIRED TRAINED Hindi and Craft teachers for Higher Primary classes for immediate appointment. Florence High School. Basaveshwaranagar, Bengaluru- 560079 Contact @ 080- 41536693/ 95 Email Id: info@florence.edu.in

HARWARD Group of Institutions
Dasanapura, Tumkur Road, Bangalore North - 562123
WANTED
Principal (Commerce)
Integrated Faculties
Physics Lecturer M.Sc, B.Ed -NEET, JEE Level
Economics (M.A)
Computer Science M.Sc, MCA
Kannada MA, B.Ed with 5 yrs Experience
HARWARD INTERNATIONAL SCHOOL
CBSE Affiliation No.830335
PRT & TGT for ALL SUBJECTS
Marketing Executive MBA with 3 yrs Experience
Please send CV to infoharwardints@gmail.com
9880112833 9945230286

WANTED TRAINER In Computer Basics and Tally, BACHELOR OF SOCIAL WORK and MOBILIZER- Minimum 2Years Experience. 8105202063

*****WANTED***** FOR IMMEDIATE Appointment: HINDI and SCIENCE TEACHERS (Primary). Contact:St.YASH PUBLIC SCHOOL. Kempegowdanagar, from Magadi Main-road, Bangalore-91. Phone:7204347583/4, 9066242255

WANTED EXPERIENCED and Qualified Teachers to Teach High School Social Studies, Science and Physical Education (Gents). Contact PRINCIPAL-S.D.A. High School. Phone: 9845606243 e-mail.sdapucollege@gmail.com

Cook

WANTED BRAHAMIN Cook Lady/gent Part/Full Time for Brahamin family. J.P.Nagar 2nd Phase: 9845042249/ 9704288388

Engg/ Production Technical

UTL TECHNOLOGIES Ltd Trainers for AI, Web, Networking, Marketing Executives 9740988889, info@utltechnologies.com

REQUIRED EXPERIENCED CIVIL ENGINEERS for Reputed Construction Co. Contact: 94490-53904 Mail: kmc185km@gmail.com

JOB OPPORTUNITIES IN PEENYA BANGALORE
OFFICE ASSISTANT:-
B.Com/ PUC, with minimum 2 years experience in handling Time Office, Company Accounts, preparing trial Balance Sheet etc.,
CNC MACHINE OPERATOR TRAINEES:-
ITI with minimum 1 year working experience on CNC Turning OR Machining Centres and residing close to Peenya.
MAINTENANCE ENGINEER:
Diploma or ITI in Electrical Engineering with atleast 2 years experience as Maintenance Engineer & capable of diagonising repairs on CNC Machines.
Apply with detailed Bio-Data within 7 days to :-
The Director,
VINAYAKA CNC CENTRE PVT LTD.,
A-347 , 9th Main, 2nd Stage, Peenya Indl., Estate, Peenya, Bangalore-560 058.

General

JOB OPPORTUNITY for Retired, Homemaker, Defence Banker's, Business People Fixed Salary 75K Per Month & Incentives. Locations:- Koramangala, Jayanagar, Rajajinagar. Contact:- 9108282236, 9108282237

WANTED HELPERS Lady/ Gents, SSLC, PUC, Diploma, English Typing, Stereo Art Line Rajajinagar, Bangalore. 9845149431.

AN EX-AUDITOR and Tax Practitioner's office requires a Lady Personal Assistant, having computer knowledge. Contact with Bio-Data:- 9448175385.

Wanted

WANTED SMART administrative Manager for MS Ramaiah North City Residents Welfare Association. Graduates with good communication skills, Basic accounting knowledge, Computer usage- emails and spreadsheets, liaisoning in English and Kannada may apply. Contact Raghavendra Rao 9663311500

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

BUILDERS ESSENTIAL

Water Proofing

WE FIX LEAKING ROOF,TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY,CIVIL WORKS. Call:9448572697

REAL ESTATE SELLING

House

Kanakapura Road

DUPLEX HOUSE 3BHK, SEMI FURNISHED READY TO OCCUPY 2400SFT FACING NORTH, KONANAKUNTE 1.60CRORE 9916691982 9343704220

Sites

Mysore

50X80 RESIDENTIAL Site for Sale, SBM Layout, Bogadhi, Excellent Location, Site No. 219-D, Immediate Settlement. Dr.Jyothi 9448364054,

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Nagarabhavi

"SALE 40X60,30X40 MPM Layout near Ambedkar Engineering college Good location, Genuine Buyers Contact: 7760388034/ 9242135834"

Commerical

Joint Venture

COMMERCIAL PROPERTY for JD in Prime location measuring 62x62 K.G. Road, Gandhinagar, Bangalore. Contact:- 9448363096.

Marathahalli

SALE: 5700 Sqft, Commercial Site FOR SALE, Near Varthur, WEST Facing, 'B' Khatha in BBMP limit. Contact- 9353532040

BUSINESS

Business to Business

Business

OPPORTUNITY TO Earn 1.5 lakh above Per Month. Trade mark, Fssai, MSME and GST registered Branded Dry Fruits Company Wishes to appoint Franchise outlets throughout Bangalore and all districts of Karnataka. Reasonable Investment: 8095059460/ 6360940295

PRIVATE LOAN 3cr to 300cr without income proof at 6% yearly. Property to be in good location. Low Cibil NPA also done. nriprivatefinance@gmail.com what'sapp +971527753407

Business Offers

Finance

NRI'S INVESTMENT& Finance Available On Low Interest Against Properties, Land& Building,Sites,Flats,Converted& Agriculture Lands Call:7204995189

PERSONAL

Change of Name

CHANGE OF NAME
I, **CLEONA MICHELLE BERNADETTE CORREYA** alias **MICHELLE RAJESH** R/at # Flat No. 305, Confident Althena Inside confident Rigel Althena, Sarjapura-Attibele Main Road, Near Ravi Theater, Sarjapura Village, Anekal taluk, Bangalore-562125, am hereby declaring that the above names pertain to me only. vide affidavit dt.04-11-2023, before Notary Roopa G Bhandare, Bangalore. Henceforth I shall be called as **MICHELLE RAJESH** only

I, SRIVATHSA BHAGHAVATH have changed my name as SRIVATHSA BHAGAVATH Vide affidavit dated 7/11/2023 before Notary Mohammed Hussain.K, Bangalore

I UMESH RAMNATH AKKULU R/o #16/9, 4th Floor, KP. Road, Opposite Banashankari Temple, Bangalore state that my name in Passport to be corrected as AKULA RAMANATHSETTY UMESH vide affidavit dated 01/11/2023 before Notary Mohammed Hussain, Bangalore

DH DECCAN HERALD ಪ್ರಜಾವಾಣಿ
Classifieds
More value, more impact
JOB HUNT
Get your HIRING NEEDS answered
JOB
Get the right people for your company...
Book your Ad with us now !
www.dhclassifieds.com BOOK NOW
For more details contact:
+91 9901641752 | +91 9731810277 |
+91 9900428036 | +91 9886213331 |
+91 9845114560 | 080-45557163/164

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಹೇಳಿಕೆಗೆ ಬಿಜೆಪಿ ಆಕ್ರೋಶ

ಮಹಿಳೆ ಶಿಕ್ಷಣ ಪಡೆದರೆ ಜನನ ಇಳಿಕೆ

ಪಟ್ನಾ(ಪಿಟಿಐ): ಮಹಿಳೆಯರು ಶಿಕ್ಷಣ ಹೊಂದಿರುವುದು ಜನಸಂಖ್ಯೆ ನಿಯಂತ್ರಣದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂಬ ಮುಖ್ಯಮಂತ್ರಿ ನಿತೀಶ್ ಕುಮಾರ್ ಹೇಳಿಕೆ ಬಿಹಾರ ವಿಧಾನಸಭೆ ಅಧಿವೇಶನದಲ್ಲಿ ಮಂಗಳವಾರ ಆಡಳಿತ ಮತ್ತು ವಿಪಕ್ಷಗಳ ನಡುವಿನ ವಾಗ್ಯುದ್ಧಕ್ಕೆ ಕಾರಣವಾಯಿತು.

ಈ ವಿಷಯವನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷ ಬಿಜೆಪಿ, ನಿತೀಶ್ ಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ ಪ್ರಸಂಗವೂ ನಡೆಯಿತು.

ಜನಸಂಖ್ಯೆ ನಿಯಂತ್ರಣದಲ್ಲಿ ಮಹಿಳೆಯರು ಶಿಕ್ಷಣ ಹೊಂದಿರುವುದು ಮಹತ್ವದ ಪಾತ್ರವಹಿಸುತ್ತದೆ ಎಂದು ಹೇಳಿದ ನಿತೀಶ್ ಕುಮಾರ್, 'ಒಬ್ಬ ಸುಶಿಕ್ಷಿತ ಮಹಿಳೆಯು ಗಂಡ ಲೈಂಗಿಕ ಕ್ರಿಯೆಯಲ್ಲಿ ತೊಡಗದಂತೆ ನಿರ್ಬಂಧ ಹೇರಬಲ್ಲವಳಾಗಿರುತ್ತಾಳೆ' ಎಂದು ವಿವರಿಸಿದರು.

'ಜನನ ಪ್ರಮಾಣ ಹೆಚ್ಚಳವೇ ಪತಿಯ ಅಪೇಕ್ಷೆಯಾಗಿರುತ್ತದೆ. ಆದರೆ, ಶಿಕ್ಷಣ ಪಡೆದ ಮಹಿಳೆಯು ಪತಿಯನ್ನು ನಿರ್ಬಂಧಿಸುವ ಕುರಿತು ತಿಳಿದುಕೊಂಡಿರುತ್ತಾಳೆ. ಜನನ ಪ್ರಮಾಣದಲ್ಲಿ ಇಳಿಕೆಯಾಗಿರುವುದಕ್ಕೆ ಮಹಿಳೆಯರು ಶಿಕ್ಷಣ ಪಡೆದಿರುವುದೇ ಕಾರಣ' ಎಂದು ಹಳ್ಳಿ ಶೈಲಿಯಲ್ಲಿ ಹೇಳಿದರು.

'ಇದನ್ನು ನೀವೂ ಚೆನ್ನಾಗಿ ಅರ್ಥ ಮಾಡಿಕೊಂಡಿರುತ್ತೀರಿ. ಈ ಹಿಂದೆ ಫಲವತ್ತತೆ ಪ್ರಮಾಣ 4.3ರಷ್ಟಿತ್ತು. ಈಗ 2.9ರಷ್ಟಿದ್ದು, ಶೀಘ್ರವೇ ಈ ಪ್ರಮಾಣ 2ರ ಗಡಿ ತಲುಪಲಿದೆ' ಎಂದು ಪತ್ರಕರ್ತರನ್ನು ಉದ್ದೇಶಿಸಿ ಅವರು ಹೇಳಿದರು.

ಈ ಮಾತಿಗೆ ತೀವ್ರ ವಿರೋಧ ವ್ಯಕ್ತಪಡಿಸಿದ ಬಿಜೆಪಿ ನಾಯಕರು, 'ಸಂತಾನ ಪ್ರಕ್ರಿಯೆ ಕುರಿತು ಸದನ ದಲ್ಲಿ ಮಾತನಾಡುವ ಮೂಲಕ ಮುಖ್ಯ ಮಂತ್ರಿ ನಿತೀಶ್ ಕುಮಾರ್ ರಾಜ್ಯದ ಮಹಿಳೆಯರು ತಲೆತಗ್ಗಿಸುವಂತೆ ಮಾಡಿದ್ದಾರೆ' ಎಂದು ಹರಿಹಾಯ್ದರು.

ಕಲಾಪದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ಶಾಸಕಿಯರಾದ ಗಾಯತ್ರಿ ದೇವಿ ಹಾಗೂ ಸ್ವೀಟಿ ಹೆಂಬ್ರಮ್, 'ನಿತೀಶ್ ಕುಮಾರ್ ಅವರಿಗೆ ವಯಸ್ಸಾಗಿದೆ. ಹೀಗಾಗಿ ಅವರು ಸಭ್ಯತೆ ಕಳೆದುಕೊಂಡಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

> **ನಿತೀಶ್‌ಕುಮಾರ್ ಹೇಳಿಕೆಯಲ್ಲಿ ಆಕ್ಷೇಪಾರ್ಹ ಅಂಶಗಳಿಲ್ಲ. ಲೈಂಗಿಕ ಶಿಕ್ಷಣದ ಭಾಗವಾಗಿ ಈ ವಿಷಯಗಳನ್ನು ಶಾಲೆಯಲ್ಲಿ ಮಕ್ಕಳಿಗೆ ಕಲಿಸಲಾಗುತ್ತದೆ**
> **ತೇಜಸ್ವಿ ಯಾದವ್,** ಆರ್‌ಜೆಡಿ ಮುಖಂಡ

> **ನಿತೀಶ್ ಕುಮಾರ್ ಕೆಟ್ಟ ಉದ್ದೇಶದಿಂದ ಮಾತನಾಡಿಲ್ಲ. ಸರಳ ಸಂಗತಿಯೊಂದನ್ನು ಹೇಳಲು ಅವರು ಯತ್ನಿಸಿದ್ದಾರೆ. ಬಿಜೆಪಿ ಕೀಳು ರಾಜಕಾರಣ ಮಾಡುತ್ತಿದೆ**
> **ನೀತು ದೇವಿ,** ಕಾಂಗ್ರೆಸ್ ಶಾಸಕಿ

> **ನಿತೀಶ್ ಹೇಳಿಕೆ ಘೋರವಾದುದು. ಮಹಿಳೆಯರ ಆಯ್ಕೆ, ಹಕ್ಕುಗಳ ಕುರಿತು ಸಂವೇದನಾರಹಿತವಾಗಿದೆ**
> **ರೇಖಾ ಶರ್ಮಾ,** ಅಧ್ಯಕ್ಷೆ, ರಾಷ್ಟ್ರೀಯ ಮಹಿಳಾ ಆಯೋಗ

ಸಿ.ಎಂ ರಾಜೀನಾಮೆಗೆ ಒತ್ತಾಯ

ನವದೆಹಲಿ: ಮಹಿಳೆಯರು ಶಿಕ್ಷಣ ಹೊಂದಿರುವುದು ಜನಸಂಖ್ಯೆ ನಿಯಂತ್ರಣದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂಬ ಕೀಳು ಅಭಿರುಚಿ ಹೇಳಿಕೆ ನೀಡಿರುವ ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಕೂಡಲೇ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಮುಖಂಡ ಹಾಗೂ ಕೇಂದ್ರ ಸಚಿವ ಅಶ್ವಿನಿಕುಮಾರ್ ಚೌಬೆ ಮಂಗಳವಾರ ಆಗ್ರಹಿಸಿದ್ದಾರೆ.

'ನಿತೀಶ್ ಕುಮಾರ್ ಅವರ ಈ ಹೇಳಿಕೆಯು ಅಶ್ಲೀಲವಾಗಿದೆ. ಅವರಲ್ಲಿರುವ ಸ್ತ್ರೀಯರ ಕುರಿತ ದ್ವೇಷ ಹಾಗೂ ಪುರುಷ ಪ್ರಧಾನ ಮನೋಭಾವವನ್ನು ತೋರುತ್ತದೆ' ಎಂದು ಟೀಕಿಸಿದ್ದಾರೆ.

'ವಿಧಾನಸಭೆಯಲ್ಲಿ ಇಂತಹ ಹೇಳಿಕೆ ನೀಡಿರುವುದು ನಾಚಿಕೆಗೇಡಿನ ಸಂಗತಿ. ಅವರು ಮಾನಸಿಕ ಸ್ಥಿಮಿತವನ್ನು ಕಳೆದು ಕೊಂಡಿರುವುದನ್ನು ಇದು ತೋರಿಸುತ್ತದೆ. ಅವರು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ವೈದ್ಯರ ಸಲಹೆ ಪಡೆಯಬೇಕು' ಎಂದೂ ಚೌಬೆ ಹೇಳಿದ್ದಾರೆ.

ವಿಧಾನಪರಿಷತ್ ಸದಸ್ಯರೂ ಆಗಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಾಮ್ರಾಟ್ ಚೌಧರಿ, 'ಬಿಹಾರದ 6.5 ಕೋಟಿ ಮಹಿಳೆಯರ ಗೌರವಕ್ಕೆ ನಿತೀಶ್ ಧಕ್ಕೆ ತಂದಿದ್ದಾರೆ. ತಮ್ಮ ಮಾತು ಮತ್ತು ಕೃತಿಗಳಲ್ಲಿ ಎಚ್ಚರವಹಿಸುವಂತೆ ಅವರಿಗೆ ನಾನು ಕೈಮುಗಿದು ಕೇಳುತ್ತೇನೆ' ಎಂದು ಹೇಳಿದ್ದಾರೆ.

'ನಿತೀಶ್ ಇಂತಹ ನಡವಳಿಕೆ ತೋರಿರುವುದು ಇದೇ ಮೊದಲೇನಲ್ಲ. ಇವರು ತಮ್ಮ ನಡೆಯನ್ನು ತಿದ್ದಿಕೊಳ್ಳದಿದ್ದಲ್ಲಿ ಬಾಲಕಿಯರು, ಮಹಿಳೆಯರು ನಿತೀಶ್ ಕುಮಾರ್ ಪಾಲ್ಗೊಳ್ಳುವ ಕಾರ್ಯಕ್ರಮಗಳಿಂದ ದೂರ ಉಳಿಯುವ ದಿನಗಳು ದೂರ ಇಲ್ಲ' ಎಂದೂ ಹೇಳಿದ್ದಾರೆ.

ಆಕಾಶ ಬುಟ್ಟಿ ದೀಪಾವಳಿ ಹಬ್ಬದ ಪ್ರಯುಕ್ತ ನಗರದ ಮಲ್ಲೇಶ್ವರದ ಮಳಿಗೆಯೊಂದರಲ್ಲಿ ಇರಿಸಲಾಗಿದ್ದ ಬಣ್ಣ ಬಣ್ಣದ ಆಕಾಶ ಬುಟ್ಟಿಗಳನ್ನು ಮಹಿಳೆಯರು ಸಂಭ್ರಮದಿಂದ ಮಂಗಳವಾರ ವೀಕ್ಷಿಸಿದರು
ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

'ಕ್ವಿಂಟಲ್ ಅಕ್ಕಿಗೆ ₹250 ಕಮಿಷನ್ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನ್ನಭಾಗ್ಯ ಯೋಜನೆ ಅಡಿಯಲ್ಲಿ ವಿತರಣೆ ಮಾಡುವ ಪ್ರತಿ ಕ್ವಿಂಟಲ್ ಅಕ್ಕಿಗೆ ₹250 ಕಮಿಷನ್ ನೀಡಬೇಕು' ಎಂದು ಕರ್ನಾಟಕ ರಾಜ್ಯ ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಕೃಷ್ಣ ಡಿ. ನಾಯ್ಕ, 'ಪಡಿತರ ವಿತರಕರಿಗೆ ಪ್ರತಿ ತಿಂಗಳು ಕಮಿಷನ್ ಸಂದಾಯವಾಗಬೇಕು. ಪಡಿತರ ವಿತರಣೆಗೆ ಸರ್ವರ್ ಸಮಸ್ಯೆಯಾಗಿದ್ದು, ಅದನ್ನು ಕೂಡಲೇ ಸರಿಪಡಿಸಬೇಕು. ಪ್ಲಾಸ್ಟಿಕ್ ಚೀಲ ರದ್ದುಗೊಳಿಸಿ ಗೋಣಿ ಚೀಲಗಳಲ್ಲಿ ಅಕ್ಕಿಯನ್ನು ಪೂರೈಕೆ ಮಾಡಬೇಕು' ಎಂದು ಒತ್ತಾಯಿಸಿದರು.

'65 ವರ್ಷ ಮೇಲ್ಪಟ್ಟ ವಿತರಕರು ಮರಣ ಹೊಂದಿದರೆ, ಅವರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಅಂಗಡಿ ಮಂಜೂರು ಮಾಡಬೇಕು. ಪಡಿತರ ಚೀಟಿದಾರರಿಗೆ ಪಡಿತರ ವಿತರಣೆ ಮಾಡಿದ ರಶೀದಿ ನೀಡಲು ಸರ್ಕಾರದಿಂದಲೇ ಪ್ರಿಂಟರ್ ವಿತರಿಸಬೇಕು' ಎಂದು ಹೇಳಿದರು.

'10 ಕೆ.ಜಿ. ಅಕ್ಕಿ ಬದಲಾಗಿ ಐದು ಕೆ.ಜಿ. ಅಕ್ಕಿಯನ್ನು ಪೂರೈಕೆ ಮಾಡಲಾಗುತ್ತಿದೆ. ಇದರಿಂದ ವಿತರಕರಿಗೆ ಲಾಭಾಂಶ ಕಡಿಮೆಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರು ನಮ್ಮ ಸಮಸ್ಯೆಗಳಿಗೆ ಕೂಡಲೇ ಪರಿಹಾರ ನೀಡಬೇಕು' ಎಂದು ಆಗ್ರಹಿಸಿದರು.

ಪೋಕ್ಸೊ ಅಪರಾಧಿಗೆ ಪೆರೋಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಗೆ ಸೇರಿದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿ ಜೀವಿತಾವಧಿ (ಜೀವ ಇರುವತನಕ) ಜೈಲು ಶಿಕ್ಷೆಗೆ ಗುರಿಯಾಗಿರುವ ಅಪರಾಧಿ; ತಮ್ಮ ಮಗಳನ್ನು ಭೇಟಿಯಾಗುವ ಉದ್ದೇಶ ಹೊಂದಿದ್ದು, ಅದಕ್ಕಾಗಿ ಅವರನ್ನು ಒಂದು ತಿಂಗಳ ಕಾಲ ಪೆರೋಲ್ ಮೇಲೆ ಬಿಡುಗಡೆ ಮಾಡಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಅಪರಾಧಿಯ ಪತ್ನಿಯಾದ ಚಾಮರಾಜ ನಗರದ ಅಮ್ರೀನ್ ತಾಜ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಅರ್ಜಿದಾರರ ಪರ ವಕೀಲ ಎಸ್. ಸುನಿಲ್ ಕುಮಾರ್ ಮಂಡಿಸಿದ ವಾದವನ್ನು ಮನ್ನಿಸಿದ್ದು, ಪೆರೋಲ್ ನೀಡಲು ನಿರಾಕರಿಸಿ ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರು ನೀಡಿದ್ದ ಹಿಂಬರಹವನ್ನು ರದ್ದುಪಡಿಸಿದೆ.

'ಅರ್ಜಿದಾರರ ಮನವಿಯಂತೆ ಶಮೀವುಲ್ಲಾ ಅವರನ್ನು 2023ರ ನವೆಂಬರ್ 6 ರಿಂದ ಡಿಸೆಂಬರ್ 5 ರವರೆಗೆ ಪೆರೋಲ್ ಮೇಲೆ ಬಿಡುಗಡೆ ಮಾಡಲು ಅಧೀಕ್ಷಕರು ಸೂಕ್ತ ಆದೇಶ ಹೊರಡಿಸಬೇಕು. ಈ ನಿಟ್ಟಿನಲ್ಲಿ ಸೂಕ್ತ ಷರತ್ತು ವಿಧಿಸಲು ಅವರು ಸ್ವತಂತ್ರರಾಗಿದ್ದಾರೆ ಮತ್ತು ಪೆರೋಲ್ ಅವಧಿಯಲ್ಲಿ ಶಮೀವುಲ್ಲಾ ನಡವಳಿಕೆ ಆಧಾರದ ಮೇಲೆ ಪೆರೋಲ್ ವಿಸ್ತರಣೆಗೆ ಕೋರುವ ಅವಕಾಶವನ್ನೂ ಕಾಯ್ದಿರಿಸಲಾಗಿದೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?: ಪರಿಶಿಷ್ಟ ಜಾತಿಗೆ ಸೇರಿದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಶಮೀವುಲ್ಲಾ ಅಲಿಯಾಸ್ ಸಲ್ಮಾನ್ ವಿರುದ್ಧ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012 (ಪೋಕ್ಸೊ) ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೇಲಿನ ದೌರ್ಜನ್ಯ ತಡೆ ಕಾಯ್ದೆ–1989ರ ಅಡಿಯಲ್ಲಿ



ಚಾಮರಾಜನಗರ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ದೋಷಿ ಎಂದು ತೀರ್ಮಾನಿಸಿತ್ತು. ಜೀವಿತಾವಧಿವರೆಗೆ ಜೈಲು ಶಿಕ್ಷೆ ಮತ್ತು ₹ 4.5 ಲಕ್ಷ ದಂಡ ವಿಧಿಸಿ 2020ರ ಅಕ್ಟೋಬರ್ 27ರಂದು ಆದೇಶಿಸಿತ್ತು. ಶಮೀವುಲ್ಲಾ ಅವರನ್ನು 2018ರಲ್ಲಿ ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಕೋರಿಕೆ: 'ನನ್ನ ಪುತ್ರಿಗೆ ಎರಡು ತಿಂಗಳಿದ್ದಾಗ ಪತಿ ಜೈಲು ಸೇರಿದ್ದಾರೆ. ಈಗಾಗಲೇ ಅವರು ಐದು ವರ್ಷಕ್ಕೂ ಹೆಚ್ಚು ಕಾಲದಿಂದ ಜೈಲಿನಲ್ಲಿದ್ದು, ಈವರೆಗೂ ಪುತ್ರಿಯನ್ನು ಕಾಣಲು ಅವಕಾಶವಾಗಿಲ್ಲ. ಆದ್ದರಿಂದ, ಪುತ್ರಿಯನ್ನು ಕಾಣಲು ಅನುವಾಗುವಂತೆ ಶಮೀವುಲ್ಲಾಗೆ ಒಂದು ತಿಂಗಳ ಕಾಲ ಪೆರೋಲ್ ನೀಡಬೇಕು' ಎಂದು ಅಮ್ರಿನ್ ತಾಜ್ ಮೈಸೂರು ಜೈಲು ಮುಖ್ಯ ಅಧೀಕ್ಷಕರನ್ನು ಕೋರಿದ್ದರು.

ನಿರಾಕರಣೆ: ಈ ಕೋರಿಕೆಯನ್ನು ನಿರಾಕರಿಸಿದ್ದ ಮುಖ್ಯ ಅಧೀಕ್ಷಕರು, 'ಗಂಭೀರ ಪ್ರಕರಣದಲ್ಲಿ ಅಪರಾಧಿಯಾಗಿರುವ ಶಮೀವುಲ್ಲಾಗೆ ಚಾಮರಾಜನಗರ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಜೀವಿತಾವಧಿಯ ಜೈಲು ಶಿಕ್ಷೆ ವಿಧಿಸಿದೆ. ಕರ್ನಾಟಕ ಕಾರಾಗೃಹಗಳ ಕೈಪಿಡಿ-2021ರ ನಿಯಮ 641 ಹಾಗೂ ಉಪನಿಯಮ 1ರ ಅನ್ವಯ ಇಂತಹ ಅಪರಾಧಿಯು ಪೆರೋಲ್ ರಜೆಗೆ ಅರ್ಹನಾಗಿರುವುದಿಲ್ಲ' ಎಂದು ತಿಳಿಸಿ 2023ರ ಆಗಸ್ಟ್ 31ರಂದು ಹಿಂಬರಹ ನೀಡಿದ್ದರು. ಈ ಹಿಂಬರಹವನ್ನು ಪ್ರಶ್ನಿಸಿ ಅಮ್ರೀನ್ ತಾಜ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ನಾಲೆಗೆ ಉರುಳಿದ ಕಾರು; ಐವರ ಸಾವು

ಪಾಂಡವಪುರ (ಮಂಡ್ಯ ಜಿಲ್ಲೆ): ಪಟ್ಟಣ ಹೊರವಲಯದ ಶ್ರೀರಂಗಪಟ್ಟಣ–ಜೇವರ್ಗಿ ರಾಜ್ಯ ಹೆದ್ದಾರಿ, ಬನಘಟ್ಟ ಗ್ರಾಮದ ಬಳಿ ಮಂಗಳವಾರ ಕಾರೊಂದು ವಿಶ್ವೇಶ್ವರಯ್ಯ ನಾಲೆಗೆ ಉರುಳಿ ಐವರು ಮೃತಪಟ್ಟಿದ್ದಾರೆ.

ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ನೊಣವಿನಕೆರೆ ಬಳಿಯ ಕೈದಾಳ ಗ್ರಾಮದ ಚಂದ್ರಪ್ಪ, ಕೃಷ್ಣಪ್ಪ, ಧನಂಜಯ, ಬಾಬು, ಜಯಣ್ಣ ಮೃತಪಟ್ಟವರು. ಅವರೆಲ್ಲರೂ ಸೋದರ ಸಂಬಂಧಿಗಳಾಗಿದ್ದು ಭದ್ರಾವತಿಯಲ್ಲಿ ನೆಲೆಸಿದ್ದರು.

ಜಮೀನು ಕೊಡಿಸುವುದಾಗಿ ಉದ್ಯಮಿಗೆ ವಂಚನೆ

₹1 ಕೋಟಿ ವಂಚಿಸಿದ್ದ ಐವರ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಆಂಧ್ರಪ್ರದೇಶದಲ್ಲಿ ಜಮೀನು ಕೊಡಿಸುವುದಾಗಿ ಹೇಳಿ ಉದ್ಯಮಿಯೊಬ್ಬರಿಂದ ₹1 ಕೋಟಿ ಪಡೆದು ವಂಚಿಸಿದ್ದ ಐವರು ಆರೋಪಿಗಳನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸಂಜಯ್ ಶ್ರೀನಿವಾಸ್, ಲೋಕನಾಥಾಚಾರಿ, ಪ್ರಭಾಕರ್ ರೆಡ್ಡಿ, ರಾಜೇಶ್ ಹಾಗೂ ಪೊಲ್ವಿನ್ ರವಿಕುಮಾರ್ ಬಂಧಿತರು. ಇವರಿಂದ ₹65 ಲಕ್ಷ ನಗದು, ₹ 8.50 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ, ನಾಲ್ಕು ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಂಧ್ರಪ್ರದೇಶದ ಉದ್ಯಮಿ ರಾಧಾಕೃಷ್ಣನ್ ಅವರು ಜಮೀನು ಖರೀದಿಸಲು ಇಚ್ಛಿಸಿದ್ದರು. ಅವರನ್ನು ಸಂಪರ್ಕಿಸಿದ್ದ ಆರೋಪಿಗಳು, ಕಡಿಮೆ ಬೆಲೆಗೆ ಜಮೀನು ಇರುವುದಾಗಿ ಹೇಳಿದ್ದರು. ಬೆಂಗಳೂರಿಗೆ ಬಂದು ಮಾತುಕತೆ ನಡೆಸುವಂತೆ ತಿಳಿಸಿದ್ದರು. ಅದನ್ನು ನಂಬಿದ್ದ ದೂರುದಾರ, ಸೆಪ್ಟೆಂಬರ್ 16ರಂದು ಬೆಂಗಳೂರಿಗೆ ಬಂದಿದ್ದರು.'

'ಹೋಟೆಲೊಂದರಲ್ಲಿ ಜಮೀನಿನ ನಕಲಿ ದಾಖಲೆಗಳನ್ನು ತೋರಿಸಿದ್ದ ಆರೋಪಿಗಳು, ದೂರುದಾರರ ಬಳಿಯ ಹಣದ ಬ್ಯಾಗ್ ತೆಗೆದುಕೊಂಡಿದ್ದರು. ಜಮೀನು ನೋಂದಣಿ ಮಾಡಿಸೋಣವೆಂದು ಹೇಳಿ ದೂರುದಾರರನ್ನು ನೋಂದಣಾಧಿಕಾರಿ ಕಚೇರಿಯತ್ತ ಕರೆದೊಯ್ಯಲು ಮುಂದಾಗಿದ್ದರು. ಹೋಟೆಲ್ ಎದುರೇ ಉದ್ಯಮಿಯನ್ನು ಬಿಟ್ಟು ಆರೋಪಿಗಳು ಕಾರಿನಲ್ಲಿ ಪರಾರಿಯಾಗಿದ್ದರು' ಎಂದರು.

'ಉದ್ಯಮಿ ಬಳಿ ಹಣವಿರುವುದನ್ನು ತಿಳಿದಿದ್ದ ಆರೋಪಿಗಳು, ಸಂಚು ರೂಪಿಸಿ ಕೃತ್ಯ ಎಸಗಿದ್ದರು. ವಂಚನೆಯಿಂದ ಬಂದ ಹಣವನ್ನು ಹಂಚಿಕೊಂಡಿದ್ದರು. ದೂರು ದಾಖಲಾಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದರು.

ಸಿ.ಎಂ ಮನೆ ಪೀಠೋಪಕರಣಕ್ಕೆ ₹3 ಕೋಟಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ 'ಕಾವೇರಿ'ಗೆ ಪೀಠೋಪಕರಣಗಳನ್ನು ಒದಗಿಸಲು ₹ 3 ಕೋಟಿ ಅನುದಾನ ಒದಗಿಸಲಾಗಿದೆ.

'ಕಾವೇರಿ'ಯಲ್ಲಿ ಹೊಸ ಸಭಾಂಗಣ ನಿರ್ಮಾಣ ಮತ್ತು ನವೀಕರಣ ಕಾಮಗಾರಿಗಳನ್ನು ಇತ್ತೀಚೆಗೆ ಕೈಗೊಳ್ಳಲಾಗಿತ್ತು. ಅಲ್ಲಿನ ಬಹುತೇಕ ಪೀಠೋಪಕರಣಗಳನ್ನು ಬದಲಾವಣೆ ಮಾಡಲು ಅನುದಾನ ಒದಗಿಸಲಾಗಿದೆ. ಈ ಅನುದಾನದ ಬಳಕೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ 4–ಜಿ ಅಡಿಯಲ್ಲಿ ವಿನಾಯ್ತಿ ನೀಡಿ ಆರ್ಥಿಕ ಇಲಾಖೆ ಅಕ್ಟೋಬರ್ 16 ರಂದು ಆದೇಶ ಹೊರಡಿಸಿದೆ. ಲೋಕೋಪಯೋಗಿ ಇಲಾಖೆಯು ಮುಖ್ಯಮಂತ್ರಿಯವರ ನಿವಾಸಕ್ಕೆ ಪೀಠೋಪಕರಣಗಳನ್ನು ಒದಗಿಸಲಿದೆ. ಟೆಂಡರ್ ಇಲ್ಲದೇ ನೇರವಾಗಿ ಪೀಠೋಪಕರಣ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ.

ಚಿನ್ನಾಭರಣ ಕದ್ದಿದ್ದ ವಿನ್ಯಾಸಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಾಪಾರಿಯೊಬ್ಬರ ಮನೆಯಲ್ಲಿದ್ದ ಚಿನ್ನಾಭರಣ ಕದ್ದಿದ್ದ ಆರೋಪದಡಿ ಆಭರಣ ವಿನ್ಯಾಸಕ ಮೋಹನ್ ಲಾಲ್‌ನನ್ನು ಸಂಪಂಗಿರಾಮನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಾಜಸ್ಥಾನದ ಮೋಹನ್ ಲಾಲ್, ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಪರಿಚಯಸ್ಥರಾಗಿದ್ದ ವ್ಯಾಪಾರಿ ರಾಮ್ ಲಾಲ್ ಮನೆಯಲ್ಲಿದ್ದ ಚಿನ್ನಾಭರಣ ಕದ್ದು ಪರಾರಿಯಾಗಿದ್ದ. ರಾಮ್‌ಲಾಲ್ ನೀಡಿದ್ದ ದೂರಿನ ತನಿಖೆ ಕೈಗೊಂಡು ಆರೋಪಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ನಗರ್ತಪೇಟೆಯಲ್ಲಿ ಚಿನ್ನಾಭರಣ ಮಾರಾಟ ಮಳಿಗೆ ಇಟ್ಟುಕೊಂಡಿರುವ ದೂರುದಾರ ರಾಮ್‌ಲಾಲ್, ಆರೋಪಿ ಮೋಹನ್ ಲಾಲ್‌ನನ್ನು ಆಗಾಗ ಮಳಿಗೆ ಹಾಗೂ ಮನೆಗೆ ಕರೆಸಿಕೊಳ್ಳುತ್ತಿದ್ದರು. ಚಿನ್ನದ ಗಟ್ಟಿಗಳನ್ನು ಆತನಿಗೆ ನೀಡಿ, ಬೇರೆ ಬೇರೆ ವಿನ್ಯಾಸದ ಆಭರಣ ಮಾಡಿಸುತ್ತಿದ್ದರು.'

'ದೂರುದಾರರು ಆರೋಪಿಗೆ 2,931 ಗ್ರಾಂ ಚಿನ್ನಾಭರಣ ನೀಡಿದ್ದರು. ನಿಗದಿತ ಸಮಯಕ್ಕೆ ಆರೋಪಿ, ವಿನ್ಯಾಸಗೊಳಿಸಿದ್ದ ಆಭರಣ ಕೊಟ್ಟಿರಲಿಲ್ಲ. ಇದನ್ನು ಪ್ರಶ್ನಿಸಿದ್ದ ದೂರುದಾರ, ಮಾತುಕತೆಗೆಂದು ಅ.25ರಂದು ಆರೋಪಿಯನ್ನು ತಮ್ಮ ಮನೆಗೆ ಕರೆಸಿದ್ದರು.''ಆರೋಪಿ ಮನೆಗೆ ಬಂದಿದ್ದ ಸಂದರ್ಭದಲ್ಲಿ ದೂರುದಾರ, ಶೌಚಾಲಯಕ್ಕೆ ತೆರಳಿದ್ದರು. ದೇವರ ಕೋಣೆಯಲ್ಲಿಟ್ಟಿದ್ದ ಚಿನ್ನಾಭರಣ ಕದ್ದುಕೊಂಡು ಆರೋಪಿ ಪರಾರಿಯಾಗಿದ್ದ. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು' ಎಂದು ಪೊಲೀಸರು ತಿಳಿಸಿದರು.

ಜೂಜಾಟದಲ್ಲಿ ಹಣ ಕಳೆದುಕೊಂಡಿದ್ದ: 'ಆರೋಪಿ ಮೋಹನ್ ಲಾಲ್, ಕೆಲ ತಿಂಗಳಿನಿಂದ ಜೂಜು ಆಡಲಾರಂಭಿಸಿದ್ದ. ಮೊಬೈಲ್ ಆ್ಯಪ್ ಮೂಲಕ ಹಣ ಕಟ್ಟುತ್ತಿದ್ದ. ಕ್ಯಾಸಿನೊ ಜೂಜಾಟದಲ್ಲೂ ಭಾಗವಹಿಸುತ್ತಿದ್ದ. ಆರಂಭದಲ್ಲಿ ಹಣ ಗೆದ್ದಿದ್ದ. ನಂತರ, ಹೆಚ್ಚು ಹಣ ಕಳೆದುಕೊಂಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜೂಜಾಟದಲ್ಲಿ ಕಳೆದುಕೊಂಡಿದ್ದ ಹಣವನ್ನು ಪುನಃ ಗಳಿಸಲು ಯೋಚಿಸಿದ್ದ. ಚಿನ್ನಾಭರಣ ಕದ್ದು, ಅವುಗಳನ್ನು ಮಾರಿ ಅದೇ ಹಣದಲ್ಲಿ ಪುನಃ ಜೂಜು ಆಡಲು ಮುಂದಾಗಿದ್ದ. ಈತನಿಂದ ₹ 84 ಲಕ್ಷ ಮೌಲ್ಯದ 1 ಕೆ.ಜಿ 399 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಕಳ್ಳತನ: ₹75 ಲಕ್ಷ ಮೌಲ್ಯದ ವಸ್ತುಗಳ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆಗಳು ಹಾಗೂ ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡಗಳಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪಿ ಶ್ರೀನಾಥ್‌ನನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ಶ್ರೀನಾಥ್, ಅಪರಾಧ ಹಿನ್ನೆಲೆಯುಳ್ಳವ. ಈತನಿಂದ ₹ 75 ಲಕ್ಷ ಮೌಲ್ಯದ ಲ್ಯಾಪ್‌ಟಾಪ್, ಟ್ಯಾಬ್, ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಕದಿಯುತ್ತಿದ್ದ ವಸ್ತುಗಳನ್ನು ಖರೀದಿಸುತ್ತಿದ್ದ ಆರೋಪದಡಿ ಮಂಜುನಾಥ್ ಹಾಗೂ ಶಿವಕುಮಾರ್‌ನನ್ನು ಬಂಧಿಸಲಾಗಿದೆ. ಇವರಿಂದಲೂ ಹಲವು ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದರು.

'ಪೇಯಿಂಗ್ ಗೆಸ್ಟ್ ಕಟ್ಟಡಗಳು ಹಾಗೂ ಮನೆಗಳಲ್ಲಿ ಕಳ್ಳತನ ನಡೆಯುತ್ತಿದ್ದ ಬಗ್ಗೆ ದೂರುಗಳು ದಾಖಲಾಗಿದ್ದವು. ಇವುಗಳ ಪತ್ತೆಗಾಗಿ ವಿಶೇಷ ತಂಡ ರಚಿಸಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಹಾಗೂ ಇತರೆ ಸುಳಿವಿನಿಂದ ಆರೋಪಿ ಶ್ರೀನಾಥ್ ಸಿಕ್ಕಿಬಿದ್ದ' ಎಂದು ತಿಳಿಸಿದರು.

'ಹಲವು ತಿಂಗಳಿನಿಂದ ಆರೋಪಿ ಕೃತ್ಯ ಎಸಗುತ್ತಿದ್ದ. ಕದ್ದ ವಸ್ತುಗಳನ್ನು ಮಾರಿ, ಅದರಿಂದ ಬಂದ ಹಣವನ್ನು ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದ' ಎಂದರು.

ಕ್ರಿಕೆಟ್ ಬೆಟ್ಟಿಂಗ್: 13 ಮಂದಿ ಬಂಧನ

ಬೆಂಗಳೂರು: ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ 13 ಆರೋಪಿಗಳನ್ನು ನಗರದ ಪೊಲೀಸರು ಬಂಧಿಸಿದ್ದಾರೆ.

'ಮೊಬೈಲ್ ಆ್ಯಪ್ ಮೂಲಕ ಪಂದ್ಯಗಳ ಸೋಲು–ಗೆಲುವು ಲೆಕ್ಕಾಚಾರದಲ್ಲಿ ಬೆಟ್ಟಿಂಗ್ ನಡೆಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ 11 ಸ್ಥಳಗಳ ಮೇಲೆ ದಾಳಿ ಮಾಡಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಚಿನ್ನಸ್ವಾಮಿ ಕ್ರೀಡಾಂಗಣ ಒಳಭಾಗದ ಪ್ರೇಕ್ಷಕರ ಗ್ಯಾಲರಿಯಲ್ಲೂ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಜತೆಗೆ, ಬೆಟ್ಟಿಂಗ್ ತಡೆಯಲು ನಗರದಲ್ಲಿ ಹೆಚ್ಚಿನ ನಿಗಾವಹಿಸಲಾಗಿದೆ' ಎಂದು ತಿಳಿಸಿದರು.

ರಾಜ್ಯದ ತೆರಿಗೆ ಪಾಲು ₹2,660 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಕರ್ನಾಟಕ ಸರ್ಕಾರಕ್ಕೆ ತೆರಿಗೆ ಹಂಚಿಕೆಯ ನವೆಂಬರ್ ಕಂತಿನ ರೂಪದಲ್ಲಿ ₹2,660 ಕೋಟಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ. ಕೇಂದ್ರವು 28 ರಾಜ್ಯಗಳಿಗೆ ಒಟ್ಟು 72,961 ಕೋಟಿ ಬಿಡುಗಡೆಗೊಳಿಸಿದೆ.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆಯಲ್ಲಿ ಶೇ 41 ಮೊತ್ತವನ್ನು ರಾಜ್ಯ ಸರ್ಕಾರಗಳಿಗೆ 14 ಕಂತುಗಳಲ್ಲಿ ಹಂಚಿಕೆ ಮಾಡಲಾಗುತ್ತದೆ. 2023–24ರ ಬಜೆಟ್ ಪ್ರಕಾರ, ಕೇಂದ್ರ ಸರ್ಕಾರವು ಈ ವರ್ಷವು ರಾಜ್ಯಗಳಿಗೆ ₹10.21 ಲಕ್ಷ ಕೋಟಿ ವರ್ಗಾಯಿಸುವ ನಿರೀಕ್ಷೆ ಇದೆ. ಕೇಂದ್ರದ ಆದಾಯವು ಸುಧಾರಿಸಿದಂತೆ ಕಂತಿನ ಮೊತ್ತ ಸಹ ಹೆಚ್ಚಾಗಲಿದೆ.

ಚಾಮುಂಡೇಶ್ವರಿ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ನಿರ್ಮಿಸಿರುವ ವಸತಿನಿಲಯ ಹಾಗೂ ಕ್ರೀಡಾ ಸಂಕೀರ್ಣದ ಉದ್ಘಾಟನೆ ಹಾಗೂ ಆಸ್ಪತ್ರೆ ಕಟ್ಟಡಕ್ಕೆ ಶಂಕುಸ್ಥಾಪನೆಯನ್ನು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ನೆರವೇರಿಸಿದರು. ಸಂಸದರಾದ ಡಿ.ಕೆ. ಸುರೇಶ್, ತೇಜಸ್ವಿ ಸೂರ್ಯ, ಶಾಸಕ ಡಾ.ರಂಗನಾಥ್, ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎ.ಸಿ. ಷಣ್ಮುಗಂ, ಅಧ್ಯಕ್ಷ ಎ.ಸಿ.ಎಸ್ ಅರುಣ್ ಕುಮಾರ್, ವ್ಯವಸ್ಥಾಪಕ ಟ್ರಸ್ಟಿ ಲಲಿತಾ ಲಕ್ಷ್ಮಿ, ಡಾ.ವಿಜಯಾನಂದ್, ಡಾ.ರೋಶನ್ ಕುಮಾರ್, ಡಾ.ಪ್ರವೀಣ್ ಜಿ.ಯು., ಡಾ.ನವೀನ್ ಇದ್ದಾರೆ

ಚಿನ್ನಾಭರಣ ಕಳವು

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರ ಮನೆಯಲ್ಲಿ ಕಳ್ಳತನ ನಡೆದಿದ್ದು, ಈ ಸಂಬಂಧ ಯಲಹಂಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನ್ಯಾಯಾಂಗ ಬಡಾವಣೆ ನಿವಾಸಿಯಾಗಿರುವ ಉದ್ಯಮಿ ರಾಮಮೂರ್ತಿ ಮನೆಯಲ್ಲಿ ಕಳ್ಳತನ ನಡೆದಿದೆ. ಅವರು ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶಾಸಕರೊಬ್ಬರ ಸಂಬಂಧಿ ಆಗಿರುವ ರಾಮಮೂರ್ತಿ ಹಾಗೂ ಕುಟುಂಬದವರು ಮನೆಗೆ ಬೀಗ ಹಾಕಿ ಬೇರೆ ಊರಿಗೆ ಹೋಗಿದ್ದರು. ಮೂರು ದಿನ ಬಿಟ್ಟು ವಾಪಸು ಮನೆಗೆ ಬಂದಾಗ ಕಳ್ಳತನ ಗಮನಕ್ಕೆ ಬಂದಿದೆ.'

'ಮನೆ ಬಾಗಿಲು ಮೀಟಿ ಒಳನುಗ್ಗಿದ್ದ ಕಳ್ಳರು ಸುಮಾರು ₹2 ಕೋಟಿ ಮೌಲ್ಯದ ಚಿನ್ನಾಭರಣ, ವಜ್ರ ಹಾಗೂ ಬೆಳ್ಳಿ ಸಾಮಗ್ರಿ ಕದ್ದೊಯ್ದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪಹರಣವಾಗಿದ್ದ ಮಗು ಹುಬ್ಬಳ್ಳಿಯಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ತಾಲ್ಲೂಕಿನ ಮುರುಗಮಲ್ಲ ಗ್ರಾಮದ ದರ್ಗಾದಲ್ಲಿ ಭಾನುವಾರ ಅಪಹರಣವಾಗಿದ್ದ ಎರಡು ವರ್ಷದ ಗಂಡು ಮಗು ಜಾವಿದ್ ಮಂಗಳವಾರ ಹುಬ್ಬಳ್ಳಿಯಲ್ಲಿ ಪತ್ತೆಯಾಗಿದೆ.

ಬೆಂಗಳೂರಿನ ಪಾದರಾಯನಪುರದ ಜಬೀವುಲ್ಲಾ, ಅವರ ಮಾವ ದಸ್ತು, ಅತ್ತೆ ಆಯಿಷಾ ಹಾಗೂ ಸಂಬಂಧಿಕರು ಎರಡು ದಿನಗಳ ಹಿಂದೆ ದರ್ಗಾಗೆ ಭೇಟಿ ನೀಡಿದ್ದರು. ಆ ವೇಳೆ ಮಗು ಕಾಣೆಯಾಗಿತ್ತು. ದರ್ಗಾದ ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ ಅಪರಿಚಿತ ವ್ಯಕ್ತಿಯೊಬ್ಬ ಮಗುವನ್ನು ಎತ್ತಿಕೊಂಡು ಹೋಗುತ್ತಿದ್ದ ದೃಶ್ಯ ಸೆರೆಯಾಗಿತ್ತು. ಕೆಂಚಾರ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮಂಗಳವಾರ ಮಧ್ಯಾಹ್ನ ಮಗು ಸಿಕ್ಕಿರುವ ಮಾಹಿತಿಯನ್ನು ಅಲ್ಲಿಯ ಸಮಾಜ ಕಲ್ಯಾಣ ಇಲಾಖೆಯು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿತ್ತು. ಈ ಮಾಹಿತಿ ದೊರೆಯುತ್ತಲೇ ಪೊಲೀಸರ ತಂಡ ಹಾಗೂ ಮಗುವಿನ ಪೋಷಕರು ಹುಬ್ಬಳ್ಳಿಗೆ ದೌಡಾಯಿಸಿದ್ದಾರೆ.

ಮಗು ಎಲ್ಲಿ ಪತ್ತೆಯಾಗಿದೆ. ಮಗುವನ್ನು ಎತ್ತಿಕೊಂಡು ಹೋದ ಅಪರಿಚಿತ ವ್ಯಕ್ತಿ ಯಾರು ಮತ್ತು ಹುಬ್ಬಳ್ಳಿಯಲ್ಲಿ ಏಕೆ ಬಿಟ್ಟು ಹೋದ ಎಂಬ ಪ್ರಶ್ನೆಗಳಿಗೆ ಇನ್ನೂ ಯಾವ ಮಾಹಿತಿಯೂ ಲಭ್ಯವಾಗಿಲ್ಲ. ಹುಬ್ಬಳ್ಳಿಗೆ ತೆರಳಿರುವ ತಂಡ ಬಂದ ಬಳಿಕ ಎಲ್ಲಾ ಮಾಹಿತಿ ನೀಡಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಐವರು ಆರೋಪಿಗಳ ಬಂಧನ

ವನ್ಯಜೀವಿ ಉತ್ಪನ್ನ ಮಾರಾಟಕ್ಕೆ ಯತ್ನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹೊರರಾಜ್ಯಗಳಿಂದ ಉತ್ಪನ್ನಗಳನ್ನು ತಂದು ಮಾರಾಟ
- ಆನೆ ದಂತ, ಜಿಂಕೆಗಳ 12 ಕೊಂಬು ವಶ
- ವೈಯಾಲಿಕಾವಲ್ ಠಾಣೆಯಲ್ಲಿ ಪ್ರಕರಣ ದಾಖಲು

ಬೆಂಗಳೂರು: ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ವನ್ಯಜೀವಿ ಉತ್ಪನ್ನಗಳನ್ನು ತಂದು ನಗರದಲ್ಲಿ ಮಾರಲು ಯತ್ನಿಸುತ್ತಿದ್ದ ಐವರು ಆರೋಪಿಗಳನ್ನು ವೈಯಾಲಿಕಾವಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಚಂದ್ರಶೇಖರ್, ಲೋಕೇಶ್, ರಂಗಸ್ವಾಮಿ, ಶೇಖರ್ ಹಾಗೂ ರೈಮಂಡ್ ಬಂಧಿತರು. ಇವರಿಂದ ಆನೆ ದಂತ, ಜಿಂಕೆಗಳ 12 ಕೊಂಬು ಹಾಗೂ ಎರಡು ತಲೆಯದ್ದು ಎನ್ನಲಾದ ಎರಡು ಹಾವುಗಳನ್ನು ಜಪ್ತಿ ಮಾಡಿ ಅರಣ್ಯ ಇಲಾಖೆ ಸುಪರ್ದಿಗೆ ಒಪ್ಪಿಸಲಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ವೈಯಾಲಿಕಾವಲ್ 18ನೇ ಅಡ್ಡರಸ್ತೆ ಬಳಿ ಇತ್ತೀಚೆಗೆ ಬಂದಿದ್ದ ಆರೋಪಿಗಳು, ವನ್ಯಜೀವಿ ಉತ್ಪನ್ನಗಳನ್ನು ಮಾರಲು ಯತ್ನಿಸುತ್ತಿದ್ದರು. ಕೆಲ ಗ್ರಾಹಕರು ಸ್ಥಳಕ್ಕೆ ಬರುವುದನ್ನು ಕಾಯುತ್ತ ನಿಂತಿದ್ದರು. ಇದೇ ಸಂದರ್ಭದಲ್ಲಿ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ತಿಳಿಸಿದರು.

'ಬಂಧಿತ ಆರೋಪಿಗಳು, ಮೈಸೂರು ಹಾಗೂ ಕನಕಪುರದವರು. ಪರಿಚಯಸ್ಥರು ನೀಡಿದ್ದ ವನ್ಯಜೀವಿ ಉತ್ಪನ್ನಗಳನ್ನು ಕಮಿಷನ್ ಆಸೆಗಾಗಿ ಮಾರಲು ಹೊರಟಿದ್ದಾಗಿ ಹೇಳಿಕೆ ನೀಡಿದ್ದಾರೆ. ವನ್ಯಜೀವಿ ಉತ್ಪನ್ನಗಳನ್ನು ಎಲ್ಲಿಂದ ತಂದಿದ್ದರು? ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ವನ್ಯಜೀವಿ ಉತ್ಪನ್ನಗಳು

FARNAZ



ಉರುಳದೆ ನಿಂತಿದೆ ಹುಳುವಿನ ಕಾಲ

ಒಣಗಿದರೂ ಸಾಯದ ಸೊಳ್ಳೆ!

ಸೊಳ್ಳೆಗಳ ಮೊಟ್ಟೆಗಳು ಒಣಗಿದಮೇಲೂ ಜೀವಂತವಾಗಿರುವುದು ಹೇಗೆ ಎನ್ನುವ ಗುಟ್ಟು ರಟ್ಟಾಯಿತೇ?

ಕೊಳ್ಳೇಗಾಲ ಶರ್ಮ

'ಮಳೆ ಬಂದು ಹೋದ ಮೇಲೆ ಮಲೇರಿಯಾ' ಎನ್ನುವ ಕಾಲ ಹೋಯಿತು. ಈಗ ಚಿಕುನ್‌ಗುನ್ಯ, ಡೆಂಗಿ ಜ್ವರಗಳ ಕಾಲ. ಡೆಂಗಿ, ಚಿಕುನ್‌ಗುನ್ಯದಂತಹ ರೋಗಗಳು ಕಾಣಿಸಿಕೊಳ್ಳುವಷ್ಟು ಆಗಾಗ್ಗೆ ಮಲೇರಿಯಾ ಕಾಣಿಸಿಕೊಳ್ಳುವುದಿಲ್ಲವಲ್ಲ ಎಂಬುದೇ ಅಚ್ಚರಿ. ಇದಕ್ಕೆ ಆ ಸೊಳ್ಳೆಯ ಮೊಟ್ಟೆ ಎಷ್ಟೇ ಒಣಗಿದರೂ ಬದುಕಿ ಉಳಿಯುವುದೂ ಕಾರಣವಿರಬಹುದು. ಡೆಂಗಿ, ಚಿಕುನ್‌ಗುನ್ಯ ಹರಡುವ ಈಡಿಸ್ ಈಜಿಪ್ಟಿ ಸೊಳ್ಳೆಯ ಮೊಟ್ಟೆಗಳು ಒಣಗಿದರೂ ಸಾಯುವುದಿಲ್ಲವೇಕೆ ಎನ್ನುವ ಗುಟ್ಟನ್ನು ಬೆಂಗಳೂರಿನ 'ಇನ್‌ಸ್ಟಿಟ್ಯೂಟ್ ಆಫ್ ಸ್ಟೆಮ್ ಸೆಲ್ ಸೈನ್ಸ್ ಅಂಡ್ ರೀಜನರೇಟಿವ್ ಮೆಡಿಸಿನ್' ('ಇನ್‌ಸ್ಟೆಮ್') ಸಂಸ್ಥೆಯ ವಿಜ್ಞಾನಿಗಳು ರಟ್ಟು ಮಾಡಿದ್ದಾರೆ. ಸಂಸ್ಥೆಯ ವಿಜ್ಞಾನಿ ಸುನಿಲ್ ಲಕ್ಷ್ಮಣ್ ಮತ್ತು ಸಂಗಡಿಗರ ಪ್ರಕಾರ ನೀರಿಲ್ಲದೆ ಒಣಗಿದ ಈಡಿಸ್ ಸೊಳ್ಳೆಯ ಲಾರ್ವಾಗಳಲ್ಲಿ ಜೈವಿಕ ಚಟುವಟಿಕೆಗಳು ಕಡಿಮೆಯಾಗುವುದಲ್ಲದೆ, ಮುಂದೊಮ್ಮೆ ನೀರು ಸಿಕ್ಕಾಗ ಮರಳಿ ಚೇತರಿಸಿಕೊಳ್ಳಲು ಬೇಕಾದ ಶಕ್ತಿಯೂ ಸಂಗ್ರಹವಾಗುತ್ತದಂತೆ.

ನೀರಿಲ್ಲದೆ ಬರಗೆಟ್ಟ ದಿನಗಳಲ್ಲಿ ಬ್ಯಾಕ್ಟೀರಿಯಾಗಳಂತಹ ಸೂಕ್ಷ್ಮಜೀವಿಗಳು ಎಲ್ಲ ಜೈವಿಕ ಚಟುವಟಿಕೆಗಳನ್ನೂ ನಿಲ್ಲಿಸಿ, ಬೀಜಗಳಂತೆ ಆಗುತ್ತವೆ. ಸಸ್ಯಗಳ ಬೀಜಗಳೂ ಇಂತಹ ಸ್ಥಿತಿಯಲ್ಲಿಯೇ ಇರುವಂಥವು. ಆದರೆ ಪ್ರಾಣಿಗಳಲ್ಲಿ ಈ ಸಾಮರ್ಥ್ಯವಿಲ್ಲ. ಒಣಗಿದ ಕೀಟಗಳ ಮೊಟ್ಟೆಗಳಿಂದ ಮರಿಗಳು ಹುಟ್ಟುವುದಿಲ್ಲ. 'ಸೊಳ್ಳೆಗಳಲ್ಲಿಯೂ ಮಲೇರಿಯಾ ಹರಡುವ ಅನಾಫಿಲೀಸ್ ಸೊಳ್ಳೆಗಳ ಮೊಟ್ಟೆಗಳು ಒಣಗಿದರೆ ಬದುಕಲಾರವು. ಆನೆಕಾಲುರೋಗವನ್ನು ಹರಡುವ ಕ್ಯೂಲೆಕ್ಸ್ ಸೊಳ್ಳೆಗಳ ಮೊಟ್ಟೆಗಳು ಸ್ವಲ್ಪ ಮಟ್ಟಿಗೆ ಹೀಗೆ ಒಣಗಿದರೂ ತಾಳಿಕೊಳ್ಳುತ್ತವೆ. ಆದರೆ ಈಡಿಸ್ ಈಜಿಪ್ಟಿಯ ಮೊಟ್ಟೆಗಳು ಅತಿಯಾಗಿ ಒಣಗಿದರೂ ಬದುಕುಳಿಯುತ್ತವೆ' ಎಂದು, ಈ ಸಂಶೋಧನೆಗೆ ಪ್ರೇರಣೆ ಏನೆಂದು ಸುನಿಲ್ ಲಕ್ಷ್ಮಣ್ ವಿವರಿಸಿದ್ದಾರೆ.

ಗಂಡು ಮತ್ತು ಹೆಣ್ಣು ಈಡಿಸ್ ಈಜಿಪ್ಟಿ ಸೊಳ್ಳೆಗಳು (ಚಿತ್ರಕೃಪೆ: ಅಂಜನಾ ಪ್ರಸಾದ್)

ಈಡಿಸ್ ಈಜಿಪ್ಟಿಯ ಮೊಟ್ಟೆಗಳಿಗೆ ಒಣಗಿದರೂ ಬದುಕಿ ಉಳಿಯುವ ಸಾಮರ್ಥ್ಯ ಬಂದಿದ್ದು ಹೇಗೆ ಎನ್ನುವುದನ್ನು ಪರೀಕ್ಷಿಸಲು ಇವರ ತಂಡ ಹಲವಾರು ಪ್ರಯೋಗಗಳನ್ನು ಮಾಡಿದೆ. ಈಡಿಸ್ ಹಾಗೂ ಅನಾಫಿಲೀಸ್ ಸೊಳ್ಳೆಗಳನ್ನು ಸಾಕಿ, ಮೊಟ್ಟೆಗಳನ್ನು ಇಡಿಸಿ, ಆ ಮೊಟ್ಟೆಗಳನ್ನು ಎರಡು ತಂಡಗಳನ್ನಾಗಿ ಮಾಡಿದೆ. ಮೊದಲನೆಯ ತಂಡದ ಮೊಟ್ಟೆಗಳನ್ನು ಸಾಧಾರಣವಾಗಿ ಬೆಳೆಯುವಂತೆಯೇ ಬಿಟ್ಟು, ಎರಡನೆಯ ತಂಡದ ಮೊಟ್ಟೆಗಳನ್ನು ಸೋಸುವ ಕಾಗದದ ಮೇಲಿಟ್ಟು ವಿವಿಧ ಅವಧಿಗೆ ಒಣಗಿಸಿದ್ದಾರೆ. ಅನಂತರ ಮತ್ತೆ ಅವುಗಳು ಬೆಳೆಯುವುವೋ ಎಂದು ಪರೀಕ್ಷಿಸಿದ್ದಾರೆ. ಅನಾಫಿಲೀಸ್ ಮೊಟ್ಟೆಗಳು ಒಣಗಲು ಆರಂಭಿಸಿದ ಮೂರನೆಯ ದಿನದಷ್ಟು ಹೊತ್ತಿಗೇ ಸತ್ತಿದ್ದುವು. ಅವುಗಳಿಂದ ಯಾವುದೇ ಲಾರ್ವ ಹುಟ್ಟಲಿಲ್ಲ. ಆದರೆ ಈಡಿಸ್ ಸೊಳ್ಳೆಯ ಮೊಟ್ಟೆಗಳನ್ನು ಇಪ್ಪತ್ತೊಂದು ದಿನಗಳ ಕಾಲ ಒಣಗಿಸಿದ ಮೇಲೂ ಅವುಗಳಿಂದ ಲಾರ್ವ ಜನಿಸಿದುವು.



'ಕೆಲವೇ ಮೊಟ್ಟೆಗಳಿದ್ದರೂ, ಒಣಗಿದಮೇಲೂ ತಿಂಗಳುಗಳ ಕಾಲ ಅವು ಬದುಕಿ ಉಳಿಯುತ್ತವೆ. ಒಮ್ಮೆ ತೇವವಾದರೆ ಚೇತರಿಸಿಕೊಳ್ಳುತ್ತವೆ' ಎನ್ನುತ್ತಾರೆ, ಸುನೀಲ್ ಲಕ್ಷ್ಮಣ್. ಈಡಿಸ್‌ಗಳು ಕೂಡ ಇತರೆ ಸೊಳ್ಳೆಗಳಂತೆಯೇ ನೀರಿನಲ್ಲಿಯೇ ಮೊಟ್ಟೆಗಳನ್ನು ಇಡುತ್ತವೆ. ಆದರೆ ಭಾರತದಂತಹ ಸಮಶೀತೋಷ್ಣ ವಲಯದಲ್ಲಿರುವ ಪ್ರದೇಶಗಳಲ್ಲಿ ಮಳೆಗಾಲದಲ್ಲಿಯೂ ನಡು, ನಡುವೆ ಬೇಗೆಯ ದಿನಗಳು ಇರುವುದರಿಂದ ಪುಟ್ಟ ಹಳ್ಳಗಳಲ್ಲಿರುವ ನೀರು ಒಣಗಿ ಹೋಗುವುದುಂಟು. ಹೀಗಾಗಿ ಸಂಪೂರ್ಣ ಒಣಗಿದರೂ, ಸುಪ್ತ ಸ್ಥಿತಿಯಲ್ಲಿರುವ ಈ ಸ್ಥಿತಿ ಅವಕ್ಕೆ ಉಳಿವಿನ ಹಾದಿಯಾಗುತ್ತದೆ.

ಸೊಳ್ಳೆಗಳು ಮೊಟ್ಟೆಗಳನ್ನು ಇಟ್ಟ ನಂತರ ಎಷ್ಟು ಹೊತ್ತಿಗೆ ಈ ಸಾಮರ್ಥ್ಯ ಬೆಳೆಯಬಹುದು ಎಂದೂ ಲಕ್ಷ್ಮಣರ ತಂಡ ಪರೀಕ್ಷಿಸಿದೆ. ಹತ್ತು ಗಂಟೆಗಳ ನಂತರ ಒಣಗಲು ಆರಂಭಿಸಿದ ಸೊಳ್ಳೆಮೊಟ್ಟೆಗಳು ದೀರ್ಘಕಾಲ ಒಣಗಿದ್ದರೂ ಹೆಚ್ಚು ಲಾರ್ವಗಳನ್ನು ಹುಟ್ಟಿಸಿದುವು. ಅರ್ಥಾತ್, ಸೊಳ್ಳೆಯ ಲಾರ್ವದ ಬೆಳವಣಿಗೆಯ ಕೆಲವು ಹಂತಗಳನ್ನು ದಾಟಿದ ಮೇಲಷ್ಟೆ ಒಣಗಿಸಿದರೂ ಬದುಕುತ್ತದೆ ಎಂದಾಯಿತು.

ಸಾಧಾರಣವಾಗಿ ಬೆಳೆದ ಸೊಳ್ಳೆಯ ಲಾರ್ವ ಹಾಗೂ ಒಣಗಿಸಿ, ಮರಿ ಮಾಡಿದ ಮೊಟ್ಟೆಗಳ ಲಾರ್ವಗಳಲ್ಲಿ ಏನೇನು ಬದಲಾವಣೆಗಳಾಗುತ್ತವೆ ಎಂದೂ ಅಧ್ಯಯನ ಮಾಡಿದ್ದಾರೆ. ಲಾರ್ವಗಳನ್ನು ಅರೆದು ಅವುಗಳಲ್ಲಿ ವಿವಿಧ ಸಮಯಗಳಲ್ಲಿ ಇರುವ ಪ್ರೊಟೀನ್, ಕಾರ್ಬೋಹೈಡ್ರೇಟ್, ಕೊಬ್ಬಿನ ಈ ಅಣುಗಳನ್ನು ಪರಿಶೀಲಿಸಿದ್ದಾರೆ. ಎರಡರಲ್ಲಿಯೂ ಹಲವು ಪ್ರಮುಖ ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ಉದಾಹರಣೆಗೆ, ಪಾಲಿ-ಅಮೈನುಗಳೆನ್ನುವ ರಾಸಾಯನಿಕಗಳ ಪ್ರಮಾಣ ಒಣಗಿದ ಮೊಟ್ಟೆಗಳಿಂದ ಬೆಳೆದ ಲಾರ್ವಗಳಲ್ಲಿ ಹೆಚ್ಚು. ಜೊತೆಗೆ ಉಸಿರಾಟದಲ್ಲಿ ಪಾಲ್ಗೊಳ್ಳುವ ಕೆಲವು ಕಿಣ್ವಗಳ ಪ್ರಮಾಣದಲ್ಲಿಯೂ ವ್ಯತ್ಯಾಸಗಳನ್ನು ಕಂಡಿದ್ದಾರೆ. ಈ ಕಿಣ್ವಗಳು ವಿಶೇಷವಾಗಿ ಕೊಬ್ಬನ್ನು ಒಡೆಯುವ ಅಂಶಗಳು. ಕೊಬ್ಬಿನ ಅಂಶ ಕಡಿಮೆಯಾಗಿ ಪಾಲಿ-ಅಮೈನುಗಳ ಅಂಶ ಒಣಗಿದ ಮೊಟ್ಟೆಗಳಿಂದ ಹುಟ್ಟಿದ ಲಾರ್ವಗಳಲ್ಲಿ ಹೆಚ್ಚು. ಹೀಗೆ ಅರಗಿದ ಕೊಬ್ಬು ಮೊಟ್ಟೆ ಮರಳಿ ಚೇತರಿಸಿಕೊಂಡಾಗ ಶಕ್ತಿಯನ್ನು ತಕ್ಷಣವೇ ಒದಗಿಸಲು ನೆರವಾಗುತ್ತಿರಬಹುದು ಎಂಬುದು ಇವರ ಊಹೆ.

ಈ ಊಹೆ ಸರಿಯೋ ತಪ್ಪೋ ಎನ್ನುವುದನ್ನು ಪರೀಕ್ಷಿಸಲು ಪಾಲಿ-ಅಮೈನುಗಳ ತಯಾರಿಕೆಯಲ್ಲಿ ಪಾಲ್ಗೊಳ್ಳುವ 'ಆರ್ನಿಥಿನ್ ಡಿಕಾರ್ಬಾಕ್ಸಿಲೇಸ್' ಎನ್ನುವ ರಾಸಾಯನಿಕದ ಚಟುವಟಿಕೆಯನ್ನು ನಿರ್ಬಂಧಿಸಿಯೂ ಪರೀಕ್ಷೆ ಮಾಡಲಾಗಿದೆ. ಈ ಕಿಣ್ವದ ಚಟುವಟಿಕೆಯನ್ನು ತಗ್ಗಿಸುವ 'ಡೈಫ್ಲೂರೋಮೀಥೈಲ್-ಆರ್ನಿಥಿನ್' ಎನ್ನುವ ರಾಸಾಯನಿಕವನ್ನು ಹೆಣ್ಣು ಸೊಳ್ಳೆಗಳಿಗೆ ನೀಡಿ, ಅವುಗಳಿಗೆ ಹುಟ್ಟಿದ ಮೊಟ್ಟೆಗಳನ್ನು ಪರೀಕ್ಷಿಸಿದ್ದಾರೆ. ಈ ಮೊಟ್ಟೆಗಳಲ್ಲಿ ಪಾಲಿ-ಅಮೈನುಗಳ ಪ್ರಮಾಣ ಕಡಿಮೆ ಇತ್ತಷ್ಟೆ ಅಲ್ಲ, ಅವುಗಳಲ್ಲಿ ಒಣಗಿಸಿದ ನಂತರ ಚೇತರಿಸಿಕೊಳ್ಳುವ ಮೊಟ್ಟೆಗಳ ಪ್ರಮಾಣ ಕಡಿಮೆ ಇತ್ತು. ಕೊಬ್ಬಿನ ಸಂಶ್ಲೇಷಣೆಯನ್ನು ತಡೆಗಟ್ಟುವ ಔಷಧವನ್ನು ಬಳಸಿದಾಗಲೂ, ಮೊಟ್ಟೆಗಳು ಮರಿಯಾಗುವ ಪ್ರಮಾಣ ಕಡಿಮೆಯಾಗಿತ್ತು.

'ನಮ್ಮ ಅಧ್ಯಯನಗಳ ಪ್ರಕಾರ ಈಡಿಸ್ ಸೊಳ್ಳೆಯ ಮೊಟ್ಟೆಗಳನ್ನು ಸಂಪೂರ್ಣ ಒಣಗಿಸಿದರೂ ಬದುಕಿ ಉಳಿಯುವುದರಲ್ಲಿ ಚಾಂಪಿಯನ್ನುಗಳು' ಎನ್ನುತ್ತಾರೆ. ಲಕ್ಷ್ಮಣ್. ಆದರೆ ಈ ಸಾಮರ್ಥ್ಯ ಪೂರ್ಣ ಪ್ರಮಾಣದಲ್ಲಿ ತೋರ್ಪಡಬೇಕಾದರೆ, ಮೊಟ್ಟೆಗಳು ಸ್ವಲ್ಪ ಮಟ್ಟಿಗೆ ಬಲಿತ ಮೇಲೆ, ಅಥವಾ ಒಳಗೆ ಲಾರ್ವಾದ ಬೆಳವಣಿಗೆ ತುಸು ಆರಂಭವಾದ ಮೇಲೆ ಸಂಪೂರ್ಣ ಒಣಗಿದರೂ ಬದುಕಿ ಉಳಿಯುತ್ತವೆ, ಇಲ್ಲದಿದ್ದರೆ ಇಲ್ಲ. ಬಹುಶಃ ಒಣಗುವುದನ್ನು ತಾಳಿಕೊಳ್ಳಲು ಬೇಕಾದ ರಾಸಾಯನಿಕಗಳನ್ನು ತಯಾರಿಸಿಕೊಳ್ಳಲು ಈ ಸಮಯ ಬೇಕೇನೋ?' ಎಂದು ಲಕ್ಷ್ಮಣ್ ತರ್ಕಿಸಿದ್ದಾರೆ.

'ಮೊಟ್ಟೆಗಳು ಒಣಗಿದರೂ ಹೇಗೆ ಬದುಕಿ ಉಳಿಯುತ್ತವೆ ಎನ್ನುವ ಈ ಸಂಶೋಧನೆ ಜೀವಪ್ರಪಂಚದಲ್ಲಿ ಕೆಲವು ಜೀವಿಗಳಿಗಷ್ಟೆ ಈ ಸಾಮರ್ಥ್ಯ ಇದೆಯೇಕೆ ಎಂದು ತಿಳಿಸುತ್ತದೆ. ಜೊತೆಗೆ ಮಧ್ಯಪ್ರಾಚ್ಯದಲ್ಲಿ ಜನಿಸಿದ ಈಡಿಸ್ ಈಜಿಪ್ಟಿ ಈಗ ಪ್ರಪಂಚದ ಎಲ್ಲೆಡೆಯೂ ಹರಡಿಕೊಂಡಿರುವುದಕ್ಕೆ ಕಾರಣ ಹಾಗೂ ಸೊಳ್ಳೆಯ ಕಾಟವನ್ನು ತಡೆಯುವ ಉಪಾಯವನ್ನೂ ಸೂಚಿಸಬಹುದು' ಎನ್ನುತ್ತಾರೆ, ಸುನೀಲ್ ಲಕ್ಷ್ಮಣ್. ಹೆಣ್ಣುಸೊಳ್ಳೆಗಳಲ್ಲಿ ಈ ಸಾಮರ್ಥ್ಯವನ್ನು ತಡೆಗಟ್ಟುವಂತಹ ಸ್ಪ್ರೇಗಳು, ಮುಲಾಮುಗಳನ್ನು ತಯಾರಿಸಿದರೆ, ಮೊಟ್ಟೆಗಳು ಮರಿಯಾಗದಂತೆಯೇ ತಡೆಯಬಹುದು ಎನ್ನುವುದು ಈ ವಿಜ್ಞಾನಿಗಳ ಆಶಯ.

❖

ಗಣೇಶ್ ಭಟ್ ನೆಲಮಾವ್

ದೇವಾಸುರ ಕಾಳಗ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಮಯ. ದೇವತೆಗಳ ಪಕ್ಷಕ್ಕೆ ಸೇನಾಪತಿ ಇಲ್ಲದ ಕಾರಣ ಯುದ್ಧದಲ್ಲಿ ಅಸುರರ ಕೈ ಮೇಲಾಗತೊಡಗಿ, ದೇವತೆಗಳು ಮುಚುಕುಂದ ಎಂಬ ಪರಾಕ್ರಮಿ ರಾಜನ ಬಳಿ ಸಹಾಯ ಕೇಳಿದರು. ದೇವತೆಗಳಿಗೇ 'ತಥಾಸ್ತು' ಎಂದ ಮುಚುಕುಂದ ಅವರ ಪರವಾಗಿ ದೇವಲೋಕದಲ್ಲಿ ವರ್ಷಗಳ ಕಾಲ ದಣಿವರಿಯದೆ ಯುದ್ಧ ಮಾಡಿ, ದೇವತೆಗಳು ಸೋಲದಂತೆ ನೋಡಿಕೊಂಡ. ಮುಚುಕುಂದನ ಸಹಾಯಕ್ಕೆ ಪ್ರತಿಯಾಗಿ ವರ ಕೇಳುವಂತೆ ಇಂದ್ರ ಹೇಳಿದ. ಆದರೆ ದೇವಲೋಕದ ಒಂದು ವರ್ಷ ಭೂಲೋಕದ 360 ವರ್ಷಗಳಿಗೆ ಸಮನಾಗಿದ್ದ ಕಾರಣ, ಭೂಮಿಯಲ್ಲಿ ಮುಚುಕುಂದನ ಸಾಮ್ರಾಜ್ಯ, ಪರಿವಾರ, ಸ್ನೇಹಿತರು ಮುಂತಾಗಿ ಯಾರೂ ಉಳಿದಿರಲಿಲ್ಲ. ಭೂಮಿಯಲ್ಲಿ ತನ್ನದು ಎಂಬುದು ಏನೂ ಉಳಿದಿರದಿದ್ದ, ಮತ್ತು ವರ್ಷಗಳ ಕಾಲ ಮಾಡಿದ ಯುದ್ಧದಿಂದ ಅತಿಯಾಗಿ ದಣಿದಿದ್ದ ಮುಚುಕುಂದ ತನಗೆ ಸುದೀರ್ಘವಾದ ನಿದ್ರೆ ಬರಲೆಂದೂ ತನ್ನ ನಿದ್ರೆಗೆ ಭಂಗ ತರುವವರು ಭಸ್ಮವಾಗಬೇಕೆಂದೂ ಕೇಳಿಕೊಂಡ. ಅದರಂತೆ ಗುಹೆಯೊಂದರಲ್ಲಿ ಹೋಗಿ ಮಲಗಿದ. ನೂರಾರು ಸಾವಿರಾರು ವರ್ಷಗಳು ಉರುಳಿ ತ್ರೇತಾಯುಗ ಕಳೆದು ದ್ವಾಪರ ಬರುವವರೆಗೂ ಮಲಗಿಯೇ ಮಲಗಿದ.

ಇದೇನಿದು? ವಿಜ್ಞಾನಲೇಖನದಲ್ಲಿ ಪುರಾಣದ ಕಥೆ ಎಂದುಕೊಂಡಿರೇ? ಕಾರಣ ಇದೆ. ಮುಚುಕುಂದನಂತೆಯೇ ನಿದ್ರಿಸಿದ್ದ – ಅದೂ ಒಂದೆರಡಲ್ಲ, ಬರೋಬ್ಬರಿ 45,000 ವರ್ಷಗಳ ಕಾಲ ಮಲಗಿದ್ದ – ಜೀವಿಗಳನ್ನು ವಿಜ್ಞಾನಿಗಳು ಎಚ್ಚರಗೊಳಿಸಿದ್ದಾರೆ!

ರಷ್ಯಾದ ಸೈಬೀರಿಯಾ ಜಗತ್ತಿನ ಅತ್ಯಂತ ಶೀತಲ ತಾಣಗಳಲ್ಲೊಂದು. ನಿಸರ್ಗದ ರೆಫ್ರಿಜಿರೇಟರ್‌ನಂತಿರುವ ಈ ಪ್ರದೇಶದಲ್ಲಿ ಲಕ್ಷಾಂತರ ವರ್ಷಗಳ ಹಿಂದಿನ ಜೀವಿಗಳ ಪಳೆಯುಳಿಕೆಗಳು ದಪ್ಪನೆಯ ಹಿಮದ ಪದರಗಳ ಕೆಳಗೆ ಕೆಡದಂತೆ ಸಂರಕ್ಷಿಸಲ್ಪಟ್ಟಿವೆ. ಹೀಗಾಗಿ ವಿಜ್ಞಾನಿಗಳ ಪಾಲಿಗೆ ಇದೊಂದು ವಜ್ರದ ಗಣಿಯೇ ಸರಿ. ಈ ಪ್ರದೇಶದಿಂದ 2002ರಲ್ಲಿ ಸಂಗ್ರಹಿಸಿದ್ದ ಮಾದರಿಗಳಲ್ಲಿ 'ನೆಮಟೋಡ' ಎಂಬ ಗುಂಪಿಗೆ ಸೇರಿದ ಜೀವಿಗಳೂ ಇದ್ದವು. ಅವುಗಳಲ್ಲಿ ಒಂದು ಹುಳು 32,000 ವರ್ಷಗಳ ಹಿಂದಿನದು ಮತ್ತು ಇನ್ನೊಂದು 45,000 ವರ್ಷಗಳ ಹಿಂದಿನದು ಎಂದು ಕಾರ್ಬನ್ ಡೇಟಿಂಗ್ ಮುಖಾಂತರ ಪತ್ತೆ ಹಚ್ಚಿದ್ದರು. ಅದೇನೂ ವಿಜ್ಞಾನಿಗಳಿಗೆ ವಿಶೇಷವಾಗಿರಲಿಲ್ಲ. ಆದರೆ 2018ರಲ್ಲಿ ಈ ಹುಳುಗಳನ್ನು ನೀರಿನ ಸಂಪರ್ಕಕ್ಕೆ ತಂದಾಗ ಅವು ಎಚ್ಚರಗೊಂಡವು. ತಮ್ಮ ಸುತ್ತಮುತ್ತ ಇದ್ದ ಬ್ಯಾಕ್ಟೀರಿಯಾಗಳನ್ನು ಸೇವಿಸಲು ಶುರು ಮಾಡಿದವು. ಸಂತಾನೋತ್ಪತ್ತಿಯನ್ನೂ ಮಾಡಿದವು. ಹಾಗಾದರೆ ಇಷ್ಟು ದೀರ್ಘಕಾಲದವರೆಗೆ ಇವು ಹೇಗೆ ಬದುಕಿದ್ದವು? ಬರಿಗಣ್ಣಿಗೂ ಕಾಣದ ಯಃಕಶ್ಚಿತ್ ಜಂತುವೊಂದು, ಎಂದಿಗೂ ಯಾರಿಗಾಗಿಯೂ ನಿಲ್ಲದ ಕಾಲನನ್ನು ಕೊರಳಪಟ್ಟಿ ಹಿಡಿದು ನಿಲ್ಲಿಸಿದ್ದಾದರೂ ಹೇಗೆ?

ಜೀವಸಾಮ್ರಾಜ್ಯದ ಕೆಳಹಂತದಲ್ಲಿರುವ ಕೆಲವು ಜೀವಿಗಳು ಪ್ರತಿಕೂಲ ವಾತಾವರಣಗಳಲ್ಲಿ ಬದುಕಲು ಒಂದಷ್ಟು ವಿಶೇಷ ಉಪಾಯಗಳನ್ನು ಕಂಡುಕೊಂಡಿವೆ. ಅಂತಹ ಉಪಾಯಗಳಿಗೆ 'ಕ್ರಿಪ್ಟೋಬಯೋಸಿಸ್' ಎಂದು ಹೆಸರು. ಕನ್ನಡದಲ್ಲಿ 'ಸುಪ್ತಜೀವನ' ಎನ್ನಬಹುದು. ನೀರಿನ ಕೊರತೆ, ಆಮ್ಲಜನಕದ ಕೊರತೆ, ಅತ್ಯಂತ ಶೀತಲ ವಾತಾವರಣ, ಮುಂತಾಗಿ ಬದುಕಲು ಅತ್ಯಂತ ಕಷ್ಟಕರವಾದ ವಾತಾವರಣಗಳಲ್ಲಿ ದೇಹದೊಳಗಿನ ಚಟುವಟಿಕೆಗಳನ್ನು ಸ್ಥಗಿತಗೊಳಿಸುವ, ಮುಂದೆ ಅನುಕೂಲಕರ ವಾತಾವರಣ ಬಂದಾಗ ಮತ್ತೆ ಸಹಜ ಸ್ಥಿತಿಗೆ ಮರಳುವ ಸಾಮರ್ಥ್ಯವನ್ನು ಈ ಜೀವಿಗಳು ಬೆಳೆಸಿಕೊಂಡಿವೆ. ಇದುವರೆಗೂ ಇಂತಹ ಜೀವಿಗಳು ಸುಪ್ತ ಸ್ಥಿತಿಯಲ್ಲಿ ಕೆಲವು ವರ್ಷಗಳ ಕಾಲ ಮಾತ್ರ ಬದುಕಿದ್ದ ಉದಾಹರಣೆಗಳಿದ್ದವು. ಹೆಚ್ಚೆಂದರೆ 39 ವರ್ಷಗಳ ಕಾಲ ಇಂತಹ ಸ್ಥಿತಿಯಲ್ಲಿ ಇದ್ದದ್ದು ದಾಖಲಾಗಿತ್ತು. ಆದರೆ ಈ ಹುಳುಗಳು 45,000 ವರ್ಷಗಳ ಕಾಲ ಸುಪ್ತ ಸ್ಥಿತಿಯಲ್ಲಿ ಬದುಕಿ ಮತ್ತೆ ಎಚ್ಚರಗೊಂಡಿದ್ದು ವಿಜ್ಞಾನಿಗಳನ್ನು ಅಚ್ಚರಿಗೊಳಿಸಿದೆ. ಜೊತೆಗೆ ಈ ಹುಳುಗಳ ಸಾಮರ್ಥ್ಯವನ್ನು ಮನುಷ್ಯನಿಗೆ ಸಿದ್ಧಿಸುವಂತೆ ಮಾಡಬಲ್ಲ ತಂತ್ರಜ್ಞಾನವನ್ನು ನಿರ್ಮಿಸಲು ಸಾಧ್ಯವಿರಬಹುದೇ ಎಂಬ ಪ್ರಶ್ನೆಯನ್ನೂ ಕೆಲವರಲ್ಲಿ ಹುಟ್ಟಿಸಿದೆ. ಸೈನ್ಸ್ ಫಿಕ್ಷನ್ ಸಿನಿಮಾ ಅಥವಾ ಸಾಹಿತ್ಯಗಳಲ್ಲಿ ನೀವು 'ಕ್ರಯೋನಿಕ್ಸ್' ಎಂಬ ತಂತ್ರವನ್ನು ನೋಡಿರಬಹುದು. ಮನುಷ್ಯರನ್ನು ಶೈತ್ಯದಲ್ಲಿ ಕಾಪಿಟ್ಟು ನೂರಾರು ವರ್ಷಗಳ ನಂತರ ಮತ್ತೆ ಎಚ್ಚರಗೊಳಿಸುವ ತಂತ್ರಜ್ಞಾನ. ಇಂತಹ ತಂತ್ರಜ್ಞಾನದ ರಹಸ್ಯ ಬಿಡಿಸುವ ಕೀಲಿಕೈ ಈ ಹುಳುಗಳಲ್ಲಿರಬಹುದೇ ಎಂಬ ಜಿಜ್ಞಾಸೆ ಕೆಲವು ವಿಜ್ಞಾನಿಗಳಲ್ಲಿ ಮೂಡಿದೆ. ಈ ನಾಣ್ಯದ ಇನ್ನೊಂದು ಬದಿಯಲ್ಲಿ ಒಂದು ಭಯವೂ ಕಾದಿದೆ. ಭೂಮಿಯ ತಾಪ ಏರಿ ಧ್ರುವಪ್ರದೇಶಗಳಲ್ಲಿನ ಹಿಮ ಕರಗುತ್ತಿರುವುದು ಗೊತ್ತಿರುವಂಥ ವಿಷಯವೇ. ಈ ಪ್ರದೇಶಗಳಲ್ಲಿ ಸಾವಿರ ಸಾವಿರ ವರ್ಷಗಳ ಹಿಂದೆ ಬಂಧಿಯಾಗಿದ್ದ ವೈರಸ್, ಬ್ಯಾಕ್ಟೀರಿಯಾಗಳು ಮತ್ತೆ ಮೇಲೆದ್ದು ಬಂದು ರೋಗಗಳನ್ನು ಹರಡತೊಡಗಿದರೆ ಗತಿಯೇನು? ಈ ರೋಗಗಳಿಗೆ ಮಾನವ ಶರೀರದಲ್ಲಿ ಪ್ರತಿರೋಧಕಗಳೂ ಇಲ್ಲದ ಕಾರಣ ಇವು ತರಬಹುದಾದ ಅಪಾಯ ಎಷ್ಟು ಗಂಭೀರವಾಗಬಹುದು ಎಂಬ ಪ್ರಶ್ನೆಗಳೂ ಎದ್ದಿವೆ.

ಲೇಖನದ ಆರಂಭದಲ್ಲಿ ಮುಚುಕುಂದನ ಕಥೆಯನ್ನು ನೋಡಿದೆವಷ್ಟೇ. ಕೊನೆಗೆ ದ್ವಾಪರದಲ್ಲಿ ಮುಚುಕುಂದನ ನಿದ್ರಾಭಂಗವಾಗಿದ್ದು ಕಾಲಯವನ ಎಂಬ ದುಷ್ಟ ರಾಜನಿಂದ. ಕಾಲಯವನ ಮುಚುಕುಂದನ ನಿದ್ರಾಭಂಗ ಮಾಡಿ ಅವನ ಉರಿಗಣ್ಣಿಗೆ ಸಿಕ್ಕು ಭಸ್ಮವಾದ. ಈಗ ನಾವು ಮನುಷ್ಯರೂ ಕೂಡ, ದಪ್ಪನೆಯ ಹಿಮದ ಚಾದರದ ಅಡಿಯಲ್ಲಿ 'ಬೆಚ್ಚಗೆ' (ಅಥವಾ ತಣ್ಣಗೆ ಎನ್ನೋಣವೇ?) ಮಲಗಿರುವ ರೋಗಾಣುಗಳು ಮತ್ತೆ ಎದ್ದು ಬರುವಂತೆ ಮಾಡಿ ಕಾಲಯವನರಾಗುತ್ತಿದ್ದೇವೆಯೇ? ಕಾಲವೇ ಉತ್ತರಿಸಬೇಕು.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಎಸ್ಎಲ್‌ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ – 1.3

1) ಕೆಳಗಿನ ಸಮಾಂತರ ಶ್ರೇಢಿಗಳ ಮೊತ್ತವನ್ನು ಕಂಡುಹಿಡಿಯಿರಿ

i) 2, 7, 12 ...... ರ 10 ಪದಗಳವರೆಗೆ

ii) –37, –33, –29 ...... ರ 12 ಪದಗಳವರೆಗೆ

iii) 0.6, 1.7, 2.5 ..... ರ 100 ಪದಗಳವರೆಗೆ

(iv) $\frac{1}{15}, \frac{1}{12}, \frac{1}{10}$............... ರ 11 ಪದಗಳವರೆಗೆ

ಪರಿಹಾರ:

(i) 2, 7, 12 ...... ರ 10 ಪದಗಳವರೆಗೆ

ಇಲ್ಲಿ a = 2 d = 7-2 = 5 n = 10

$$S_n = \frac{n}{2}[2a+(n-1)d]$$

$$S_{10} = \frac{10}{2}[2 \times 2+(10-1)5]$$

$$S_{10} = 5[4+45] = 245$$

2, 7, 12......ರ 10 ಪದಗಳವರೆಗೆ ಸಮಾಂತರ ಶ್ರೇಢಿಗಳ ಮೊತ್ತ 245

ii) –37, –33, –29 .... ರ 12 ಪದಗಳವರೆಗೆ

ಇಲ್ಲಿ d = - 33 –(-37) = 5 n = 12

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{12} = \frac{12}{2}[2(-37)+(12-1)4]$$

$$S_{12} = 6[-74+44]$$

$$= 6(-30) = -180$$

–37, –33, –29 ...... ರ 12 ಪದಗಳವರೆಗಿನ ಸಮಾಂತರ ಶ್ರೇಢಿಗಳ ಮೊತ್ತ –180

iii) 0.6, 1.7, 2.5 ..... ರ 100 ಪದಗಳವರೆಗೆ

ಇಲ್ಲಿ a= 0.6 d = 1.7–(0.6) = 1.1 n = 100

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{100} = \frac{100}{2}[2(0.6)+(100-1)(1.1)]$$

$$S_{100} = 50[1.2+108.9]$$

$$= 50(110.1)$$

$$= 5505$$

0.6, 1.7, 2.5_............ರ 100 ಪದಗಳವರೆಗಿನ ಸಮಾಂತರ ಶ್ರೇಢಿಗಳ ಮೊತ್ತ 5505

(iv) $\frac{1}{15}, \frac{1}{12}, \frac{1}{10}$............... ರ 11 ಪದಗಳವರೆಗೆ

ಇಲ್ಲಿ a = 1/15 $d = \frac{1}{12}, -\frac{1}{15} = \frac{1}{60}$ n = 11

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{11} = \frac{11}{2}\left[2\left(\frac{1}{15}\right)+(11-1)\left(\frac{1}{60}\right)\right]$$

$$S_{11} = \frac{11}{2}\left(\frac{2}{15}+\frac{1}{6}\right)$$

$$S_{11} = \frac{11}{2}\left(\frac{3}{10}\right)$$

$$S_{11} = \frac{33}{20}$$

$\frac{1}{15}, \frac{1}{12}, \frac{1}{10}$............... ರ 11 ಪದಗಳವರೆಗಿನ ಸಮಾಂತರ ಶ್ರೇಢಿಗಳ ಮೊತ್ತ 33/20

2) ಇವುಗಳ ಮೊತ್ತ ಕಂಡುಹಿಡಿಯಿರಿ

(i) $7+10\frac{1}{2}+14+$.............. $+84$

(ii) 34 + 32 + 30 + . . . + 10

ಪರಿಹಾರ: (i) $7+10\frac{1}{2}+14+$.............. $+84$

ಇಲ್ಲಿ a = 7 $d = 10\frac{1}{2}-7 = 3\frac{1}{2} = \frac{7}{2}$

ನಮಗೆ ಗೊತ್ತಿರುವಂತೆ $l = a+(n-1)d$

$$84 = 7+(n-1)\frac{7}{2}$$

$$= (n-1)\frac{7}{2} = 84-7$$

$$(n-1) = 22$$

$$n = 22+1$$

$$n = 23$$

$$S_n = \frac{n}{2}[a+l]$$

$$S_{23} = \frac{23}{2}[7+84]$$

$$S_{23} = \frac{2093}{2}$$

$$S_{23} = 1046\frac{1}{2}$$

(ii) 34 + 32 + 30 + ... + 10

ಪರಿಹಾರ: ಇಲ್ಲಿ a = 34 $d = 32-34 = -2$ $l = 10$

ನಮಗೆ ಗೊತ್ತಿರುವಂತೆ $l = a+(n-1)d$

$$10 = 34+(n-1)(-2)$$

$$= (n-1)(-2) = -12$$

$$(n-1) = \frac{-24}{-2} = 12$$

$$n = 13$$

$$S_n = \frac{n}{2}[a+l]$$

$$S_{13} = \frac{13}{2}[34+10]$$

$$S_{13} = 286$$

3) ಸಮಾಂತರ ಶ್ರೇಢಿಯಲ್ಲಿ

i) a = 5, d = 3, a_n = 50 ಆದರೆ n ಮತ್ತು S_n ಕಂಡುಹಿಡಿಯಿರಿ

ii) a = 7, a_{13} = 35 ಆದರೆ d ಮತ್ತು S_{13} ಗಳನ್ನು ಕಂಡುಹಿಡಿಯಿರಿ

iii) $a_{12} = 37, d = 3$ ಆದರೆ a ಮತ್ತು S_{12} ಗಳನ್ನು ಕಂಡುಹಿಡಿಯಿರಿ

(ಮುಂದುವರಿಯುವುದು......)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC MATHEMATICS

DETERMINANTS

4) Evaluate the determinant

$$\begin{bmatrix} 1^2 & 2^2 & 3^2 \\ 2^2 & 3^2 & 4^2 \\ 4^2 & 5^2 & 6^2 \end{bmatrix}$$

Soln :– The given determinant is

$$\begin{bmatrix} 1^2 & 2^2 & 3^2 \\ 2^2 & 3^2 & 4^2 \\ 4^2 & 5^2 & 6^2 \end{bmatrix} = \begin{bmatrix} 1 & 4 & 9 \\ 4 & 9 & 16 \\ 16 & 25 & 36 \end{bmatrix}$$

$$= \begin{bmatrix} 1 & 4 & 9 \\ 3 & 5 & 7 \\ 12 & 16 & 20 \end{bmatrix}$$

here $R_2 \to R_2 - R_1$ and $R_3 \to R_3 - R_2$

$$= 4\begin{bmatrix} 1 & 4 & 9 \\ 3 & 5 & 7 \\ 3 & 4 & 5 \end{bmatrix}$$

using $R_1 \to R_1 - R_2$ and $R_2 \to R_2 - R_3$

$$= 4\begin{bmatrix} -2 & -1 & 2 \\ 0 & 1 & 2 \\ 3 & 4 & 5 \end{bmatrix}$$

$$= 4[-2(-3)+1(-6)+2(-3)] = -24$$

Some extra information:-

1) Eigen values of a square matrix

If A is a square matrix then $|A - \lambda I| = 0$ where I is a unit matrix and λ is an indeterminate is called the characteristic equation of A. The roots of this equation are called the eigen values of A.

If A is a square matrix of order 2 then the characteristic equation is quadratic in λ and hence there will be two eigen values. Similarly if A is a square matrix of order 3 then it has three eigen values.

If A is a square matrix then A & A^1 have the same eigen values.

A is singular if and only if 0 is its eigen value.

2) Cayley – Hamilton Theorem

Cayley – Hamilton Theorem states that -

Every square matrix satisfies its own characteristic equation. *Eg* - If A is a square matrix of order 2 and $a\lambda^2 + b\lambda + c = 0$ is the characteristic equation then A satisfies the above equation, that is $aA^2 + bA + cI = 0$ where I is a unit matrix of order 2.

3) The eigen value of a matrix A if and only if the matrix is singular.

For any equation, 0 will be a root, if and only if the constant term of the equation is zero. And also we know that the constant term of the characteristic equation of the matrix A is $|A|$.

Thus 0 is an eigen value of the matrix A if and only if the constant term of its characteristic equation is zero.

Thus 0 will be an eigen value of the matrix A if and only if $|A| = 0$. That is if and only if A is singular.

4) The eigen values of a diagonal matrix are its diagonal elements.

$A = \begin{bmatrix} x & 0 & 0 \\ 0 & y & 0 \\ 0 & 0 & z \end{bmatrix}$ be a matrix of order 3

Now, $|A - \lambda I| = 0$

$$\Rightarrow \begin{vmatrix} x-\lambda & 0 & 0 \\ 0 & y-\lambda & 0 \\ 0 & 0 & z-\lambda \end{vmatrix} = 0$$

$\Rightarrow (x-\lambda)(y-\lambda)(z-\lambda) = 0$

$\Rightarrow (x-\lambda)=0, (y-\lambda)=0, (z-\lambda)=0$

hence $\lambda = x, \lambda = y, \lambda = z$

That is the eigen values are a, b and c which are the diagonal elements.

VALUE BASED QUESTIONS

1. The cost of 4 kg. onion, 3 kg. wheat and 2 kg. rice is Rs. 60. The cost of 2 kg. onion, 4 kg. wheat and 6 kg. rice is Rs. 90. The cost of 6 kg. onion, 2 kg. wheat and 3 kg. rice is Rs.70. Find cost of each item per kg. by matrix method.

A shopkeeper wants to purchase carry bags. Which carry bag you will not suggest to buy and why?

Soln:- Let the cost of onion per kg. = Rs. x

and the cost of wheat per kg. = Rs. y

and the cost of rice per kg. = Rs. z

By the given conditions:

$$4x + 3y + 2z = 60$$
$$2x + 4y + 6z = 90$$
$$6x + 2y + 3z = 70$$

The given system of equations can be expressed as -

AX = B,

where, $A = \begin{bmatrix} 4 & 3 & 2 \\ 2 & 4 & 6 \\ 6 & 2 & 3 \end{bmatrix}, x = \begin{bmatrix} x \\ y \\ z \end{bmatrix}, B = \begin{bmatrix} 60 \\ 90 \\ 70 \end{bmatrix}$

$$|A| = \begin{vmatrix} 4 & 3 & 2 \\ 2 & 4 & 6 \\ 6 & 2 & 3 \end{vmatrix}$$

$$= 4(12-12) - 3(6-36) + 2(4-24)$$

$$= 0 + 90 - 40 = 50 \neq 0$$

$\therefore$ A is non – singular, i.e. A^{-1} exists.

Thus the given system of equations has unique solution.

Now $A_{11} = 0; A_{12} = 30; A_{13} = -20$

$A_{21} = -5; A_{22} = 0, A_{23} = 10$

$A_{31} = 10; A_{32} = -20; A_{33} = 10$

$$\text{adj.}A = \begin{bmatrix} 0 & 30 & -20 \\ -5 & 0 & 10 \\ 10 & -20 & 10 \end{bmatrix} = \begin{bmatrix} 0 & -5 & 10 \\ 30 & 0 & -20 \\ -20 & 10 & 10 \end{bmatrix}$$

(Contd.......)

ಚಿತ್ರದುರ್ಗ: ವಿದ್ಯುತ್ ಕಂಬಕ್ಕೆ ಶಾಲಾ ವಾಹನ ಡಿಕ್ಕಿ

3 ವಿದ್ಯಾರ್ಥಿನಿಯರ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ

ಧರ್ಮಪುರ (ಚಿತ್ರದುರ್ಗ ಜಿಲ್ಲೆ): ಸಮೀಪದ ಮದ್ದಿಹಳ್ಳಿ ಕರಿಯಜ್ಜನ ಪಾಳ್ಯದಲ್ಲಿ ಮಂಗಳವಾರ ಶಾಲಾ ವಾಹನವೊಂದು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಮೂವರು ವಿದ್ಯಾರ್ಥಿನಿಯರು ಗಂಭೀರವಾಗಿ ಗಾಯಗೊಂಡಿದ್ದಾರೆ.

'ತನು (12), ಪ್ರಕೃತಿ (8) ಮತ್ತು ದೀಪಿಕಾ (6) ಗಾಯಗೊಂಡ ವಿದ್ಯಾರ್ಥಿನಿಯರು.

ಇವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹಿರಿಯೂರಿನ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಧರ್ಮಪುರ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಸಿ. ಹನುಮಂತರಾಯ ಅವರು ಮಾಹಿತಿ ನೀಡಿದ್ದಾರೆ.

ಬೇತೂರು, ಖಂಡೇನಹಳ್ಳಿ, ಅರಳೀಕೆರೆ, ಧರ್ಮಪುರ, ಹಲಗಲದ್ದಿ, ಮದ್ದಿಹಳ್ಳಿ ಗ್ರಾಮಗಳಿಂದ ವಿದ್ಯಾರ್ಥಿಗಳನ್ನುಶಿರಾ ತಾಲ್ಲೂಕಿನ ಲಕ್ಕನಹಳ್ಳಿಯ ಅರುಣೋದಯ ಶಾಲೆಗೆ ಕರೆದುಕೊಂಡು ಹೋಗುತ್ತಿದ್ದ ಬಸ್, ಕರಿಯಜ್ಜನ ಪಾಳ್ಯದಲ್ಲಿ 11 ಕೆ.ವಿ. ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ವಾಹನದಲ್ಲಿ 60 ವಿದ್ಯಾರ್ಥಿಗಳು ಇದ್ದರು.

'ಸೋಮವಾರ ರಾತ್ರಿ ಮಳೆ ಸುರಿದಿದ್ದರಿಂದ ವಿದ್ಯುತ್ ಸ್ಥಗಿತಗೊಂಡಿತ್ತು. ಆದ್ದರಿಂದ ಭಾರಿ ಅನಾಹುತ ತಪ್ಪಿದೆ' ಎಂದು ಸ್ಥಳೀಯರು ಅಪಘಾತದ ಕುರಿತು ಮಾಹಿತಿ ನೀಡಿದ್ದಾರೆ.

ಧರ್ಮಪುರ ಸಮೀಪದ ಕರಿಯಜ್ಜನ ಪಾಳ್ಯದಲ್ಲಿ ಮಂಗಳವಾರ ವಿದ್ಯುತ್ ಕಂಬಕ್ಕೆ ಶಾಲಾ ವಾಹನ ಡಿಕ್ಕಿ ಹೊಡೆಯಿತು

ಸುಧಾ, ಮಯೂರ ಓದಿರಿ

ಸೌರ ಜ್ವಾಲೆ ಶಕ್ತಿಯ ಕ್ಷ–ಕಿರಣ ದಾಖಲಿಸಿದ ಆದಿತ್ಯ ಎಲ್–1

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಿತ್ಯ ಎಲ್–1 ನೌಕೆಯ ಎಕ್ಸ್‌ರೇ ಸ್ಪೆಕ್ಟ್ರೊಮೀಟರ್ ಮೊದಲ ಬಾರಿಗೆ ಸೂರ್ಯನ ಸೌರಜ್ವಾಲೆಗಳ ಪ್ರಚಂಡ ಶಕ್ತಿಯ ಕ್ಷ–ಕಿರಣವನ್ನು ದಾಖಲಿಸಿದೆ.

ಅಕ್ಟೋಬರ್ 29 ರಂದು ಮೊದಲ ಬಾರಿಗೆ ಆದಿತ್ಯ ಎಲ್–1 ಸೂರ್ಯನನ್ನು ಸುಮಾರು 10 ತಾಸುಗಳ ಕಾಲ ವೀಕ್ಷಿಸಿತು. ಆಗ ಹಠಾತ್ ಆಗಿ ಹೊಮ್ಮಿದ ಸೌರಜ್ವಾಲೆಯ ಚಟುವಟಿಕೆಯನ್ನು ನೌಕೆಯಲ್ಲಿನ ಎಕ್ಸ್‌ರೇ ಸ್ಪೆಕ್ಟ್ರೊಮೀಟರ್ ದಾಖಲಿಸಿಕೊಂಡಿತು. ಜ್ವಾಲೆಯ ಶಕ್ತಿಯ ಏರಿಳಿತಗಳು ಸ್ಪಷ್ಟವಾಗಿ ದಾಖಲಾಗಿವೆ ಎಂದು ಇಸ್ರೊ 'ಎಕ್ಸ್'ನಲ್ಲಿ ತಿಳಿಸಿದೆ.

ಹಠಾತ್ ಸೌರ ಜ್ವಾಲೆ ಹೊಮ್ಮಿದ ಸಂದರ್ಭದಲ್ಲಿ ಸ್ಫೋಟಕ ಸ್ವರೂಪದ ಶಕ್ತಿ ಬಿಡುಗಡೆ, ಎಲೆಕ್ಟ್ರಾನ್‌ಗಳ ವೇಗ ವರ್ಧನೆ ವಿಷಯಗಳಿಗೆ ಸಂಬಂಧಿಸಿದಂತೆ ಸಂಶೋಧಕರು ಈ ದತ್ತಾಂಶವನ್ನು ಬಳಸಿಕೊಂಡು ಹೆಚ್ಚಿನ ಅಧ್ಯಯನ ನಡೆಸಬಹುದಾಗಿದೆ.

ನಗರ ಯೋಜನೆಗೆ ಆಯುಕ್ತಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯನ್ನು ಹೊರತುಪಡಿಸಿ ರಾಜ್ಯದಲ್ಲಿರುವ ಎಲ್ಲ ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರ ಯೋಜನಾ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಕಾರ್ಯನಿರ್ವಹಣೆಯ ಮೇಲುಸ್ತುವಾರಿಗೆ ನಗರ ಯೋಜನಾ ಆಯುಕ್ತಾಲಯವನ್ನು ರಚಿಸಲಾಗಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಚೇರಿಯ ಹೆಸರನ್ನು 'ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ' ಎಂದು ಬದಲಾಯಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ. ಬಿಬಿಎಂಪಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರವನ್ನು ನಗರ ಯೋಜನಾ ಆಯುಕ್ತಾಲಯದ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಲ್ಲಿನ 35 ಸಹಾಯಕ ನಿರ್ದೇಶಕರ ಹುದ್ದೆಗಳಲ್ಲಿ ಒಂದನ್ನು ಉನ್ನತೀಕರಿಸಿ, ಆಯುಕ್ತರ ಹುದ್ದೆಯನ್ನು ಸೃಜಿಸಲಾಗಿದೆ. ಈ ಹುದ್ದೆಗೆ ಐಎಎಸ್ ಅಧಿಕಾರಿಯನ್ನು ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ನಿರ್ದೇಶಕರ ಅಧಿಕಾರ ವ್ಯಾಪ್ತಿಯಲ್ಲಿ ಯಾವುದೇ ಬದಲಾವಣೆಯಿಲ್ಲ. ಆದರೆ, ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರ ಯೋಜನಾ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಸರ್ಕಾರಕ್ಕೆ ಸಲ್ಲಿಸುವ ಎಲ್ಲ ಪ್ರಸ್ತಾವಗಳನ್ನು ನಗರ ಯೋಜನಾ ಆಯುಕ್ತರ ಮೂಲಕವೇ ರವಾನಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು–560 029. ಫೋನ್ 25536625, 25536789

IFT NO : ಕಹಾಮ/ಅಭಿ/Bemul-Service Main Works 1755/2023–24 ದಿನಾಂಕ: 06–11–2023

ಇ–ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಹಾಲು ಮಂಡಳವು ಇ–ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಅರ್ಹ ಸಂಸ್ಥೆಯವರು/ಗುತ್ತಿಗೆದಾರರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಸರಬರಾಜು ಕೆಲಸಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರು/ಗುತ್ತಿಗೆದಾರರುಗಳಿಂದ ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಬೆಳಗಾವಿ ಹಾಲು ಒಕ್ಕೂಟದ ನಂದಿನಿ ಹಾಸ್ಟಲ್‌ಗೆ ಸರ್ವಿಸ್ ಮೈನ್ ಸಂಬಂಧಿಸಿದ ಕೆಲಸಗಳು	1 ಜಾಬ್	42,500/–	02 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 08–11–2023 ರಿಂದ 23–11–2023 ರ ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23–11–2023 ಸಾಯಂಕಾಲ 4:00 ಗಂಟೆಯವರೆಗೆ.
3. ಟೆಂಡರುಗಳನ್ನು (Cover - 1)ತೆರೆಯುವ ದಿನಾಂಕ: 24–11–2023 ರಂದು ಸಾಯಂಕಾಲ 4.30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–2)

ಕರ್ನಾಟಕ ಸರ್ಕಾರ

ಗ್ರಾಮ ಪಂಚಾಯತ್ ಕಾರ್ಯಾಲಯ, ಕುಣಿಮೆಳ್ಳಿಹಳ್ಳಿ

ತಾ॥ ಸವಣೂರು ಜಿಲ್ಲೆ॥ ಹಾವೇರಿ

ಗ್ರಾಪಂಕಾಕುಮ/ಆಡಳಿತ/ಮಅಂಕೇ–118/ಇ–ಟೆಂಡರ್–1/2023–24 ದಿನಾಂಕ:04/11/2023

ಇ–ಟೆಂಡರ್ ಪ್ರಕಟಣೆ

ಅಧ್ಯಕ್ಷರು ಹಾಗೂ ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕುಣಿಮೆಳ್ಳಿಹಳ್ಳಿ, ತಾ॥. ಸವಣೂರು, ಜಿಲ್ಲೆ॥ ಹಾವೇರಿ ಇವರಿಂದ ಆಹ್ವಾನಿಸಲಾದ ಟೆಂಡರ್ ಸವಣೂರ ತಾಲೂಕಿನ ಕುಣಿಮೆಳ್ಳಿಹಳ್ಳಿ ಪಂಚಾಯತ್ ವ್ಯಾಪ್ತಿಯ ಮನ್ನಂಗಿ ಗ್ರಾಮದ ಅಂಗನವಾಡಿ ಕೇಂದ್ರ ಸಂಖ್ಯೆ 118ರ ಕಟ್ಟಡ ನಿರ್ಮಾಣಕ್ಕೆ ಅವಶ್ಯ/ಅಗತ್ಯವಿರುವ ಸಾಮಾಗ್ರಿಗಳನ್ನು ಅರ್ಹ ಸಾಮಾಗ್ರಿ ಸರಬುರಾಜುದಾರರಿಂದ/ಪೂರೈಕೆದಾರರಿಂದ ಖರೀದಿಸಲು ಇ–ಟೆಂಡರನ್ನು ಆಹ್ವಾನಿಸಲಾಗಿದೆ. ವಿವರ ಕೆಳಗಿನಂತಿದೆ.

1) **E-Tender Ref Number: RDPR/2023-24/IND0209**
2) ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 13.25 ಲಕ್ಷಗಳು. (ಎಲ್ಲ ತೆರಿಗೆಗಳನ್ನು ಹೊರತುಪಡಿಸಿ)
3) **E.M.D** ಮೊತ್ತ ರೂ. ಇ–ಪೋರ್ಟಲ್‌ನಲ್ಲಿರುವಂತೆ.
4) ಟೆಂಡರ್ ದಾಖಲೆಗಳನ್ನು ಇ–ಪ್ರಕ್ಯೂರ್‌ಮೆಂಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ದಿ:04–11–2023 ರಿಂದ 20–11–2023 ಮಧ್ಯಾಹ್ನ 3–00ರವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.
5) ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿ:22–11–2023, 10.30 AM.
6) ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿ:24–11–2023, 3.00 PM

ಕೆಲಸದ ಹೆಸರು/ಪೂರೈಕೆದಾರರ ಅರ್ಹತೆ/ಟೆಂಡರ್ ನಿಯಮಗಳು/ಟೆಂಡರ್ ಪ್ರೋಸೆಸ್ಸಿಂಗ್ ಫೀ ಇತ್ಯಾದಿ ವಿವರ ಗಳಿಗೆ http://eproc.karnataka.gov.in ಮೂಲಕ ಪಡೆಯಬಹುದು.
ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕುಣಿಮೆಳ್ಳಿಹಳ್ಳಿ
ಸಹಿ/– ಅಧ್ಯಕ್ಷರು, ಗ್ರಾಮ ಪಂಚಾಯತ್, ಕುಣಿಮೆಳ್ಳಿಹಳ್ಳಿ

ವಾ.ಸಾ.ಇ./ಹಾವೇರಿ/309/2023–24/ದೇಶಪಾಂಡೆಪಬ್ಲಿಸಿಟಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ (ಯೋಜನೆ–ಪೂರ್ವ),
ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡ (ಪಿಯುಬಿ),
21ನೇ ಮಹಡಿ, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001.

ಸಂಖ್ಯೆ: ಕಾಅ(ಯೋ–ಪೂ)/ಟೆಂಡರ್/02/2023–24 ದಿನಾಂಕ: 07–11–2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) - (ಅಲ್ಪಾವಧಿ)
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ – ಪೂರ್ವ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಪೂರ್ವ ವಲಯದ ಶಿವಾಜಿನಗರ ಮತಕ್ಷೇತ್ರದ ಪಾರ್ಕ್‌ಗಳಲ್ಲಿ ಸಿವಿಲ್ ದುರಸ್ತಿ ಕಾಮಗಾರಿಗಳು ಮತ್ತು ಕಾಮಗಾರಿಗಳ ನಿರ್ವಹಣೆ. (ಎಸ್.ಸಿ)	36.30	72,600/-
2	ಪೂರ್ವ ವಲಯದ ಶಾಂತಿನಗರ ಮತಕ್ಷೇತ್ರದ ಪಾರ್ಕ್‌ಗಳಲ್ಲಿ ಸಿವಿಲ್ ದುರಸ್ತಿ ಕಾಮಗಾರಿಗಳು ಮತ್ತು ಕಾಮಗಾರಿಗಳ ನಿರ್ವಹಣೆ. (ಇತರೆ)	54.20	1,08,400/-
3	ಪೂರ್ವ ವಲಯದ ಸಿ.ವಿ. ರಾಮನ್‌ನಗರ ಮತಕ್ಷೇತ್ರದ ಪಾರ್ಕ್‌ಗಳಲ್ಲಿ ಸಿವಿಲ್ ದುರಸ್ತಿ ಕಾಮಗಾರಿಗಳು ಮತ್ತು ಕಾಮಗಾರಿಗಳ ನಿರ್ವಹಣೆ. (ಇತರೆ)	55.40	1,10,800/-
4	ಪೂರ್ವ ವಲಯದ ಸರ್ವಜ್ಞನಗರ ಮತಕ್ಷೇತ್ರದ ಪಾರ್ಕ್‌ಗಳಲ್ಲಿ ಸಿವಿಲ್ ದುರಸ್ತಿ ಕಾಮಗಾರಿಗಳು ಮತ್ತು ಕಾಮಗಾರಿಗಳ ನಿರ್ವಹಣೆ. (ಎಸ್.ಟಿ)	40.10	80,200/-
5	ಪೂರ್ವ ವಲಯದ ಹೆಬ್ಬಾಳ ಮತಕ್ಷೇತ್ರದ ಪಾರ್ಕ್‌ಗಳಲ್ಲಿ ಸಿವಿಲ್ ದುರಸ್ತಿ ಕಾಮಗಾರಿಗಳು ಮತ್ತು ಕಾಮಗಾರಿಗಳ ನಿರ್ವಹಣೆ. (ಎಸ್.ಸಿ)	52.90	1,05,800/-
6	ಪೂರ್ವ ವಲಯದ ಪುಲಿಕೇಶಿನಗರ ಮತಕ್ಷೇತ್ರದ ಪಾರ್ಕ್‌ಗಳಲ್ಲಿ ಸಿವಿಲ್ ದುರಸ್ತಿ ಕಾಮಗಾರಿಗಳು ಮತ್ತು ಕಾಮಗಾರಿಗಳ ನಿರ್ವಹಣೆ. (ಇತರೆ)	21.10	42,200/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: 10–11–2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **18–11–2023 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **20–11–2023 ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ (ಯೋಜನೆ – ಪೂರ್ವ) ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಯೋಜನೆ – ಪೂರ್ವ), ಬಿಬಿಎಂಪಿ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಮುಖ್ಯ ಇಂಜಿನಿಯರ್ (ವಿ), ಬೆಂಗಳೂರು ಗ್ರಾಮಾಂತರ ಕ್ಷೇತ್ರ ವಲಯ, ಬೆವಿಕಂ, ಬೆಂಗಳೂರು ಇವರು ಬೆಂಗಳೂರು ಗ್ರಾಮಾಂತರ ಕ್ಷೇತ್ರ ವಲಯ ವ್ಯಾಪ್ತಿ ಅಡಿಯಲ್ಲಿ ಕೆಳಕಂಡ ಸಿವಿಲ್ ಇಂಜಿನಿಯರಿಂಗ್ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರಮ ಸಂಖ್ಯೆ	ಬಿಡ್ ವಿಚಾರಣೆ ಸಂಖ್ಯೆ	ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ (ಅಂದಾಜು)	ಇಎಂಡಿ ಹಣ ರೂ.ಗಳಲ್ಲಿ
01	ಮುಇಂವಿ/ಬೆಂಗ್ರಾಕ್ಷೇವ/ಸಿವಿಲ್/2022–23/14/ ದಿ: 30.10.2023	ಮುಳಬಾಗಲು ಉಪ ವಿಭಾಗದ ತಾಯ್ಲೂರ್‌ನಲ್ಲಿ ಕಾ & ಪಾ ನಗರ ಶಾಖಾ ಕಛೇರಿ ಕಟ್ಟಡದ ನಿರ್ಮಾಣ ಮತ್ತು ಸಂಬಂಧಿತ ಇತರೆ ಅಭಿವೃದ್ಧಿ ಕಾಮಗಾರಿಗಳು	90.13	2,00,000.00
02	ಮುಇಂವಿ/ಬೆಂಗ್ರಾಕ್ಷೇವ/ಸಿವಿಲ್/2022–23/15/ ದಿ: 30.10.2023	ಚಿಂತಾಮಣಿ ವಿಭಾಗ, ಶಿಡ್ಲಘಟ್ಟ ಗ್ರಾಮಾಂತರ ಉಪ ವಿಭಾಗದ ದಿಬ್ಬೂರಹಳ್ಳಿಯಲ್ಲಿ ಕಾ & ಪಾ ನಗರ ಶಾಖಾ ಕಛೇರಿ ಕಟ್ಟಡದ ನಿರ್ಮಾಣ	90.12	2,00,000.00
03	ಮುಇಂವಿ/ಬೆಂಗ್ರಾಕ್ಷೇವ/ಸಿವಿಲ್/2022–23/16/ ದಿ: 30.10.2023	ಕೋಲಾರದ ಓಇಸಿ ಕಾಲೋನಿಯಲ್ಲಿ ಬೆವಿಕಂನ ಶಾಖಾ ಕಛೇರಿಯನ್ನು ತೆರವುಗೊಳಿಸಿ ಕಾ&ಪಾ I&II ರ ಶಾಖಾ ಕಛೇರಿಗಳ ನಿರ್ಮಾಣ.	117.58	2,25,000.00
04.	ಮುಇಂವಿ/ಬೆಂಗ್ರಾಕ್ಷೇವ/ಸಿವಿಲ್/2022–23/17/ ದಿ: 30.10.2023	ಕೆಜಿಎಫ್‌ನಲ್ಲಿ ರಾಬರ್ಟ್‌ಸನ್‌ಪೇಟೆ I&II ರ ಶಾಖಾ ಕಛೇರಿಗಳ ನಿರ್ಮಾಣ.	116.46	2,25,000.00
05.	ಮುಇಂವಿ/ಬೆಂಗ್ರಾಕ್ಷೇವ/ಸಿವಿಲ್/2022–23/18/ ದಿ: 30.10.2023	ಚಂದಾಪುರ ವಿಭಾಗೀಯ ಕಛೇರಿ ಕಟ್ಟಡದ 2ನೇ ಮಹಡಿಯ ವಿಸ್ತರಣೆ ಹಾಗೂ ಸಂಬಂಧಿತ ಅಭಿವೃದ್ಧಿ ಕಾಮಗಾರಿಗಳು	120.47	2,25,000.00
06.	ಮುಇಂವಿ/ಬೆಂಗ್ರಾಕ್ಷೇವ/ಸಿವಿಲ್/2022–23/19/ ದಿ: 30.10.2023	ಕಾಮಸಮುದ್ರದ ಹಳೆ ಎಲ್‌ಎಂ ಕ್ವಾರ್ಟರ್ಸ್ ಹಾಗೂ ದೂರವಾಣಿ ಕೊಠಡಿಯನ್ನು ತೆರವುಗೊಳಿಸಿ ಕಾ&ಪಾ ನಗರ ಶಾಖಾ ಕಛೇರಿ ಕಟ್ಟಡದ ನಿರ್ಮಾಣ	81.12	2,00,000.00

ಟೆಂಡರಿನಲ್ಲಿ ಭಾಗವಹಿಸಲು ವಿವರಗಳನ್ನು https://kpppusers@karnataka.gov.in ಕೆಪಿಪಿ ಪೋರ್ಟಲ್ ವೆಬ್‌ಸೈಟ್‌ಗೆ ಭೇಟಿ ನೀಡಿ ದಿನಾಂಕ 08.11.2023 ರಂದು ಅಥವಾ ನಂತರ ಪಡೆಯಬಹುದು.

ಯಾವುದೇ ಸ್ಪಷ್ಟತೆಗೆ ಕೆಪಿಪಿ ಪೋರ್ಟಲ್ ಸಹಾಯವಾಣಿ 080–23500117/23500116 ಅಥವಾ ಇ–ಮೇಲ್ hphelpdesk.blr@intarvo.com ಸಂಪರ್ಕಿಸಬಹುದು.

ಸಹಿ/– ಮುಖ್ಯ ಇಂಜಿನಿಯರ್ (ವಿ), ಬೆಂಗ್ರಾಕ್ಷೇವ, ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) EICHER 1110 GOODS, YOM – 2016, Reg No – KA52A3736
2) ASHOK_LEY AL4019CBTT, YOM – 2016, Reg No – KA51AH9189
3) CB_AL U TIPPERS U2523 CAB CHASSIS TIPPER, YOM – 2018, Reg No – KA07B3802
4) CB_MARUTI SUPER CARRY, YOM – 2021, Reg No – KA03AJ9863
5) ASHOK LEYLAND LIMITED - CB_AMBULANCE, YOM – 2021, Reg No – KA53AA3918
6) ASHOK LEYLAND LIMITED - CB_AMBULANCE, YOM – 2022, Reg No – DNH055763P
7) CB_ EICHER_VOLVO_TIPPER _PRO_6025T, YOM – 2018, Reg No – KA07B5219
8) CB_ EICHER_VOLVO_TIPPER _PRO_6025T, YOM – 2018, Reg No – KA07B5029
9) CB_EICHER_PRO_CAB, YOM – 2022, Reg No – KA671556
10) CB_ EICHER_VOLVO_TIPPER _PRO_6025T, YOM – 2016, Reg No – KA07B5223
11) CB_LPT_1512_FULLY _BUILT_GOODS, YOM – 2022, Reg No – KA25AB6729
12) CB_AL ECOMET 1212 Fully Built Tipper, YOM – 2012, Reg No – KA01AB1811
13) CB_AL ECOMET 1212 Fully Built Tipper, YOM – 2012, Reg No – KA01AB1812
14) CB_AL ECOMET 1212 Fully Built Tipper, YOM – 2012, Reg No – KA01AB1813
15) CB_AL ECOMET 1212 Fully Built Tipper, YOM – 2012, Reg No – KA01AB1814
16) CB_AL ECOMET 1212 Fully Built Tipper, YOM – 2012, Reg No – KA01AB1815
17) CB_AL ECOMET 1212 Fully Built Tipper, YOM – 2012, Reg No – KA01AB1816
18) CB_AL ECOMET 1212 Fully Built Tipper, YOM – 2012, Reg No – KA01AB1817
19) CB_TIPPER_SIGNA3525K _TATA_MOTORS, YOM – 2022, Reg No – KA44A1440
20) CB_TIPPER_SIGNA3525K _TATA_MOTORS, YOM – 2021, Reg No – KA44A1168
21) CB_TIPPER_SIGNA3525K _TATA_MOTORS, YOM – 2021, Reg No – KA44A1439
22) CB_TIPPER_SIGNA3525K _TATA_MOTORS, YOM – 2022, Reg No – KA44A1441
23) CB_ EICHER_VOLVO_TIPPER _PRO_6025T, YOM – 2017, Reg No – KA51AF7294

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 08.11.2023 (Please note that closing Auction date would not be a Weekly off / Holiday).

BRANCH ADDRESS:
KOTAK MAHINDRA BANK LTD., 22, MG ROAD, BANGALORE, KARNATAKA – 560001
OR
Contact: Muzzammilkhan N
Kotak Mahindra Bank Ltd.
Contact / 080 - 61564205

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ ಕಚೇರಿ (ಜಾಗೃತಿ), 3ನೇ ಮಹಡಿ, ಎ ಬ್ಲಾಕ್,
ವಾಣಿಜ್ಯ ತೆರಿಗೆ ಕಾರ್ಯಾಲಯ – 2, ಕೋರಮಂಗಲ, ಬೆಂಗಳೂರು–560047.

ಸಂಖ್ಯೆ: ವಾತೆಜಂಆ/ಜಾಗೃತಿ/ವಾತೆಉಆ.1/ನಂ. 01/23–24 ದಿನಾಂಕ: 03–11–2023

ಹರಾಜು ಪ್ರಕಟಣೆ

ವಾಣಿಜ್ಯ ತೆರಿಗೆ ಉಪ ಆಯುಕ್ತರು (ಜಾಗೃತಿ)–1/ ವಾಣಿಜ್ಯ ತೆರಿಗೆ ಅಧಿಕಾರಿ(ಜಾಗೃತಿ)–43/ ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)–ದೇವನಹಳ್ಳಿ, ಇವರು ಸರಕು ಮತ್ತು ಸೇವಾ ತೆರಿಗೆ ಕಾಯಿದೆ–2017ರ ಸೆಕ್ಷನ್130 ರಡಿಯಲ್ಲಿ ಹೊರಡಿಸಿರುವ ಆದೇಶ ಸಂಖ್ಯೆ: ಜೆಸಿಸಿಟಿ/ವಿಐಜಿ/ಡಿಸಿ–1/ಎಮ್‌ಸಿಪಿ–04/22–23; ದಿನಾಂಕ: 22.02.2023/ಆದೇಶ ಸಂಖ್ಯೆ: ಜೆಸಿಸಿಟಿ/ವಿಐಜಿ/ಸಿಟಿಒ–43/ಸಂಖ್ಯೆ–34/23–24; ದಿನಾಂಕ: 27.02.2023, ಆದೇಶ ಸಂಖ್ಯೆ: ಸಿಟಿಒ(ಇಎನ್‌ಫ್)/ಡಿಹೆಚ್‌ಎಲ್/15/2023–24; ದಿನಾಂಕ: 09.05.2023ರಲ್ಲಿ ಸ್ಥಿರೀಕರಿಸಲಾದ ತೆರಿಗೆ / ದಂಡ / ಶುಲ್ಕಗಳ ಮೊತ್ತವನ್ನು ನಿಗದಿತ ಸಮಯದಲ್ಲಿ ಪಾವತಿಸಲು ಸಂಬಂಧಿಸಿದ ಸರಕುಗಳ ಮಾಲೀಕರು / ಸಾಗಾಣಿಕೆದಾರರು ವಿಫಲರಾಗುರುತ್ತಾರೆ. ಆದುದರಿಂದ ಈ ಕೆಳಕಂಡ ಸರಕುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ. ಆದುದರಿಂದ ಸದರಿ ಆದೇಶದಲ್ಲಿ ಸ್ಥಿರೀಕರಿಸಲಾದ, ತೆರಿಗೆ / ದಂಡ / ಶುಲ್ಕಗಳ ಮೊತ್ತವನ್ನು ವಸೂಲಿ ಮಾಡುವ ಸಂಬಂಧವಾಗಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಿಸಲಾಗಿದೆ. ಈ ಕೆಳಕಂಡ ಸರಕುಗಳನ್ನು "ಹೇಗೆ ಇದೆಯೋ ಹಾಗೆಯೇ" ಇರುವ ಸ್ಥಿತಿಯಲ್ಲಿ ಕೆಳಗೆ ಕಾಣಿಸಿದ ಷರತ್ತುಗಳನ್ವಯ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ.

ಸರಕುಗಳ ವಿವರಣೆ:

Lot No.	Goods detained by	Description of Goods	HSN Code	Total Weight gms/ Cts.	Value (Rs). As per certified valuator
1	DCCT(Vig)-01	Jewellery, precious metals and Precious stones.	7102/7113	779	81,32,733-00
2	CTO(Vig)-43	Jewellery, precious metals and Precious stones.	7102/7113	3980	1,07,89,292-00
3	CTO(Enf), Devanahalli	Diamonds loose	7102	12.52	8,09,450-00

(ಹೆಚ್ಚಿನ ವಿವರಗಳಿಗೆ ಇಲಾಖಾ ಜಾಲತಾಣವನ್ನು ಸಂಪರ್ಕಿಸುವುದು: https://gst.kar.nic.in/TenderAction2021.aspx)

ಮುಚ್ಚಿದ ಲಕೋಟೆಯೊಂದಿಗೆ ಬಿಡ್ ಸಲ್ಲಿಸುವ ವಿಳಾಸ ಮತ್ತು ಕೊನೆಯ ದಿನಾಂಕ	ಸ್ಥಳ	1. ವಾಣಿಜ್ಯ ತೆರಿಗೆ ಉಪ ಆಯುಕ್ತರು (ಜಾಗೃತಿ)–1, 2. ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)–43 3. ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)–ದೇವನಹಳ್ಳಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ ಕಛೇರಿ (ಜಾಗೃತಿ), 'ಎ' ಬ್ಲಾಕ್, 3ನೇ ಮಹಡಿ ವಿಟಿಕೆ–2, 80 ಅಡಿ ರಸ್ತೆ, ರಾಜೇಂದ್ರ ನಗರ, ಕೋರಮಂಗಲ, ಬೆಂಗಳೂರು–560 047.
	ದಿನಾಂಕ	20/11/2023
	ವೇಳೆ	ಸಂಜೆ 5.00 ಗಂಟೆಯೊಳಗೆ
ಮುಚ್ಚಿದ ಬಿಡ್ ಲಕೋಟೆಯನ್ನು ತೆರೆಯುವ ವಿವರ	ಸ್ಥಳ	ವಾಣಿಜ್ಯ ತೆರಿಗೆ ಉಪ ಆಯುಕ್ತರು (ಜಾಗೃತಿ)–1, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ ಕಛೇರಿ (ಜಾಗೃತಿ), 'ಎ' ಬ್ಲಾಕ್, ವಿಟಿಕೆ–2, 80 ಅಡಿ ರಸ್ತೆ, ರಾಜೇಂದ್ರ ನಗರ, ಕೋರಮಂಗಲ, ಬೆಂಗಳೂರು–560047.
	ದಿನಾಂಕ	21/11/2023
	ವೇಳೆ	ಬೆಳಿಗ್ಗೆ 11.30

ಷರತ್ತುಗಳು:

1) ಸರಕುಗಳು "ಹೇಗೆ ಇದೆಯೋ ಹಾಗೆಯೇ" ಸ್ಥಿತಿಯಲ್ಲಿ ಹರಾಜು ಮಾಡಲಾಗುವುದು. 2) ಖರೀದಿಸಲು ಆಸಕ್ತಿಯುಳ್ಳ ಬಿಡ್ಡುದಾರರು ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ), ದೇವನಹಳ್ಳಿ ಕಛೇರಿಯಲ್ಲಿರುವ ಸದರಿ ಸರಕುಗಳನ್ನು ದಿನಾಂಕ: 18/11/2023 ರಂದು ಬೆಳಿಗ್ಗೆ 11.30 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಪರಿಶೀಲಿಸಬಹುದು. 3) ಬಿಡ್ಡುದಾರರು ಅವರ ವ್ಯವಹರಣೆ ಸಲುವಾಗಿ, ಆಧಾರ್ ಕಾರ್ಡ್, ಪಾನ್, ಅಂಚೆ ವಿಳಾಸ, ಇ ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ನೀಡುವುದು. 4) ಲಾಟ್ ಸಂಖ್ಯೆ 1 ಮತ್ತು 2ಕ್ಕೆ ಸಂಬಂಧಿಸಿದಂತೆ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಪ್ರತಿ ಬಿಡ್‌ಗೆ ರೂ.5,00,000.00ರಂತೆ (ಐದು ಲಕ್ಷ ರೂಪಾಯಿಗಳು ಮಾತ್ರ), ಮೊತ್ತವನ್ನು ವಾಣಿಜ್ಯ ತೆರಿಗೆ ಉಪ ಆಯುಕ್ತರು (ಜಾಗೃತಿ)–1, ಬೆಂಗಳೂರು / ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)–43 / ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)–ದೇವನಹಳ್ಳಿ, ಇವರ ಹೆಸರಿನಲ್ಲಿ, ಹಾಗೂ ಲಾಟ್ ಸಂಖ್ಯೆ 3ಕ್ಕೆ ಸಂಬಂಧಿಸಿದಂತೆ ರೂ.50,000–00 (ಐವತ್ತು ಸಾವಿರ ರೂಪಾಯಿಗಳು ಮಾತ್ರ) ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)–ದೇವನಹಳ್ಳಿ, ಇವರ ಹೆಸರಿನಲ್ಲಿ ಡಿಡಿಯನ್ನು ಪಡೆದು ಹರಾಜು ಪೂರ್ವವಾಗಿ ಸಲ್ಲಿಸುವುದು. ಡಿ.ಡಿ. ಸಲ್ಲಿಸದ ಇ.ಎಂ.ಡಿ. ಯನ್ನು ಹರಾಜಿಗೆ ಪರಿಗಣಿಸಲಾಗುವುದಿಲ್ಲ. 5) ಆಸಕ್ತ ಬಿಡ್ಡುದಾದರೂ ತಮ್ಮ ಬಿಡ್ಡುಗಳನ್ನು ಪ್ರತ್ಯೇಕವಾಗಿ ಲಾಟ್ ಪ್ರಕಾರವೇ ಸಲ್ಲಿಸುವುದು ಮತ್ತು ಇಎಂಡಿ ಮೊತ್ತವನ್ನು ಸಹ ಲಾಟ್ ಪ್ರಕಾರವೇ ಪ್ರತ್ಯೇಕವಾಗಿ ಸಲ್ಲಿಸುವುದು. 6) 3 ಲಾಟ್‌ಗಳಿಗೆ ಪ್ರತ್ಯೇಕವಾಗಿ ಹರಾಜು ಪ್ರತಿಕ್ರಿಯೆಯನ್ನು ನಡೆಸುವುದರಿಂದ ಯಾವುದೇ ಲಾಟುಗಳ ಹರಾಜು ಪ್ರಕ್ರಿಯೆಯನ್ನು ಅಂಗೀಕರಿಸುವ ಅಥವಾ ಕೈಬಿಡುವ ಅಧಿಕಾರವು ಸಂಬಂಧ ಪಟ್ಟ ಅಧಿಕಾರಿಗಳಿಗೆ ಇರುತ್ತದೆ. 7) ಬಿಡ್ಡುದಾರರು ಸರಕುವಾರು ತಮ್ಮ ಬಿಡ್ ಮೊತ್ತವನ್ನು (ಜಿಎಸ್‌ಟಿ ಹೊರತುಪಡಿಸಿ) ನಮೂದಿಸಿದ ಸೀಲ್ ಮಾಡಿದ ಲಕೋಟೆಯನ್ನು ಡಿ.ಡಿ. ಯೊಂದಿಗೆ ದಿನಾಂಕ: 20/11/2023 ಸಂಜೆ 5.00 ಗಂಟೆಯೊಳಗೆ ಈ ಕಛೇರಿಗೆ ಸಲ್ಲಿಸುವುದು. 8) ಈ ಕೆಳ ಸಹಿ ಮಾಡಿರುವವರು ಯಾವುದೇ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಯಾವುದಾದರೂ ಕಾರಣವಿದ್ದಲ್ಲಿ ಹರಾಜನ್ನು ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ. 9) ಬಿಡ್ಡುದಾರರು ನಮೂದಿಸಿದ ಬಿಡ್ ಮೊತ್ತವನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ನಮೂದಿಸಿರುವ ಬಿಡ್ ಮೊತ್ತ ಸಮಂಜಸವಾಗಿದ್ದಲ್ಲಿ ಅತ್ಯಧಿಕ ನಮೂದಿಸಿದ ಬಿಡ್ಡುದಾರರಿಗೆ ಅವರು ನೀಡಿರುವ ಇ–ಮೇಲ್‌ಗೆ ಮಾತ್ರ ಸರಕು ಪಡೆಯಲು ತಿಳಿಸಲಾಗುವುದು. 10) ಯಶಸ್ವಿಯಾದ ಬಿಡ್ಡುದಾರರು ಪೂರ್ಣ ಬಿಡ್ ಮೊತ್ತವನ್ನು ಮೂರು ದಿವಸಗಳೊಳಗೆ ಪಾವತಿಸುವುದು. ಸರಕನ್ನು ಹಣ ಪಾವತಿಸಿದ ಎರಡು ದಿವಸಗಳಲ್ಲಿ ತೆಗೆದುಕೊಂಡು ಹೋಗುವುದು. ನಿಗದಿತ ಸಮಯದೊಳಗೆ ಬಿಡ್ ಮೊತ್ತವನ್ನು ಪಾವತಿಸದಿದ್ದಲ್ಲಿ ಇ.ಎಂ.ಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ನಂತರದ ಹೆಚ್ಚಿನ ಬಿಡ್ಡುದಾರರನ್ನು ಪರಿಗಣಿಸಲಾಗುವುದು ಅಥವಾ ಅವರು ನೀಡಿರುವ ಬಿಡ್ ಮೊತ್ತ ಸಮಂಜಸವಲ್ಲದಿದ್ದಲ್ಲಿ ಹೊಸದಾಗಿ ಹರಾಜು ಪ್ರಕ್ರಿಯೆ ಪ್ರಾರಂಭಿಸಲಾಗುವುದು. 11) ಯಶಸ್ವಿಯಾದ ಬಿಡ್ಡುದಾರರು ಜಿಎಸ್‌ಟಿ ಕಾಯಿದೆಯಡಿಯಲ್ಲಿ ನೋಂದಣಿದಾರರಾಗಿದ್ದಲ್ಲಿ ಅನ್ವಯವಾಗುವ ಸಿಜಿಎಸ್‌ಟಿ, ಎಸ್‌ಜಿಎಸ್‌ಟಿ ಮತ್ತು ಐಜಿಎಸ್‌ಟಿ ಮೊತ್ತವನ್ನು ಸರಕು ವಶಕ್ಕೆ ಪಡೆಯುವ ಮುನ್ನ ಆರ್‌ಸಿಎಂ ಅಡಿಯಲ್ಲಿ ಪಾವತಿಸುವುದು. ನೋಂದಾಯಿತರಾಗದಿದ್ದಲ್ಲಿ ತಾತ್ಕಾಲಿಕ ನೋಂದಣಿಯನ್ನು ಕೆಳ ಸಹಿ ಮಾಡಿರುವವರಿಂದ ಪಡೆದು ಅನ್ವಯವಾಗುವ ಜಿಎಸ್‌ಟಿಯನ್ನು ಪಾವತಿಸಿ ಪಾವತಿ ರಶೀತಿಯನ್ನು ಸರಕು ವಶ ಪಡೆಯುವ ಮುನ್ನ ಸಲ್ಲಿಸುವುದು. 12) ಯಶಸ್ವಿಯಾಗದ ಬಿಡ್ಡುದಾರರು ಇಎಂಡಿ ಮೊತ್ತವನ್ನು ಹರಾಜು ಪ್ರಕ್ರಿಯೆ ಪೂರ್ಣಗೊಂಡ ನಂತರ ಹಿಂಪಡೆಯುವುದು. 13) ಬಿಡ್ಡುದಾರರಿಗೆ ಇನ್ನೂ ಹೆಚ್ಚಿನ ವಿವರಣೆ ಅವಶ್ಯವಿದ್ದಲ್ಲಿ ಮೊಬೈಲ್ ಸಂಖ್ಯೆ: 9880749050/9663155543/9379950819/ 9449409494 ಮತ್ತು ಇಲಾಖಾ ಜಾಲತಾಣವನ್ನು https://gst.kar.nic.in/TenderAction2021.aspx ಸಂಪರ್ಕಿಸುವುದು.

ಸಹಿ/– ವಾಣಿಜ್ಯ ತೆರಿಗೆ ಉಪ ಆಯುಕ್ತರು (ಜಾಗೃತಿ)–1, ಬೆಂಗಳೂರು–47.
ಸಹಿ/– ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ)–43, ಬೆಂಗಳೂರು–47.
ಸಹಿ/– ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)–ದೇವನಹಳ್ಳಿ, ಬೆಂಗಳೂರು–47.

ವಾ.ಸಾ.ಸಂ.ಇ/ವಾಪ್ರ/2019/ಆಕಾರ್/2023–24

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಅಧೀಕ್ಷಕ ಅಭಿಯಂತರರು, ಕೇಂದ್ರ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–10.
ದೂರವಾಣಿ: 080–23407011–25, ವೆಬ್‌ಸೈಟ್:www.kssidc.co.in ಇ–ಮೇಲ್: kssidcho@vsnl.com

ಸಂಖ್ಯೆ:ಇಪಿ–77:ಇಎನ್‌ಜಿ:ಅಅ:Bio-Methanation Plant:ಚ.ಕ್ರಾಫ್ಟ್ ಪಾರ್ಕ್:2023–24/281 ದಿನಾಂಕ: 03–11–2023

ಟೆಂಡರ್ ಪ್ರಕಟಣೆ
(ಏಕ ಟೆಂಡರ್ ದಾಖಲೆ ಪದ್ಧತಿ)

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ http://www.kppp.karnataka.gov.in ಮುಖಾಂತರ ಮಾತ್ರ)

ಅಧೀಕ್ಷಕ ಅಭಿಯಂತರರು, ವ್ಯವಸ್ಥಾಪಕ ನಿರ್ದೇಶಕರವರ ಪರವಾಗಿ ಟೆಂಡರ್ ಪ್ರಕಟಣೆ ನೀಡಿದ್ದು ಟೆಂಡರ್ ಪ್ರಕಟಣೆ ಸಂಖ್ಯೆ:ಇಪಿ–77:ಇಎನ್‌ಜಿ:ಅಅ:Bio-Methanation Plant:ಚ.ಕ್ರಾಫ್ಟ್ ಪಾರ್ಕ್:2023–24 ದಿನಾಂಕ: 03–11–2023 ರ ಪ್ರಕಾರ ಸೂಚಿಸಿರುವ **Design, Supply, Installation, Commissioning and Construction of 1 No. of Bio- Methanation plant (Excluding Construction of SS Masonry Tank of Internal Dimensions of 7.00 m x 3.50 m x 3.50 m) of 500 Kg/Per Day Capacity For The Natural Fibre Process Unit at Industrial Estate Channapattana Craft Park, Sathnur Road, Thagachagere, Ramanagara District** ಕಾಮಗಾರಿಯನ್ನು ಕೈಗೊಳುವ ಬಗ್ಗೆ Eligible registered Agencies / Company / Contractors, ತಾಂತ್ರಿಕ ಮಾನವ ಸಂಪನ್ಮೂಲವುಳ್ಳ ಮತ್ತು ಇದೇ ತರಹದ ಕಾಮಗಾರಿ ಕೆಲಸಗಳ ಅನುಭವವಿರುವ ಅರ್ಹ ಗುತ್ತಿಗೆದಾರರು ಇವರಿಂದ ಟೆಂಡರನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ ಏಕ ಟೆಂಡರ್ ದಾಖಲೆ ಪದ್ಧತಿ (SINGLE TENDER DOCUMENT SYSTEM) ಪ್ರಕಾರ ಟೆಂಡರ್ ಕರೆಯಲಾಗಿದೆ.

ಆಸಕ್ತಿಯುಳ್ಳ ಅರ್ಹತೆ ಹೊಂದಿರುವ ಗುತ್ತಿಗೆದಾರರು ವಿವರವಾದ ಟೆಂಡರ್ ಪ್ರಕಟಣೆಯನ್ನು, ದಾಖಲಾತಿಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ http://www.kppp.karnataka.gov.in / under (Karnataka State Small Industries Development Corporation Limited) ಮೂಲಕ ದಿನಾಂಕ: **06–11–2023 ರ ಸಂಜೆ 15.00 ಗಂಟೆ ನಂತರ** ಪಡೆದುಕೊಳ್ಳಬಹುದು.

ಭರ್ತಿಮಾಡಲಾದ (Online submission) ಟೆಂಡರ್‌ನೊಡನೆ ಟೆಂಡರ್‌ಗೆ ಸಂಬಂಧಿಸಿದ ಶುಲ್ಕ ಮತ್ತು ಇ.ಎಂ.ಡಿ ಮೊತ್ತವನ್ನು ಆನ್‌ಲೈನ್ ಗೇಟ್‌ವೇ ಪೋರ್ಟಲ್ ವೆಬ್‌ಸೈಟ್ http://www.kppp.karnataka.gov.in under (Karnataka State Small Industries Development Corporation Limited) ಇ–ಪೋರ್ಟಲ್ ಮೂಲಕ **ದಿನಾಂಕ: 22–11–2023ರ ಸಂಜೆ 17.30 ಗಂಟೆಯೊಳಗೆ** ಸಲ್ಲಿಸಲು ಕೋರಿದೆ.

ಟೆಂಡರ್‌ನ ಕಾಲಮಿತಿ ವಿವರಗಳು:

- ಟೆಂಡರ್ ದಸ್ತಾವೇಜುಗಳನ್ನು (Online Submission) ಸಲ್ಲಿಸುವ ಕೊನೆಯ ದಿನಾಂಕ: **22–11–2023 17.30 ಗಂಟೆಯವರೆಗೆ.**
- ಟೆಂಡರ್ Document ತೆರೆಯುವ ದಿನಾಂಕ:**24–11–2023, 11.00 ಗಂಟೆಗೆ.**

ಹೆಚ್ಚಿನ ಮಾಹಿತಿಯನ್ನು ಈ ಕೆಳಸಹಿದಾರ ಅಧಿಕಾರಿಯವರ ಕಛೇರಿಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://www.kppp.karnataka.gov.in/ ಅಥವಾ ಇ–ಪ್ರಕ್ಯೂರ್‌ಮೆಂಟ್ ಸೆಲ್/ ಹೆಲ್ಪ್‌ಡೆಸ್ಕ್ (ದೂರವಾಣಿ 080–25501227 / 25501216) ಮುಖಾಂತರ ಪಡೆಯಲು ಕೋರಿದೆ.

ಸಹಿ/–
ಅಧೀಕ್ಷಕ ಅಭಿಯಂತರರು

ವಾಸಾಸಂಇ/ವಾಪ್ರ/ಜಿಎ/2031/2023–24

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ

4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929

ಸಂಖ್ಯೆ:ರಾಗಾವಿ/ಪ್ರೊಕ್/ಗಾರ್ಡನ್ ಎಎಂಸಿ/37/2023–24 ದಿನಾಂಕ: 07.11.2023

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ) 3ನೇ ಕರೆ

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಉದ್ಯಾನವನವನ್ನು ವಾರ್ಷಿಕ ನಿರ್ವಹಣೆ ಮಾಡಲು ಟೆಂಡರ್–ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಉಲ್ಲೇಖದ ಷರತ್ತುಗಳಲ್ಲಿ ಪಡೆದುಕೊಳ್ಳಬಹುದಾಗಿದೆ.

Tender No: RGUHSK/2023-24/SE0003/Call-3

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	07/11/2023
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	15/11/2023 ಸಂಜೆ 5:00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	17/11/2023 ಬೆಳಿಗ್ಗೆ 11:00 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	20/11/2023 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/–
ಕುಲಸಚಿವರು

ವಾ.ಸಾ.ಸಂ.ಇ/2024/2023–24

ಕರ್ನಾಟಕ ಸರ್ಕಾರ GOVERNMENT OF KARNATAKA

ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ.

Cantonment Area, Director:8147796529, PA: 8147796539,
e-mail : vimsballaridirector@karnataka.gov.in , directorvimsballari@gmail.com
website: vims.karnataka.gov.in

ಸಂ: ವಿಮ್ಸ್/ಟೆಂಡರ್/ಸಾಮಾನ್ಯ–1/01/2023–24 ದಿನಾಂಕ: 04.11.2023

ಇ–ಟೆಂಡರ್ ಅಧಿಸೂಚನೆ

ವಿಮ್ಸ್ ಸಂಸ್ಥೆಯ ಬಳ್ಳಾರಿಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಸ್ವಚ್ಛತಾ ಮತ್ತು ನೈರ್ಮಲ್ಯ ಸೇವೆಗಳಿಗಾಗಿ ಮಾನವ ಸಂಪನ್ಮೂಲ ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ–1999–2000ರಂತೆ ಒಂದು–ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ **https://kppp.karnataka.gov.in** ಮೂಲಕ ಇ–ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್‌ನಲ್ಲಿ ಟೆಂಡರನ್ನು ದಿನಾಂಕ **04.11.2023** ಸಂಜೆ **5.00** ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ **169.00** ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್‌ಸೈಟ್ ಮತ್ತು **www.vims.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/414/ಕೆಎಸ್‌ಎಂಸಿಎ/2023–24

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿಯಿಂದ ಕಲಿಕೆ ಭಾಗ್ಯ ಯೋಜನೆ

ಕಾರ್ಮಿಕರ ಮಕ್ಕಳ ಸಹಾಯಧನಕ್ಕೆ ಕತ್ತರಿ

• ಶ್ರೀಕಾಂತ ಕಲ್ಲಮ್ಮನವರ
ವಿಜಯಕುಮಾರ್ ಎಸ್.ಕೆ.

ಹುಬ್ಬಳ್ಳಿ/ಚಿಕ್ಕಮಗಳೂರು: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ 'ಕಲಿಕೆ ಭಾಗ್ಯ' ಯೋಜನೆಯಡಿ ನೀಡುತ್ತಿದ್ದ ಶೈಕ್ಷಣಿಕ ಸಹಾಯಧನ ಮೊತ್ತವನ್ನು ರಾಜ್ಯ ಸರ್ಕಾರ ಭಾರಿ ಪ್ರಮಾಣದಲ್ಲಿ ಕಡಿತ ಮಾಡಿದೆ.

ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ಕನಿಷ್ಠ ₹5 ಸಾವಿರದಿಂದ ಗರಿಷ್ಠ ₹60 ಸಾವಿರ ತನಕ ಸಹಾಯಧನ ನೀಡಲಾಗುತ್ತಿತ್ತು. ಈ ಮೊತ್ತವನ್ನು ಈಗ ಕನಿಷ್ಠ ₹1,100 ಮತ್ತು ಗರಿಷ್ಠ ₹11 ಸಾವಿರಕ್ಕೆ ಇಳಿಕೆ ಮಾಡಿ ಕಾರ್ಮಿಕ ಇಲಾಖೆ ಅ.30ರಂದು ಆದೇಶ ಹೊರಡಿಸಿದೆ.

ಅಪಾಯಕಾರಿ, ಅಸುರಕ್ಷಿತ ಹಾಗೂ ಅಸಂಘಟಿತ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ರಕ್ಷಣೆಗಾಗಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಕಟ್ಟಡ ಕಾರ್ಮಿಕ ಕಾನೂನು (1996), ಸೆಸ್ ಕಾನೂನು ಜಾರಿಗೆ ಬಂದಿದೆ. ಈ ಕಾನೂನು ಜಾರಿಯಾಗಿ 10 ವರ್ಷಗಳ ಬಳಿಕ (2006ರಲ್ಲಿ) ಕರ್ನಾಟಕದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಲ್ಯಾಣ ಮಂಡಳಿ ಸ್ಥಾಪನೆಯಾಗಿದೆ. ಕಲ್ಯಾಣ ಮಂಡಳಿಯಲ್ಲಿ ನೋಂದಾಯಿಸಿಕೊಂಡ ಕಾರ್ಮಿಕರಿಗೆ ಸವಲತ್ತು ನೀಡಲಾಗುತ್ತಿದೆ.

ವರ್ಷದಿಂದ ವರ್ಷಕ್ಕೆ ಸೆಸ್ ಸಂಗ್ರಹ ಹೆಚ್ಚಾಗುತ್ತಿದ್ದು, ಸದ್ಯ ₹10,263 ಕೋಟಿಗೂ ಹೆಚ್ಚು ಮೊತ್ತ ನಿಧಿಯಲ್ಲಿ ಇದೆ. ಈ ಪೈಕಿ ₹3,559 ಕೋಟಿಯನ್ನು ವಿವಿಧ ಯೋಜನೆಗಳ ಅಡಿ ಫಲಾನುಭವಿಗಳಿಗೆ ತಲುಪಿಸಲು ಕಾರ್ಮಿಕ ಇಲಾಖೆ ಉದ್ದೇಶಿಸಿದೆ. ಇನ್ನೂ ₹6,700 ಕೋಟಿಗೂ ಅಧಿಕ ಮೊತ್ತ ನಿಧಿಯಲ್ಲಿ ಉಳಿಯಲಿದೆ.

ಪ್ರಜಾವಾಣಿ ವಿಶೇಷ

ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ನೋಂದಣಿ ಕೂಡ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದ್ದು, ಕಾರ್ಮಿಕರಲ್ಲದವರೂ ನೋಂದಣಿ ಮಾಡಿಸಿದ್ದಾರೆ ಎಂಬ ಆರೋಪ ಇದೆ. ಇದನ್ನು ತಡೆಯಲು ವೇತನ ಚೀಟಿ ಅಥವಾ ಹಾಜರಾತಿ ಪಟ್ಟಿ ಸಲ್ಲಿಸುವುದು ಕಡ್ಡಾಯ ಎಂಬ ನಿಯಮವನ್ನು ಸರ್ಕಾರ ಜಾರಿಗೆ ತಂದಿದೆ. ಕಟ್ಟಡ ಕಾರ್ಮಿಕರು ವೇತನ ಚೀಟಿ ಎಲ್ಲಿಂದ ತರಬೇಕು ಎಂಬುದು ಕಾರ್ಮಿಕರ ಪ್ರಶ್ನೆ. ಈ ನಡುವೆ ಈಗ 'ಕಲಿಕೆ ಭಾಗ್ಯ' ಯೋಜನೆ ಮೂಲಕ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಸಹಾಯಧನ ಕಡಿಮೆ ಮಾಡಲಾಗಿದೆ. ಕಾರ್ಮಿಕ ನಿಧಿಯ ಮೊತ್ತವನ್ನು ಸಾಮಗ್ರಿ ಖರೀದಿಗೆ ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡಲು ಕಾರ್ಮಿಕ ಮಂಡಳಿ ಹೊರಟಿದೆ ಎಂಬುದು ಕಟ್ಟಡ ಕಾರ್ಮಿಕ ಸಂಘಟನೆಗಳ ಅಸಮಾಧಾನ.

'10 ಸಾವಿರ ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ಅದಕ್ಕೆ ₹30 ಕೋಟಿ ಖರ್ಚು ಮಾಡಲಾಗುತ್ತಿದೆ. ಈ ಹಿಂದಿನ ಸರ್ಕಾರದಲ್ಲೂ ಖರೀದಿಗೆ ಹೆಚ್ಚಿನ ಮೊತ್ತ ಖರ್ಚು ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಸಹಾಯಧನ ನೀಡಿದರೆ ಹೆಚ್ಚು ಅನುಕೂಲವೇ ಹೊರತು ಸಲಕರಣೆ ನೀಡುವುದರಿಂದ ಏನೂ ಪ್ರಯೋಜನ ಇಲ್ಲ' ಎಂಬುದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಅಭಿಪ್ರಾಯ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

ಸಹಾಯಧನ ಮೊತ್ತ ಪರಿಷ್ಕರಣೆ ವಿವರ(₹ಗಳಲ್ಲಿ)

ತರಗತಿ	ಈ ಹಿಂದಿನ ಮೊತ್ತ	ಪರಿಷ್ಕೃತ ಮೊತ್ತ
1ರಿಂದ4ನೇ ತರಗತಿ	5,000	1,100
5ರಿಂದ 8ನೇ ತರಗತಿ	8,000	1,250
9ರಿಂದ 10ನೇ ತರಗತಿ	12,000	3,000
ಪ್ರಥಮ ಮತ್ತು ದ್ವಿತೀಯ ಪಿಯುಸಿ	15,000	4,600
ಪದವಿ	25,000	6,000
ಬಿ.ಇ, ಬಿ.ಟೆಕ್	50,000	10,000
ಸ್ನಾತಕೋತ್ತರ ಪದವಿ	35,000	10,000
ಪಾಲಿಟೆಕ್ನಿಕ್, ಡಿಪ್ಲೊಮಾ, ಐಟಿಐ	20,000	4,600
ಬಿಎಸ್‌ಸಿ ನರ್ಸಿಂಗ್, ಪ್ಯಾರಾ ಮೆಡಿಕಲ್	40,000	10,000
ಬಿ.ಇಡಿ	35,000	6,000
ವೈದ್ಯಕೀಯ	60,000	11,000
ಎಲ್‌ಎಲ್‌ಬಿ, ಎಲ್‌ಎಲ್‌ಎಂ	30,000	10,000
ಡಿ.ಇಡಿ	25,000	4,600
ಪಿಎಚ್‌ಡಿ, ಎಂ.ಫಿಲ್	25,000	11,000

ಶೈಕ್ಷಣಿಕ ಸಹಾಯಧನ ಕಳೆದ ವರ್ಷ ನೀಡಿರಲಿಲ್ಲ. ಪರಿಷ್ಕೃತ ಆದೇಶವು 2022–23ರಿಂದಲೇ ಅನ್ವಯವಾಗಲಿದೆ
ಡಿ.ಭಾರತಿ
ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ

ಅರ್ಜಿಗಳ ಮಹಾಪೂರ

ಕಟ್ಟಡ ಕಾರ್ಮಿಕರ ಮಕ್ಕಳಿಗೆ ನೀಡಲಾಗುವ ಶೈಕ್ಷಣಿಕ ಸಹಾಯಧನ ಕೋರಿ 11 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಕಾರ್ಮಿಕ ಇಲಾಖೆಗೆ ಸಲ್ಲಿಕೆಯಾಗಿವೆ.

'ಕೋವಿಡ್ ದಿನಗಳಿಗೂ ಮೊದಲು ಸಹಾಯಧನ ಕೋರಿ 3 ಲಕ್ಷ ಅರ್ಜಿ ಸಲ್ಲಿಕೆ ಆಗುತ್ತಿದ್ದವು. ಕೋವಿಡ್ ಸಮಯದಲ್ಲಿ ಕಾರ್ಮಿಕರಿಗೆ ಆರ್ಥಿಕ ನೆರವಿನ ಜೊತೆಗೆ ಜೀವನಾವಶ್ಯಕ ವಸ್ತುಗಳನ್ನು ಪೂರೈಸಿದೆವು. ಅದರಿಂದಾಗಿ ಕಾರ್ಮಿಕ ಕಾರ್ಡ್ ಪಡೆಯುವವರ ಸಂಖ್ಯೆ ಏರಿಕೆಯಾಗಿ ಈಗ 45 ಲಕ್ಷಕ್ಕೆ ತಲುಪಿದೆ. ಇದರಲ್ಲಿ ಕೆಲವರು ಕಾರ್ಮಿಕರಲ್ಲದವರೂ ಸೇರಿಕೊಂಡಿದ್ದಾರೆ' ಎಂದು ಕಾರ್ಮಿಕ ಕಲ್ಯಾಣ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಕಾರ್ಮಿಕ ಕಾರ್ಡ್‌ಗಾಗಿ ಮತ್ತೆ ಹೊಸದಾಗಿ 14 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದು, ಸೂಕ್ತ ದಾಖಲೆ ಪತ್ರಗಳುಳ್ಳ 7 ಲಕ್ಷ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗಿದೆ' ಎಂದರು.

₹500 ಕೋಟಿ ಬಜೆಟ್: 'ಮಂಡಳಿಯ ಬಜೆಟ್ ₹500 ಕೋಟಿ ಇದೆ. ಶೈಕ್ಷಣಿಕ ಸಹಾಯಧನ ಕೋರಿ ಮೊದಲೆಲ್ಲ 3 ಲಕ್ಷದವರೆಗೆ ಅರ್ಜಿ ಸಲ್ಲಿಕೆ ಆಗುತ್ತಿದ್ದವು. ಹೆಚ್ಚಿನ ಜನರಿಗೆ ನೆರವಾಗಲು ಸಾಧ್ಯವಾಗುತಿತ್ತು. ಆದರೆ, ಈಗ 11 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆ ಆಗಿರುವ ಕಾರಣ ಅನಿವಾರ್ಯವಾಗಿ ಸಹಾಯಧನದ ಪ್ರಮಾಣ ಕಡಿತಗೊಳಿಸಲಾಗಿದೆ' ಎಂದು ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಿ.ಭಾರತಿ ಹೇಳಿದರು.

'ಪಿಂಚಣಿ, ಮದುವೆ ಸಹಾಯಧನ, ಸಾವಿಗೆ ಪರಿಹಾರ, ಆಸ್ಪತ್ರೆ ವೆಚ್ಚ ಸೇರಿ ಇತರ ಸೌಲಭ್ಯಗಳನ್ನೂ ಕಾರ್ಮಿಕರಿಗೆ ನೀಡಬೇಕಿದೆ. ಲಭ್ಯವಿರುವ ಹಣದಲ್ಲೇ ಎಲ್ಲವನ್ನೂ ಸರಿದೂಗಿಸಬೇಕಾದ ಅನಿವಾರ್ಯ ಇದೆ' ಎಂದರು.

ಆದೇಶ ವಾಪಸ್ ಪಡೆಯಲು ಒತ್ತಾಯ

'ಸಹಾಯಧನ ಕಡಿಮೆ ಮಾಡಿರುವುದು ಸರಿಯಲ್ಲ. ಇದನ್ನು ವಿರೋಧಿಸಿ ವಿದ್ಯಾರ್ಥಿಗಳು ಈಗಾಗಲೇ ಪತ್ರ ಚಳವಳಿ ಆರಂಭಿಸಿದ್ದಾರೆ. ಈ ಆದೇಶವನ್ನು ರಾಜ್ಯ ಸರ್ಕಾರ ವಾಪಸ್ ಪಡೆಯಬೇಕು' ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್ ಒತ್ತಾಯಿಸಿದರು.

ಕ್ರಮ ವಹಿಸದಿದ್ದಲ್ಲಿ ಕಲ್ಯಾಣ ಮಂಡಳಿ ಎದುರು ಕಾರ್ಮಿಕರು ಮತ್ತು ಅವರ ಮಕ್ಕಳೊಂದಿಗೆ ಅನಿರ್ದಿಷ್ಟ ಅವಧಿ ಹೋರಾಟ ನಡೆಸಲಾಗುವುದು ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸುದ್ದಿ 2 ನಿಮಿಷ

ಕಾರ್ಮಿಕರ ಕಾರ್ಡ್‌ಗೆ ಹೊಸ ನಿಯಮ: ಸಂತೋಷ ಲಾಡ್

ಕಲಬುರಗಿ: 'ಶೇ 70ರಷ್ಟು ಕಾರ್ಮಿಕ ಕಾರ್ಡ್‌ಗಳು ನಕಲಿ ಕಾರ್ಡ್‌ಗಳಾಗಿದ್ದು, ನಕಲಿ ಹಾವಳಿ ತಡೆಗೆ ಹೊಸ ನಿಯಮಗಳನ್ನು ತರಲಾಗುವುದು' ಎಂದು ಕಾರ್ಮಿಕ ಸಚಿವ ಸಂತೋಷ ಲಾಡ್ ತಿಳಿಸಿದರು.

ಇಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,

'ಕಳೆದ ಮೂರು ವರ್ಷಗಳಲ್ಲಿ 39 ಲಕ್ಷ ಕಾರ್ಡ್‌ಗಳು ಏರಿಕೆಯಾಗಿವೆ. ಒಟ್ಟು 45 ಲಕ್ಷ ಕಾರ್ಮಿಕ ಕಾರ್ಡ್‌ಗಳಿದ್ದು, ಹಾವೇರಿ ಜಿಲ್ಲೆಯಲ್ಲೇ 3 ಲಕ್ಷ ಕಾರ್ಡ್‌ಗಳಿವೆ. ಹೀಗಾಗಿ, ನಕಲಿ ಕಾರ್ಡ್‌ಗಳನ್ನು ಸ್ವಚ್ಛ ಮಾಡಬೇಕಿದೆ' ಎಂದರು.

'ಶುದ್ಧತೆಯನ್ನು ರಾತ್ರೋರಾತ್ರಿ ಮಾಡಲು ಆಗುವುದಿಲ್ಲ. ಇದಕ್ಕೆ ಕಾಲಾವಕಾಶ ಬೇಕಾಗುತ್ತದೆ. ಹೊಸ ಅರ್ಜಿ, ನವೀಕರಣಕ್ಕಾಗಿ ಹೊಸ ನಿಯಮಗಳನ್ನು ಹಾಕುತ್ತೇವೆ. ಇದಕ್ಕೆ ಕಾರ್ಮಿಕ ಸಂಘಟನೆಗಳು ಸಹಕರಿಸಬೇಕು. ಕೆಲವು ದಿನಗಳಲ್ಲಿ ಕಾರ್ಮಿಕರ ಮಕ್ಕಳ 6 ಲಕ್ಷ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಪಾವತಿ ಮಾಡಲಾಗುವುದು' ಎಂದು ಹೇಳಿದರು.

ಪಿಡಿಒ ಅಸಹಕಾರ ಚಳವಳಿ ಇಂದು

ಬೆಂಗಳೂರು: ಜ್ಯೇಷ್ಠತಾ ಪಟ್ಟಿ ಅಂತಿಮಗೊಳಿಸುವುದು, ವರ್ಗಾವಣೆ ಪ್ರಕ್ರಿಯೆ ಸ್ಥಗಿತಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯದಾದ್ಯಂತ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಬುಧವಾರ ಅಸಹಕಾರ ಚಳವಳಿ ನಡೆಸಲಿದ್ದಾರೆ ಎಂದು ಕರ್ನಾಟಕ ಪಿಡಿಒಗಳ ಕ್ಷೇಮಾಭಿವೃದ್ಧಿ ಸಂಘ ಹೇಳಿದೆ.

'ತಾಲ್ಲೂಕು ಪಂಚಾಯಿತಿಗಳಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದು ಹಾಗೂ ಎಲ್ಲ ಪಿಡಿಒಗಳನ್ನು 'ಬಿ' ವೃಂದಕ್ಕೆ ಸೇರಿಸುವುದು ಕೂಡ ನಮ್ಮ ಬೇಡಿಕೆಗಳಲ್ಲಿ ಸೇರಿವೆ' ಎಂದು ಕರ್ನಾಟಕ ಪಿಡಿಒಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜು ವಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಸಲ್ಲಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ.

'ಇದೇ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸೆಪ್ಟೆಂಬರ್ 5ರಂದು ಅಸಹಕಾರ ಚಳವಳಿ ಹಾಗೂ ನಂತರ ಅನಿರ್ದಿಷ್ಟಾವಧಿ ಪ್ರತಿಭಟನೆ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿತ್ತು. ಎರಡು ತಿಂಗಳೊಳಗೆ ಬೇಡಿಕೆ ಈಡೇರಿಸುವುದಾಗಿ ಸಚಿವರು ಭರವಸೆ ನೀಡಿದ್ದರಿಂದ ಪ್ರತಿಭಟನೆ ಕೈಬಿಡಲಾಗಿತ್ತು. ಎರಡು ತಿಂಗಳಾದರೂ ಬೇಡಿಕೆ ಈಡೇರಿಲ್ಲ. ಆದ್ದರಿಂದ ಬುಧವಾರದಿಂದ ಹೋರಾಟ ಆರಂಭಿಸಲಾಗುವುದು ಎಂದು ಹೇಳಿದ್ದಾರೆ.

ಮೊದಲ ಹಂತದಲ್ಲಿ ಆನ್‌ಲೈನ್ ಸೇವೆಗಳನ್ನು ಸ್ಥಗಿತಗೊಳಿಸಿವುದು, ಸಭೆಗಳಿಗೆ ಗೈರಾಗುವ ಮೂಲಕ ಅಸಹಕಾರ ಚಳವಳಿ ನಡೆಸಲಾಗುವುದು. ನಂತರ ಜಿಲ್ಲಾ ಮಟ್ಟದಲ್ಲಿ ಪ್ರತಿಭಟನೆ ಹಾಗೂ ಬೆಂಗಳೂರು ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಡಿಸೆಂಬರ್‌ಗೆ ನೇಮಕಾತಿ ಪತ್ರ: ಸಚಿವ ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಡಿಸೆಂಬರ್‌ನಲ್ಲಿ ನೇಮಕಾತಿ ಆದೇಶ ನೀಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಹೇಳಿದರು.

ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಂದ ಮಂಗಳವಾರ ಸನ್ಮಾನ ಸ್ವೀಕರಿಸಿದ ನಂತರ ಅವರು ಮಾತನಾಡಿದರು.

'ಮೂರು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. 1,242 ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. 1,208 ಅಭ್ಯರ್ಥಿಗಳನ್ನು ಮೆರಿಟ್ ಮತ್ತು ರೋಸ್ಟರ್ ಆಧಾರದಲ್ಲಿ ಆಯ್ಕೆ ಮಾಡಲಾಗಿದೆ. ನೇಮಕಾತಿ ಪ್ರಕ್ರಿಯೆಗೆ ಯಾವುದೇ ಅಡಚಣೆ ಇಲ್ಲ. ಸಿಂಧುತ್ವ ಪ್ರಮಾಣಪತ್ರ, ಪೊಲೀಸ್ ಪರಿಶೀಲನೆ, ವೈದ್ಯಕೀಯ ಪರಿಶೀಲನಾ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದ್ದೇನೆ' ಎಂದರು.

ಮುಖ್ಯಮಂತ್ರಿ ಸಹಕಾರದಿಂದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಲಾಗಿದೆ. ಭವಿಷ್ಯದ ಕನಸು ಕಟ್ಟಿಕೊಂಡಿದ್ದ ಪ್ರತಿಭಾವಂತರ ಕುಟುಂಬಗಳ ಬದುಕು ಹಸನಾಗಿದೆ. ಆಯ್ಕೆಯಾದವರು ಕಡ್ಡಾಯವಾಗಿ ಗ್ರಾಮೀಣ ಪ್ರದೇಶಕ್ಕೆ ತೆರಳಿ ಸೇವೆ ಸಲ್ಲಿಸಬೇಕು. ನೆಪಗಳನ್ನು ಹೇಳಿಕೊಂಡು ವರ್ಗಾವಣೆಗೆ ಒತ್ತಡ ತರುವ ಕೆಲಸ ಮಾಡಬಾರದು. ಕಷ್ಟಪಟ್ಟು ಕೆಲಸ ಮಾಡಬೇಕು. ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ವಿವಿಧೆಡೆ ಉತ್ತಮ ಮಳೆ: ಬಾಗಿದ ಫಸಲು

ಚಿತ್ರದುರ್ಗ ಜಿಲ್ಲೆಯಲ್ಲಿ ಹತ್ತು ಮನೆಗಳಿಗೆ ಭಾಗಶಃ ಹಾನಿ • ಬಾಳೆ, ಭತ್ತದ ಬೆಳೆ ನಷ್ಟದ ಆತಂಕ

ಪ್ರಜಾವಾಣಿ ವಾರ್ತೆ

ಹೊಸಪೇಟೆ / ಚಿತ್ರದುರ್ಗ / ಮಡಿಕೇರಿ: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಂಗಳವಾರವು ಉತ್ತಮ ಮಳೆಯಾಗಿದೆ. ಚಿಕ್ಕಮಗಳೂರಿನಲ್ಲಿ ಗೋಡೆ ಕುಸಿದು ವೃದ್ಧರೊಬ್ಬರು ಅಸುನೀಗಿದ್ದಾರೆ. ಧಾರಾಕಾರ ಮಳೆಯಿಂದಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ 10 ಮನೆಗಳಿಗೆ ಹಾನಿಯಾಗಿದೆ. ವಿಜಯನಗರ ಜಿಲ್ಲೆಯಲ್ಲಿ ಗಾಳಿಗೆ ಭತ್ತದ ಫಸಲು ಬಾಗಿವೆ.

ವಿಜಯನಗರ ಜಿಲ್ಲೆಯ ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ ಭಾಗದಲ್ಲಿ ಸೋಮವಾರ ರಾತ್ರಿ, ಮಂಗಳವಾರ ಮಳೆಯಾಯಿತು. ಹೂವಿನಹಡಗಲಿಯಲ್ಲಿ ಜೋರುಗಾಳಿಯಿಂದಾಗಿ, ನೂರಾರು ಎಕರೆಯಲ್ಲಿ ಕಟಾವಿಗೆ ಬಂದಿದ್ದ ಭತ್ತದ ಫಸಲು ನೆಲಕಚ್ಚಿತು.

ತುಂಗಭದ್ರಾ ನದಿ ಪಾತ್ರದ ವಿವಿಧ ಗ್ರಾಮಗಳ ವ್ಯಾಪ್ತಿಯಲ್ಲಿಯೂ ಭಾರಿ ಗಾಳಿಯಿಂದಾಗಿ ಭತ್ತದ ಫಸಲು ನೆಲಕ್ಕೆ ಒರಗಿದೆ. ದೇವಗೊಂಡನಹಳ್ಳಿ, ಹುಗಲೂರು, ಸೋಗಿಯಲ್ಲಿ ಬಾಳೆ ಗಿಡಗಳಿಗೆ ಹಾನಿಯಾಗಿದೆ.

'15 ದಿನಗಳಲ್ಲಿ ಭತ್ತ ಕಟಾವು ಮಾಡುತ್ತಿದ್ದೆವು. ಗಾಳಿಗೆ ತೆನೆ ನೆಲಕ್ಕೆ ಬಿದ್ದು ಭತ್ತ ಉದುರಿದೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ' ಎಂದು ಹೊನ್ನೂರಿನ ರೈತ ಎ.ಕೆ.ಹೊನ್ನೂರಪ್ಪ ಅಳಲು ತೋಡಿಕೊಂಡರು.

ಹರಪನಹಳ್ಳಿ ಪಟ್ಟಣದ ತೆಗ್ಗಿನಮಠದಿಂದ ಮೇಗಳಪೇಟೆಗೆ ಹೋಗುವ ರಸ್ತೆ ಜಲಾವೃತಗೊಂಡು ವಾಹನ ಸಂಚಾರಕ್ಕೆ ಅಡಚಣೆಯಾಯಿತು. ದಿಢೀರ್ ಮಳೆ ಸುರಿದಿದ್ದರಿಂದ ಡಾಂಬರು ರಸ್ತೆಗಳಲ್ಲಿಯೇ, ಒಣಗಲು ಹಾಕಿದ್ದ ಧಾನ್ಯಗಳನ್ನು ರಕ್ಷಿಸಿಕೊಳ್ಳುವಲ್ಲಿ ರೈತರು ಪರದಾಡಿದರು.

ಮಡಿಕೇರಿ ಸಿಡಿಲಬ್ಬರದ ಮಳೆ (ಮಡಿಕೇರಿ ವರದಿ): ನಗರ ಹಾಗೂ ಸುತ್ತಮುತ್ತಲ ಪ್ರದೇಶಗಳು, ನಾಪೋಕ್ಲು ವ್ಯಾಪ್ತಿಯಲ್ಲಿ ಮಂಗಳವಾರ ಸಂಜೆ ಗುಡುಗು, ಸಿಡಿಲಬ್ಬರದ ಮಳೆ ಸುರಿಯಿತು. ಒಂದು ಗಂಟೆಗೂ ಮಿಗಿಲು ಮಳೆಯಾಯಿತು. ಗುಡುಗು, ಸಿಡಿಲಿನ ಅಬ್ಬರ ರಾತ್ರಿಯವರೆಗೂ ಮುಂದುವರಿದಿತ್ತು.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಬಂಡೀಪುರ ಸುತ್ತಮುತ್ತ ಸಾಧಾರಣ ಮಳೆಯಾಯಿತು.

ನಿಡಪಳ್ಳಿಯಲ್ಲಿ 16 ಸೆಂ.ಮೀ ಮಳೆ (ಚಿತ್ರದುರ್ಗ ವರದಿ): ಜಿಲ್ಲೆಯ ವಿವಿಧೆಡೆ ಸೋಮವಾರ ರಾತ್ರಿಯಿಂದ ಮಂಗಳವಾರ ಮುಂಜಾನೆವರೆಗೂ ಮಳೆ ಸುರಿದಿದೆ. ಹಿರಿಯೂರು ತಾಲ್ಲೂಕಿನ ಇಕ್ಕನೂರಿನಲ್ಲಿ 8.8 ಸೆಂ.ಮೀ ಮಳೆ ದಾಖಲಾಗಿದೆ. ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣ ಮುಂದುವರಿದಿದೆ.

ಚಿಕ್ಕಜಾಜೂರಿನ ಅರಸನಘಟ್ಟದ ಹಳ್ಳ ತುಂಬಿ ಹರಿಯುತ್ತಿದೆ. ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಜಿಲ್ಲೆಯಾದ್ಯಂತ 10 ಮನೆಗಳು ಭಾಗಶಃ ಜಖಂಗೊಂಡಿವೆ. ಹಿರಿಯೂರು ತಾಲ್ಲೂಕಿನ ಈಶ್ವರಗೆರೆ, ಸುಗೂರಿನಲ್ಲಿ 6 ಸೆಂ.ಮೀ ಹಾಗೂ ಚಿತ್ರದುರ್ಗದಲ್ಲಿ 4 ಸೆಂ.ಮೀ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ನಿಡಪಳ್ಳಿಯಲ್ಲಿ 16 ಸೆಂ.ಮೀ. ಮಳೆಯಾಗಿದೆ.

ಕಲಬುರಗಿಯಲ್ಲಿ ಧಾರಾಕಾರ ಮಳೆ: ಕಲಬುರಗಿ ನಗರ ಹಾಗೂ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಹಲವೆಡೆ ಹಾಗೂ ಚಿತ್ತಾಪುರ ತಾಲ್ಲೂಕಿನ ವಾಡಿಯಲ್ಲಿ ಮಂಗಳವಾರ ಸಂಜೆ ಬಿರುಸಿನ ಮಳೆ ಸುರಿಯಿತು. ಅಫಜಲಪುರ, ವಾಡಿಯಲ್ಲಿ ಸಂಜೆ, ಕಲಬುರಗಿ ನಗರದಲ್ಲಿ ರಾತ್ರಿ ಸುಮಾರು 45 ನಿಮಿಷ ಉತ್ತಮ ಮಳೆ ಸುರಿಯಿತು.

ಮಳೆಯಿಲ್ಲದೇ ಕಂಗಾಲಾಗಿದ್ದ ರೈತರ ಮೊಗದಲ್ಲಿ ಇದರಿಂದ ಮಂದಹಾಸ ಮೂಡಿದೆ. ವಾಡಿ ಸಮೀಪದ ಗ್ರಾಮಗಳಲ್ಲಿ ಹತ್ತಿ ರಾಶಿ ಮಾಡುತ್ತಿದ್ದ ವೇಳೆಯೇ ಮಳೆಯಾಗಿದ್ದರಿಂದ ತೊಯ್ದು ಹೋಗಿತ್ತು.

ಬೆಂಗಳೂರಿನ ಕೆಲವೆಡೆ ಮಂಗಳವಾರ ಧಾರಾಕಾರ ಮಳೆಯಾಗಿದ್ದು, ಜಲಾವೃತ ಸ್ಯಾಂಕಿ ರಸ್ತೆಯಲ್ಲಿ ವಾಹನಗಳು ಸಾಗಿದವು
–ಪ್ರಜಾವಾಣಿ ಚಿತ್ರ

ಗೋಡೆ ಕುಸಿತ: ವೃದ್ಧ ಸಾವು

ಚಿಕ್ಕಮಗಳೂರು: ಕಡೂರು ತಾಲ್ಲೂಕಿನ ಮಚ್ಚೇರಿ ಕೋಡಿಹಳ್ಳಿಯಲ್ಲಿ ಮಳೆಗೆ ಮನೆಯ ಶೌಚಾಲಯದ ಶಿಥಿಲ ಗೋಡೆ ಕುಸಿದು ಲಚ್ಚಾನಾಯ್ಕ್ (80) ಎಂಬವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸೋಮವಾರ ರಾತ್ರಿ ಮಳೆ ಸುರಿದಿತ್ತು. ಮಂಗಳವಾರ ಬೆಳಿಗ್ಗೆ ಶೌಚಾಲಯದಲ್ಲಿ ಇಟ್ಟಿದ್ದ ಕೋಲು ತೆಗೆದುಕೊಳ್ಳಲು ಹೋಗಿದ್ದಾಗ ಅವಘಡ ಸಂಭವಿಸಿದೆ. ಕುಸಿದ ಗೋಡೆಯಡಿ ಸಿಲುಕಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಡಿಲಿಗೆ 22 ಮೇಕೆ ಬಲಿ (ಹೂವಿನಹಡಗಲಿ ವರದಿ): ತಾಲ್ಲೂಕಿನ ಹೊಳಗುಂದಿ ಗ್ರಾಮದಲ್ಲಿ ಮಂಗಳವಾರ ಸಿಡಿಲು ಬಡಿದು 22 ಮೇಕೆಗಳು ಮೃತಪಟ್ಟಿವೆ. ಹೊಳಗುಂದಿಯ ಅಳವುಂಡಿ ಯಲ್ಲಪ್ಪ ಅವರು ಸಾಕಿದ್ದ ಮೇಕೆಗಳನ್ನು ಮೇಯಲು ಅಡವಿಯಲ್ಲಿ ಬಿಡಲಾಗಿತ್ತು.

ಅಲ್ಲಿಯೇ ಸಿಡಿಲು ಬಡಿದು ಸತ್ತಿವೆ. ಸ್ಥಳಕ್ಕೆ ಕಂದಾಯ, ಪಶು ಸಂಗೋಪನೆ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಮೂರು ಜಿಲ್ಲೆಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ಕರಾವಳಿ, ದಕ್ಷಿಣ ಒಳನಾಡು ಹಾಗೂ ಉತ್ತರ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಬುಧವಾರವು ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಶಿವಮೊಗ್ಗ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಬಿರುಸಿನ ಮಳೆಯಾಗುವ ಸಾಧ್ಯತೆಯಿದ್ದು, ಈ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಸೂಚನೆ ನೀಡಲಾಗಿದೆ. ಗದಗ, ಹಾವೇರಿ, ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಮೈಸೂರು, ಮಂಡ್ಯ, ಚಿಕ್ಕಬಳ್ಳಾಪುರ ಜಿಲ್ಲೆಗಳ ಅಲ್ಲಲ್ಲಿ ಮಳೆಯಾಗಬಹುದು ಎಂದು ಇಲಾಖೆಯು ತಿಳಿಸಿದೆ.

ಮಂಗಳವಾರ ಕನಿಷ್ಠ ಉಷ್ಣಾಂಶ ದಾವಣಗೆರೆ ಜಿಲ್ಲೆಯಲ್ಲಿ 19 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಗ್ರಾ.ಪಂ. ನೌಕರರು, ಪಾದಚಾರಿ ಮಾರ್ಗದಲ್ಲಿ ವಿಶ್ರಾಂತಿ ಪಡೆದರು
– ಪ್ರಜಾವಾಣಿ ಚಿತ್ರ

₹ 31 ಸಾವಿರ ವೇತನಕ್ಕೆ ಆಗ್ರಹ ಗ್ರಾ.ಪಂ. ನೌಕರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನಿಷ್ಠ ₹ 31 ಸಾವಿರ ವೇತನ ಹಾಗೂ ₹ 6 ಸಾವಿರ ಪಿಂಚಣಿ ನಿಗದಿಪಡಿಸಬೇಕು' ಎಂದು ಆಗ್ರಹಿಸಿ ರಾಜ್ಯದ ಗ್ರಾಮ ಪಂಚಾಯಿತಿಗಳ ನೌಕರರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

'ಗ್ರಾ.ಪಂ.ಗಳಲ್ಲಿ ಕರ ವಸೂಲಿಗಾರರು, ಕ್ಲರ್ಕ್, ಡಾಟಾ ಎಂಟ್ರಿ ಆಪರೇಟರ್ಸ್, ನೀರುಗಂಟಿಗಳು, ಜವಾನ್, ಸ್ವಚ್ಛತಾಗಾರರು ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರೂ ಸರ್ಕಾರಿ ನೌಕರರೆಂದು ಘೋಷಿಸಬೇಕು. ಮರಣ ಹೊಂದಿರುವ ನೌಕರರ ಕುಟುಂಬದ ಸದಸ್ಯರಿಗೆ ಅನುಕಂಪದ ನೌಕರಿ ನೀಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಜನಸಂಖ್ಯೆಗೆ ಆಧರಿಸಿ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸಬೇಕು. ಲೆಕ್ಕ ಸಹಾಯಕ ಹುದ್ದೆ ಸೃಷ್ಟಿಸಬೇಕು. ಸೇವಾ ಹಿರಿತನ ಪರಿಗಣಿಸಿ ವೇತನ ಹೆಚ್ಚಳ ಮಾಡಬೇಕು' ಎಂದು ಒತ್ತಾಯಿಸಿದರು.

'ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಹಲವು ಬಾರಿ ಪ್ರತಿಭಟನೆ ನಡೆಸಲಾಗಿದೆ. ಮುಖ್ಯಮಂತ್ರಿ ಹಾಗೂ ಸಚಿವರಿಗೂ ಮನವಿ ಸಲ್ಲಿಸಲಾಗಿದೆ. ಆದರೆ, ಇದುವರೆಗೂ ನಮ್ಮ ಬೇಡಿಕೆ ಈಡೇರಿಲ್ಲ. ಇದೇ ಕಾರಣಕ್ಕೆ ಬೆಂಗಳೂರು ಚಲೊ ಹಮ್ಮಿಕೊಳ್ಳಲಾಗಿದೆ. ಮುಂಬರುವ ದಿನಗಳಲ್ಲಿ ಬೇಡಿಕೆ ಈಡೇರಿಸದಿದ್ದರೆ, ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದು ಪ್ರತಿಭಟನಕಾರರು ಎಚ್ಚರಿಸಿದರು.

ಸಿ.ಎಸ್. ಷಡಾಕ್ಷರಿ ವರ್ಗಾವಣೆ

ಬೆಂಗಳೂರು: ಶಿವಮೊಗ್ಗ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದ ಜಂಟಿ ನಿರ್ದೇಶಕರ ಕಚೇರಿಯ ಲೆಕ್ಕಾಧೀಕ್ಷಕ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರನ್ನು ಕೋಲಾರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಲೆಕ್ಕಾಧೀಕ್ಷಕ ಹುದ್ದೆಗೆ ಮಂಗಳವಾರ ವರ್ಗಾವಣೆ ಮಾಡಲಾಗಿದೆ.

ಷಡಾಕ್ಷರಿ ಅವರನ್ನು ವರ್ಗಾವಣೆ ಮಾಡಿರುವ ಕುರಿತು ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರಿಗೆ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಪತ್ರದ ಮೂಲಕ ಮಾಹಿತಿ ನೀಡಿದ್ದಾರೆ.

ಸಿಬ್ಬಂದಿ ಕೊರತೆ: ಪಿಐಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವೈದ್ಯಕೀಯ ಸಿಬ್ಬಂದಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕೊರತೆಯ ಕುರಿತಂತೆ ಆಂಗ್ಲ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಆಧರಿಸಿ ಹೈಕೋರ್ಟ್ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಿಸಿಕೊಂಡಿದೆ.

ಮಂಗಳವಾರ ಬೆಳಗ್ಗೆ ದಿನದ ಕೋರ್ಟ್ ಕಲಾಪ ಆರಂಭವಾಗುತ್ತಿದ್ದಂತೆ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠವು ಈ ವಿಷಯಕ್ಕೆ ಸಂಬಂಧಿಸಿದಂತೆ ಆಂಗ್ಲ ದಿನ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ವರದಿಯನ್ನು ಮುಕ್ತ ನ್ಯಾಯಾಲಯದಲ್ಲಿ ಉಲ್ಲೇಖಿಸಿತು.

'ರಾಜ್ಯದಲ್ಲಿ 16,500 ವೈದ್ಯಕೀಯ ಸಿಬ್ಬಂದಿ ಮತ್ತು 454 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕೊರತೆ ಇದೆ ಎಂಬುದನ್ನು ಈ ವರದಿಯಲ್ಲಿ ವಿವರಿಸಲಾಗಿದೆ. ಇದೊಂದು ಬಹುಮುಖ್ಯ ಸಾರ್ವಜನಿಕ ಹಿತಾಸಕ್ತಿಯ ವಿಚಾರ. ಹಾಗಾಗಿ, ಈ ವಿಚಾರಕ್ಕೆ ಸಂಬಂಧಿಸಿದಂತೆ ಮೊಕದ್ದಮೆ ದಾಖಲಿಸಿಕೊಂಡು ವಿಚಾರಣೆ ಆಲಿಸಲಾಗುವುದು' ಎಂದು ತಿಳಿಸಿತು. ಅಂತೆಯೇ, 'ಈ ಪ್ರಕರಣದಲ್ಲಿ ವಕೀಲ ಶ್ರೀಧರ್ ಪ್ರಭು ಅವರನ್ನು ಅಮಿಕಸ್ ಕ್ಯೂರಿಯನ್ನಾಗಿ ನೇಮಕ ಮಾಡಲಾಗಿದೆ. ಇವರಿಗೆ ಮತ್ತೊಬ್ಬ ಹೈಕೋರ್ಟ್ ವಕೀಲರಾದ ಬಿ.ವಚನ್ ಸಹಾಯ ಮಾಡಲಿದ್ದಾರೆ' ಎಂದೂ ಆದೇಶಿಸಿತು.

ಪ್ರಕರಣವೇನು?: 'ಭಾರತೀಯ ಛೇಂಬರ್ ಆಫ್ ಕಾಮರ್ಸ್ ಇಂಡಸ್ಟ್ರಿ ಒಕ್ಕೂಟವು (ಎಫ್‌ಐಸಿಸಿಐ) ಕಳೆದ ಸೆಪ್ಟೆಂಬರ್‌ನಲ್ಲಿ ವರದಿಯೊಂದನ್ನು ಬಿಡುಗಡೆ ಮಾಡಿದ್ದು, ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ 454 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 16,500 ವೈದ್ಯಕೀಯ ಸಿಬ್ಬಂದಿಯ ಕೊರತೆ ಇದೆ' ಎಂದು ವರದಿಯಲ್ಲಿ ತಿಳಿಸಲಾಗಿದೆ.

ಕೆಇಎ ನೇಮಕಾತಿ ಹಗರಣದ ಆರೋಪಿ: ಪೊಲೀಸರು ಬರುತ್ತಿದ್ದಂತೆ ಅಪಾರ್ಟ್‌ಮೆಂಟ್ ಕಾಂಪೌಂಡ್ ಜಿಗಿದ ಕಿಂಗ್‌ಪಿನ್

ಕೂದಲೆಳೆ ಅಂತರದಲ್ಲಿ ಆರ್‌.ಡಿ.ಪಾಟೀಲ ಪರಾರಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆಯಲ್ಲಿ ಅಭ್ಯರ್ಥಿಗಳಿಗೆ ಬ್ಲೂಟೂತ್ ಡಿವೈಸ್ ಪೂರೈಸಿದ ಪ್ರಕರಣದ ಪ್ರಮುಖ ಆರೋಪಿ ರುದ್ರಗೌಡ ಡಿ. ಪಾಟೀಲ ಪೊಲೀಸರು ಬರುವ ಕೆಲವೇ ಕ್ಷಣಗಳ ಮೊದಲು ಅಪಾರ್ಟ್‌ಮೆಂಟ್ ಹಿಂಭಾಗದ ಕಾಂಪೌಂಡ್ ಮೇಲಿಂದ ಜಿಗಿದು ಸಿನಿಮೀಯ ಶೈಲಿಯಲ್ಲಿ ಪರಾರಿಯಾಗಿದ್ದಾನೆ.

ಕೆಇಎ ಪರೀಕ್ಷೆಯಲ್ಲಿ ಹಣಪಡೆದು ಐವರು ಅಭ್ಯರ್ಥಿಗಳಿಗೆ ಬ್ಲೂಟೂತ್ ಪೂರೈಸಿದ ಆರೋಪದಡಿ ರುದ್ರಗೌಡ ವಿರುದ್ಧ ಅಫಜಲಪುರ, ಅಶೋಕನಗರ ಮತ್ತು ವಿಶ್ವವಿದ್ಯಾಲಯ ಠಾಣೆಗಳಲ್ಲಿ ಪ್ರಕರಣ ದಾಖಲಾಗಿವೆ.

ಅಕ್ಟೋಬರ್ 28ರ ಪರೀಕ್ಷೆಯ ಬಳಿಕ ರುದ್ರಗೌಡ ತಲೆ ಮರೆಸಿಕೊಂಡಿದ್ದ. ನಗರದ ಜೇವರ್ಗಿಯ ರಸ್ತೆಯ ಅಪಾರ್ಟ್‌ಮೆಂಟ್ ಒಂದರಲ್ಲಿ ಉಳಿದುಕೊಂಡಿದ್ದ. ಅಫಜಲಪುರ ಠಾಣೆಯ ಪೊಲೀಸರು ಆತ ತಂಗಿದ್ದ ಅಪಾರ್ಟ್‌ಮೆಂಟ್ ತಲುಪುವ ಕೆಲವೇ ಸೆಕೆಂಡ್‌ಗಳಲ್ಲಿ ಹಿಂಬದಿಯ ಕಾಂಪೌಂಡ್ ಮತ್ತು ಗೇಟ್ ಹಾರಿ ಓಡಿ ಹೋಗಿದ್ದಾನೆ. ಆತ ಪರಾರಿಯಾದ ದೃಶ್ಯಗಳು ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಕಲಬುರಗಿ ನಗರದ ಅಪಾರ್ಟ್‌ಮೆಂಟ್ ಗೇಟ್ ಮೇಲಿಂದ ಜಿಗಿದು, ಕಾಂಪೌಂಡ್ ಹಾರಿ ಪರಾರಿಯಾದ ಕೆಇಎ ನೇಮಕಾತಿ ಅಕ್ರಮದ ಕಿಂಗ್‌ಪಿನ್ ರುದ್ರಗೌಡ ಡಿ.ಪಾಟೀಲ

ಪ್ರಕರಣದ ಕಿಂಗ್‌ಪಿನ್ ಎನ್ನಲಾದ ಆರ್‌.ಡಿ. ಪಾಟೀಲ ನಗರದಲ್ಲೇ ಇದ್ದರೂ ಬಂಧಿಸುವಲ್ಲಿ ವಿಫಲರಾದ ಪೊಲೀಸರ ನಡೆ ಬಗ್ಗೆ ಟೀಕೆಗಳು ವ್ಯಕ್ತವಾಗಿವೆ.

ಅಕ್ಟೋಬರ್ ಮೊದಲ ವಾರದಲ್ಲಿ ಬಸವರಾಜ ಪಾಟೀಲ ಹೆಸರಿನಲ್ಲಿ ₹10 ಸಾವಿರ ಕೊಟ್ಟು ಅಪಾರ್ಟ್‌ಮೆಂಟ್‌ನ ಮನೆಯೊಂದು ಬಾಡಿಗೆ ಪಡೆದಿದ್ದ. ಒಮ್ಮೆ ಮಾತ್ರ ಅಡ್ಡಾದಿಡ್ಡಿಯಾಗಿ ಕಾರು ನಿಲ್ಲಿಸಿದ್ದನ್ನು ಅಲ್ಲಿನ ನಿವಾಸಿಗಳು ನೋಡಿದ್ದರು. ಅದಾದ ಬಳಿಕ ನವೆಂಬರ್ 5ರ ರಾತ್ರಿ 11ಕ್ಕೆ ಬಾಡಿಗೆಯ ಮನೆ ಒಳಹೋದ. ಮರುದಿನ (ನ.6) ಪೊಲೀಸರು ವಿಚಾರಣೆಗೆ ಬಂದಿದ್ದಾಗಲೇ ಸ್ಥಳೀಯರಿಗೆ ಗೊತ್ತಾಗಿದ್ದು ಆತ ಹಗರಣವೊಂದರ ಆರೋಪಿ ರುದ್ರಗೌಡ ಎಂಬುದು.

ನವೆಂಬರ್ 19ರಂದು ನಡೆಯುವ ಪೊಲೀಸ್ ಕಾನ್‌ಸ್ಟೆಬಲ್ ಪರೀಕ್ಷೆಗೂ ಕೆಲವು ಅಭ್ಯರ್ಥಿಗಳಿಂದ ಹಣ ಪಡೆದು ಒಪ್ಪಂದ ಮಾಡಿಕೊಂಡಿದ್ದ. ಹೀಗಾಗಿ, ಅವರಿಗೆ ಬ್ಲೂಟೂತ್ ವ್ಯವಸ್ಥೆ ಮಾಡಿಕೊಡಲು ಕಲಬುರಗಿ ನಗರಕ್ಕೆ ಬಂದು ಅಪಾರ್ಟ್‌ಮೆಂಟ್‌ನಲ್ಲಿ ಉಳಿದುಕೊಂಡಿದ್ದ. ಇಲ್ಲಿಯೇ ಕುಳಿತು ಕೆಇಎ, ಕೆಪಿಎಸ್‌ಸಿ ಪರೀಕ್ಷೆಯಲ್ಲೂ ಅಕ್ರಮ ಎಸಗಿರಬಹುದು ಎಂದು ಶಂಕಿಸಲಾಗಿದೆ.

'ಅಪಾರ್ಟ್‌ಮೆಂಟ್‌ನಿಂದ ತಪ್ಪಿಸಿಕೊಳ್ಳುವ ಮುನ್ನ ರುದ್ರಗೌಡ ಫೋನ್‌ನಲ್ಲಿ ಮಾತನಾಡುತ್ತಿರುವುದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ಬಂಧನಕ್ಕೆ ಪೊಲೀಸರು ಬರುತ್ತಿರುವ ಮಾಹಿತಿಯು ಇಲಾಖೆಯರಿಂದಲೇ ಆತನಿಗೆ ಹೋಗಿರಬಹುದು. ಮುಖ್ಯ ದ್ವಾರದಲ್ಲಿ ಪೊಲೀಸರು ಬರುತ್ತಿದ್ದಂತೆ ಹಿಂಬದಿಯಿಂದ ತಪ್ಪಿಸಿಕೊಂಡು ಹೋಗಲು ಹೇಗೆ ಸಾಧ್ಯ' ಎಂಬ ಪ್ರಶ್ನೆಗಳು ಸಾರ್ವಜನಿಕರಿಂದ ಕೇಳಿಬರುತ್ತಿವೆ.

ನಿರೀಕ್ಷಣಾ ಜಾಮೀನು ಅರ್ಜಿ ವಜಾ: ಮೂರು ಠಾಣೆಗಳಲ್ಲಿ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ರುದ್ರಗೌಡ ಅವರು ವಕೀಲ ಶ್ಯಾಮಸುಂದರ ಮೂಲಕ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ಇಲ್ಲಿನ ಒಂದನೇ ಹೆಚ್ಚುವರಿ ನ್ಯಾಯಾಲಯ ವಜಾಗೊಳಿಸಿದೆ. ನ್ಯಾಯಾಧೀಶ ಮೋಹನ್ ಬಾಡಗಂಡಿ ಅವರು ಅರ್ಜಿಯನ್ನು ವಜಾ ಮಾಡಿದರು. ಸರ್ಕಾರದ ಪರವಾಗಿ ಸಹಾಯಕ ಅಭಿಯೋಜಕ ಪಿ. ನರಸಿಮೂಲು ವಾದ ಮಂಡಿಸಿದ್ದರು.

'ನಗರದಿಂದ ತಪ್ಪಿಸಿಕೊಂಡ ರುದ್ರಗೌಡ ಪತ್ತೆಗೆ ನಾಲ್ಕು ಪೊಲೀಸ್ ತಂಡಗಳು ನಾನಾ ಕಡೆ ಹುಡುಕಾಟ ನಡೆಸುತ್ತಿವೆ' ಎಂದು ಎಸ್‌ಪಿ ಅಡ್ಡೂರು ಶ್ರೀನಿವಾಸಲು ತಿಳಿಸಿದ್ದಾರೆ.

ಕೆಇಎ ನೇಮಕಾತಿ ಹಗರಣದಲ್ಲಿ ಯಾರಾದರೂ ನನ್ನ ನೆಂಟರಿದ್ದರೆ ಬಿಜೆಪಿಯವರು ದಾಖಲೆಗಳನ್ನು ಕೊಡಬೇಕು. ಅದನ್ನು ಬಿಟ್ಟು ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ
ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಐಪಿಎಸ್ ಅಧಿಕಾರಿ ಮಾಹಿತಿ ಕೊಟ್ಟರೂ ಹಿಡಿಯಲು ಆಗಲಿಲ್ಲ. ಕಾಣದ ಶಕ್ತಿ ಇದರ ಹಿಂದೆ ಕೆಲಸ ಮಾಡುತ್ತಿದ್ದು, ಸಚಿವರೇ ಆರ್‌. ಡಿ.ಪಾಟೀಲಗೆ ಬೆಂಬಲ ಕೊಡುತ್ತಿದ್ದಾರೆ
ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯ ಉಪಾಧ್ಯಕ್ಷ

ಪೊಲೀಸರ ನಡುವೆ ಸಮನ್ವಯದ ಕೊರತೆ!

ಆರ್‌.ಡಿ.ಪಾಟೀಲ ವಿರುದ್ಧ ಮೂರು ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ಪ್ರತ್ಯೇಕವಾಗಿ ಶೋಧ ಕಾರ್ಯ ನಡೆಸಲಾಗುತ್ತಿದೆ. ಅಪಾರ್ಟ್‌ಮೆಂಟ್‌ನಲ್ಲಿ ಇರುವ ಖಚಿತ ಮಾಹಿತಿ ಸಿಗುತ್ತಿದ್ದಂತೆ ಗ್ರಾಮೀಣ ಪೊಲೀಸ್ ಮತ್ತು ಪೊಲೀಸ್ ಕಮಿಷನರೇಟ್ ಜಂಟಿಯಾಗಿ ಕಾರ್ಯಾಚರಣೆ ನಡೆಸಿದ್ದರೆ ತಪ್ಪಿಸಿಕೊಳ್ಳುತ್ತಿರಲಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ.

ತುಮಕೂರು ಜಿಲ್ಲೆಯಲ್ಲಿ ದಾಖಲಾಗಿದ್ದ ಪಿಎಸ್‌ಐ ನೇಮಕಾತಿ ಅಕ್ರಮದ ಸಂಬಂಧ 2023ರ ಜನವರಿ 20ರಂದು ರುದ್ರಗೌಡನನ್ನು ಬಂಧಿಸಲು ಅಕ್ಕಮಹಾದೇವಿ ಕಾಲೊನಿಯ ನಿವಾಸಕ್ಕೆ ಸಿಐಡಿ ಪೊಲೀಸರು ತೆರಳಿದ್ದರು. ಆಗ 'ಯಾವ ಕೇಸು, ನನಗೇನೂ ಗೊತ್ತೇ ಇಲ್ಲ' ಎನ್ನುತ್ತ ಸಿಐಡಿ ಪೊಲೀಸರನ್ನು ತಳ್ಳಿ ಪರಾರಿಯಾಗಿದ್ದ. ಹೀಗಾಗಿ, ಮುನ್ನೆಚ್ಚರಿಕೆ ಇಲ್ಲದೆ ಪೊಲೀಸರು ತೆರಳಿದ್ದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ಲೋಕಸಭೆ ಚುನಾವಣೆ ಕುರಿತು ಮಾತುಕತೆ: ನಾಯಕರ ಸಮಜಾಯಿಷಿ

ಸತೀಶ ಜೊತೆ ಡಿಕೆಶಿ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿಯಾಗಿ ಮಾತುಕತೆ ನಡೆಸಿರುವುದು ಚರ್ಚೆಗೆ ಗ್ರಾಸವಾಗಿದೆ.

ಕ್ರೆಸೆಂಟ್ ರಸ್ತೆಯಲ್ಲಿರುವ ಸತೀಶ ಅವರ ಸರ್ಕಾರಿ ನಿವಾಸಕ್ಕೆ ತೆರಳಿ ಕೆಲಹೊತ್ತು ಸಮಾಲೋಚನೆ ನಡೆಸಿದ ಶಿವಕುಮಾರ್ ಬಳಿಕ ದೆಹಲಿಗೆ ತೆರಳಿದರು. ಇಬ್ಬರ ನಡುವಿನ ಮಾತುಕತೆ ಕಾಂಗ್ರೆಸ್‌ನಲ್ಲಿ ಊಹಾಪೋಹಗಳನ್ನು ಹುಟ್ಟುಹಾಕಿದೆ.

ಈ ಹಿಂದೆ ಸತೀಶ ಅವರು ತಮ್ಮ ತವರು ಜಿಲ್ಲೆ ಬೆಳಗಾವಿಯಲ್ಲಿ ಶಿವಕುಮಾರ್ ಹಸ್ತಕ್ಷೇಪದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಶಿವಕುಮಾರ್ ನೀಡಿದ ಪ್ರಾಮುಖ್ಯತೆ ಮತ್ತು ಬೆಂಬಲ ಸತೀಶ ಅವರ ಅಸಮಾಧಾನಕ್ಕೆ ಕಾರಣವಾಗಿತ್ತು. ಇತ್ತೀಚೆಗೆ ಶಿವಕುಮಾರ್ ಬೆಳಗಾವಿಗೆ ಹೋಗಿದ್ದಾಗಲೂ ಕಾರ್ಯಕ್ರಮದಿಂದ ಅವರು ದೂರ ಉಳಿದಿದ್ದರು.

ಡಿ.ಕೆ. ಶಿವಕುಮಾರ್

ಸತೀಶ ಜಾರಕಿಹೊಳಿ

ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸತೀಶ, 'ಪಕ್ಷ ಸಂಘಟನೆ, ಲೋಕಸಭೆ ಚುನಾವಣೆ, ಜಿಲ್ಲಾ ಘಟಕದ ಅಧ್ಯಕ್ಷರ ಬದಲಾವಣೆಗೆ ಸಂಬಂಧಿಸಿದಂತೆ ಶಿವಕುಮಾರ್ ನನ್ನೊಂದಿಗೆ ಚರ್ಚಿಸಿದ್ದಾರೆ. ಅದನ್ನು ಬಿಟ್ಟು ಬೇರೆ ವಿಷಯ ಚರ್ಚಿಸಿಲ್ಲ' ಎಂದರು. ಸತೀಶ ಜೊತೆ ಮಾತುಕತೆ ನಡೆಸುವ ಮೂಲಕ ಅವರ ಅಸಮಾಧಾನ ನಿವಾರಿಸಲು ಶಿವಕುಮಾರ್ ಮುಂದಾದರು ಎಂದು ಪಕ್ಷದ ಮೂಲಗಳು ಹೇಳಿವೆ.

ದೆಹಲಿಗೆ ತೆರಳಿದ ಉಪ ಮುಖ್ಯಮಂತ್ರಿ

ಮಂಗಳವಾರ ಬೆಳಿಗ್ಗೆ ದೆಹಲಿಗೆ ತೆರಳಿದ ಡಿ.ಕೆ. ಶಿವಕುಮಾರ್, ಅಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಪಕ್ಷ ಸಂಘಟನೆ ಸಂಬಂಧಿಸಿದಂತೆ ಚರ್ಚೆ ನಡೆಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'ಕೆಪಿಸಿಸಿ ಪುನರ್‌ರಚನೆ, ನಿಗಮ- ಮಂಡಳಿಗಳಿಗೆ ನೇಮಕ ಕುರಿತಂತೆ ಖರ್ಗೆ ಜೊತೆ ಶಿವಕುಮಾರ್ ಚರ್ಚೆ ನಡೆಸಲಿದ್ದಾರೆ. ನಿಗಮ- ಮಂಡಳಿಗಳಿಗೆ ನೇಮಿಸುವ ಕುರಿತಂತೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಮಾತುಕತೆ ನಡೆಸಿದ್ದು, 20ಕ್ಕೂ ಹೆಚ್ಚು ಶಾಸಕರ ಹೆಸರು ಪಟ್ಟಿ ಮಾಡಿದ್ದಾರೆ. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಚುನಾವಣಾ ಪ್ರಚಾರದಲ್ಲಿದ್ದಾರೆ. ಹೀಗಾಗಿ ಅವರಿಬ್ಬರನ್ನು ಶಿವಕುಮಾರ್ ಭೇಟಿ ಮಾಡುವ ಸಾಧ್ಯತೆ ಇಲ್ಲ ಎಂದು ಮೂಲಗಳು ಹೇಳಿವೆ.

'ಮೌಢ್ಯ ನಂಬಲ್ಲ: ದೇವರ ನಂಬುವೆ'

ಹಾಸನಾಂಬ ದೇವಿ ದರ್ಶನ ಪಡೆದ ಸಿದ್ದರಾಮಯ್ಯ: ಮಳೆಗಾಗಿ ಪ್ರಾರ್ಥನೆ

ಪ್ರಜಾವಾಣಿ ವಾರ್ತೆ

ಹಾಸನ: 'ಕೆಲವು ಮೌಢ್ಯಗಳನ್ನು ಹಿಂದಿನಿಂದ ಆಚರಿಸಿಕೊಂಡು ಬರಲಾಗಿದೆ. ಸರ್ಕಾರ ಮೌಢ್ಯ ವಿರೋಧಿ ಕಾಯ್ದೆಯನ್ನೂ ಜಾರಿ ಮಾಡಿದೆ. ನಾನು ಪ್ರಜ್ಞಾಪೂರ್ವಕವಾಗಿ ಯಾವುದೇ ಮೌಢ್ಯ ಪಾಲಿಸುವುದಿಲ್ಲ. ಆದರೆ, ದೇವರಲ್ಲಿ ನಂಬಿಕೆ ಹೊಂದಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಮಂಗಳವಾರ ಹಾಸನಾಂಬ ದೇವಿ ದರ್ಶನ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದೇಗುಲದ ಕೆಲವು ಆಚರಣೆಗಳನ್ನು ಹೆಚ್ಚಿನ ಜನರು ನಂಬುವುದನ್ನು ನಾವು ನೋಡುತ್ತಿದ್ದೇವೆ. ರಾಜ್ಯದಲ್ಲಿ ಮುಂಗಾರು ಮಳೆ ಕೈಕೊಟ್ಟಿದ್ದು, ಹಿಂಗಾರು ಮಳೆಯಾದರೂ ಬರಲಿ ಎಂದು ಹಾಸನಾಂಬೆಯಲ್ಲಿ ಪ್ರಾರ್ಥಿಸಿದ್ದೇನೆ' ಎಂದು ತಿಳಿಸಿದರು.

'ಬೇರೆ ಪಕ್ಷದ ಶಾಸಕರನ್ನು ಸೆಳೆಯಲು ಕಾಂಗ್ರೆಸ್ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದೆ. ಬರ ಪರಿಹಾರದ ಹಣ ಬಿಡುಗಡೆಗೆ ಕೇಂದ್ರದ ಕಡೆ ಬೊಟ್ಟು ಮಾಡುತ್ತಿದೆ' ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಬರ ಪರಿಹಾರವಾಗಿ ಹಣ ಕೇಳಬಾರದೇ? ಹಣ ಕೇಳಿದರೆ ಜಗಳವಾಡಿದಂತೆ ಆಗುತ್ತದೆಯೇ' ಎಂದು ಪ್ರಶ್ನಿಸಿದರು.

'ಪ್ರಧಾನಿ ಮೋದಿ ಅವರ ವಿರುದ್ಧ ಸಿದ್ದರಾಮಯ್ಯ ಅವರು ದುರಹಂಕಾರದ ಮಾತುಗಳನ್ನಾಡಿದ್ದಾರೆ' ಎಂಬ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿಕೆಗೆ ತಿರುಗೇಟು ನೀಡಿದ ಅವರು, 'ಪ್ರಧಾನಿ ಮೋದಿ ಅವರು ನನ್ನ ವಿರುದ್ಧ ಮಾತನಾಡಬಹುದೇ? ಮಧ್ಯ ಪ್ರದೇಶದ ಚುನಾವಣೆ ಪ್ರಚಾರ ಸಭೆಯಲ್ಲಿ ಕರ್ನಾಟಕದ ಬಗ್ಗೆ ಮಾತನಾಡುವುದೇಕೆ' ಎಂದು ಪ್ರಶ್ನಿಸಿದರು.

'ಲೋಕಸಭೆ ಚುನಾವಣೆ ಸಂಬಂಧ ಆಯಾ ಲೋಕಸಭಾ ಕ್ಷೇತ್ರಗಳಿಗೆ ವೀಕ್ಷಕರನ್ನು ನೇಮಕ ಮಾಡಲಾಗಿದೆ. ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಸ್ಥಳೀಯ ಶಾಸಕರು, ಕಳೆದ ಬಾರಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳು, ವಿಧಾನ ಪರಿಷತ್ ಸದಸ್ಯರು, ಜಿಲ್ಲಾ ಉಸ್ತುವಾರಿ ಸಚಿವರ ಅಭಿಪ್ರಾಯವನ್ನು ಸಂಗ್ರಹಿಸಿ ಆಯ್ಕೆ ಮಾಡಲಾಗುವುದು' ಎಂದರು.

ಹಾಸನದ ಹಾಸನಾಂಬ ದೇಗುಲಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶೇಷ ಪೂಜೆ ಸಲ್ಲಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಇದ್ದರು

'ಮುಖ್ಯಮಂತ್ರಿ ಲೂಟಿಕೋರ'

ಕುಷ್ಟಗಿ (ಕೊಪ್ಪಳ ಜಿಲ್ಲೆ): 'ಮುಖ್ಯಮಂತ್ರಿ ಸಿದ್ದರಾಮಯ್ಯ ಲೂಟಿಕೋರ, ಅದೊಂದು ಮಂಗ. ಅದಕ್ಕೆ ನನ್ನನ್ನು ಹೋಲಿಸಬೇಡಿ' ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

ಮಂಗಳವಾರ ಕುಷ್ಟಗಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಬಿಜೆಪಿಯಲ್ಲಿ ಈಶ್ವರಪ್ಪ ಸವಕಲು ನಾಣ್ಯ ಎಂದು ಸಿದ್ದರಾಮಯ್ಯ ಈಚೆಗೆ ನೀಡಿದ್ದ ಹೇಳಿಕೆಗೆ ಈ ರೀತಿ ಪ್ರತಿಕ್ರಿಯೆ ನೀಡಿದರು.

'ಸಿದ್ದರಾಮಯ್ಯ ಮರದಿಂದ ಮರಕ್ಕೆ ಹಾರುವ ಮಂಗನಂತೆ. ಹಿಂದೆ ದೇವೇಗೌಡರಿಗೆ ಮೋಸ ಮಾಡಿ ಹೊರಬಂದರು. ಈಗ ಕಾಂಗ್ರೆಸ್ ಹೈಕಮಾಂಡ್ ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡುತ್ತೇವೆ ಎಂದು ಹೇಳಲಿ; ಮತ್ತೆ ಬೇರೆ ಪಕ್ಷಕ್ಕೆ ಮಂಗನಂತೆ ಹೋಗುತ್ತಾರೆ' ಎಂದರು.

ವೇತನ ಪಾವತಿಗೂ ಸರ್ಕಾರದಲ್ಲಿ ಹಣವಿಲ್ಲ: ಯಡಿಯೂರಪ್ಪ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರಿಗೆ ವೇತನ ಪಾವತಿಸಲು ಮತ್ತು ವೇತನ ಪರಿಷ್ಕರಣೆಗೂ ಸರ್ಕಾರದ ಬಳಿ ಹಣವಿಲ್ಲ. ಆದ್ದರಿಂದ ವೇತನ ಆಯೋಗದ ಅವಧಿಯನ್ನು ವಿಸ್ತರಿಸಿದೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ದೂರಿದರು.

ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ರಾಜ್ಯ ಸರ್ಕಾರಿ ನೌಕರರಿಗೆ ಈಗಾಗಲೇ ಮಧ್ಯಂತರ ಪರಿಹಾರ ನೀಡಬೇಕಿತ್ತು. ಆದರೆ, ಸರ್ಕಾರದಲ್ಲಿ ಹಣವೇ ಇಲ್ಲದ ಕಾರಣ ಆಯೋಗದ ಅವಧಿ ವಿಸ್ತರಿಸುವ ಮೂಲಕ ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿದೆ' ಎಂದರು.

ಯಡಿಯೂರಪ್ಪ

ಸರ್ಕಾರದ ಬಳಿ ಬರ ಪರಿಸ್ಥಿತಿ ನಿಭಾಯಿಸಲೂ ಹಣವಿಲ್ಲ. ಗ್ಯಾರಂಟಿ ಬಗ್ಗೆ ಅಬ್ಬರದ ಪ್ರಚಾರ ಮಾಡುತ್ತಿದೆಯೇ ಹೊರತು ಫಲಾನುಭವಿಗಳಿಗೆ ಕೊಡಲು ಹಣವಿಲ್ಲ. ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ಆರ್ಥಿಕವಾಗಿ ದಿವಾಳಿ ಅಂಚಿಗೆ ತಂದು ನಿಲ್ಲಿಸಿದೆ. ಅಧಿಕಾರಕ್ಕೆ ಬಂದ ಆರು ತಿಂಗಳಲ್ಲೇ ಎಲ್ಲಾ ರಂಗಗಳಲ್ಲೂ ವಿಫಲವಾಗಿದೆ. ಸಚಿವರು ಕುಂಟುನೆಪ ಹೇಳಿಕೊಂಡು ಕಾಲಹರಣ ಮಾಡುತ್ತಿದ್ದಾರೆ. ಜನಸಾಮಾನ್ಯರ ಬಗ್ಗೆ ಕಾಳಜಿ ಮತ್ತು ಕಳಕಳಿ ಈ ಸರ್ಕಾರಕ್ಕೆ ಇಲ್ಲ ಎಂದು ಕಿಡಿಕಾರಿದರು.

'ಅಭಿವೃದ್ಧಿ ಕೆಲಸಕ್ಕೆ ಒಂದು ಪೈಸೆ ಬಿಡುಗಡೆ ಮಾಡದೇ, ಇಲ್ಲಸಲ್ಲದ ನೆಪಗಳನ್ನು ಹೇಳುತ್ತಿದ್ದಾರೆ. ನಮ್ಮ ಸರ್ಕಾರದ ಅವಧಿಯಲ್ಲಿ ಕರ್ನಾಟಕ ಅಭಿವೃದ್ಧಿ ಹೊಂದಿದ ರಾಜ್ಯವಾಗಿತ್ತು. ಈಗ ಹಿಮ್ಮುಖವಾಗಿ ಚಲಿಸುತ್ತಿದೆ' ಎಂದು ಟೀಕಿಸಿದರು.

ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಬಿಜೆಪಿ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿಯೋನಿಕ್ಸ್ ಭ್ರಷ್ಟಾಚಾರ ಮತ್ತು ಕೆಇಎ ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಕ್ಷಣವೇ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಒತ್ತಾಯಿಸಿದೆ.

ಕೆಇಎ ಪರೀಕ್ಷಾ ಅಕ್ರಮದಲ್ಲಿ ಪ್ರಿಯಾಂಕ್ ಅವರ ಪಾತ್ರದ ಕುರಿತು ಸಿಬಿಐ ತನಿಖೆಗೆ ಗೃಹ ಸಚಿವರು ಶಿಫಾರಸು ಮಾಡಬೇಕು ಎಂದು ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಎಂ.ಜಿ.ಮಹೇಶ್ ಒತ್ತಾಯಿಸಿದ್ದಾರೆ.

ಭಾರತ ಚುನಾವಣಾ ಆಯೋಗ
ಮುಖ್ಯ ಚುನಾವಣಾಧಿಕಾರಿ
ಕರ್ನಾಟಕ

ELECTION COMMISSION OF INDIA
CHIEF ELECTORAL OFFICER
KARNATAKA

ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ-2024

ನಿಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ಇಂದೇ ಪರಿಶೀಲಿಸಿ

ದಿನಾಂಕ: 09-12-2023 ರವರೆಗೆ

ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ/ಬದಲಾವಣೆ ಮಾಡಬಯಸಿದ್ದಲ್ಲಿ Voter Helpline Application ಡೌನ್ ಲೋಡ್ ಮಾಡಿಕೊಂಡು ಅಥವಾ https://voters.eci.gov.in ವೆಬ್ ಸೈಟ್ ಗೆ ಲಾಗಿನ್ ಆಗಿ ಆನ್ ಲೈನ್ ಮೂಲಕ ಸಲ್ಲಿಸಬಹುದು ಅಥವಾ ಸಂಬಂಧಿಸಿದ ಬೂತ್ ಮಟ್ಟದ ಅಧಿಕಾರಿ ಅಥವಾ ಮತದಾರರ ನೋಂದಣಾಧಿಕಾರಿ ಕಛೇರಿಗೆ ಭೇಟಿ ನೀಡಿ ಸಂಪರ್ಕಿಸಬಹುದು.

ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಲು ವರ್ಷಕ್ಕೆ ಒಂದಲ್ಲ ಈಗ ನಾಲ್ಕು (4) ಅರ್ಹತಾ ದಿನಾಂಕಗಳು

ಜನವರಿ 1 | ಏಪ್ರಿಲ್ 1 | ಜುಲೈ 1 | ಅಕ್ಟೋಬರ್ 1

: ನಿಮಗೆ ಅವಶ್ಯವಿರುವ ಈ ಕೆಳಕಂಡ ಅರ್ಜಿ ನಮೂನೆಗಳನ್ನು ಆಯ್ಕೆ ಮಾಡಿಕೊಳ್ಳಿ :

ನಮೂನೆ 6 – ಹೊಸ ಮತದಾರರ ನೋಂದಣಿಗಾಗಿ
ನಮೂನೆ 7 – ಮತದಾರರ ಪಟ್ಟಿಯಿಂದ ಹೆಸರನ್ನು ತೆಗೆದು ಹಾಕಲು
ನಮೂನೆ 6ಬಿ – ಆಧಾರ್ ಸಂಖ್ಯೆಯನ್ನು ಮತದಾರರ ಗುರುತಿನ ಚೀಟಿಯೊಂದಿಗೆ ಲಿಂಕ್ ಮಾಡಲು
ನಮೂನೆ 8 – ವಿಳಾಸ ಬದಲಾವಣೆ, ಬದಲಿ ಮತದಾರರ ಗುರುತಿನ ಚೀಟಿ ನೀಡುವಿಕೆಗಾಗಿ, ಮತದಾರರ ಪಟ್ಟಿಯಲ್ಲಿನ ನಮೂದುಗಳ ತಿದ್ದುಪಡಿಗಳಿಗಾಗಿ, ಅಂಗವಿಕಲ ವ್ಯಕ್ತಿಯನ್ನು ಮತದಾರರ ಪಟ್ಟಿಯಲ್ಲಿ ಗುರುತಿಸಲು.

: ವಿಶೇಷ ನೋಂದಣಿ ಅಭಿಯಾನದ ದಿನಾಂಕಗಳು :

18-11-2023 (ಶನಿವಾರ) | 19-11-2023 (ಭಾನುವಾರ) | 02-12-2023 (ಶನಿವಾರ) | 03-12-2023 (ಭಾನುವಾರ)

ಸ್ಥಳ : ಎಲ್ಲಾ ಮತಗಟ್ಟೆ ಕೇಂದ್ರಗಳಲ್ಲಿ, ಸಮಯ : ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ

ಪ್ರಕಟಣೆ: ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ

ಮತದಾರರ ಉಚಿತ ಸಹಾಯವಾಣಿ 1950

'ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ'
'Nothing Like Voting, I Vote for Sure'

ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಂಡು ನಿಮ್ಮ ವಿವರಗಳನ್ನು ಪರಿಶೀಲಿಸಿ
Register online and check your details
https://voterportal.eci.gov.in

ಡೌನ್‌ಲೋಡ್ / Download
Voter Helpline App

#AllToPoll
ceokarnataka
ceo.karnataka.gov.in

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ಬಳ್ಳಾರಿ.

ಸಂಖ್ಯೆ: ರಾಬಕೊವಿಹಾಒ/ಆಡಳಿತ/ನೇಮಕಾತಿ/2001/2023–24 ದಿನಾಂಕ: 06.11.2023

ನೇಮಕಾತಿ ಪ್ರಕಟಣೆ

ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ಬಳ್ಳಾರಿ. ಇದರ ವಿವಿಧ ವೃಂದದಲ್ಲಿ ಖಾಲಿ ಇರುವ ಒಟ್ಟು 63 ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಒ218 ಸಿಸಿಬಿ 2023, ಬೆಂಗಳೂರು, ದಿನಾಂಕ: 06.10.2023 ರನ್ವಯ ಅನುಮೋದಿಸಿದಂತೆ ಒಕ್ಕೂಟದಲ್ಲಿ ನೇಮಕಾತಿ ಮೂಲಕ ಭರ್ತಿ ಮಾಡಲು ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಹುದ್ದೆ ಹೆಸರು	ವೇತನ ಶ್ರೇಣಿ ರೂ.	ಒಟ್ಟು ಹುದ್ದೆಗಳ ಸಂಖ್ಯೆ	371ಜೆ ಸ್ಥಳೀಯ ಹುದ್ದೆಗಳು	371ಜೆ ಸ್ಥಳಿಯೇತರ ಹುದ್ದೆಗಳು
1	ಉಪ ವ್ಯವಸ್ಥಾಪಕರು (ಶೀಖರಣೆ)	56800–99600	02	01	01
2	ಉಪ ವ್ಯವಸ್ಥಾಪಕರು (ಎಫ್ & ಎಫ್)	56800–99600	01	01	–
3	ಉಪ ವ್ಯವಸ್ಥಾಪಕರು (ಮಾರುಕಟ್ಟೆ)	56800–99600	01	01	–
4	ಉಪ ವ್ಯವಸ್ಥಾಪಕರು (ವಿತ್ತ)	56800–99600	01	01	–
5	ಉಪ ವ್ಯವಸ್ಥಾಪಕರು (ಖರೀದಿ)	56800–99600	01	01	–
6	ಸಹಾಯಕ ವ್ಯವಸ್ಥಾಪಕರು (ಎ.ಹೆಚ್/ಎ.ಐ)	52650–97100	09	07	02
7	ಸಹಾಯಕ ವ್ಯವಸ್ಥಾಪಕರು (ಎಫ್& ಎಫ್)	52650–97100	01	01	–
8	ಸಹಾಯಕ ವ್ಯವಸ್ಥಾಪಕರು (ವಿತ್ತ)	52650–97100	01	01	–
9	ಸಹಾಯಕ ವ್ಯವಸ್ಥಾಪಕರು (ಎಂ.ಐ.ಎಸ್)	52650–97100	01	01	–
10	ಸಹಾಯಕ ವ್ಯವಸ್ಥಾಪಕರು (ಆಡಳಿತ)	52650–97100	01	0	01
11	ತಾಂತ್ರಿಕ ಅಧಿಕಾರಿ (ಡಿ.ಟಿ.)	43100–83900	06	05	01
12	ತಾಂತ್ರಿಕ ಅಧಿಕಾರಿ (ಕ್ಯೂ.ಸಿ.)	43100–83900	01	01	–
13	ಮಾರುಕಟ್ಟೆ ಅಧಿಕಾರಿ	43100–83900	02	01	01
14	ಲೆಕ್ಕಾಧಿಕಾರಿ	43100–83900	02	01	01
15	ಸಾರ್ವಜನಿಕ ಸಂಪರ್ಕ ಅಧಿಕಾರಿ	43100–83900	01	01	–
16	ಐ.ಎಂ. ಉಗ್ರಾಣ ಅಧಿಕಾರಿ	43100–83900	01	01	–
17	ಎಂ.ಐ.ಎಸ್./ಸಿಸ್ಟಂ ಅಧಿಕಾರಿ	43100–83900	01	01	–
18	ಮಾರುಕಟ್ಟೆ ಅಧೀಕ್ಷಕರು	40900–78200	02	01	01
19	ಖರೀದಿ/ ಉಗ್ರಾಣ ಅಧೀಕ್ಷಕರು	40900–78200	01	01	–
20	ಡೈರಿ ಸೂಪರ್‌ವೈಸರ್ ದರ್ಜೆ–2	33450–62600	02	02	–
21	ಕ್ಷೇತ್ರ ಸಹಾಯಕರು (ಎಫ್&ಎಫ್)	27650–52650	05	0	01
	ಹಾ.ಉ.ಸ.ಸಂಘಗಳ ಸಿಬ್ಬಂದಿಗೆ			04	–
22	ಕೆಮಿಸ್ಟ್ ದರ್ಜೆ–2	27650–52650	02	01	01
23	ಮಾರುಕಟ್ಟೆ ಸಹಾಯಕ ದರ್ಜೆ–2	27650–52650	01	01	–
24	ಜೂನಿಯರ್ ಸಿಸ್ಟಂ ಆಪರೇಟರ್	27650–52650	01	01	–
25	ಹಿರಿಯ ಚಾಲಕರು	27650–52650	02	02	–
26	ಜೂನಿಯರ್ ಟೆಕ್ನಿಷಿಯನ್	21400–42000	02	02	–
27	ಆಡಳಿತ ಸಹಾಯಕ ದರ್ಜೆ–3	21400–42000	08	03	01
	ಹಾ.ಉ.ಸ.ಸಂಘಗಳ ಸಿಬ್ಬಂದಿಗೆ			04	–
28	ಲೆಕ್ಕ ಸಹಾಯಕ ದರ್ಜೆ–3	21400–42000	02	01	01
29	ಚಾಲಕರು	21400–42000	02	01	01
	ಒಟ್ಟು		63	50	13

ಒಕ್ಕೂಟದಲ್ಲಿ ನೇಮಕಾತಿಗಾಗಿ ದಿನಾಂಕ: 07.11.2023 ರಿಂದ 07.12.2023ರ ವರೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಈ ಕುರಿತು ವಯೋಮಿತಿ, ವಿದ್ಯಾರ್ಹತೆ, ಮೀಸಲಾತಿ, ಅರ್ಜಿ ಶುಲ್ಕ ,ಅರ್ಜಿ ಸಲ್ಲಿಸುವ ವಿಧಾನ, ಆಯ್ಕೆ ವಿಧಾನ ಇತ್ಯಾದಿ ಹೆಚ್ಚಿನ ಮಾಹಿತಿಗಳು ಒಕ್ಕೂಟದ ಅಧಿಕೃತ ಜಾಲ ತಾಣ (WEBSITE) www.rbkmul.in ದಲ್ಲಿ ಲಭ್ಯವಿದ್ದು, ಆಸಕ್ತಿ ಯುಳ್ಳ ಅಭ್ಯರ್ಥಿಗಳು ಸದರಿ ವೆಬ್‌ಸೈಟ್‌ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ಖುದ್ದಾಗಿ/ಅಂಚೆ/ಕೊರಿಯರ್ ಮೂಲಕ ಅರ್ಜಿ ಸಲ್ಲಿಸಲು ಯಾವುದೇ ಅವಕಾಶ ಇರುವುದಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ರಾ.ಬ.ಕೊ. ಮತ್ತು ವಿ. ಜಿಲ್ಲಾ ಹಾ.ಉ.ಸ.ಸಂ.ಒ.ನಿ., ಬಳ್ಳಾರಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

SAUDI ARABIA • REQUIRED FOR AFI COMPANY
3 MONTHS SHUTDOWN PROJECTS - FROM JAN TO MARCH 2024
WALK-IN CLIENT INTERVIEW DURING 3RD WEEK OF NOVEMBER
FREE RECRUITMENT
- HYDRAULIC TECHNICIANS (50) SAR 3500 to 4500
- HYDRAULIC CYLINDER TECHNICIANS (20) SAR 2500 to 3500
- HYDRAULIC PIPE FITTERS (20) SAR 2000 to 3000
- MECHANICAL TECHNICIANS (20) SAR 2500 to 3500

FREE ACCOMMODATION + FREE TRANSPORT • PLEASE APPLY IMMEDIATELY

PAMA INTERNATIONAL
Shop No. 6 & 7, Lake View Apartment, Next to BMC Hospital,
Marol Village Road, Marol Naka, Andheri East, Mumbai - 400059
E-mail: pamathane@gmail.com
Mob: 9619797472 / 9167906005 / 9930813157 / 7715914351
LICENSE NO.: B-1480/MUM/PER/1000+/10018/2022

ಇಂಧನ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ, ಬೆಂಗಳೂರು.

ಸಂಖ್ಯೆ: ಎನರ್ಜಿ 289 ಪಿಎಸ್‌ಆರ್ 2023 ದಿನಾಂಕ: 06.11.2023

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ ಸದಸ್ಯರು (ಕಾನೂನು) ಹುದ್ದೆಗೆ ನೇಮಕಾತಿಗಾಗಿ ಅಧಿಸೂಚನೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ ಸದಸ್ಯರು (ಕಾನೂನು) ಹುದ್ದೆಗೆ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಈ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಇರಬೇಕಾದ ಅರ್ಹತಾ ಮಾನದಂಡಗಳು, ಅರ್ಜಿ ನಮೂನೆ–1 ಹಾಗೂ ಇತರೆ ಮಾಹಿತಿಗಳನ್ನು ಇಂಧನ ಇಲಾಖೆಯ ವೆಬ್‌ಸೈಟ್ ವಿಳಾಸ https://energy.karnataka.gov.in ರಲ್ಲಿ ಪಡೆಯಬಹುದಾಗಿದೆ.

ಅರ್ಜಿಗಳನ್ನು ದಿನಾಂಕ: 11.12.2023 ರ ಸಂಜೆ 5.30 ರೊಳಗಾಗಿ ಭೌತಿಕವಾಗಿ ಅಥವಾ Scanned ದಾಖಲೆಗಳನ್ನು ಅರ್ಜಿಯೊಂದಿಗೆ E-mail ಮೂಲಕ (prs.energy@gmail.com) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕೊಠಡಿ ಸಂಖ್ಯೆ: 236, 2ನೇ ಮಹಡಿ, ವಿಕಾಸ ಸೌಧ, ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರಿಗೆ ಸಲ್ಲಿಸುವುದು.

ಸಹಿ/–
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಇಂಧನ ಇಲಾಖೆ ಮತ್ತು ಸಂಚಾಲಕರು, ಆಯ್ಕೆ ಸಮಿತಿ
E-mail : prs.energy@gmail.com

ವಾ.ಸಾ.ಸಂ.ಇ/ವಾಪ್ರ/2020/ಆಕಾರ್/2023–24

ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ

Ref. No: SVES/EST/Backlog/2023-24 ಭಾಲ್ಕಿ–585 328 ಜಿಲ್ಲೆ. ಬೀದರ (ಕರ್ನಾಟಕ)

ಬ್ಯಾಕಲಾಗ್ ಹುದ್ದೆಗಳ ಅಧಿಸೂಚನೆ

ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯ ಅಧೀನದಲ್ಲಿ ಬರುವ ಅನುದಾನಿತ ಪದವಿ ಮಹಾವಿದ್ಯಾಲಯಗಳಲ್ಲಿ ಖಾಲಿ ಇರುವ ಬ್ಯಾಕಲಾಗ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ತುಂಬಿಕೊಳ್ಳಲು ಸರಕಾರಿ ಆದೇಶ ಸಂಖ್ಯೆ: ಇಡಿ/357/ಯುಪಿಸಿ/2002 ಬೆಂಗಳೂರು ದಿನಾಂಕ 19–12–2002 ಮತ್ತು ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾಶಿಇ/112/ಬ್ಯಾಕಲಾಗ/2011–12/ನೇವಿ–2(ಭಾಗ–24) ದಿನಾಂಕ 26–06–2019 ಹಾಗೂ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಕಲಬುರಗಿ ಇವರ ಆದೇಶ ಸಂಖ್ಯೆ: ಕಾಶಿಇ/ಪ್ರಾಕಕ/91/ಬ್ಯಾಕಲಾಗ/1/2019–20 ದಿನಾಂಕ 30–06–2019 ರಂದು ಅನುಮತಿ ನೀಡಿರುವ ಪ್ರಯುಕ್ತ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ.

ಕ್ರ.ಸ.	ವಿಷಯ/ಹುದ್ದೆ	ಹುದ್ದೆಗಳ ಸಂಖ್ಯೆ	ಮೀಸಲಾತಿ/ ಕೆಟಗರಿ	ವಯೋಮಿತಿ	ವಿದ್ಯಾರ್ಹತೆ
1	ರಸಾಯನಶಾಸ್ತ್ರ ಸಹ ಪ್ರಾಧ್ಯಾಪಕರು	01	ಎಸ.ಸಿ (ಪ.ಜಾತಿ)	ಕನಿಷ್ಟ 22 ವರ್ಷದಿಂದ 45 ವರ್ಷ ಮೀರಿರಬಾರದು	ಎಂ.ಎಸ.ಸಿ ಪರೀಕ್ಷೆಯಲ್ಲಿ ಕನಿಷ್ಟ ಶೇ.50% ಅಂಕಗಳನ್ನು ಹೊಂದಿರಬೇಕು ಮತ್ತು ಎನ್.ಇ.ಟಿ/ಎಸ್.ಎಲ್.ಇ.ಟಿ ಅಥವಾ ಪಿ.ಎಚ್.ಡಿ ಪದವಿಯನ್ನು ಹೊಂದಿರಬೇಕು
2	ಗುಮಾಸ್ತ–ಕಮ್–ಬೆರಳಚ್ಚುಗಾರರು	01	ಎಸ.ಟಿ (ಪ.ಪಂಗಡ)	ಕನಿಷ್ಟ 18 ವರ್ಷದಿಂದ 40 ವರ್ಷ ಮೀರಿರಬಾರದು	1. ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಅಥವಾ ಮೂರು ವರ್ಷದ ಕಮರ್ಷಿಯಲ್ ಪ್ರಾಕ್ಟಿಸ್ ಡಿಪ್ಲೊಮಾ ಹೊಂದಿರಬೇಕು 2. ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯವರು ನಡೆಸುವ ಕನ್ನಡ ಸೀನಿಯರ ಗ್ರೇಡ ಬೆರಳಚ್ಚು ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು

* ಅರ್ಹ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆ, ಜಾತಿ ಪ್ರಮಾಣ ಪತ್ರ ಹಾಗೂ ಸಂಬಂಧಪಟ್ಟ ಅವಶ್ಯಕ ದಾಖಲೆಗಳ ಪ್ರತಿಯೊಂದಿಗೆ ಲಗತ್ತಿಸಿ ಮಾನ್ಯ ಕಾರ್ಯದರ್ಶಿಗಳು, ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ, ಭಾಲ್ಕಿ ಇವರ ಹೆಸರಿನಲ್ಲಿ ರೂ.500/– ಡಿ.ಡಿ.ಯೊಂದಿಗೆ ಅರ್ಜಿ ಸಲ್ಲಿಸಬೇಕು. ಅರ್ಜಿಯ ಒಂದು ಪ್ರತಿಯನ್ನು ಮಾನ್ಯ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಕಲಬುರಗಿ ಇವರಿಗೆ ಸಲ್ಲಿಸಬೇಕು.

* ಅರ್ಜಿಯನ್ನು ಪ್ರಕಟಗೊಂಡ ದಿನಾಂಕದಿಂದ 21 ದಿವಸದೊಳಗಾಗಿ ಕಚೇರಿ ವೇಳೆಯೊಳಗೆ ಮಾನ್ಯ ಕಾರ್ಯದರ್ಶಿಗಳು, ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ, ಬಿ.ಕೆ.ಐ.ಟಿ ಕ್ಯಾಂಪಸ್, ಭಾಲ್ಕಿ–585 328, ಜಿಲ್ಲೆ ಬೀದರ ಈ ವಿಳಾಸಕ್ಕೆ ಸಲ್ಲಿಸಬೇಕು.

ಷರತ್ತುಗಳು:
1. ಕೊನೆಯ ದಿನಾಂಕದ ನಂತರ ಬಂದಿರುವ ಅರ್ಜಿಗಳನ್ನು ಯಾವದೇ ಕಾರಣ ನೀಡದೆ ತಿರಸ್ಕರಿಸಲಾಗುವುದು.
2. ಈ ಹುದ್ದೆಯನ್ನು ಬ್ಯಾಕಲಾಗ ನೇಮಕಾತಿ ನಿಯಮಗಳಂತೆ ಆಯ್ಕೆ ಮಾಡಲಾಗುವುದು.
3. ಅರ್ಜಿ ಶುಲ್ಕವನ್ನು ಯಾವುದೆ ಕಾರಣಕ್ಕೆ ಹಿಂದಿರುಗಿಸುವುದಿಲ್ಲ.
4. ಆಯ್ಕೆಯಾದ ಅಭ್ಯರ್ಥಿಗಳಿಗೆ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ ಇವರ ಅನುಮೋದನೆ ನಂತರ ನೇಮಕಾತಿ ಆದೇಶ ನೀಡಲಾಗುವುದು.
5. ವಯಕ್ತಿಕ ಸಂದರ್ಶನ ಇರುವುದಿಲ್ಲ. ಅಂಕಗಳ ಜೈಷ್ಟತೆ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದು.

ಸಹಿ/– ಕಾರ್ಯದರ್ಶಿಗಳು
ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ, ಭಾಲ್ಕಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಶಾಂತ ಸಮುದ್ರವು ಉತ್ತಮ ನಾವಿಕನನ್ನು ರೂಪಿಸುವುದಿಲ್ಲ.

–ಫ್ರ್ಯಾಂಕ್ಲಿನ್ ಡಿ. ರೂಸ್‌ವೆಲ್ಟ್

ಅಂಗಾಂಗ ದಾನಿಗಳಿಗೆ ಗೌರವ ಸರ್ಕಾರದ ನಡೆ ಸ್ವಾಗತಾರ್ಹ

ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಮಾನವೀಯ ನೆಲೆಯಲ್ಲಿ ಅಂಗಾಂಗ ದಾನ ಮಾಡಿ, ಇನ್ನೊಬ್ಬರ ಜೀವ ಉಳಿಸಲು ನೆರವಾಗುವ ವ್ಯಕ್ತಿಗಳು ಮತ್ತು ಅವರ ಕುಟುಂಬದವರನ್ನು ಗುರುತಿಸಿ, ಗೌರವಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ ನಡೆ. ಅಂಗಾಂಗ ವೈಫಲ್ಯದಿಂದ ಗಣನೀಯ ಪ್ರಮಾಣದಲ್ಲಿ ರೋಗಿಗಳು ಬದುಕಿನ ಉದ್ದಕ್ಕೂ ನರಳುವುದನ್ನು ಕಾಣುತ್ತಿದ್ದೇವೆ. ಅತ್ಯಂತ ತುರ್ತಿನ ಸಮಯದಲ್ಲಿ ಕಸಿ ಮಾಡುವ ಸಲುವಾಗಿ ಅಂಗಾಂಗ ಸಿಗದೆ ರೋಗಿಗಳು ಜೀವ ಕಳೆದುಕೊಳ್ಳುತ್ತಿರುವ ಪ್ರಕರಣಗಳು ನಿತ್ಯವೂ ನಡೆಯುತ್ತಲೇ ಇವೆ. ಸಮಾಜದಲ್ಲಿ ಅಂಗಾಂಗ ದಾನದ ಅರಿವು ಇಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣ. ಭಾರತದಲ್ಲಿ ಅಂಗಾಂಗ ದಾನಿಗಳ ಸಂಖ್ಯೆ ಪ್ರತಿ ಹತ್ತು ಲಕ್ಷಕ್ಕೆ ಒಂದರಷ್ಟೂ ಇಲ್ಲ. ಅದೇ ಪಶ್ಚಿಮದ ಹಲವು ರಾಷ್ಟ್ರಗಳಲ್ಲಿ ಈ ದಾನಿಗಳ ಸಂಖ್ಯೆ ಪ್ರತಿ ಹತ್ತು ಲಕ್ಷಕ್ಕೆ 40ಕ್ಕಿಂತ ಹೆಚ್ಚಿದೆ. ಕೇಂದ್ರ ಆರೋಗ್ಯ ಇಲಾಖೆಯ ಲೆಕ್ಕಾಚಾರದ ಪ್ರಕಾರ, 2014ರಲ್ಲಿ ಅಂಗಾಂಗ ದಾನಿಗಳ ಸಂಖ್ಯೆ (ಅಸುನೀಗಿದವರೂ ಸೇರಿ) 6,916 ಆಗಿದ್ದರೆ, 2023ರಲ್ಲಿ ಈ ಸಂಖ್ಯೆ 16 ಸಾವಿರಕ್ಕೆ ಏರಿದೆ. ಇದು ಹೇಳಿಕೊಳ್ಳುವಂತಹ ಪ್ರಗತಿಯೇನೂ ಅಲ್ಲ. ಪ್ರಾಣ ಕಳೆದುಕೊಂಡ ಒಬ್ಬ ವ್ಯಕ್ತಿಯಿಂದ ಪಡೆದ ಹೃದಯ, ಮೂತ್ರಪಿಂಡ, ಮೇದೋಜೀರಕ ಗ್ರಂಥಿ, ಶ್ವಾಸಕೋಶ, ಯಕೃತ್ತು, ಕರುಳು, ಮೂಳೆ ಮಜ್ಜೆಯಂತಹ ವಿವಿಧ ಅಂಗಗಳನ್ನು ಕಸಿ ಮಾಡಿ ಎಂಟರಿಂದ ಹತ್ತು ಜನರಿಗೆ ಜೀವ ತುಂಬಬಹುದು. ಜೀವಂತ ದಾನಿಗಳಲ್ಲಿ ಮಹಿಳೆಯರ ಪ್ರಮಾಣವೇ ಅಧಿಕ. ಬೇಕಾದ ಜೀವವೊಂದು ಅಪಾಯ ಎದುರಿಸುತ್ತಿದೆ ಎಂದಾಗ, ಅದು ಪತ್ನಿ, ಸಹೋದರಿ, ಅಮ್ಮ ಯಾರೇ ಆಗಿರಲಿ, ಹೆಣ್ಣುಮಕ್ಕಳಂತೂ ನೆರವಿಗೆ ಸದಾ ಸಜ್ಜಾಗಿ ನಿಲ್ಲುತ್ತಾರೆ. ಜನಸಾಮಾನ್ಯರಿಗೆ ಮಾತ್ರವಲ್ಲ, ವೈದ್ಯವೃತ್ತಿಯಲ್ಲಿ ನಿರತರಾದವರು, ನೀತಿ ನಿರೂಪಕರಲ್ಲೂ ಅಂಗಾಂಗ ದಾನದ ಕುರಿತು ಸರಿಯಾದ ಅರಿವು ಇಲ್ಲ. ಹೀಗಾಗಿ, ಅಸುನೀಗಿದವರ ಅಂಗಾಂಗಗಳು ವ್ಯರ್ಥವಾಗಿ ಮಣ್ಣಾಗುತ್ತಿವೆ. ವಾರಸುದಾರರು ಇಲ್ಲದ ಅನಾಥ ಶವಗಳ ಅಂಗಾಂಗ ಪಡೆಯುವ ಸಂಬಂಧ ಕೂಡ ನಮ್ಮಲ್ಲಿ ಸಮರ್ಪಕ ನೀತಿಗಳಿಲ್ಲ. ಅವುಗಳನ್ನೂ ವ್ಯರ್ಥ ಮಾಡಲಾಗುತ್ತಿದೆ.

ಅಂಗಾಂಗ ದಾನಕ್ಕೆ ಇರುವ ಎಲ್ಲ ಅಡೆತಡೆ ನಿವಾರಣೆಗೆ ಸರ್ಕಾರವು ಪ್ರಬಲ ಇಚ್ಛಾಶಕ್ತಿ ಪ್ರದರ್ಶಿಸಬೇಕು

ಅಂಗಾಂಗ ದಾನಿಯ ಅಂತ್ಯಕ್ರಿಯೆಯನ್ನು ಸರ್ಕಾರಿ ಗೌರವದೊಂದಿಗೆ ಮಾಡಲಾಗುವುದು ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಇತ್ತೀಚೆಗಷ್ಟೇ ಪ್ರಕಟಿಸಿದ್ದಾರೆ. ತಮಗೆ ಪ್ರೀತಿಪಾತ್ರರಾದ ವ್ಯಕ್ತಿಗಳ ಮೆದುಳು ನಿಷ್ಕ್ರಿಯವಾದಾಗ, ಅವರ ಅಂಗಾಂಗಗಳನ್ನು ತಮ್ಮ ನೋವು-ಸಂಕಟವನ್ನು ಮರೆತು ದಾನ ಮಾಡಿದ ಸಂಬಂಧಿಕರನ್ನು ಸಮಾಜ ಕೂಡ ಗೌರವದಿಂದ ಕಂಡಿದೆ. 2008ರಷ್ಟು ಹಿಂದೆಯೇ ದೇಶದಲ್ಲಿ ಮೊದಲ ಬಾರಿಗೆ ಅಂಗಾಂಗ ಕಸಿ ಪ್ರಾಧಿಕಾರ ರಚಿಸಿ ಮಾದರಿ ಹೆಜ್ಜೆ ಇರಿಸಿದ್ದ ತಮಿಳುನಾಡು, ಅಂಗಾಂಗ ದಾನದ ಅರಿವು ಮೂಡಿಸುವಲ್ಲಿಯೂ ಮುಂಚೂಣಿಯಲ್ಲಿ ನಿಂತಿದೆ. ತಮಿಳುನಾಡಿಗೆ ಅಧ್ಯಯನ ತಂಡವೊಂದನ್ನು ಕಳುಹಿಸಿ, ರಾಜ್ಯದಲ್ಲೂ ಅದೇ ಮಾದರಿಯ ನೀತಿ ನಿರೂಪಣೆಗೆ ಕ್ರಮ ಜರುಗಿಸುವುದಾಗಿ ರಾಜ್ಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಅಂಗಾಂಗ ದಾನಿಗಳು ಮತ್ತು ಅವರ ಸಂಬಂಧಿಕರನ್ನು ಗೌರವಿಸುವ ಜತೆಗೆ, ಅಂಗಾಂಗ ದಾನದ ಕುರಿತು ಇರುವ ಮೂಢನಂಬಿಕೆಗಳನ್ನು ಹೋಗಲಾಡಿಸಲು ಧಾರ್ಮಿಕ ಮುಖಂಡರ ಮೂಲಕವೇ ಜಾಗೃತಿ ಮೂಡಿಸುವ ಮಾತುಗಳನ್ನೂ ಅವರು ಆಡಿದ್ದಾರೆ. ಅಂಗಾಂಗ ದಾನದ ಕುರಿತು ಜಾಗೃತಿ ಅಭಿಯಾನ ಆರಂಭಿಸುವುದಷ್ಟೇ ಅಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ ಹೆಚ್ಚಿಸುವ ಕೆಲಸವನ್ನೂ ಮಾಡಲಾಗುವುದು, ಅಂಗ ಕಸಿ ಅಗತ್ಯ ಇಲ್ಲದಂತೆ ಆರೋಗ್ಯಕರ ಜೀವನವಿಧಾನ ರೂಢಿಸಿಕೊಳ್ಳುವಂತೆಯೂ ಅರಿವು ಮೂಡಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ. ಆದರೆ, ಯೋಚನೆಗಳನ್ನು ಹಂಚಿಕೊಂಡಷ್ಟು ಯೋಜನೆಗಳನ್ನು ಅನುಷ್ಠಾನ ಮಾಡುವುದು ಸುಲಭವಲ್ಲ. ಆರೋಗ್ಯ ಇಲಾಖೆಯು ಅಂಗಾಂಗ ದಾನದ ಬಗ್ಗೆ ಜನಜಾಗೃತಿ ಮೂಡಿಸುವ ಕಾರ್ಯವನ್ನು ಗಂಭೀರವಾಗಿ ಪರಿಗಣಿಸಬೇಕು. ಅದೊಂದು ಸಹಜ ನಡೆ ಎನಿಸುವಷ್ಟರ ಮಟ್ಟಿಗೆ ಅಂಗಾಂಗ ದಾನದ ಪ್ರಮಾಣ ಹೆಚ್ಚುವಂತೆ ಆಗಬೇಕು. ಈ ಕುರಿತ ಎಲ್ಲ ಅಡೆತಡೆ ನಿವಾರಣೆಗೆ ಸರ್ಕಾರ ಪ್ರಬಲ ಇಚ್ಛಾಶಕ್ತಿ ಪ್ರದರ್ಶಿಸಬೇಕು. ಆಗಬೇಕಾಗಿರುವ ಕೆಲಸಗಳ ಕುರಿತು ಮಾರ್ಗದರ್ಶನ ಮಾಡಲು ತಜ್ಞರ ಸಮಿತಿಯೊಂದನ್ನು ರಚಿಸಬೇಕು. ದಾನಿಗಳನ್ನು ಗೌರವಿಸುವ ಚಿಂತನೆ ಒಳ್ಳೆಯದು. ಆದರೆ ಅದರ ಜೊತೆಗೆ ಅಂಗಾಂಗ ದಾನಕ್ಕೆ ಪೂರಕವಾದ ಕ್ರಮಗಳ ಪರಿಣಾಮಕಾರಿ ಜಾರಿಯೂ ಅತ್ಯವಶ್ಯ ಎನ್ನುವುದನ್ನು ಕೂಡ ಸರ್ಕಾರ ಮರೆಯಬಾರದು.

ದಿನದ ಟ್ವೀಟ್

ಘೋಷಣೆ ಮೀರಿದ ವಾಸ್ತವ

ಘೋಷಣೆಗಳನ್ನು ಮೀರಿ, ವಾಸ್ತವಿಕ ಅಂಕಿಅಂಶಗಳನ್ನು ಪರಿಗಣಿಸುವುದಾದರೆ, ಭಾರತದ ಅರ್ಥವ್ಯವಸ್ಥೆಯ ಮೂಲಭೂತ ಅಂಶಗಳು ಶಿಥಿಲಗೊಳ್ಳುತ್ತಿರುವುದು ಸ್ಪಷ್ಟವಾಗುತ್ತದೆ. ಯುವಜನರ ನಿರುದ್ಯೋಗದ ಪ್ರಮಾಣ ಸಾರ್ವಕಾಲಿಕ ದಾಖಲೆ ಮಟ್ಟದಲ್ಲಿದೆ. ಶ್ರೀಮಂತರಲ್ಲಿ ಸಂಪತ್ತಿನ ಕ್ರೋಡೀಕರಣವು 1947ರ ಹಿಂದಿನ ಸ್ಥಿತಿಗೆ ಮರಳಿದೆ. ಉಳಿತಾಯ ಮತ್ತು ಹೂಡಿಕೆಯ ಪ್ರಮಾಣವು 20 ವರ್ಷಗಳ ಕನಿಷ್ಠ ಮಟ್ಟಕ್ಕೆ ತಗ್ಗಿದೆ.

ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

ಕಿಡಿನುಡಿ

ರಾವಣ್ ಲೀಲಾ ನಾಟಕದಲ್ಲಿ ಚುನಾವಣಾ ಆಯೋಗವು ಕುಂಭಕರ್ಣನ ಪಾತ್ರ ಮಾಡುತ್ತಿದೆ. ಡ್ರಮ್ ಬಾರಿಸಿ. ವಾಸ್ತವಾಂಶ ತೋರಿಸಿ. ನಿರ್ಲಜ್ಜ ಉಲ್ಲಂಘನೆಗಳ ಬಗ್ಗೆ ಗಮನ ಸೆಳೆಯಿರಿ. ಅಷ್ಟಾದರೂ ಅದು ನಿದ್ದೆಯಿಂದ ಏಳುವುದಿಲ್ಲ.

ಉರ್ವೀಶ್ ಕೊಠಾರಿ, ಲೇಖಕ

25 ವರ್ಷಗಳ ಹಿಂದೆ

ಭಾನುವಾರ, 8-11-1998

• ಅಗತ್ಯ ವಸ್ತುಗಳ ಸಾಗಣೆ ಮೇಲಿನ ನಿರ್ಬಂಧ ರದ್ದು

ನವದೆಹಲಿ, ನ. 7 (ಪಿಟಿಐ, ಯುಎನ್‌ಐ)– ಆಹಾರ ವಸ್ತುಗಳ ಬೆಲೆ ಅಸಾಧಾರಣವಾಗಿ ಏರುತ್ತಿರುವುದನ್ನು ತಡೆಯುವ ಪ್ರಯತ್ನವಾಗಿ ಕೇಂದ್ರ ಸರ್ಕಾರ ರಾಜ್ಯಗಳ ಜತೆ ಸಮಾಲೋಚಿಸಿ 9 ಅಂಶಗಳ ಕಾರ್ಯತಂತ್ರವೊಂದನ್ನು ರೂಪಿಸಿದೆ. ಅಗತ್ಯ ವಸ್ತುಗಳ ಸಾಗಣೆ ಮೇಲಿನ ನಿರ್ಬಂಧ ರದ್ದು ಹಾಗೂ ಜನವರಿ 31ರವರೆಗೆ ಈರುಳ್ಳಿ ರಫ್ತಿನ ಮೇಲಿನ ನಿರ್ಬಂಧವನ್ನು ತೆಗೆದುಹಾಕುವುದು ಈ ಕಾರ್ಯತಂತ್ರದಲ್ಲಿ ಸೇರಿವೆ.

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ತನ್ನ ಮಿತ್ರಪಕ್ಷಗಳಿಂದಲೇ ಟೀಕೆಗೆ ಒಳಗಾಗಿರುವ ಸರ್ಕಾರ ತೀವ್ರ ಕ್ರಮ ಕೈಗೊಳ್ಳಲು ಆರಂಭಿಸಿದೆ.

ಈರುಳ್ಳಿ, ಆಲೂಗಡ್ಡೆ ಮತ್ತಿತರ ಕೃಷಿ ವಸ್ತುಗಳ ಬೆಲೆ ಅನಿರ್ಬಂಧಿತವಾಗಿ ಏರುತ್ತಲೇ ಇರುವುದರಿಂದ ಪ್ರಧಾನಿಯವರ ಸೂಚನೆಯಂತೆ ಕೇಂದ್ರ ಸಂಪುಟ ಕಾರ್ಯದರ್ಶಿ ಪ್ರಭಾತ್ ಕುಮಾರ್ ಅವರು ಇಂದು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ ಜತೆಗೆ ನಾಲ್ಕು ಗಂಟೆ ಚರ್ಚೆ ನಡೆಸಿದರು. ನಂತರ ಸುದ್ದಿಗಾರರ ಜತೆ ಮಾತನಾಡಿ ಅವರು ಈ ವಿಷಯ ತಿಳಿಸಿದರು. ಈ ಕಾರ್ಯ-ತಂತ್ರವನ್ನು ಒಟ್ಟಭಿಪ್ರಾಯದ ಮೂಲಕ ರೂಪಿಸಲಾಗಿದೆ ಎಂದು ಹೇಳಿದರು.

• ಮೂಲಸೌಲಭ್ಯ ಅಭಿವೃದ್ಧಿ ನಿಗಮ ಸ್ಥಾಪನೆಗೆ ನಿರ್ಧಾರ

ಬೆಂಗಳೂರು, ನ. 7– ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಆಶ್ರಯ ಯೋಜನೆಯಡಿ ಹೆಚ್ಚುವರಿಯಾಗಿ ಒಂದು ಲಕ್ಷ ಮನೆಗಳನ್ನು ನಿರ್ಮಿಸಲು, ಅರಣ್ಯ ಇಲಾಖೆಯಲ್ಲಿ ಹೊಸದಾಗಿ 2001 ಸಿಬ್ಬಂದಿ ನೇಮಕ ಮಾಡಿಕೊಳ್ಳಲು ಹಾಗೂ ಕರ್ನಾಟಕ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ಸ್ಥಾಪಿಸಲು ಇಂದು ಇಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

50 ವರ್ಷಗಳ ಹಿಂದೆ

ಗುರುವಾರ, 8-11-1973

• ಉತ್ತರ ಪ್ರದೇಶದ ಮುಖ್ಯಮಂತ್ರಿ ಆಗಿ ಬಹುಗುಣ ಆಯ್ಕೆ

ಲಖನೌ, ನ. 7– ಕೇಂದ್ರದ ಸಂಪರ್ಕ ಖಾತೆ ಸಚಿವರಾಗಿದ್ದ ಹೇಮಾವತೀ ನಂದನ ಬಹುಗುಣ ಅವರು ಇಂದು ಉತ್ತರ ಪ್ರದೇಶ ಕಾಂಗ್ರೆಸ್ ಪಕ್ಷದ ನಾಯಕರಾಗಿ ಸರ್ವಾನುಮತದಿಂದ ಆಯ್ಕೆಯಾದ ನಂತರ, ರಾಜ್ಯಪಾಲ ಅಕ್ಬರ್ ಅಲೀಖಾನ್ ಅವರು ಜನಪ್ರಿಯ ಸರ್ಕಾರ ರಚಿಸಲು ಬಹುಗುಣ ಅವರನ್ನು ಆಹ್ವಾನಿಸಿದರು.

ಇದಕ್ಕೆ ಮುನ್ನ ಕಮಲಾಪತಿ ತ್ರಿಪಾಠಿ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕತ್ವಕ್ಕೆ ನೀಡಿದ ರಾಜೀನಾಮೆ ಅಂಗೀಕೃತವಾಯಿತು.

ಬಹುಗುಣ ಅವರ ಆಯ್ಕೆಯಿಂದ, ನಾಳೆ ಹೊಸ ಸಂಪುಟ ಅಸ್ತಿತ್ವಕ್ಕೆ ಬಂದು, ಐದು ತಿಂಗಳ ಹಿಂದೆ ಜೂನ್ 3ರಂದು ಹೇರಿದ್ದ ರಾಷ್ಟ್ರಪತಿ ಆಡಳಿತವನ್ನು ಕೊನೆಗಾಣಿಸಲು ದಾರಿ ಸುಗಮವಾಗಿದೆ. ನಾಳೆ ಸಂಜೆ 6 ಗಂಟೆಗೆ ಹೊಸ ಸಂಪುಟ ಅಧಿಕಾರ ವಹಿಸಿಕೊಳ್ಳಲಿದೆ.

• ಅಗತ್ಯಕ್ಕೆ ತಕ್ಕಂತೆ ಪೊಲೀಸ್ ದಳದ ಮನೋಧರ್ಮ ಬದಲಾವಣೆಗೆ ಕರೆ

ಬೆಂಗಳೂರು, ನ. 7– ಅಪರಾಧಿಗಳು ಅಪರಾಧವೆಸಗಲು ಅತ್ಯಂತ ಆಧುನಿಕ ವಿಧಾನಗಳನ್ನು ಅನುಸರಿಸುತ್ತಿರುವುದರಿಂದ ಅದನ್ನು ಪತ್ತೆ ಹಚ್ಚಲು ಪೊಲೀಸರೂ ತಕ್ಕ ರೀತಿಯಲ್ಲಿ ಸಿದ್ಧತೆ ಹೊಂದಬೇಕೆಂದು ರಾಜ್ಯಪಾಲ ಮೋಹನಲಾಲ್ ಸುಖಾಡಿಯಾ ಕರೆಯಿತ್ತರು.

ಜನಮತ ಸಮೀಕ್ಷೆಗಳ ಪ್ರಕಾರ ಬಿಜೆಪಿ– ಕಾಂಗ್ರೆಸ್ ನಡುವೆ ತೀವ್ರ ಹಣಾಹಣಿ ಇರಲಿದೆ

ಮಧ್ಯಪ್ರದೇಶ: ಹೇಗಿರಲಿದೆ ಬದಲಾವಣೆ?

ವಿಶ್ಲೇಷಣೆ

ಬಿ.ಎಸ್.ಅರುಣ್

ಈಗ ಚುನಾವಣೆಯ ಗುಂಗಿನಲ್ಲಿರುವ ಐದು ರಾಜ್ಯಗಳ ಪೈಕಿ ಮಧ್ಯಪ್ರದೇಶವು ತುಸು ಭಿನ್ನ ಎನ್ನಬಹುದು. ಏಕೆಂದರೆ, ಬಿಜೆಪಿಯು 'ಆಪರೇಷನ್ ಕಮಲ'ದ ಮೂಲಕ ಕಾಂಗ್ರೆಸ್ ಪಕ್ಷವನ್ನು ಅಧಿಕಾರದಿಂದ ಇಳಿಸಿದ್ದು ಇಲ್ಲಿಯೇ. ಇದಕ್ಕೂ ಮೊದಲು 'ಗ್ವಾಲಿಯರ್‌ನ ಮಹಾರಾಜ' ಜ್ಯೋತಿರಾದಿತ್ಯ ಸಿಂಧಿಯಾ ಅವರನ್ನು ಕಾಂಗ್ರೆಸ್ಸಿನಿಂದ ಬಿಜೆಪಿಗೆ ಸೆಳೆದುಕೊಳ್ಳಲಾಗಿತ್ತು. ಬಿಜೆಪಿ ಯಾವುದೇ ರಾಜ್ಯದಲ್ಲಿ ಇಷ್ಟು ದೊಡ್ಡ ನಾಯಕರೊಬ್ಬರನ್ನು ಸೆಳೆದುಕೊಂಡ ನಿದರ್ಶನ ಇಲ್ಲ. ನಂತರದಲ್ಲಿ ಸಿಂಧಿಯಾ ಅವರು ರಾಜ್ಯಸಭಾ ಸದಸ್ಯರಾದರು, ಕೇಂದ್ರ ಸಚಿವರಾದರು. ಅವರ 22 ಮಂದಿ ಬೆಂಬಲಿಗ ಶಾಸಕರು ಕಾಂಗ್ರೆಸ್ ತೊರೆದರು, ಅವರಲ್ಲಿ 16 ಮಂದಿ ಉಪ ಚುನಾವಣೆಯಲ್ಲಿ ಗೆದ್ದರು. ಇವರಲ್ಲಿ ಬಹುತೇಕರಿಗೆ ಬಿಜೆಪಿಯು ಈ ಬಾರಿಯ ಚುನಾವಣೆಯಲ್ಲಿ ಟಿಕೆಟ್ ನೀಡಿದೆ. ಇನ್ನುಳಿದ ನಾಲ್ಕು ರಾಜ್ಯಗಳಲ್ಲಿ 2018ರಲ್ಲಿ ಜನಾದೇಶ ಪಡೆದ ಪಕ್ಷಗಳು ಅಧಿಕಾರದಲ್ಲಿ ಮುಂದುವರಿದವು.

ಮಧ್ಯಪ್ರದೇಶದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ತೀವ್ರ ಹಣಾಹಣಿ ಇರಲಿದೆ ಎಂಬುದನ್ನು ಬಹುತೇಕ ಜನಮತ ಸಮೀಕ್ಷೆಗಳು ಹೇಳಿವೆ. ಕಮಲ್ ನಾಥ್ ಅವರು ಮುಖ್ಯಮಂತ್ರಿಯಾಗಿದ್ದ 15 ತಿಂಗಳ ಅವಧಿಯನ್ನು ಹೊರತುಪಡಿಸಿದರೆ ಮಧ್ಯಪ್ರದೇಶದಲ್ಲಿ ಬಿಜೆಪಿ ಸರಿಸುಮಾರು 20 ವರ್ಷಗಳಿಂದ ಅಧಿಕಾರದಲ್ಲಿದೆ. ಹೀಗಾಗಿ ಈ ಚುನಾವಣೆಯು ಬಿಜೆಪಿಯ ಮುಂದುವರಿಕೆಯ ಪರೀಕ್ಷೆ. 2005ರಿಂದ ಶಿವರಾಜ್ ಸಿಂಗ್ ಚೌಹಾಣ್ ಅವರು ಮುಖ್ಯಮಂತ್ರಿಯಾಗಿದ್ದಾರೆ –ಕಮಲ್‌ನಾಥ್ ಅವಧಿಯನ್ನು ಹೊರತುಪಡಿಸಿದರೆ, 16ಕ್ಕೂ ಹೆಚ್ಚು ವರ್ಷಗಳಿಂದ ಚೌಹಾಣ್ ಅಲ್ಲಿ ಅಧಿಕಾರದಲ್ಲಿದ್ದಾರೆ.

ಬಿಜೆಪಿ ಹಾಗೂ ಚೌಹಾಣ್ ಅವರ ವಿರುದ್ಧ ಆಡಳಿತ ವಿರೋಧಿ ಅಲೆ ಕಾಣಿಸಲಿದೆಯೇ? ಚೌಹಾಣ್ ಅವರ ಬಗ್ಗೆ ಕೋಪ ಇಲ್ಲ ಎಂದು ವರದಿಗಳು ಹೇಳುತ್ತವೆ. ಆದರೆ ಪಕ್ಷದ ಹಲವು ಶಾಸಕರು ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದಾರೆ. ಹೀಗಿದ್ದರೂ ಬಿಜೆಪಿಯು ಈ ಶಾಸಕರನ್ನು ಕಣಕ್ಕಿಳಿಸಿದೆ. ಈ ಕಾರಣದಿಂದಾಗಿ ಬಿಜೆಪಿ ನಾಯಕರಲ್ಲಿ ಭೀತಿಯೊಂದು ಮನೆ ಮಾಡಿದೆ, ಪಕ್ಷವು ಕಠಿಣ ಸ್ಪರ್ಧೆ ಎದುರಿಸುತ್ತಿದೆ. ಇದು ಪಕ್ಷದ ದೆಹಲಿ ನಾಯಕತ್ವವು ಒಂದಿಷ್ಟು ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕೆ ಕಾರಣವಾಗಿರಬಹುದು.

ಏಳು ಮಂದಿ ಸಂಸದರನ್ನು ಕಣಕ್ಕಿಳಿಸಿದ್ದು ಆ ಮಹತ್ವದ ತೀರ್ಮಾನಗಳಲ್ಲಿ ಒಂದು. ಈ ಏಳು ಮಂದಿಯಲ್ಲಿ ಮೂವರು ಕೇಂದ್ರ ಸಚಿವರು (ನರೇಂದ್ರ ಸಿಂಗ್ ತೋಮರ್, ಪ್ರಹ್ಲಾದ್ ಪಟೇಲ್ ಮತ್ತು ಎಫ್.ಸಿ. ಖುಲಸ್ತೆ). ಈ ತೀರ್ಮಾನವು ಅತ್ಯಂತ ದೊಡ್ಡ ತೀರ್ಮಾನವೂ ಹೌದು. ಇದು ಹಲವು ಪ್ರಶ್ನೆಗಳನ್ನು ಮೂಡಿಸಿದೆ. ಈ ತೀರ್ಮಾನವನ್ನು ಬಿಜೆಪಿ ತೆಗೆದುಕೊಂಡಿದ್ದು ಏಕೆ? ಹೀಗೆ ಮಾಡದೇ ಇದ್ದರೆ ಜಯ ಖಚಿತವಿಲ್ಲ ಎಂದು ಪಕ್ಷ ಭಾವಿಸಿತ್ತೇ? ಇದು ಚೌಹಾಣ್ ಅವರ ನಾಯಕತ್ವಕ್ಕೆ ಹಿಡಿದ ಕೈಗನ್ನಡಿಯೇ? ಇನ್ನು ಐದಾರು ತಿಂಗಳುಗಳಲ್ಲಿ ಎದುರಾಗಲಿರುವ ಲೋಕಸಭಾ ಚುನಾವಣೆಗೆ ಸಿದ್ಧತೆಯೇ? ವಿಧಾನಸಭಾ ಚುನಾವಣೆಯಲ್ಲಿ ಸೋತರೆ ಈ ಸಂಸದರಿಗೆ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ನೀಡುವುದಿಲ್ಲವೇ? ಏಳು ಮಂದಿ ಸಂಸದರನ್ನು ಕಣಕ್ಕಿಳಿಸುವ ಮೊದಲು ಮುಖ್ಯಮಂತ್ರಿ ಜೊತೆ ಸಮಾಲೋಚನೆ ನಡೆದಿತ್ತೇ?

ಏಳು ಮಂದಿ ಸಂಸದರಲ್ಲಿ ಒಬ್ಬರಾಗಿರುವ ರಿತಿ ಪಾಠಕ್ ಅವರನ್ನು ಸಿಧಿ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ಅಲ್ಲಿನ ಹಾಲಿ ಶಾಸಕ ಕೇದಾರನಾಥ್ ಶುಕ್ಲಾ ಅವರ ಬದಲು ರಿತಿ ಅವರಿಗೆ ಟಿಕೆಟ್ ನೀಡಲಾಗಿದೆ. ಆದಿವಾಸಿ ಸಮುದಾಯದ ವ್ಯಕ್ತಿಯೊಬ್ಬರ ಮೇಲೆ ಮೂತ್ರ ಮಾಡಿದ ಆರೋಪದ ಅಡಿಯಲ್ಲಿ ಬಂಧಿತರಾದ ಪ್ರವೇಶ್ ಶುಕ್ಲಾ, ಕೇದಾರನಾಥ್ ಅವರ ಆಪ್ತ. ಈ ಕಾರಣಕ್ಕಾಗಿ ಕೇದಾರನಾಥ್ ಅವರಿಗೆ ಟಿಕೆಟ್ ನಿರಾಕರಿಸಲಾಯಿತು. ಮೂತ್ರ ಮಾಡಿದ ಘಟನೆಯು ದೇಶದಾದ್ಯಂತ ಆಕ್ರೋಶ ಮೂಡಿಸಿತ್ತು, ಬಿಜೆಪಿಗೆ ನಡುಕ ಹುಟ್ಟಿಸಿತ್ತು.

ಮುಖ್ಯಮಂತ್ರಿಯಾಗಿ ನಾಲ್ಕನೆಯ ಅವಧಿಯನ್ನು ಕಂಡ ಚೌಹಾಣ್ ಅವರು ಸಮಾಧಾನದಲ್ಲಿದ್ದಾರೆ ಎನ್ನಲಾಗದು. 2020ರಲ್ಲಿ ಸರ್ಕಾರ ಉರುಳಿದ ನಂತರದಲ್ಲಿ, ಚೌಹಾಣ್ ಅವರನ್ನು ಮುಖ್ಯಮಂತ್ರಿ ಎಂದು ಘೋಷಿಸಲು ಪಕ್ಷದ ವರಿಷ್ಠರಿಗೆ ಮನಸ್ಸಿರಲಿಲ್ಲ. ನಂತರ, ಬಹಳ ದೀರ್ಘ ಅವಧಿಗೆ ಅವರ ಸಂಪುಟ ವಿಸ್ತರಣೆಯ ಹೆಸರುಗಳ ಪಟ್ಟಿಗೆ ಒಪ್ಪಿಗೆ ನೀಡಲಿಲ್ಲ. ಈಗ, ನಾಲ್ಕನೆಯ ಪಟ್ಟಿ ಬಿಡುಗಡೆ ಆಗುವವರೆಗೂ ಚೌಹಾಣ್ ಅವರು ಟಿಕೆಟ್‌ಗೆ ಕಾಯುವಂತೆ ವರಿಷ್ಠರು ಮಾಡಿದರು. ಕಾಂಗ್ರೆಸ್ಸಿನಿಂದ ತೀವ್ರ ಪೈಪೋಟಿ ಎದುರಾಗಬಹುದು ಎಂಬ ವರದಿಗಳು, ಚೌಹಾಣ್ ಅವರ ಸ್ಪರ್ಧೆಯನ್ನು ಖಾತರಿಪಡಿಸಿರಬಹುದು. ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆದರೂ, ಚೌಹಾಣ್ ಅವರು ಮತ್ತೆ ಮುಖ್ಯಮಂತ್ರಿ ಆಗುತ್ತಾರೆ ಎಂಬ ಖಾತರಿ ಇಲ್ಲ.

ಇಲ್ಲಿ ಚೌಹಾಣ್ ಅವರು ಮುಖ್ಯಮಂತ್ರಿ ಹುದ್ದೆಗೆ ಏರಿದ, ಒಬಿಸಿ ಸಮುದಾಯಕ್ಕೆ ಸೇರಿದ ಬಿಜೆಪಿಯ ಮೂರನೆಯ ವ್ಯಕ್ತಿ. ಉಮಾ ಭಾರತಿ ಮತ್ತು ಬಾಬುಲಾಲ್ ಗೌರ್ ಅವರು ಈ ಹುದ್ದೆಗೇರಿದ ಇನ್ನಿಬ್ಬರು ಒಬಿಸಿ ಮುಖಂಡರು. ಜಾತಿ ಜನಗಣತಿಯನ್ನು ನಡೆಸುವುದಾಗಿ ಕಾಂಗ್ರೆಸ್ ಭರವಸೆ ನೀಡಿರುವ ಕಾರಣ, ಟಿಕೆಟ್ ಹಂಚಿಕೆ ಹಾಗೂ ಇತರ ತೀರ್ಮಾನಗಳಲ್ಲಿ ಒಬಿಸಿ ಸಮುದಾಯಗಳ ಬಗ್ಗೆ ಬಿಜೆಪಿಯ ಗಮನವು ಹೆಚ್ಚಾಗಿದೆ. ಬಿಜೆಪಿಯ ದೊಡ್ಡ ಶಕ್ತಿ ಎಂದು ಪರಿಗಣಿತವಾಗಿರುವ ಒಬಿಸಿ ಸಮುದಾಯಗಳ ಜನಸಂಖ್ಯೆಯು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 50ಕ್ಕಿಂತ ಹೆಚ್ಚು. ಈ ರಾಜ್ಯದಲ್ಲಿ ಬುಡಕಟ್ಟು ಸಮುದಾಯಗಳ ಜನಸಂಖ್ಯೆಯೂ ಗಣನೀಯ. ಇವರ ಪ್ರಮಾಣ ಶೇ 23ರಷ್ಟಿದೆ. ಪರಿಶಿಷ್ಟ ಜಾತಿಗಳ ಜನಸಂಖ್ಯೆಯು ಶೇ 17ರಷ್ಟಿದೆ. ಇಲ್ಲಿ ಪರಿಶಿಷ್ಟ ಜಾತಿಗಳಿಗೆ 35 ಸ್ಥಾನಗಳನ್ನು, ಪರಿಶಿಷ್ಟ ಪಂಗಡಗಳಿಗಾಗಿ 47 ಸ್ಥಾನಗಳನ್ನು ಮೀಸಲಿಡಲಾಗಿದೆ. ಮುಸ್ಲಿಮರ ಜನಸಂಖ್ಯೆಯು ಶೇ 8ರಷ್ಟಿದೆ.

ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವುದಾಗಿ ಬಿಜೆಪಿ ಹೇಳಿಕೊಳ್ಳುತ್ತದೆಯಾದರೂ, ಇಲ್ಲಿ ಪಕ್ಷವು ಹಲವು ಉಚಿತ ಕೊಡುಗೆಗಳನ್ನು ಘೋಷಿಸಿದೆ. ಲಾಡ್ಲಿ ಬೆಹ್ನಾ ಯೋಜನೆಯ ಅಡಿಯಲ್ಲಿ ಮಹಿಳೆಯರಿಗೆ ತಿಂಗಳಿಗೆ ₹ 1,000 ನೀಡುವ ಯೋಜನೆಯನ್ನು ಅನುಷ್ಠಾನಕ್ಕೆ ಈಗಾಗಲೇ ತಂದಿದೆ. ರೈತರಿಗೆ ₹ 2,000 ನೀಡುವುದಾಗಿ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ಕಲ್ಪಿಸುವುದಾಗಿ, ಪೊಲೀಸ್ ನೇಮಕಾತಿಯಲ್ಲಿ ಮಹಿಳೆಯರಿಗೆ ಶೇ 30ರಷ್ಟು ಮೀಸಲಾತಿ ಹಾಗೂ ಸರ್ಕಾರಿ ಉದ್ಯೋಗಗಳ ನೇರ ನೇಮಕಾತಿಗಳಲ್ಲಿ ಶೇ 35ರಷ್ಟು ಮೀಸಲಾತಿ ನೀಡುವುದಾಗಿ ಹೇಳಿದೆ. ಆದರೆ ಯಾವುದೇ ಅಲೆಯು ಬಿಜೆಪಿಗೆ ಪೂರಕವಾಗಿ ಕಂಡುಬರುತ್ತಿಲ್ಲ. ಗ್ಯಾರಂಟಿ ಯೋಜನೆಗಳನ್ನು ಘೋಷಿಸುವಲ್ಲಿ ಕಾಂಗ್ರೆಸ್ ಹಿಂದೆ ಬಿದ್ದಿಲ್ಲ. ಅದು ಇಲ್ಲಿ ಕರ್ನಾಟಕದ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡಿದೆ.

ಕಾಂಗ್ರೆಸ್ ಮೇಲುಗೈ ಕಾಣುತ್ತಿದೆಯಾದರೂ, ಪಕ್ಷಕ್ಕೆ ತಳಮಟ್ಟದಲ್ಲಿ ವ್ಯವಸ್ಥಿತವಾದ ಸಂಘಟನಾ ಶಕ್ತಿ ಇಲ್ಲ. ಆದರೆ ಬಿಜೆಪಿಯು ತಳಮಟ್ಟದಲ್ಲಿ ಅತ್ಯಂತ ಶಕ್ತಿಶಾಲಿಯಾದ ಹಾಗೂ ಸುಸಜ್ಜಿತವಾದ ಕಾರ್ಯಕರ್ತರ ಪಡೆಯನ್ನು ಹೊಂದಿದೆ. 74 ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲುವು ಸಾಧ್ಯತೆ ಕ್ಷೀಣ. ಈ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಕಳೆದ ಎರಡು ಬಾರಿ ವಿಧಾನಸಭಾ ಚುನಾವಣೆಗಳಲ್ಲಿ ಗೆದ್ದಿಲ್ಲ. ಹೀಗಿದ್ದರೂ ಪಕ್ಷವು ನಿರುದ್ಯೋಗ, ಬೆಲೆ ಏರಿಕೆ, ಭ್ರಷ್ಟಾಚಾರ, ಮಹಿಳೆಯರ ಸುರಕ್ಷತೆ, ರಸ್ತೆಗಳ ಗುಣಮಟ್ಟ ಕೆಟ್ಟಿರುವ ವಿಷಯಗಳನ್ನು ಪ್ರಸ್ತಾಪಿಸುತ್ತಿದೆ. ಕಮಲ್ ನಾಥ್ ಅವರು ಹಿಂದುತ್ವದ ಪರವಾಗಿ ಹೇಳಿಕೆಗಳನ್ನು ನೀಡುವ ಮೂಲಕ ತಮ್ಮ ಕಡೆ ಜನರ ಗಮನ ಸೆಳೆಯುವ ಯತ್ನ ನಡೆಸಿದ್ದಾರೆ.

2018ರಲ್ಲಿ 46 ಶಾಸಕರು ಶೇ 3ಕ್ಕಿಂತ ಕಡಿಮೆ ಪ್ರಮಾಣದ ಅಂತರದೊಂದಿಗೆ ಗೆಲುವು ಸಾಧಿಸಿದರು. 17 ಶಾಸಕರ ಅಂತರದ ಪ್ರಮಾಣವು ಶೇ 1ಕ್ಕಿಂತ ಕಡಿಮೆ ಆಗಿತ್ತು. 13 ಶಾಸಕರು ಶೇ 1ರಿಂದ ಶೇ 2ರಷ್ಟು ಅಂತರದೊಂದಿಗೆ ಗೆಲುವು ಕಂಡರು. 16 ಶಾಸಕರು ಶೇ 2–3ರಷ್ಟು ಅಂತರ ಕಾಯ್ದುಕೊಂಡಿದ್ದರು. ಈ ಪ್ರವೃತ್ತಿಯು ಈ ಬಾರಿಯೂ ಮುಂದುವರಿಯುವ ಸಾಧ್ಯತೆ ಇದೆ. ಗುಜರಾತ್ ರಾಜ್ಯವು ಬಿಜೆಪಿ ಪಾಲಿಗೆ ಅಭೇದ್ಯ ಕೋಟೆಯಾಗಿ ಪರಿವರ್ತನೆ ಕಾಣುವ ಮೊದಲೇ ಮಧ್ಯಪ್ರದೇಶವು ಬಿಜೆಪಿ, ಜನಸಂಘದ ಪಾಲಿಗೆ ಸಂಘಟನಾತ್ಮಕವಾಗಿ ಬೆನ್ನೆಲುಬಾಗಿ ಇತ್ತು. 2023ನೇ ಇಸವಿಯು ಯಾವುದಾದರೂ ಬದಲಾವಣೆ ತರಲಿದೆಯೇ?

ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ

ಸ್ಟಡಿ ಟೂರ್

• ಮಣ್ಣೆರಾಜು

'ಪಕ್ಷದ ನಾಯಕರ ತಂಡ ನಮ್ಮೂರಿಗೆ ಬರ ಅಧ್ಯಯನಕ್ಕೆ ಬರ್ತಿದೆ. ಎಲ್ರೂ ಬಂದು ಕಷ್ಟ ಹೇಳಿಕೊಳ್ರಿ...' ಚಟ್ನಹಳ್ಳಿ ಗ್ರಾಮಸ್ಥರ ಸಭೆಯಲ್ಲಿ ತಿಮ್ಮಜ್ಜ ಹೇಳಿದ.

'ಕಟ್ಟಿಂಗು, ಶೇವಿಂಗು ಮಾಡಿಸಿಕೊಂಡು ರೇಷ್ಮೆ ಪಂಚೆ ಉಟ್ಟುಕೊಂಡು ಬರ್ತೀನಿ' ಶಿವಲಿಂಗ ಸಡಗರಪಟ್ಟ.

'ಅಲಂಕಾರ ಮಾಡಿಕೊಂಡು ಸಂಭ್ರಮಿಸಲು ಅದು ಊರ ಉತ್ಸವ ಅಲ್ಲ, ಹರಕಲು ಬಟ್ಟೆ, ಕುರುಚಲು ಗಡ್ಡ ಬಿಟ್ಟುಕೊಂಡಿದ್ರೆ ಬರ ಸ್ಟಡಿ ಟೂರಿನ ನಾಯಕರ ಕರುಳು ಚುರುಕ್ ಅನ್ನದೆ, ನಮ್ಮ ಮೇಲೆ ಕರುಣೆ ಬರ್ತದೆ' ಅಂದಳು ಕೆಂಪಕ್ಕ.

'ನಾಯಕರಿಗೆ ಹಾರತುರಾಯಿ ಹಾಕಿ ಆಡಂಬರ ಮಾಡ್ಬೇಡಿ, ಎಳನೀರು ಕೊಚ್ಚಿಕೊಡಿ ಸಾಕು' ಪುಟ್ಟಣ್ಣ ಹೇಳಿದ.

'ಮಳೆ, ಬೆಳೆ ಇಲ್ಲದೆ ಕಷ್ಟದಲ್ಲಿದ್ದೀವಿ. ಕುಡಿಯೋ ನೀರು, ಬೆಳೆ ಪರಿಹಾರ ಕೊಡಬೇಕು, ಗೋಶಾಲೆ ತೆರೆಯಬೇಕು, ಶಾಲೆ ಮಕ್ಕಳಿಗೆ ಬಿಸಿಯೂಟ ಕೊಡುವಂತೆ ಗೋಶಾಲೆ ದನಗಳಿಗೆ ಹಸಿ ಮೇವು ಕೊಡಬೇಕು ಅಂತ ಒತ್ತಾಯಿಸೋಣ' ಸೀನಪ್ಪ ಹೇಳಿದ.

'ಅಧ್ಯಯನ ತಂಡಕ್ಕೆ ಸಲ್ಲಿಸಲು ಸಂಕಷ್ಟಗಳ ವರದಿ ತಯಾರಿಸಿದ್ದೀನಿ, ಇದರ ಕಾಪಿಯನ್ನು ಕೇಂದ್ರ, ರಾಜ್ಯ ಸರ್ಕಾರಕ್ಕೂ ಕಳಿಸ್ತೀನಿ' ಎಂದ ಪುಟ್ಟಾಮಿ.

'ಬ್ಯಾಡ್ ನ್ಯೂಸ್!... ಅಧ್ಯಯನ ತಂಡ ನಮ್ಮೂರಿನ ಪ್ರೋಗ್ರಾಂ ಕ್ಯಾನ್ಸಲ್ ಮಾಡಿದೆ. ನಮ್ಮೂರಿನ ರಸ್ತೆಯಲ್ಲಿ ಮೊಣಕಾಲುದ್ದ ಗುಂಡಿಗಳು ಬಿದ್ದಿವೆ. ತಂಡದ ಕಾರುಗಳು ಗುಂಡಿ ಇಳಿದು ಹತ್ತಲಾಗೋಲ್ಲವಂತೆ...' ಎಂಬ ಮೆಸೇಜ್ ಹೇಳಿದ ಸೂರಿ.

'ರಸ್ತೆ ಸರಿಯಿಲ್ಲದಿದ್ದರೆ ಊರಿಗೆ ರಾಜಕಾರಣಿಯೂ ಬರಲ್ಲ, ಅದೃಷ್ಟವೂ ಬರಲ್ಲ. ಊರಿನ ರಸ್ತೆಯನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡಿಲ್ಲ ಅಂತ ನೆರೆಹೊರೆ ಗ್ರಾಮಸ್ಥರು ಆಡಿಕೊಳ್ಳುವಂತಾಯ್ತು' ತಿಮ್ಮಜ್ಜ ನೊಂದುಕೊಂಡ.

'ಆ ಪಕ್ಷದವರು ಬರದಿದ್ದರೇನಂತೆ, ನಮ್ಮೂರಿನ ಬರ ಅಧ್ಯಯನಕ್ಕೆ ಬನ್ನಿರೆಂದು ಇನ್ನೊಂದು ಪಕ್ಷದ ನಾಯಕರ ಮನವೊಲಿಸೋಣ, ರಸ್ತೆಗುಂಡಿ ಮುಚ್ಚಿ ಊರಿನ ಮಾನ ಕಾಪಾಡೋಣ' ಸಮಾಧಾನ ಹೇಳಿದ ಮಾಲಿಂಗ.

ಸಂಗತ

ಪ್ರಬಲರ ಏಕಸ್ವಾಮ್ಯಕ್ಕೆ ಮಣೆ!

ಹಿಂದುಳಿದ ವರ್ಗಗಳಲ್ಲಿ ಶೇ 80ರಷ್ಟು ಜಾತಿ, ಉಪಜಾತಿಗಳಿಗೆ ಕನಿಷ್ಠ ರಾಜಕೀಯ ಪ್ರಾತಿನಿಧ್ಯವೂ ಸಿಕ್ಕಿಲ್ಲ ಎಂಬುದನ್ನು ಮನಗಾಣಬೇಕಿದೆ

• ವಾದಿರಾಜ್

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ಕುರಿತಂತೆ ನ್ಯಾಯಮೂರ್ತಿ ಕೆ.ಭಕ್ತವತ್ಸಲ ಆಯೋಗ ಐದು ಶಿಫಾರಸುಗಳನ್ನು ಮಾಡಿತ್ತು. ಇವುಗಳಲ್ಲಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟವು ಮೂರನ್ನು ಮಾತ್ರ ಒಪ್ಪಿಕೊಂಡು ಎರಡನ್ನು ತಿರಸ್ಕರಿಸಿದೆ. ಅಂಗೀಕರಿಸಿದ ಶಿಫಾರಸುಗಳಿಗಿಂತ ತಿರಸ್ಕೃತವಾದ ಶಿಫಾರಸುಗಳೇ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಮಹತ್ವದವು ಎನಿಸಿವೆ.

ಗ್ರಾಮ ಪಂಚಾಯಿತಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆವರೆಗೆ (ಬಿಬಿಎಂಪಿ) ಹಿಂದುಳಿದ ವರ್ಗಗಳಿಗೆ ನಿಗದಿ ಮಾಡಲಾಗಿದ್ದ ಮೀಸಲಾತಿಯಲ್ಲಿ ಅಧ್ಯಯನದ ಕೊರತೆಯನ್ನು ಗುರುತಿಸಿ ಸುಪ್ರೀಂ ಕೋರ್ಟ್ ತಕರಾರು ತೆಗೆದಿತ್ತು. ಆ ಕಾರಣಕ್ಕಾಗಿಯೇ ಈ ಆಯೋಗ ರಚಿಸಲಾಗಿತ್ತು. ಆಯೋಗವು 1985ರಿಂದ ರಾಜ್ಯದಲ್ಲಿ ನಡೆಯುತ್ತಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಎಲ್ಲ ಮಗ್ಗುಲುಗಳನ್ನೂ ಪರಿಶೀಲಿಸಿ ಈ ಶಿಫಾರಸುಗಳನ್ನು ಮಾಡಿತ್ತು.

ಸರ್ಕಾರ ಒಪ್ಪಿರುವ ಶಿಫಾರಸುಗಳು: 1. ಹಿಂದುಳಿದ ವರ್ಗಗಳಿಗೆ ಶೇ 33ರಷ್ಟು ಮೀಸಲಾತಿ ನೀಡಿದರೂ ಒಟ್ಟಾರೆ ಮೀಸಲಾತಿ ಶೇ 50 ಮೀರದಂತೆ ಈ ವರ್ಗಗಳ ರಾಜಕೀಯ ಮೀಸಲಾತಿ ಮುಂದುವರಿಸಿಕೊಂಡು ಹೋಗಬೇಕು. 2. ಬಿಬಿಎಂಪಿಯಲ್ಲಿ ಮೇಯರ್, ಉಪಮೇಯರ್ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಿಡಬೇಕು. 3. ಎಲ್ಲಾ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣಾ ಶಾಖೆಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧೀನಕ್ಕೆ ಒಳಪಡಿಸಬೇಕು.

ತಿರಸ್ಕೃತಗೊಂಡಿರುವ ಶಿಫಾರಸುಗಳು: 1. ಸ್ಥಳೀಯ ಸಂಸ್ಥೆಗಳ ಮೀಸಲಾತಿಯಲ್ಲಿ ಈಗಿರುವ ಹಿಂದುಳಿದ ವರ್ಗ 'ಅ' ಮತ್ತು 'ಬ' ಎಂಬ ಎರಡು ಗುಂಪುಗಳ ಬದಲಾಗಿ ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಬೇಕು. 2. ಬಿಬಿಎಂಪಿಯ ಮೇಯರ್, ಉಪಮೇಯರ್‌ಗೆ ಇರುವ 30 ತಿಂಗಳ ಅಧಿಕಾರ ಅವಧಿಯ ಮಾದರಿಯನ್ನು ನಗರಪಾಲಿಕೆಗಳಿಗೂ ವಿಸ್ತರಿಸಬೇಕು.

ಸಚಿವ ಸಂಪುಟವು 'ಒಳವರ್ಗೀಕರಣ' ಆಶಯದ ಶಿಫಾರಸನ್ನೇ ತಿರಸ್ಕರಿಸಿರುವುದು ಗಂಭೀರ ಚರ್ಚೆಗೆ ಕಾರಣವಾಗಬೇಕಿದೆ. ಹಾಗೆ ನೋಡಿದರೆ, ಹಿಂದುಳಿದ ವರ್ಗಗಳ ಮೂಲ ಮೀಸಲಾತಿಯಲ್ಲಿ ಪ್ರವರ್ಗ 1, 2ಎ, 2ಬಿ, 3ಎ, 3ಬಿ ಹೀಗೆ ಐದು ಗುಂಪುಗಳ ವರ್ಗೀಕರಣ ಇದೆ. ಆದರೆ ಇದನ್ನು ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಜಾರಿ ಮಾಡುವಾಗ ಹಿಂದುಳಿದ ವರ್ಗ 'ಅ' ಮತ್ತು 'ಬ' ಎಂದು ಎರಡು ಗುಂಪುಗಳನ್ನಾಗಿ ಮಾತ್ರ ವಿಂಗಡಿಸಲಾಗಿತ್ತು. ಪ್ರವರ್ಗ 1, 2ಎ ಮತ್ತು 2ಬಿಯನ್ನು ಒಳಗೊಂಡ 'ಹಿಂದುಳಿದ ವರ್ಗ ಅ' ಗುಂಪಿಗೆ ಶೇ 26.4 ಮೀಸಲಾತಿ ನಿಗದಿಪಡಿಸಲಾಗಿತ್ತು. ಪ್ರಬಲ ಭೂಒಡೆತನದ ಜಾತಿಗಳಿರುವ 3ಎ ಮತ್ತು 3ಬಿಯನ್ನು 'ಹಿಂದುಳಿದ ವರ್ಗ ಬ' ಎಂದು ಗುರುತಿಸಿ ಶೇ 6.6ರಷ್ಟು ಮೀಸಲಾತಿಯನ್ನು ನಿಗದಿಪಡಿಸಲಾಗಿತ್ತು.

ಈ ಸೂತ್ರ ರೂಪಿಸಿದ್ದು ಜೆ.ಎಚ್.ಪಟೇಲ್ ಅವರು ಮುಖ್ಯಮಂತ್ರಿಯಾಗಿದ್ದಾಗ ನೇಮಿಸಿದ್ದ ಸಿದ್ದರಾಮಯ್ಯ ನೇತೃತ್ವದ ಸಮಿತಿ. ಆದರೆ ಈ ಸೂತ್ರ ಹಿಂದುಳಿದ ವರ್ಗಗಳೊಳಗೆ ಅಧಿಕಾರ ಹಂಚಿಕೆಯ ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಸಫಲವಾಗಿಲ್ಲ ಎಂಬ ಅಂಶವನ್ನು ಭಕ್ತವತ್ಸಲ ಆಯೋಗ ಗುರುತಿಸಿದೆ. ಒಟ್ಟಾರೆ, ಹಿಂದುಳಿದ ವರ್ಗಗಳಲ್ಲಿ 802 ಜಾತಿ, ಉಪಜಾತಿಗಳಿವೆ. ಆದರೆ ಗ್ರಾಮ ಪಂಚಾಯಿತಿಯ ಸದಸ್ಯತ್ವದ ಕನಿಷ್ಠ ರಾಜಕೀಯ ಪ್ರಾತಿನಿಧ್ಯ ಸಿಕ್ಕಿರುವುದು 156 ಜಾತಿ, ಉಪಜಾತಿಗಳಿಗೆ ಮಾತ್ರ. ಅಂದರೆ ಹಿಂದುಳಿದ ವರ್ಗಗಳಲ್ಲಿ ಶೇ 80ರಷ್ಟು ಜಾತಿ, ಉಪಜಾತಿಗಳು ರಾಜಕೀಯ ಪ್ರಾತಿನಿಧ್ಯದಿಂದ ದೂರವೇ ಉಳಿದಿವೆ. ಇವರಲ್ಲಿ ನೂರಾರು ಅಲೆಮಾರಿ, ಅರೆ ಅಲೆಮಾರಿ ಜಾತಿಗಳು, ಸಣ್ಣಪುಟ್ಟ ಕಾಯಕದ ಅನೇಕ ಸಮುದಾಯಗಳಿವೆ. ಈ ವಂಚಿತ ಸಮುದಾಯಗಳಿಗೆ ಕನಿಷ್ಠ ರಾಜಕೀಯ ಪ್ರಾತಿನಿಧ್ಯದ ನ್ಯಾಯ ಸಿಗಬೇಕಾದರೆ ಈಗಿರುವ ಎರಡು ಗುಂಪುಗಳ ಬದಲು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಬೇಕು ಎನ್ನುವುದು ಆಯೋಗದ ಶಿಫಾರಸು.

ಪ್ರವರ್ಗ 1 ಮತ್ತು 2ಎ ಈ ಎರಡನ್ನೂ ಪ್ರತ್ಯೇಕ ಗುಂಪುಗಳನ್ನಾಗಿ ಪರಿಗಣಿಸಿ ತಲಾ ಶೇ 9.9ರ ಮೀಸಲಾತಿ ಕೊಡಬೇಕು. ಉಳಿದಂತೆ 2ಬಿ, 3ಎ, 3ಬಿಯನ್ನು ಎರಡು ಗುಂಪುಗಳನ್ನಾಗಿ ವರ್ಗೀಕರಿಸಿ ತಲಾ ಶೇ 6.6ರ ಮೀಸಲಾತಿ ನಿಗದಿಪಡಿಸಬೇಕೆಂದು ಆಯೋಗ ಹೇಳಿತ್ತು. ಆದರೆ ಈ ಶಿಫಾರಸನ್ನು ಸರ್ಕಾರ ಸಾರಾಸಗಟಾಗಿ ತಿರಸ್ಕರಿಸಿರುವುದು ಸಾಮಾಜಿಕ ನ್ಯಾಯ ಕುರಿತಾದ ಬದ್ಧತೆಯ ಕೊರತೆಯನ್ನು ಎತ್ತಿತೋರಿಸುತ್ತದೆ.

ಹಾಗೆ ನೋಡಿದರೆ, ರಾಜ್ಯ ಸರ್ಕಾರ ಒಂದು ಹೆಜ್ಜೆ ಮುಂದೆ ಹೋಗಿ, 2ಎನಲ್ಲಿರುವ ಮಡಿವಾಳ, ಸವಿತಾ, ಕುಂಬಾರ, ವಿಶ್ವಕರ್ಮ, ದರ್ಜಿಯಂತಹ ಕಾಯಕ ಸಮುದಾಯಗಳನ್ನು ಪ್ರತ್ಯೇಕಿಸಿ ಮತ್ತೊಂದು ಗುಂಪು ರಚಿಸಿದ್ದರೆ ಸಾಮಾಜಿಕ ನ್ಯಾಯವು ಅಂಚಿನ ಜನರವರೆಗೆ ಹೋಗುವ ಅವಕಾಶವಿತ್ತು. ಆದರೆ ಸರ್ಕಾರದ ಈಗಿನ ನಿರ್ಧಾರ ಹಿಂದುಳಿದ ವರ್ಗಗಳ ಒಳಗೆ ಕೆಲವೇ ಪ್ರಬಲ ಜಾತಿಗಳ ಏಕಸ್ವಾಮ್ಯವನ್ನು ಪೋಷಿಸಿಕೊಂಡು ಹೋಗಲು ಬದ್ಧವಾದಂತಿದೆ. ಸುಪ್ರೀಂ ಕೋರ್ಟ್ ಎತ್ತಿದ ತಕರಾರಿಗೆ ಸಂಬಂಧಿಸಿದ ಶಿಫಾರಸನ್ನೇ ಸರ್ಕಾರ ಕೈಬಿಟ್ಟಿರುವುದು ಗಂಭೀರ ಲೋಪವಾಗಿದೆ. ಇತ್ತ ಒಳಮೀಸಲಾತಿ ಬೇಕೆನ್ನುವ ಪರಿಶಿಷ್ಟ ಜಾತಿಗಳವರೂ ಸರ್ಕಾರದ ಈ ನಿರ್ಧಾರದಲ್ಲಿನ ಒಳಸಂದೇಶವನ್ನು ಅರ್ಥಮಾಡಿಕೊಳ್ಳಬಹುದು.

ಲೇಖಕ: ಆರ್‌ಎಸ್‌ಎಸ್ ಕಾರ್ಯಕರ್ತ

ವಾಚಕರ ವಾಣಿ

ಬಿ.ಇಡಿ. ಶಿಕ್ಷಣ: ಅನಿರೀಕ್ಷಿತ ಹೇರಿಕೆ

ವೃತ್ತಿಶಿಕ್ಷಣ ಇಲಾಖೆಯಿಂದ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಂಡ ಸರ್ಕಾರಿ, ಅನುದಾನಿತ ಕಾಲೇಜುಗಳವರೂ ಸೇರಿ 161 ಉಪನ್ಯಾಸಕರು ಮುಂದಿನ ಎರಡು ವರ್ಷಗಳಲ್ಲಿ ಬಿ.ಇಡಿ. ಶಿಕ್ಷಣ ಪಡೆಯುವಂತೆ ಸರ್ಕಾರ ಆದೇಶಿಸಿರುವುದರಿಂದ, ನಿವೃತ್ತಿಯ ಅಂಚಿನಲ್ಲಿರುವ ಕೆಲವು ನೌಕರರು ಆತಂಕಕ್ಕೆ ಒಳಗಾಗಿದ್ದಾರೆ. ಸರ್ಕಾರವು 2012ರಲ್ಲಿ ವೃತ್ತಿಶಿಕ್ಷಣ ಕೋರ್ಸ್ (ಜೆಒಸಿ) ರದ್ದುಪಡಿಸಿ, ಸರ್ಕಾರಿ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿಯನ್ನು 2013ರಲ್ಲಿ ಪದವಿಪೂರ್ವ ಕಾಲೇಜುಗಳಿಗೆ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿಯನ್ನು ಸ್ಥಾನ ಖಾಲಿ ಇದ್ದ ಅನುದಾನಿತ ಕಾಲೇಜುಗಳಿಗೆ 2014ರಲ್ಲಿ (ಒಂದು ವರ್ಷ ತಡವಾಗಿ) ನಿಯೋಜನೆಗೊಳಿಸಿತು. ಆ ಸಂದರ್ಭದಲ್ಲಿ, ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳಿಗೆ ನಿಯೋಜಿತಗೊಂಡ ಉಪನ್ಯಾಸಕರಿಗೆ ಮುಂದೆ ಬಿ.ಇಡಿ. ತರಬೇತಿ ಪಡೆಯಬೇಕು ಎಂಬ ಷರತ್ತು ವಿಧಿಸಿರಲಿಲ್ಲ. ಜೊತೆಗೆ ಅಂದಿನಿಂದ ಇಂದಿನವರೆಗೂ ಪ್ರತಿವರ್ಷ ಇನ್‌ಕ್ರಿಮೆಂಟ್ ಕೂಡ ನೀಡಲಾಗಿದೆ.

ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಿಗೆ ನಿಯೋಜನೆ ಆದ ಎಲ್ಲಾ ಉಪನ್ಯಾಸಕರು ಕಡ್ಡಾಯವಾಗಿ ಬಿ.ಇಡಿ. ತರಬೇತಿ ಪಡೆಯಬೇಕು ಎಂದು ಈಗ ಆದೇಶಿಸಿರುವುದರಿಂದ, ನಿವೃತ್ತಿಯ ಅಂಚಿನಲ್ಲಿರುವವರು ಹಾಗೂ ಅಂಗವಿಕಲ ಉಪನ್ಯಾಸಕರಿಗೆ ತೀವ್ರ ಸಮಸ್ಯೆ ಆಗಲಿದೆ. ಕೆಲವರ ಸೇವಾವಧಿ ಮೂರ್ನಾಲ್ಕು ವರ್ಷಗಳಿಗಿಂತ ಕಡಿಮೆ ಇದೆ. ಹಾಗಾಗಿ, ಕನಿಷ್ಠ ಎಂಟು ವರ್ಷಗಳಿಗೂ ಅಧಿಕ ಸೇವಾವಧಿ ಇರುವವರಿಗೆ ಈ ಷರತ್ತು ವಿಧಿಸಿ, ಐದು ವರ್ಷಗಳಿಗಿಂತ ಕಡಿಮೆ ಸೇವಾವಧಿ ಹೊಂದಿರುವ ಉಪನ್ಯಾಸಕರಿಗೆ ರಿಯಾಯಿತಿ ನೀಡಬೇಕು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಅಭಿವೃದ್ಧಿ ಸ್ಥಗಿತಕ್ಕೆ ನೀವೂ ಕಾರಣರಾದೀರಿ!

ಕರ್ನಾಟಕದಲ್ಲಿ ಅಭಿವೃದ್ಧಿ ಕೆಲಸ ಸ್ಥಗಿತಗೊಂಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದ್ದಾರೆ (ಪ್ರ.ವಾ., ನ. 6), ಅದೂ ಮಧ್ಯಪ್ರದೇಶದ ಚುನಾವಣಾ ಸಭೆಯಲ್ಲಿ! ವಿವಿಧ ಇಲಾಖೆಗಳಿಗೆ ಬರಬೇಕಾದ ಕೇಂದ್ರದ ಅನುದಾನವು ರಾಜ್ಯಕ್ಕೆ ಇನ್ನೂ ಬಿಡುಗಡೆಯೇ ಆಗದ ಬಗ್ಗೆ ಕೆಲ ದಿನಗಳ ಹಿಂದೆ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಇನ್ನು ಬರ ಪರಿಹಾರ, ಜಿಎಸ್‌ಟಿ ಪಾಲಿನಂತಹ ಅನುದಾನಗಳೂ ಕೇಂದ್ರದಿಂದ ಬಂದಿಲ್ಲ ಎಂಬುದನ್ನು ಮೋದಿಯವರಿಗೆ ಮತ್ತೆ ಮತ್ತೆ ನೆನಪಿಸಬೇಕಾಗಿದೆ.

ಇವರದೇ ಪಕ್ಷದವರು ಗ್ಯಾರಂಟಿ ಫಲ ಅನುಭವಿಸಿ, 'ಇಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗುವುದಿಲ್ಲ, ಸರ್ಕಾರದಲ್ಲಿ ಗ್ಯಾರಂಟಿ ಯೋಜನೆಗೇ ಹಣ ಇಲ್ಲ' ಎಂದು ವ್ಯವಸ್ಥಿತವಾಗಿ ಪ್ರಚಾರ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರವು ರಾಜ್ಯಕ್ಕೆ ಕೊಡಬೇಕಾದ ಎಲ್ಲಾ ಅನುದಾನವನ್ನು ತಕ್ಷಣ ಬಿಡುಗಡೆ ಮಾಡಲಿ. ತಪ್ಪಿದಲ್ಲಿ ರಾಜ್ಯದ ಅಭಿವೃದ್ಧಿ ಕೆಲಸ ಸ್ಥಗಿತಕ್ಕೆ ಕೇಂದ್ರವೂ ಕಾರಣವಾಗುತ್ತದೆ ಎನ್ನುವುದರ ಅರಿವಿರಲಿ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಚಾಲಕನ ಪೂರ್ವಾಪರ ಅರಿಯಲಿಲ್ಲವೇಕೆ?

ಪ್ರತಿಮಾ ಅವರಂತಹ ಒಬ್ಬ ಹಿರಿಯ ಭೂವಿಜ್ಞಾನಿಯನ್ನು ಮಹತ್ವದ ಕಾರಣವಿಲ್ಲದೆ ಚಾಲಕನೊಬ್ಬ ಕೊಲೆ ಮಾಡಿರುವುದು ಸಾಧಾರಣವಾದ ವಿಷಯವಲ್ಲ. ಚಾಲಕನನ್ನಾಗಲಿ ಅಥವಾ ದಿನಗೂಲಿ ನೌಕರನನ್ನೇ ಆಗಲಿ ಆಯ್ಕೆ ಮಾಡುವಾಗ ಅವನ ಇತಿಹಾಸವನ್ನೆಲ್ಲ ಪರಿಶೀಲಿಸಿಯೇ ಸಂಬಂಧಿಸಿದ ಏಜೆನ್ಸಿ ನಿಯೋಜಿಸುತ್ತದೆ. ಹಾಗಿದ್ದಾಗ್ಯೂ ಪ್ರತಿಮಾ ಅವರ ಕೊಲೆ ಆರೋಪಿ ಚಾಲಕನನ್ನು ನಿಯೋಜಿಸಿದ್ದು ಅತಿಶಯವೇ.

ಅಪರಾಧ ಹಿನ್ನೆಲೆ ಇದ್ದ ಒಬ್ಬ ವ್ಯಕ್ತಿಯನ್ನು ಹಿರಿಯ ಭೂವಿಜ್ಞಾನಿಯ ವಾಹನ ಚಲಾಯಿಸಲು ನಿಯೋಜಿಸಿದ್ದು ಸಂಬಂಧಿಸಿದ ವ್ಯವಸ್ಥೆಯ ಬೇಜವಾಬ್ದಾರಿಯನ್ನು ತೋರುತ್ತದೆ. ಅಲ್ಲದೆ ಇದೊಂದು ಅಪರಾಧವಾಗಿದೆ. ಇನ್ನುಮುಂದಾದರೂ ಇಂತಹವರನ್ನು ನಿಯೋಜಿಸುವಾಗ ಅವರ ಕೌಟುಂಬಿಕ ಹಿನ್ನೆಲೆಯನ್ನು ಸಹ ಪರಿಶೀಲಿಸಿ, ಶುದ್ಧವಾದ ಚಾರಿತ್ರ್ಯ ಉಳ್ಳವರನ್ನೇ ಆಯ್ಕೆ ಮಾಡಬೇಕು. ಆಗ, ಹಿರಿಯ ಪರಿಣತ ಅಧಿಕಾರಿಗಳು ಹೀಗೆ ಸಾವಿಗೀಡಾಗುವುದು ತಪ್ಪುತ್ತದೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಜಾತಿ ಜನಗಣತಿ: ನಿಖರ ಸಮೀಕ್ಷೆ ನಡೆಸಲಾಗದೇ?

ಕಾಂತರಾಜ ಆಯೋಗವು ಕೆಲವು ವರ್ಷಗಳ ಹಿಂದೆ ನಡೆಸಿದ 'ಜಾತಿ ಜನಗಣತಿ' ವರದಿಯನ್ನು ವಿರೋಧಿಸಿ ಕೆಲವು ಸಮುದಾಯಗಳು ಪ್ರತಿಭಟನೆ ನಡೆಸಿವೆ. ಈಗ ಪ್ರಬಲ ಕೋಮಿನವರು ಹೋರಾಟ ನಡೆಸುತ್ತಿದ್ದು, ಮುಂದೆ ಬೇರೆ ಜಾತಿಯವರೂ ನಡೆಸಬಹುದು. ಒಂದು ಕೋಮಿನ ವ್ಯಕ್ತಿಯಾಗಿ ನನ್ನಲ್ಲೂ ಕೆಲವು ಪ್ರಶ್ನೆಗಳು ಮೂಡಿವೆ. ಮನೆ ಮನೆಗೂ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗಿದೆ ಎಂದು ಓದಿದ ನೆನಪು. ಆದರೆ, ನಮ್ಮ ಮನೆಗೆ ಯಾರೂ ಬಂದು ಮಾಹಿತಿ ಪಡೆದಿಲ್ಲ. ಇದೇ ರೀತಿಯ ಪ್ರಶ್ನೆಗಳು ನಮ್ಮ ಕೆಲವು ಸ್ನೇಹಿತರಲ್ಲೂ ಇವೆ. ಹಾಗಾದರೆ ನಿಖರತೆ ಹೇಗೆ ಸಾಧ್ಯವಾದೀತು?

ರಾಜ್ಯದಲ್ಲಿ ನಿಖರವಾಗಿ, ಸ್ಪಷ್ಟವಾಗಿ ಜಾತಿ ಜನಗಣತಿ ನಡೆಸಲು ಕಷ್ಟವೇ? ಆಯಾ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಪುರಸಭೆ, ನಗರಸಭೆ, ಬಿಬಿಎಂಪಿ ವ್ಯಾಪ್ತಿಯಲ್ಲಿನ ಎಲ್ಲಾ ಶಾಲಾಕಾಲೇಜುಗಳ ಶಿಕ್ಷಕರನ್ನು, ವಿವಿಧ ಇಲಾಖೆಯ ಸಿಬ್ಬಂದಿಯನ್ನು ಪ್ರತಿ ಮನೆಗೆ ಏಕಕಾಲದಲ್ಲಿ ಕಳುಹಿಸಿ, ಮಾಹಿತಿ ನೀಡಿದವರಿಗೆ ಒಂದೊಂದು ಸಂಖ್ಯೆಯನ್ನು ಕೊಟ್ಟು (ಪುನರಾವರ್ತನೆ ಆಗಬಾರದೆಂದು) ಆರು ತಿಂಗಳಲ್ಲಿ ಮಾಹಿತಿ ಸಂಗ್ರಹಿಸಬಹುದಲ್ಲವೇ? ಯಾವುದೇ ಸಮುದಾಯದ ಸಂಖ್ಯೆಯಲ್ಲಿ ಅಗಾಧ ಪ್ರಮಾಣದಲ್ಲಿ ಏರಿಕೆಯೋ ಇಳಿಕೆಯೋ ಆಗಿದ್ದರೆ ಅನುಮಾನಗಳು ಮೂಡುವುದು ಸಹಜ. ಹೀಗಾಗಿ, ವರದಿಯ ಸತ್ಯಾಸತ್ಯತೆಯನ್ನು ತಜ್ಞರ ನೆರವು ಪಡೆದು ಮತ್ತೊಮ್ಮೆ ಪರಿಶೀಲಿಸುವುದು ಸೂಕ್ತವಲ್ಲವೇ?

ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡೀಪ್‌ಫೇಕ್

ಕೃತಕ ಬುದ್ಧಿಮತ್ತೆಯ ‘ಅತಿಬುದ್ಧಿ’

ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿತ್ತು. ನಟಿ ಕತ್ರಿನಾ ಕೈಫ್ ಅವರ ಡೀಪ್‌ಫೇಕ್ ಚಿತ್ರವೊಂದು ಮಂಗಳವಾರ ಜಾಲತಾಣಗಳಲ್ಲಿ ಹಂಚಿಕೆಯಾಗಿದೆ. ಕೃತಕ ಬುದ್ಧಿಮತ್ತೆಯ ದುರ್ಬಳಕೆಗೆ ನಿದರ್ಶನವಿದು. ಈ ಡೀಪ್‌ಫೇಕ್ ವಿಡಿಯೊ, ಚಿತ್ರಗಳ ಬಗ್ಗೆ ಕೇಂದ್ರ ಸರ್ಕಾರವು ತನಿಖೆಯನ್ನೂ ಆರಂಭಿಸಿದೆ. ಹಲವು ದೇಶಗಳಲ್ಲಿ ಇದು ಈಗಾಗಲೇ ದೊಡ್ಡಮಟ್ಟದ ಪಿಡುಗು ಎಂಬಂತಾಗಿದೆ. ಭಾರತದಲ್ಲೂ ಡೀಪ್‌ಫೇಕ್ ದೊಡ್ಡಮಟ್ಟದಲ್ಲೇ ಇದ್ದರೂ, ಅದು ಸುದ್ದಿಯಾಗಿರಲಿಲ್ಲ. ಈಗ ಗಣ್ಯರು ಮತ್ತು ಜನಪ್ರಿಯ ವ್ಯಕ್ತಿಗಳು ಡೀಪ್‌ಫೇಕ್‌ನ ಸಂತ್ರಸ್ತರಾದೊಡನೆ ಅದರ ಅಪಾಯದ ಬಗ್ಗೆ ಚರ್ಚೆ ಮುನ್ನೆಲೆಗೆ ಬಂದಿದೆ

ಪ್ರಜಾವಾಣಿ ವಾರ್ತೆ

‘ನನ್ನ ಕುಟುಂಬ, ಸ್ನೇಹಿತರು ಹಾಗೂ ಹಿತಾಭಿಲಾಷಿಗಳಿಗೆ ನಾನೊಬ್ಬ ಹೆಣ್ಣಾಗಿ, ನಟಿಯಾಗಿ ಧನ್ಯವಾದ ಹೇಳಲು ಬಯಸುತ್ತೇನೆ. ಇವರೇ ನನ್ನ ರಕ್ಷಾಕವಚ; ನನ್ನ ಬೆನ್ನೆಲುಬು. ನನಗೆ ಈಗ ಆದಹಾಗೆ ನಾನು ಶಾಲೆಯಲ್ಲೊ, ಕಾಲೇಜಿನಲ್ಲೊ ಇದ್ದಾಗ ಒಂದೊಮ್ಮೆ ಆಗಿದ್ದರೆ? ಈ ಸಮಸ್ಯೆಯನ್ನು ನಾನು ಹೇಗೆ ಎದುರಿಸುತ್ತಿದ್ದೆನೋ? ನನಗೆ ಊಹಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ನಟಿ ರಶ್ಮಿಕಾ ಮಂದಣ್ಣ ಸೋಮವಾರ ತಮ್ಮ ‘ಎಕ್ಸ್’ ಪೋಸ್ಟ್‌ನಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ರಶ್ಮಿಕಾ ಅವರ ಈ ಆತಂಕವನ್ನು ಜಗತ್ತಿನ ಲಕ್ಷಾಂತರ ಮಹಿಳೆಯರು ಈಗಾಗಲೇ ಅನುಭವಿಸುತ್ತಿದ್ದಾರೆ. ಡೀಪ್‌ಫೇಕ್ ತಂತ್ರಜ್ಞಾನಕ್ಕೆ ಮಹಿಳೆಯರೇ ಬಲಿಪಶುಗಳು; ಅವರೇ ಗುರಿ. ಭಾರತದ ಮಟ್ಟಿಗೆ ಈ ತಂತ್ರಜ್ಞಾನವು ಹೊಸತಾಗಿ ತೋರುತ್ತಿರಬಹುದು. ಆದರೆ, ಅಮೆರಿಕ, ಯೂರೋಪ್‌ನಲ್ಲಿ ಇದೊಂದು ದೊಡ್ಡ ಸಮಸ್ಯೆಯಾಗಿ ಈಗಾಗಲೇ ಪರಿಣಮಿಸಿದೆ. ಇದಕ್ಕಾಗಿ ಕಾನೂನುಗಳನ್ನು ರಚಿಸಲಾಗುತ್ತಿದೆ. ಮನೋರಂಜನಾ ಮಾಧ್ಯಮದಲ್ಲಿರುವ ಮಹಿಳೆಯರು, ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್‌ಗಳು... ಒಟ್ಟಾರೆ, ಸಾಮಾಜಿಕ ಜೀವನದಲ್ಲಿ ಗುರುತಿಸಿಕೊಂಡಿರುವ ಮಹಿಳೆಯರೇ ಈ ತಂತ್ರಜ್ಞಾನದಿಂದ ಹೆಚ್ಚಿನ ಸಮಸ್ಯೆ ಎದುರಿಸುತ್ತಿದ್ದಾರೆ.

ನೀಲಿಚಿತ್ರಗಳನ್ನು ಸೃಷ್ಟಿಸಲೆಂದೇ ಈ ತಂತ್ರಜ್ಞಾನವನ್ನು ಹೆಚ್ಚಾಗಿ ಬಳಸಿಕೊಳ್ಳಲಾಗುತ್ತಿದೆ. ಇಂಥ ಚಿತ್ರಗಳನ್ನು ಸೃಷ್ಟಿಸಲು ಖ್ಯಾತನಾಮ ಮಹಿಳೆಯರ ಭಾವಚಿತ್ರಗಳನ್ನು ಬಳಸಿಕೊಳ್ಳಲಾಗುತ್ತಿದೆ. ಅಮೆರಿಕದ ‘ಹೋಮ್ ಸೆಕ್ಯುರಿಟಿ ಹೀರೋಸ್’ ಎನ್ನುವ ಸಂಸ್ಥೆಯೊಂದು ‘2023 ಸ್ಟೇಟ್ ಆಫ್ ಡೀಪ್‌ಫೇಕ್ಸ್: ರಿಯಾಲಿಟಿ, ಥ್ರೆಟ್ಸ್ ಆ್ಯಂಡ್ ಇಂಪ್ಯಾಕ್ಟ್’ ಹೆಸರಿನ ಸಮೀಕ್ಷೆಯೊಂದನ್ನು ನಡೆಸಿದೆ. ಆನ್‌ಲೈನ್‌ನಲ್ಲಿ ಸಿಗುವ ಡೀಪ್‌ಫೇಕ್ ವಿಡಿಯೊಗಳಲ್ಲಿ ಶೇ 98ರಷ್ಟು ವಿಡಿಯೊಗಳು ನೀಲಿಚಿತ್ರಗಳಾಗಿವೆ. ಇಂಥ ಡೀಪ್‌ಫೇಕ್ ನೀಲಿಚಿತ್ರಗಳಲ್ಲಿ ಶೇ 94ರಷ್ಟು ವಿಡಿಯೊಗಳು ಖ್ಯಾತ ನಟಿಯರು, ಗಾಯಕಿಯರಿಗೆ ಸಂಬಂಧಿಸಿದ್ದಾಗಿವೆ.

ಖ್ಯಾತ ಮಹಿಳೆಯರು ಮಾತ್ರವಲ್ಲ, ಸಾಮಾನ್ಯ ಮಹಿಳೆಯರೂ ಈ ತಂತ್ರಜ್ಞಾನಕ್ಕೆ ಗುರಿಯಾಗುತ್ತಿದ್ದಾರೆ. ಡಚ್‌ನ ಎಐ ಕಂಪನಿಯಾದ ‘ಸೆನ್ಸಿಟಿ’ 2019ರಲ್ಲಿ ಅಧ್ಯಯನವೊಂದನ್ನು ಕೈಗೊಂಡಿತ್ತು. ಇಲ್ಲಿ ಡೀಪ್‌ಫೇಕ್ ತಂತ್ರಜ್ಞಾನದ ಮೂಲಕ ಸೃಷ್ಟಿಸಲಾದ ನೂರಾರು ನೀಲಿಚಿತ್ರಗಳ ಅಧ್ಯಯನ ನಡೆಸಲಾಗಿತ್ತು. ಇಂಥ ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದ ಮಹಿಳೆಯರನ್ನು ಕಂಪನಿ ಸಂಪರ್ಕಿಸಿತ್ತು. ಇವರುಗಳಲ್ಲಿ ಶೇ 96ರಷ್ಟು ಮಹಿಳೆಯರಿಗೆ ತಮ್ಮ ಭಾವಚಿತ್ರಗಳನ್ನು ಬಳಸಿಕೊಂಡು ಇಂಥದ್ದೊಂದನ್ನು ಸೃಷ್ಟಿಸಲಾಗಿದೆ ಎಂಬುದರ ಅರಿವೇ ಇರಲಿಲ್ಲ. ಇಷ್ಟಲ್ಲದೆ, ಗ್ರಾಹಕರ ಇಚ್ಛೆಯ ಅನುಸಾರ ಅವರು ಹೇಳಿದ ಮಹಿಳೆಯರ ಭಾವಚಿತ್ರಗಳನ್ನು ಬಳಸಿಕೊಂಡು ನೀಲಿಚಿತ್ರಗಳನ್ನು ತಯಾರು ಮಾಡುವ ಉದ್ಯಮವೂ ಆರಂಭಗೊಂಡಿದೆ.

ಅಂತರ್ಜಾಲದಲ್ಲಿ ಮಹಿಳೆಯರ ಭಾವಚಿತ್ರಗಳು ಬಹಳ ಸುಲಭವಾಗಿ ದೊರೆಯುತ್ತವೆ. ನೀಲಿಚಿತ್ರಗಳನ್ನು ಸೃಷ್ಟಿಸಲು ಹೇಳಿಕೊಳ್ಳುವಂಥ ಕೌಶಲವೇನೂ ಬೇಕಾಗಿಲ್ಲ. ಯಾರೂ ಬೇಕಾದರೂ ಅತ್ಯಂತ ಕಡಿಮೆ ಖರ್ಚಿನಲ್ಲಿ ಇಂಥ ವಿಡಿಯೊಗಳನ್ನು ಸೃಷ್ಟಿಸಬಹುದಾಗಿದೆ. ಇದೇ ಕಾರಣಕ್ಕಾಗಿ ಮಹಿಳೆಯರೇ ಈ ತಂತ್ರಜ್ಞಾನದ ಬಲಿಪಶುಗಳಾಗುತ್ತಿದ್ದಾರೆ.

‘2023 ಸ್ಟೇಟ್ ಆಫ್ ಡೀಪ್‌ಫೇಕ್ಸ್...’ ಸಮೀಕ್ಷೆಯಲ್ಲಿ ಮತ್ತೊಂದು ಮಹತ್ವದ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಡೀಪ್‌ಫೇಕ್ ತಂತ್ರಜ್ಞಾನವನ್ನು ಬಳಸಿಕೊಂಡು ನೀಲಿಚಿತ್ರಗಳನ್ನು ಸೃಷ್ಟಿಸಲು ಕೆಲವೇ ದೇಶಗಳ ಮಹಿಳೆಯರ ಭಾವಚಿತ್ರಗಳನ್ನು ಹೆಚ್ಚಾಗಿ ಬಳಸಿಕೊಳ್ಳಲಾಗುತ್ತಿದೆ. ಕೆಲವು ದೇಶಗಳ ಮಹಿಳೆಯರು ಹೆಚ್ಚು ಆಕರ್ಷಕವಾಗಿರಬಹುದು. ರಾಜಕೀಯ ಒತ್ತಡಗಳಿರಬಹುದು ಅಥವಾ ಕೆಲವು ದೇಶದ ಮಹಿಳೆಯರ ಬಗ್ಗೆ ಇರುವ ಕಲ್ಪನೆಗಳಿರಬಹುದು, ಗ್ರಾಹಕರ ಮನೋಭಿಲಾಷೆಯ ಕಾರಣಕ್ಕಾಗಿಯೂ ಕೆಲವೇ ದೇಶಗಳ ಮಹಿಳೆಯರ ಭಾವಚಿತ್ರಗಳನ್ನು ಬಳಸಿಕೊಳ್ಳಲಾಗುತ್ತದೆ. ಈ ಪಟ್ಟಿಯಲ್ಲಿ ದಕ್ಷಿಣ ಕೊರಿಯಾ ಪ್ರಥಮ ಸ್ಥಾನದಲ್ಲಿದ್ದರೆ, ಭಾರತವು ಆರನೇ ಸ್ಥಾನದಲ್ಲಿದೆ.

ತನ್ನ ಸಂಗಾತಿಯನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಬೇಕು ಎಂಬ ದೃಷ್ಟಿಯಿಂದ ಪುರುಷರು ಕೃತಕ ಬುದ್ಧಿಮತ್ತೆ ಮತ್ತು ಡೀಪ್‌ಫೇಕ್ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ. ತಮ್ಮ ಸಂಗಾತಿಯ ಭಾವಚಿತ್ರಗಳನ್ನು ಅವರ ಅನುಮತಿ ಇಲ್ಲದೆಯೇ ಬಳಸಿಕೊಂಡು, ಅದರಿಂದ ಅಶ್ಲೀಲವಾದ ಕಂಟೆಂಟ್ ಅನ್ನು ಸೃಷ್ಟಿಸಿ ಇಟ್ಟುಕೊಳ್ಳುವುದು. ಇದನ್ನು ತೋರಿಸಿ, ಮಹಿಳೆಯರ ಮೇಲೆ ದೌರ್ಜನ್ಯ ಎಸಗುವುದು. ಈ ಬಗ್ಗೆ ವಿದೇಶಗಳಲ್ಲಿ ಹಲವು ಮಹಿಳೆಯರು ದೂರು ನೀಡಿದ್ದಾರೆ. ಈ ಬಗ್ಗೆ ದೊಡ್ಡ ಮಟ್ಟದ ಚರ್ಚೆಯೂ ನಡೆಯುತ್ತಿದೆ.

ಶಿಕ್ಷಾರ್ಹ, ದಂಡಾರ್ಹ ಅಪರಾಧ

ಡೀಪ್‌ಫೇಕ್ ವಿಡಿಯೊ ಸೃಷ್ಟಿಸುವುದು ಮಾಹಿತಿ ತಂತ್ರಜ್ಞಾನ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಶಿಕ್ಷಾರ್ಹ ಮತ್ತು ದಂಡಾರ್ಹ ಅಪರಾಧ ಎನಿಸಿಕೊಳ್ಳುತ್ತದೆ. ಡೀಪ್‌ಫೇಕ್ ವಿಡಿಯೊ ಸೃಷ್ಟಿಸಿದವರು, ಅದನ್ನು ಹಂಚಿಕೊಂಡವರಿಗೂ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಈ ಕಾಯ್ದೆಯಲ್ಲಿ ಅವಕಾಶವಿದೆ.

ಸಾಮಾಜಿಕ ಜಾಲತಾಣ ಮಧ್ಯಸ್ಥ ಕಂಪನಿಗಳೂ, ತಮ್ಮ ಪ್ಲಾಟ್‌ಫಾರಂಗಳಲ್ಲಿ ಡೀಪ್‌ಫೇಕ್ ವಿಡಿಯೊಗಳು ಹಂಚಿಕೆಯಾಗುವುದನ್ನು ತಡೆಯುವ ಜವಾಬ್ದಾರಿ ಹೊಂದಿವೆ. ಕಂಪನಿಗಳು ಇದನ್ನು ಪಾಲಿಸದಿದ್ದರೆ ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತದೆ. ಇದಿಷ್ಟೇ ಅಲ್ಲದೆ ಖಾಸಗಿತನದ ಹಕ್ಕಿನ ಉಲ್ಲಂಘನೆ, ವಂಚನೆ, ಗೌರವಕ್ಕೆ ಚ್ಯುತಿ ತಂದ, ಮಾನಹಾನಿ ಮಾಡಿದ ಆರೋಪಗಳ ಅಡಿಯಲ್ಲೂ ಶಿಕ್ಷೆ ಮತ್ತು ದಂಡ ವಿಧಿಸಲು ಅವಕಾಶವಿದೆ.

ದುರ್ಬಳಕೆಯ ಅಪಾಯ ಹೆಚ್ಚಿಸಿದ ತಂತ್ರಜ್ಞಾನ

ಕೃತಕ ಬುದ್ಧಿಮತ್ತೆ (ಎಐ) ಸೃಷ್ಟಿಸಿದ ವಿಡಿಯೊ ಮತ್ತು ಚಿತ್ರಗಳಿಗೂ ಡೀಪ್‌ಫೇಕ್ ವಿಡಿಯೊ ಮತ್ತು ಚಿತ್ರಗಳಿಗೂ ತುಂಬಾ ವ್ಯತ್ಯಾಸವಿದೆ. ಎಐ ತಂತ್ರಜ್ಞಾನ ಬಳಸಿಕೊಂಡು ಶೂನ್ಯದಿಂದ ಸೃಷ್ಟಿಸಿದ ವಿಡಿಯೊ ಅಥವಾ ಚಿತ್ರಗಳನ್ನು ಎಐ ಸೃಷ್ಟಿಸಿದ ವಿಡಿಯೊ ಅಥವಾ ಚಿತ್ರ ಎಂದು ಕರೆಯಲಾಗುತ್ತದೆ. ಈಗಾಗಲೇ ಚಿತ್ರೀಕರಿಸಲಾದ ವಿಡಿಯೊಗೆ ಬೇರೊಬ್ಬರ ಧ್ವನಿ ಅಥವಾ ಮುಖವನ್ನು ಸಂಯೋಜಿಸುವ ಪ್ರಕ್ರಿಯೆಯೇ ಡೀಪ್‌ಫೇಕ್ ಮತ್ತು ಅದರ ಉತ್ಪನ್ನವೇ ಡೀಪ್‌ಫೇಕ್ ವಿಡಿಯೊ.

ಯಾವುದೇ ವಿಡಿಯೊ ಮತ್ತು ಚಿತ್ರವನ್ನು ಡೀಪ್‌ಫೇಕ್ ಮಾಡುವುದು ಸುಲಭದ ಕೆಲಸವಲ್ಲ. 2017ರಿಂದ ಡೀಪ್‌ಫೇಕ್ ಪರಿಕಲ್ಪನೆ ಬಳಕೆಯಲ್ಲಿದೆ. ಸಿಜಿಐನಂತಹ ಅತ್ಯಾಧುನಿಕ ಅಪ್ಲಿಕೇಷನ್‌ಗಳನ್ನು ಬಳಸಿಕೊಂಡು ಡೀಪ್‌ಫೇಕ್ ವಿಡಿಯೊಗಳನ್ನು ಸೃಷ್ಟಿಸಲಾಗುತ್ತಿತ್ತು. ‘ಅ’ ಅನ್ನುವ ಗಣ್ಯವ್ಯಕ್ತಿಯ ಡೀಪ್‌ಫೇಕ್ ವಿಡಿಯೊವನ್ನು ಸೃಷ್ಟಿಸಬೇಕು ಎಂದಿಟ್ಟುಕೊಳ್ಳಿ. ಮೊದಲಿಗೆ ‘ಅ’ ಎಂಬ ವ್ಯಕ್ತಿಯ ನೂರಾರು ವಿಡಿಯೊ ಮತ್ತು ಚಿತ್ರಗಳನ್ನು ಒಂದೆಡೆ ಕಲೆಹಾಕಿ, ಅವರ ಮುಖದ ಪ್ರೊಫೈಲ್ ಅನ್ನು ರೂಪಿಸಲಾಗುತ್ತಿತ್ತು. ಆ ವ್ಯಕ್ತಿ ಮಾತನಾಡುವ ರೀತಿ, ತುಟಿ ಚಲನೆ, ಮುಖದ ಭಾವ, ಹುಬ್ಬಿನ ಚಲನೆ, ಕಣ್ಣಿನ ರೆಪ್ಪೆ ಬಡಿಯುವುದು ಇತ್ಯಾದಿ ವಿವರಗಳನ್ನು ಆ ಪ್ರೊಫೈಲ್ ಹೊಂದಿರುತ್ತಿತ್ತು. ಅಂತಹ ಪ್ರೊಫೈಲ್ ರೂಪಿಸುವ ಕೆಲಸವನ್ನು ಎಐ ತಂತ್ರಜ್ಞಾನ ಮಾಡುತ್ತಿತ್ತು.

ನಂತರ ಸಾಮಾನ್ಯ ವ್ಯಕ್ತಿಯೊಬ್ಬರು ಮಾತನಾಡುತ್ತಿರುವ ವಿಡಿಯೊವನ್ನು ಚಿತ್ರೀಕರಿಸಲಾಗುತ್ತಿತ್ತು. ಆ ವಿಡಿಯೊಗೆ ‘ಅ’ ಎಂಬ ವ್ಯಕ್ತಿಯ ಪ್ರೊಫೈಲ್ ಅನ್ನು ಸಂಯೋಜಿಸಲಾಗುತ್ತಿತ್ತು. ಎಐ ಈ ಕೆಲಸ ಮಾಡಿದರೂ ಅತ್ಯಂತ ನಾಜೂಕಿನ



ಸಂಯೋಜನೆಗಳನ್ನು ಕಲಾವಿದನೇ ಮಾಡಬೇಕಿತ್ತು. ಹೀಗಾಗಿ ಒಂದೆರಡು ನಿಮಿಷಗಳ ಡೀಪ್‌ಫೇಕ್ ವಿಡಿಯೊ ಸೃಷ್ಟಿಸಲು ನಾಲ್ಕಾರು ವಾರಗಳಷ್ಟು ಸಮಯ ಬೇಕಾಗಿತ್ತು. ಇಂತಹ ಡೀಪ್‌ಫೇಕ್ ವಿಡಿಯೊಗಳನ್ನು ಸೃಷ್ಟಿಸಿಕೊಡುವ ಹಲವು ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಹೆಚ್ಚು ಸಮಯ ಮತ್ತು ದುಬಾರಿ ವೆಚ್ಚ ಮಾಡಿದಷ್ಟೂ, ವಾಸ್ತವಕ್ಕೆ ಹತ್ತಿರವಿರುವಂತಹ ಡೀಪ್‌ಫೇಕ್ ವಿಡಿಯೊ ಸೃಷ್ಟಿಯಾಗುತ್ತದೆ. ಹೀಗಾಗಿ 2017ರಿಂದ ಬಳಕೆಯಲ್ಲಿ ಇದ್ದರೂ, ಇದು ಜನಪ್ರಿಯವಾಗಿರಲಿಲ್ಲ ಮತ್ತು ಇದೊಂದು ಪಿಡುಗು ಎಂಬಂತೆಯೂ ಆಗಿರಲಿಲ್ಲ.

ಆದರೆ, ಈ ಎಲ್ಲಾ ಕೆಲಸವನ್ನು ಕೃತಕ ಬುದ್ಧಿಮತ್ತೆಯೇ ಮಾಡಿಮುಗಿಸುವ ಕಾಲದಲ್ಲಿ ನಾವಿದ್ದೇವೆ. ಕೆಲವೇ ನಿಮಿಷಗಳಲ್ಲಿ ಮತ್ತು ಯಾವುದೇ ಶುಲ್ಕವಿಲ್ಲದೆ ಇಂತಹ ವಿಡಿಯೊ ಮತ್ತು ಚಿತ್ರಗಳನ್ನು ಸೃಷ್ಟಿಸುವ ಹತ್ತಾರು ಅಪ್ಲಿಕೇಷನ್‌ಗಳು ಬಳಕೆಗೆ ಬಂದಿವೆ. ನಗಣ್ಯ ಎನ್ನುವಷ್ಟು ಹಣ ತೆತ್ತರೂ ಸಾಕು, ನಿಜಕ್ಕೆ ಹತ್ತಿರ ಎನಿಸುವ ವಿಡಿಯೊ ಮತ್ತು ಚಿತ್ರಗಳನ್ನು ಅವು ಕೆಲವೇ ನಿಮಿಷಗಳಲ್ಲಿ ಸೃಷ್ಟಿಸಿಕೊಡುತ್ತವೆ.

ಸಾಮಾಜಿಕ ಜಾಲತಾಣಗಳಲ್ಲಿ ಇರುವ ಯಾವುದೋ ಒಂದು ವಿಡಿಯೊಗೆ, ಜನಪ್ರಿಯ ವ್ಯಕ್ತಿಯೊಬ್ಬರ ಮುಖವನ್ನು ಕೂರಿಸಿಕೊಡು ಎಂದು ಕೇವಲ ‘ಟೆಕ್ಸ್ಟ್’ ಮೂಲಕ ಆದೇಶ ನೀಡಿದರೆ ಸಾಕು. ವಿಡಿಯೊ ಸೃಷ್ಟಿಯಾಗಿಬಿಡುತ್ತದೆ. ದುಡ್ಡುಕೊಟ್ಟು ಬಳಸುವ ಅಪ್ಲಿಕೇಷನ್‌ಗಳು ಮತ್ತು ದುಬಾರಿ ಶುಲ್ಕ ಪಡೆದು ಕೆಲಸ ಮಾಡುವ ಡೀಪ್‌ಫೇಕ್ ಕಂಪನಿಗಳು ತಾಂತ್ರಿಕವಾಗಿ ಅತ್ಯುತ್ತಮವಾದ ವಿಡಿಯೊಗಳನ್ನು ಸೃಷ್ಟಿಸುತ್ತವೆ. ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ವಿಡಿಯೊ ಸೃಷ್ಟಿಯಾಗಿದ್ದೂ ಇದೇ ರೀತಿ ಎಂದು ಅಂದಾಜಿಸಲಾಗಿದೆ. ಫೋಟೊಶಾಪ್, ಇಲ್ಲಸ್ಟ್ರೇಟರ್, ಸಿಜಿಐನಂತಹ ಅಪ್ಲಿಕೇಷನ್‌ಗಳ ಬಳಕೆ ಗೊತ್ತಿಲ್ಲದಂತಹ ಸಾಮಾನ್ಯ ವ್ಯಕ್ತಿಯೂ ಇಂತಹ ವಿಡಿಯೊ ಸೃಷ್ಟಿಸಲು ಸಾಧ್ಯವಾಗುವಷ್ಟರ ಮಟ್ಟಿಗೆ ತಂತ್ರಜ್ಞಾನ ಬೆಳೆದಿದೆ.

ಕಲಿಕೆಯ ಭಾಗವಾಗಿ ರಾಯಿಟರ್ಸ್ ಸುದ್ದಿಸಂಸ್ಥೆ ಡೀಪ್‌ಫೇಕ್ ವಿಡಿಯೊ ಒಂದನ್ನು ಸೃಷ್ಟಿಸಿತ್ತು. ತನ್ನದೇ ಇಂಗ್ಲಿಷ್ ಭಾಷಾ ವಿಭಾಗದಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಸುದ್ದಿ ನಿರೂಪಣೆಯ ವಿಡಿಯೊ ಚಿತ್ರೀಕರಿಸಿಕೊಂಡಿತ್ತು. ಜತೆಗೆ ಫ್ರೆಂಚ್ ಭಾಷೆಯಲ್ಲಿ ನಿರೂಪಣೆ ಮಾಡುವ ತನ್ನದೇ ಸಿಬ್ಬಂದಿಯ ಇನ್ನೊಂದು ವಿಡಿಯೊವನ್ನೂ ಚಿತ್ರೀಕರಿಸಿಕೊಂಡಿತ್ತು. ಇವುಗಳನ್ನು ಬಳಸಿಕೊಂಡು ಡೀಪ್‌ಫೇಕ್ ವಿಡಿಯೊ ಸೃಷ್ಟಿಸುವಂತೆ ಫ್ರಾನ್ಸ್‌ನ ಡೀಪ್‌ಫೇಕ್ ಕಂಪನಿ ಒಂದಕ್ಕೆ ತಿಳಿಸಿತ್ತು. ಆ ಕಂಪನಿಯು ಕೆಲವೇ ಗಂಟೆಗಳಲ್ಲಿ ಡೀಪ್‌ಫೇಕ್ ವಿಡಿಯೊ ಸೃಷ್ಟಿಸಿಕೊಟ್ಟಿತ್ತು. ಇಂಗ್ಲಿಷ್ ನಿರೂಪಕಿ ತನ್ನದೇ ಧ್ವನಿಯಲ್ಲಿ, ಫ್ರೆಂಚ್ ಭಾಷೆಯಲ್ಲಿ ನಿರೂಪಣೆ ಮಾಡುವಂತೆ ವಿಡಿಯೊವನ್ನು ಸೃಷ್ಟಿಸಲಾಗಿತ್ತು. ಆಕೆಯ ತುಟಿಚಲನೆಯನ್ನೂ, ಫ್ರೆಂಚ್ ಉಚ್ಚಾರಕ್ಕೆ ಹೊಂದುವಂತೆ ತಿದ್ದಿ-ತೀಡಲಾಗಿತ್ತು. ಇದನ್ನು ರಾಯಿಟರ್ಸ್ ತನ್ನ ಸಿಬ್ಬಂದಿಗೆ ತೋರಿಸಿತ್ತು. ಡೀಪ್‌ಫೇಕ್ ವಿಡಿಯೊ ಸೃಷ್ಟಿ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದವರಿಗಷ್ಟೇ ಅದು, ನಕಲಿ ವಿಡಿಯೊ ಎಂದು ಗೊತ್ತಾಗಿತ್ತು. ಉಳಿದವರಿಗೆ ಅದು ನಕಲಿ ವಿಡಿಯೊ ಎಂಬುದು ಗೊತ್ತಾಗಲೇ ಇಲ್ಲ. ಈ ಸಾಧ್ಯತೆಯೇ, ಈ ತಂತ್ರಜ್ಞಾನದ ದುರ್ಬಳಕೆಯ ಅಪಾಯಗಳನ್ನೂ ಹೆಚ್ಚಿಸಿರುವುದು.

ಆಧಾರ: ಪಿಟಿಐ, ರಾಯಿಟರ್ಸ್, ಎಎಫ್‌ಪಿ

> ಡೀಪ್‌ಫೇಕ್ ನೀಲಿಚಿತ್ರಗಳನ್ನು ಸೃಷ್ಟಿ ಮಾಡುವ ಮೂಲಕ ಮಹಿಳೆಯರನ್ನು ಶೋಷಣೆಗೆ ಒಳಪಡಿಸಲಾಗುತ್ತಿದೆ. ಇದು ‘ಕೇವಲ’ ದೌರ್ಜನ್ಯವಲ್ಲ. ಅದಕ್ಕಿಂತ ಹೆಚ್ಚಿನದು
>
> **ಕ್ಯುಟಿಸಿಂಡ್ರೆಲಾ,** ಅಮೆರಿಕದ ಖ್ಯಾತ ಟ್ವಿಚ್ ಸ್ಟ್ರೀಮರ್.
> (ಇವರ ಭಾವಚಿತ್ರವನ್ನು ಬಳಸಿ ಡೀಪ್‌ಫೇಕ್ ನೀಲಿಚಿತ್ರವನ್ನು ಸೃಷ್ಟಿಸಲಾಗಿತ್ತು. ಜನವರಿಯಲ್ಲಿ ಇದು ಭಾರಿ ಸುದ್ದಿಯಾಗಿತ್ತು)

ಸಿನಿ ಬಿಟ್ಸ್

‘ಮೆಲ್ಲಗೆ’ ಬಂದ ‘ಸ್ವಾತಿ ಮುತ್ತಿನ...’ ಹಾಡು

ಸಿರಿ ಹಾಗೂ ರಾಜ್

ರಾಜ್ ಬಿ.ಶೆಟ್ಟಿ ಹಾಗೂ ಸಿರಿ ರವಿಕುಮಾರ್ ನಟನೆಯ ‘ಸ್ವಾತಿ ಮುತ್ತಿನ ಮಳೆ ಹನಿಯೇ’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಸಿನಿಮಾದ ಮೊದಲ ಹಾಡು ‘ಮೆಲ್ಲಗೆ..’ ಬಿಡುಗಡೆಯಾಗಿದೆ. ರಾಜ್ ಬಿ. ಶೆಟ್ಟಿ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಈ ಸಿನಿಮಾವನ್ನು ನಟಿ ರಮ್ಯಾ ಅವರು ತಮ್ಮ ಆ್ಯಪಲ್ ಬಾಕ್ಸ್ ಸ್ಟುಡಿಯೊಸ್ ಮೂಲಕ ನಿರ್ಮಿಸಿದ್ದಾರೆ. ಲೈಟರ್ ಬುದ್ಧ ಫಿಲಂಸ್ ಸಹಯೋಗದೊಂದಿಗೆ ನಿರ್ಮಾಣವಾಗಿರುವ ಈ ಚಿತ್ರವನ್ನು ನ.24ರಂದು ಕೆ.ಆರ್.ಜಿ. ಸ್ಟುಡಿಯೋಸ್ ಸಂಸ್ಥೆಯು ಬಿಡುಗಡೆ ಮಾಡುತ್ತಿದೆ.

‘ಮೆಲ್ಲಗೆ’ ಹಾಡಿಗೆ ಮಿಥುನ್ ಮುಕುಂದನ್ ಸಂಗೀತ ಸಂಯೋಜಿಸಿದ್ದು, ಮಾಧುರಿ ಶೇಷಾದ್ರಿ ಹಾಡಿದ್ದಾರೆ. ಇನ್ನು, ಮಂಗಳೂರಿನ ಪೃಥ್ವಿ ಎಂಬಾಕೆ ಈ ಹಾಡನ್ನು ಬರೆದಿದ್ದಾರೆ. ‘ಇದು ಪ್ರೀತಿಯ ಕುರಿತ ಮಹಿಳೆಯೊಬ್ಬರ ದೃಷ್ಟಿಕೋನದ ಹಾಡು. ಹೀಗಾಗಿ ಹುಡುಗಿಯೊಬ್ಬಳು ಬರೆದರೆ ಸೂಕ್ತವಾಗಿರುತ್ತದೆ ಎಂದು ಆಕೆಯಿಂದ ಬರೆಸಿದೆ’ ಎನ್ನುತ್ತಾರೆ ರಾಜ್. ಶಾಸ್ತ್ರೀಯ ಸಂಗೀತದ ಸ್ಪರ್ಶ ಈ ಹಾಡಿನಲ್ಲಿದೆ.

‘ಸ್ವಾತಿ ಮುತ್ತಿನ ಮಳೆ ಹನಿಯೇ’ ಚಿತ್ರದಲ್ಲಿ ರಾಜ್ ಮತ್ತು ಸಿರಿ ಜೊತೆಗೆ ಬಾಲಾಜಿ ಮನೋಹರ್, ಸೂರ್ಯ ವಸಿಷ್ಠ, ರೇಖಾ ಕೂಡ್ಲಿಗಿ, ಜೆ.ಪಿ. ತುಮ್ಮಿನಾಡು, ಸ್ನೇಹ ಶರ್ಮಾ ಮುಂತಾದವರು ಅಭಿನಯಿಸಿದ್ದಾರೆ. ಪ್ರವೀಣ್ ಶ್ರೀಯಾನ್ ಈ ಚಿತ್ರದ ಛಾಯಾಚಿತ್ರಗ್ರಹಣದ ಜೊತೆಗೆ ಸಂಕಲನದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ.

‘ಅನ್ ಲಾಕ್ ರಾಘವ’ನ ಹಾಡು

ಮಿಲಿಂದ್, ರೆಚೆಲ್ ಡೇವಿಡ್ ಜೊತೆಯಾಗಿ ನಟಿಸಿರುವ ‘ಅನ್ ಲಾಕ್ ರಾಘವ’ ಚಿತ್ರದ ‘ನನ್ನ ಹುಡುಗಿ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಹೃದಯಶಿವ ಅವರ ಸಾಹಿತ್ಯ, ಅನೂಪ್ ಸೀಳಿನ್ ಸಂಗೀತವಿದೆ. ದೀಪಕ್ ಮಧುವನಹಳ್ಳಿ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಬಿರುಸಿನಿಂದ ಸಾಗಿವೆ. ಶೀಘ್ರದಲ್ಲಿ ಮೊದಲ ಪ್ರತಿ ಹೊರಬರಲಿದ್ದು, ನಂತರ ಬಿಡುಗಡೆ ಯೋಜನೆ ಹಾಕಿಕೊಳ್ಳುತ್ತೇವೆ. ಈ ಹಾಡಿನ ಚಿತ್ರೀಕರಣ ಚಿತ್ರದುರ್ಗದಲ್ಲಿ ಎರಡು ದಿನಗಳ ಕಾಲ ನಡೆದಿತ್ತು. ಮುರಳಿ ಮಾಸ್ಟರ್ ನೃತ್ಯ ಸಂಯೋಜನೆ ಮಾಡಿದ್ದಾರೆ’ ಎಂದರು ನಿರ್ದೇಶಕರು.

ಸತ್ಯಪ್ರಕಾಶ್ ಈ ಚಿತ್ರದ ಕಥೆ ಬರೆದಿದ್ದು, ಮಂಜುನಾಥ.ಡಿ ಬಂಡವಾಳ ಹೂಡಿದ್ದಾರೆ. ‘ವರಾಹ ರೂಪಂ’ ಗೀತೆ ಹಾಡಿದ್ದ ಸಾಯಿವಿಘ್ನೇಶ್ ಈ ಗೀತೆಯನ್ನು ಹಾಡಿದ್ದಾರೆ. ಲವಿತ್ ಛಾಯಾಗ್ರಹಣ, ಅಜಯ್ ಸಂಕಲನ ಚಿತ್ರಕ್ಕಿದೆ. ಸಾಧು ಕೋಕಿಲ, ಅವಿನಾಶ್, ಶೋಭರಾಜ್, ರಮೇಶ್ ಭಟ್, ವೀಣಾ ಸುಂದರ್, ಸುಂದರ್, ಧರ್ಮಣ್ಣ ಕಡೂರು ಮತ್ತಿತರ ಕಲಾವಿದರು ಚಿತ್ರದ ಪ್ರಮುಖ ತಾರಾಗಣದಲ್ಲಿದ್ದಾರೆ.

ಚಿತ್ರದ ಆಡಿಯೋ ಹಕ್ಕು ಎ2 ಮ್ಯೂಸಿಕ್ ಪಾಲಾಗಿದೆ. ‘ದಾಖಲೆ ಮೊತ್ತಕ್ಕೆ ಆಡಿಯೋ ಹಕ್ಕು ಮಾರಾಟಗೊಂಡಿದೆ’ ಎಂದು ಚಿತ್ರತಂಡ ಹೇಳಿದೆ.

ರೆಚೆಲ್ ಡೇವಿಡ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ‘ದುಬೈನಲ್ಲಿ ನಡೆದ ಮಹಿಳಾ ಕುಸ್ತಿ ಚಾಂಪಿಯನ್‌ಶಿಪ್‌ನ ಫೈನಲ್‌ನಲ್ಲಿ ಪಾಕಿಸ್ತಾನದ ಮಹಿಳಾ ಕುಸ್ತಿಪಟು ಗೆದ್ದಿದ್ದರು. ಭಾರತೀಯ ಮಹಿಳೆಯರನ್ನು ಗೇಲಿ ಮಾಡಿದ ಅವರು ವೇದಿಕೆಯ ಮೇಲೆ ಯಾವುದೇ ಭಾರತೀಯ ಮಹಿಳೆ ಬಂದು ತನ್ನೊಂದಿಗೆ ಸ್ಪರ್ಧಿಸಬಹುದೇ ಎಂದು ಸವಾಲು ಹಾಕಿದರು. ಇದ್ದಕ್ಕಿದ್ದಂತೆ ತಮಿಳುನಾಡಿನ ಕವಿತಾ ವಿಜಯಲಕ್ಷ್ಮಿ ಎಂಬ ಹುಡುಗಿ ತಾನು ಸಿದ್ಧ ಎಂದು ಕೈ ಎತ್ತಿದಳು. ಚಾಮುಂಡಿ ರೂಪ ತಾಳಿ, ಕುಂಕುಮ ಧರಿಸಿ ವೇದಿಕೆ ಮೇಲೆ ಕಾಣಿಸಿಕೊಂಡು, ಎರಡು ಬಾರಿ ಪಾಕಿಸ್ತಾನದ ಕುಸ್ತಿಪಟುವನ್ನು ಸೋಲಿಸಿ ಗೆದ್ದಿದ್ದಾಳೆ. ನೋಡಿ ಆನಂದಿಸಿ. ನಮ್ಮ ದೇಶವನ್ನು ಅವಮಾನಿಸುವ ಯಾರಿಗಾದರೂ ಇದೇ ಭವಿಷ್ಯ’ ಎಂಬ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

✓ ದಿ ಗ್ರೇಟ್ ಖಲಿ ಅವರು ಜಲಂಧರ್‌ನಲ್ಲಿ ಆರಂಭಿಸಿದ ‘ಕಾಂಟಿನೆಂಟಲ್ ರೆಸ್ಲಿಂಗ್ ಎಂಟರ್‌ಟೈನ್‌ಮೆಂಟ್’ ಎಂಬ ಅಕಾಡೆಮಿಯಲ್ಲಿ 2016ರ ಜೂನ್ 13ರಂದು ನಡೆದ ಘಟನೆ ಇದು. ಈ ಕುಸ್ತಿಯಲ್ಲಿ ಇರುವ ಇಬ್ಬರೂ ಮಹಿಳೆಯರು ಭಾರತೀಯರು. ಪಾಕಿಸ್ತಾನದ ಕುಸ್ತಿಪಟು ಎಂದು ಹೇಳಿರುವ ಮಹಿಳೆಯ ಹೆಸರು ಬೀಬಿ ಬುಲ್‌ಬುಲ್. ಇವರು ಭಾರತದ ಮೊದಲ ವೃತ್ತಿಪರ ಕುಸ್ತಿಪಟು. ಕೇಸರಿ ಬಟ್ಟೆ ಧರಿಸಿರುವವರು ತಮಿಳುನಾಡಿನವರಲ್ಲ ಬದಲಿಗೆ ಅವರು ಹರಿಯಾಣದವರು. ಅವರು ಹೆಸರು ಕವಿತಾ ದೇವಿ. ಅಕಾಡೆಮಿಯ ಯೂಟ್ಯೂಬ್ ಪೇಜ್‌ನಲ್ಲಿ ಪೂರ್ಣ ವಿಡಿಯೊ ಇದೆ. 2020ರಿಂದಲೂ ಈ ವಿಡಿಯೊ ಇದೇ ಅಭಿಪ್ರಾಯದೊಂದಿಗೆ ಹಂಚಿಕೆಯಾಗುತ್ತಿದೆ. ಆದರೆ, ಇದರಲ್ಲಿ ಇರುವ ಮಾಹಿತಿಗಳೆಲ್ಲವೂ ಸುಳ್ಳು ಎಂದು ‘ದಿ ಲಾಜಿಕಲ್ ಇಂಡಿಯನ್’ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಮಗು ಮತ್ತು ಬಾಲ್ಯ

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಆ ಮಕ್ಕಳು ಕಿಟಕಿಯಿಂದ ನನ್ನ ನೋಡಿ ಆಗಾಗ ಕೈಬೀಸಿ ಟಾಟಾ ಅಂಕಲ್ ಎನ್ನುತ್ತವೆ. ಪ್ರತಿಯಾಗಿ ನಾನು ನಕ್ಕು ಕೈ ಬೀಸುತ್ತೇನೆ. ಜೈಲಿನಲ್ಲಿ ಬಂದಿಯಾದ ರೀತಿಯಲ್ಲಿ ಅವು ಸರಳುಗಳ ಮೂಲಕ ಹೊರ ಜಗತ್ತನ್ನು ಕಾಣಲು ಹಂಬಲಿಸುತ್ತಿವೆ. ನನಗೆ ಆ ಮಕ್ಕಳು ಪರಿಚಿತರಲ್ಲ. ನಾನು ಸಂಜೆ ಹೊರಟಾಗ ಮೇಲಿನ ಮಹಡಿಯಿಂದ ಬರುವ ಅವರ ದನಿಯನ್ನು ಕೇಳಿದಾಗ ಸಣ್ಣಗೆ ಆತಂಕಗೊಳ್ಳುತ್ತೇನೆ.

ಸ್ಕೂಲಿಗೆ ಬೆಳಿಗ್ಗೆ ಅಪ್ಪನ ಜೊತೆ ಹೋಗುವ ಅವರನ್ನು ಒಮ್ಮೆ ಮಾತಾಡಿಸಲು ನಿಂತೆ. ಅವರ ತಂದೆ ನನಗೆ ಅವಕಾಶವನ್ನೇ ಕೊಡದಂತೆ ಮಕ್ಕಳನ್ನು ಸೆಳೆದುಕೊಂಡು ಹೊರಟರು. ಅವರು ಹೀಗೆ ಅಂತೆ. ಮಕ್ಕಳನ್ನು ಯಾರ ಜೊತೆಯಲ್ಲೂ ಬೆರೆಯಲು, ಮಾತಾಡಿಸಲು ಬಿಡುವುದಿಲ್ಲ. ಜೈಲಿನಿಂದ ಕೋರ್ಟಿಗೆ ಕರೆದುಕೊಂಡು ಹೋಗುವ ಕೈದಿಗಳಂತೆ ಜಾಗ್ರತೆ ವಹಿಸಿ ಅವರಪ್ಪ ಸಾಗಿಸುತ್ತಾನೆ. ಇವರ ಪಕ್ಕದ ಮನೆಯ ಮಕ್ಕಳು ಕೊಂಚ ಬಡವರು. ಹೀಗಾಗಿ ಅವರ ಜೊತೆ ಸೇರಲು ಬಿಡುತ್ತಿಲ್ಲ ಎಂದು ನಾನು ಭಾವಿಸಿದ್ದೆ. ಆದರೆ ಹಾಗಲ್ಲ, ಯಾರ ಜೊತೆಗೂ ಮಕ್ಕಳು ಸಂಪರ್ಕ ಬೆಳಸದಂತೆ ಇವರು ಕಾವಲಿಗೆ ನಿಂತಿದ್ದಾರೆ.

ಸ್ವಾತಂತ್ರ್ಯವಿಲ್ಲದೆ ಚಡಪಡಿಸುತ್ತಿರುವ ಈ ಮಕ್ಕಳನ್ನು ಕಂಡಾಗ ಸಂಕಟವಾಗುತ್ತದೆ. ಹೀಗೆ ಸಾಕುವುದು ಒಂದು ಮೌಲ್ಯವೆಂದು ಅವರು ಭಾವಿಸಿರಬಹುದು. ಇದು ಬಿಟ್ಟು ಬೇರೆ ಏನು ಸಮಸ್ಯೆ ಇದೆಯೋ ತಿಳಿಯುತ್ತಿಲ್ಲ. ಎಳೆಯ ಮಕ್ಕಳನ್ನು ಹೀಗೆ ಬೆಳೆಸುವುದು ತಪ್ಪು. ಆದರೆ ತಿಳಿಸಿ ಹೇಳುವುದು ಹೇಗೆ?

ಒಮ್ಮೆ ಸೂಚ್ಯವಾಗಿ ಹೇಳಲು ಪ್ರಯತ್ನಿಸಿದಾಗ ‘ನಮ್ಮ ಮಕ್ಕಳು ನಾವು ಹೇಗಾದರೂ ಬೆಳೆಸುತ್ತೇವೆ’ ಎನ್ನುವಂತೆ ಕಟುವಾಗಿ ಉತ್ತರಿಸಿದರು. ಈ ಪರಿ ಬೆಳೆಯುವ ಮಕ್ಕಳು ಮುಂದೆ ಈ ಸಮಾಜದಲ್ಲಿ ಹೇಗೆ ಬಾಳಬಹುದೆಂದು ಯೋಚಿಸಿ ಹೈರಾಣಾದೆ. ಹೀಗೆ ಮಕ್ಕಳನ್ನು ಇನ್ನೊಬ್ಬರ ಜೊತೆ ಬೆರೆಯದಂತೆ ಬೆಳೆಸುವ ಈ ಅವಿವೇಕತನ ಅವರಿಗೆ ಯಾಕೆ ಬಂದಿದೆಯೋ?

ಪ್ರಾಯಶಃ ಅವರ ಮಟ್ಟಿಗೆ ಪ್ರಪಂಚ ಹಾಳಾಗಿದೆ. ನಾವು ಹುಷಾರಾಗಿರಬೇಕು ಎಂಬ ಹೆದರಿಕೆ ಹೀಗೆ ಮಾಡಿಸುತ್ತಿರಬಹುದು. ಈ ಜಗತ್ತಿನಲ್ಲಿ ಒಳ್ಳೆಯದು ಇದೆ; ಕೆಟ್ಟದ್ದು ಇದೆ. ಎರಡನ್ನೂ ತಿಳಿಸಿ ಹೇಳುವ ಕೆಲಸವನ್ನು ತಂದೆ-ತಾಯಿ ಮಾಡಬೇಕು. ಗೌತಮನನ್ನು ಅವರ ತಂದೆ ಶುದ್ಧೋದನ ಹೀಗೆ ಕೂಡಿಟ್ಟು ಸಾಕಿದ ರೀತಿ ನಮ್ಮ ಕಣ್ಣ ಮುಂದಿದೆ. ಬದುಕಿನ ನಿಜ ಸತ್ಯ ಗೊತ್ತಾದಾಗ ಆತ ಉತ್ತರ ಹುಡುಕಲು ಎಲ್ಲವನ್ನು ಪರಿತ್ಯಜಿಸಿ ಹೊರಟು ಬುದ್ಧನಾದ.

ಇಂಥ ಅನೇಕ ಸಂಕುಚಿತ ತಂದೆ ತಾಯಿಯಂದಿರು ನಮ್ಮ ನಡುವೆ ಇದ್ದಾರೆ . ಹಳ್ಳಿಯ ಮಕ್ಕಳು ಎಲ್ಲರ ಜೊತೆ ಬೆರೆತು ಆಟವಾಡಿ, ಬೈದಾಡಿ, ಜಗಳವಾಡಿ, ನೂರಾರು ಅನುಭವಗಳನ್ನು ಪಡೆಯುತ್ತಾರೆ. ಹಿರಿಯರ ಕಣ್ಣಿಗೆ ಬಿದ್ದು ತಪ್ಪು ಸರಿಗಳ ಅರ್ಥ ಕಲಿಯುತ್ತಾರೆ. ಈ ಬಗೆಯ ಮಕ್ಕಳೇ ಬದುಕಲ್ಲಿ ಗಟ್ಟಿಯಾಗಿ, ದಿಟ್ಟವಾಗಿ, ನಿಲ್ಲುವುದು. ಕಾಡಿನಲ್ಲಿ ಹುಟ್ಟಿ ಬೆಳೆಯುವ ಗಿಡಮರ, ಬಳ್ಳಿಗಳಿಗೆ ಯಾರೂ ನೀರು ಗೊಬ್ಬರ ಪೂರೈಸುವುದಿಲ್ಲ. ಅವು ಸ್ವತಂತ್ರವಾಗಿ ತಮ್ಮ ಪಾಡಿಗೆ ತಾವು ಎಲ್ಲವನ್ನೂ ಸಂಪಾದಿಸಿಕೊಂಡು ಸಮೃದ್ಧವಾಗಿ ಬೆಳೆಯುತ್ತವೆ. ಅದೇ ನಾವು ಕುಂಡದಲ್ಲಿ ನೆಟ್ಟು ಬೆಳೆಸುವ ಗಿಡ ಎಂದೂ ಎತ್ತರಕ್ಕೆ ಬೆಳೆಯುವುದಿಲ್ಲ. ಪ್ರಕೃತಿಯ ಈ ಸಣ್ಣ ಪಾಠವನ್ನು ನಾವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ನವೆಂಬರ್ 8, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ದಶಮಿ ಗಂ. 08-24 ನಕ್ಷತ್ರ: ಪೂರ್ವಫಲ್ಗುನಿ ಗಂ. 19-19 ಯೋಗ: ಐಂದ್ರ ಗಂ 16-10
ಕರಣ: ವಿಷ್ಟಿ ಗಂ. 08-24, ತುಲಾ ಮಾಸದ 22 ನೇ ದಿನ, ಮಳೆನಕ್ಷತ್ರ: ವಿಶಾಖ 1.
ರಾಹುಕಾಲ : ಮಧ್ಯಾಹ್ನ 12-00 - 01-30
ಸೂರ್ಯೋದಯ : 06-30 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 23 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 7, 2

ಮೇಷ: ತಂದೆ-ತಾಯಿಯ ಹಿತವಚನವನ್ನು ಸಹನೆಯಿಂದ ಕೇಳುವುದು ಮತ್ತು ಜೀವನದಲ್ಲಿ ಅಳವಡಿಸಿಕೊಳ್ಳುವುದನ್ನು ರೂಢಿಸಿಕೊಳ್ಳಿ. ಹೂಗಳ ರಫ್ತು ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿದ ಲಾಭ ಪಡೆಯಬಹುದು.

ವೃಷಭ: ದಾಂಪತ್ಯದಲ್ಲಿ ಸಂಶಯದ ವಾತಾವರಣ ಇದ್ದು ಅಸಮಾಧಾನ ಮೂಡುವುದು. ಹಿರಿಯರೊಬ್ಬರು ನಿಮ್ಮ ಅಭ್ಯುದಯಕ್ಕಾಗಿ ಮಾರ್ಗದರ್ಶನ ನೀಡುವರು. ಸಣ್ಣ-ಪುಟ್ಟ ವಿಷಯಕ್ಕೂ ಮಹತ್ವ ಕೊಡಬೇಕಾಗುವುದು.

ಮಿಥುನ: ಏಜೆನ್ಸಿಯಂಥ ಉದ್ಯೋಗ ನಡೆಸುವವರಿಗೆ ಬೇಡಿಕೆ ಹೆಚ್ಚುವುದರಿಂದ ಲಾಭ. ವಿದ್ಯಾಭ್ಯಾಸದಲ್ಲಿ ಮಕ್ಕಳ ಅಸಡ್ಡೆಯು ವಿದ್ಯಾಪ್ರಗತಿಗೆ ಮಾರಕವಾಗಲಿದೆ. ಸಂಪಾದನೆಯಲ್ಲಿ ಕಡಿಮೆಯಿದ್ದರೂ ಚಿಂತೆ ಇರದು.

ಕರ್ಕಾಟಕ: ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯ ಹೊಂದುವಿರಿ. ಧರ್ಮ-ಕರ್ಮದಂತಹ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು. ನಿಮ್ಮ ಕ್ರಿಯಾತ್ಮಕವಾದ ರಾಜಕೀಯ ಭವಿಷ್ಯಕ್ಕೆ ಮೋಡಕವಿದಂತೆ ಆಗುತ್ತದೆ.

ಸಿಂಹ: ಪರಿಶ್ರಮಕ್ಕೆ ತಕ್ಕಂಥ ಆದಾಯವಿಲ್ಲದೆ ಸೊರಗಿರುವ ನಿಮಗೆ, ಋಣಾತ್ಮಕ ಯೋಚನೆಗಳು ಬರಬಹುದು. ಕುಟುಂಬ ಸದಸ್ಯರ ಆರೋಗ್ಯ ವಿಷಯದಲ್ಲಿನ ಚಿಂತೆ ತಪ್ಪಿದ್ದಲ್ಲ. ಸಂಶೋಧಕರಿಗೆ ಇಂದು ಪ್ರಶಂಸೆ ಲಭಿಸಲಿದೆ.

ಕನ್ಯಾ: ನಿಮ್ಮ ಪರಿಶ್ರಮಕ್ಕೆ ಹಾಗೂ ನಿಮ್ಮ ಪರೋಪಕಾರದ ವ್ಯಕ್ತಿತ್ವಕ್ಕೆ ಈದಿನ ನೀವು ತಕ್ಕ ಪ್ರತಿಫಲ ಹೊಂದುವಿರಿ. ರಸಗೊಬ್ಬರ ಮತ್ತು ಕೀಟ ನಾಶಕಗಳನ್ನು ವ್ಯಾಪಾರ ಮಾಡುವವರಿಗೆ ಲಾಭದ ಜೊತೆ ಆಯಾಸವೂ ಕಾಡಲಿದೆ.

ತುಲಾ: ನಿಮ್ಮ ಯೋಜನೆಗಳು ಯಾವುದೇ ದೋಷಗಳಿಲ್ಲದೇ ಸರಾಗವಾಗಿ, ನಿರಾತಂಕವಾಗಿ ಸಾಗುವುದು. ಆಂಜನೇಯನ ಸೇವೆಯಿಂದ ಎದುರಾದ ಗೊಂದಲ ನಿವಾರಣೆಯಾಗುತ್ತದೆ. ನೌಕರಿಯಲ್ಲಿ ಉತ್ತಮ ಸ್ಥಿತಿ ಹೊಂದುವಿರಿ.

ವೃಶ್ಚಿಕ: ಸ್ನೇಹಿತರ ಸಹಾಯ, ಸಹಕಾರ, ಸಲಹೆಯಿಂದ ಎಲ್ಲ ಸರಾಗವಾಗಿ ನಡೆಯಲಿದೆ. ಮೂಳೆಗೆ ಸಂಬಂಧಿಸಿದಂತೆ ಆರೋಗ್ಯದಲ್ಲಿ ಗಮನವಿರಲಿ. ಅವಶ್ಯಕತೆಗೆ ಮೀರಿ ಕೆಲಸ ಮಾಡಬೇಕಾದ ಸಮಸ್ಯೆ ಈ ದಿನ ನಿಮಗಿಲ್ಲ.

ಧನು: ರೇಷ್ಮೆ ವ್ಯಾಪಾರಿಗಳು ತಮ್ಮ ಉತ್ಪನ್ನಗಳನ್ನು ಉತ್ತಮ ಬೆಲೆಗೆ ಮಾರಾಟ ಮಾಡಬಹುದು. ಯಾವುದೇ ಲೆಕ್ಕಾಚಾರವಿಲ್ಲದ ನಿಮ್ಮ ಆರ್ಥಿಕ ಜೀವನ ಸಮಸ್ಯೆ ಸೃಷ್ಟಿ ಮಾಡುವುದು. ವೈದ್ಯರ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸಿ.

ಮಕರ: ಈ ದಿನ ವಿಶೇಷ ವ್ಯಕ್ತಿಗಳ ಭೇಟಿಯು ಸಂತೋಷ ತರುವುದಲ್ಲದೆ, ನಿಮ್ಮ ಹೊಸ ಯೋಜನೆಗಳಿಗೆ ಚೈತನ್ಯ ತುಂಬುವುದು. ನಿಮ್ಮ ಭಾವನೆಗಳಿಗೆ ಗೆಳೆಯರ ಸೂಕ್ತ ಪ್ರತಿಕ್ರಿಯೆ ದೊರೆಯಲಿದೆ.

ಕುಂಭ: ತಂತ್ರಜ್ಞಾನ ಬಳಸುವುದರಿಂದ ವ್ಯಾಪಾರದಲ್ಲಿ ಬಹಳಷ್ಟು ಪ್ರಗತಿಯನ್ನು ಸಾಧಿಸುವಿರಿ. ಯಾವುದೇ ರೀತಿಯ ದಿಟ್ಟ ನಿಲುವನ್ನು ತೆಗೆದುಕೊಳ್ಳಲು ಈ ದಿನ ಸಮಂಜಸವಲ್ಲ. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು.

ಮೀನ: ಇತರರ ಸಂತೋಷದಲ್ಲಿ ನಿಮ್ಮ ನೆಮ್ಮದಿ ಹಾಗೂ ಸಂತೋಷವನ್ನು ಪಡೆಯುವಿರಿ. ಲೇವಾದೇವಿ ವ್ಯವಹಾರ ನಡೆಸುವವರಿಗೆ ಸಂಕಷ್ಟದ ಪರಿಸ್ಥಿತಿ ಎದುರಾಗಲಿದೆ. ಅನಿವಾರ್ಯವಾಗಿ ಪ್ರಯಾಣ ಕಂಡು ಬರುವುದು.

ಪದಬಂಧ 5494

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಭೆಯಲ್ಲಿರುವ ಜನರು (4)
3.ವನದಲ್ಲಿಯೇ ವರನ ಆದಾಯವಿದೆ (4)
5.ವಿನಯ ತೋರಿದವನ ಕಣ್ಣು! (3)
7.ನರನಿಗೆ ಸಲ್ಲಿಸಿದ ವಂದನೆ (4)
9.ರಾಜನ ಹೆಂಡತಿಯಿಲ್ಲಿ ತಿರುಗಿ ನಿಂತಿದ್ದಾಳೆ (2)
10.ದುಡ್ಡು ಇಲ್ಲಿ ಉಲ್ಟಾ ಪಲ್ಟಾ ಆಗಿದೆಯಲ್ಲಾ (2)
11.ಈತ ಗೆಲುವನ್ನು ಪಡೆದವನು (4)
14.ಹರಿಯಿಂದ ಪ್ರಾರಂಭವಾದ ತೀಕ್ಷ್ಣತೆ! (3)
16.ಗಡಿಯ ಹತ್ತಿರವಿರುವ ಕಾಲ ಸೂಚಕಯಂತ್ರ (4)
17.ಸೂರ್ಯನ ಇನ್ನೊಂದು ಹೆಸರು (4)

ಮೇಲಿಂದ ಕೆಳಕ್ಕೆ

1.ಮಾನವಂತನಿಗೆ ತೋರಿದ ಮನ್ನಣೆ (3)
2.ಜನರೊಳಗಿರುವ ಹುಟ್ಟು (3)
3.ಕಾಡು ಹೂವಿದು (4)
4.ಬೆಳಗಿನ ಜಾವ (3)
6.ಈತ ನರಕದ ಅರಸ (4)
7.ಇದು ಖಂಡಿತಾ ಅಸಲಿಯಲ್ಲ ಬಿಡಿ! (3)
8.ಯುದ್ಧದ ನಗಾರಿಯಿದು (4)
12.ಶಾಕ್ ಆಯಿತೇ? ಇದು ಪಕ್ಕಾ ಸಸ್ಯಾಹಾರ! (4)
13.ರಾಗ ಕೇಳಿದ್ದಕ್ಕೇ ಈ ವೈರಾಗ್ಯ! (3)
14.ವನದ ಬಳಿ ಮಾಡಿದ ಹೋಮ (3)
15.ತಣಿಯಲೆಂದು ನೀರು ನೀಡಿದ ಯುವತಿ (3)



5493ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದಕ 3.ಕಡಸು
4.ಮಡಕೆ 6.ಕುಶಲ
7.ವಾಡಿಕೆ 9.ಮರುಕ
11.ನಜರು 13.ದಿವಾನ
15.ಪ್ರವಾದಿ 17.ಲವಂಗ
18.ವರ್ತಕ 19.ತಿವಸ

ಮೇಲಿಂದ ಕೆಳಕ್ಕೆ:
1.ಉಸುಕು 2.ಕಮಲ
3.ಕನ್ನಡಿ 5.ಕೆಸರು
7.ವಾಗ್ದಾನ 8.ಕೆನ್ನೀರು
9.ಮಸೀದಿ 10.ಕವನ
12.ಜಟಿಲ 14.ವಾದಕ
15.ಪ್ರಗತಿ 16.ದಿವಸ

ಸುಡೊಕು 5880

3	4		2		9	6		1
9						2	7	4
	7		1		4			8
		4		3		1		2
2	8		6	9			4	
		7					6	5
	5							7
		6	8		2			
4	2			5		8		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು,

5879 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ನ.18ರಂದು ಕಟೀಲಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ

21 ಸಾಧಕರಿಗೆ ಯಕ್ಷಗಾನ ಕಲಾರಂಗ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಉಡುಪಿ: ಪ್ರತಿವರ್ಷ ಯಕ್ಷಗಾನ ಕಲಾರಂಗದಿಂದ ಹಿರಿಯ ಸಾಧಕರ ಸ್ಮರಣಾರ್ಥ ಸಾಧಕ ಕಲಾವಿದರಿಗೆ ಕೊಡಮಾಡುವ 'ಯಕ್ಷಗಾನ ಕಲಾರಂಗ ಪ್ರಶಸ್ತಿ'ಯನ್ನು ತೆಂಕು ಹಾಗೂ ಬಡಗುತಿಟ್ಟಿನ 21 ಮಂದಿ ಯಕ್ಷಗಾನ ಕಲಾವಿದರಿಗೆ ನೀಡಲಾಗುತ್ತಿದೆ.

ಡಾ.ಬಿ.ಬಿ. ಶೆಟ್ಟಿ ಸ್ಮರಣಾರ್ಥ ಪ್ರಶಸ್ತಿಗೆ ಶಿವಮೊಗ್ಗ ಜಿಲ್ಲೆಯ ಕೊಣಂದೂರಿನ ಚಿದಂಬರ ಬಾಬು, ಪ್ರೊ.ಬಿ.ವಿ. ಆಚಾರ್ಯ ಸ್ಮರಣಾರ್ಥ ಪ್ರಶಸ್ತಿಗೆ ಕೋಟ ಎಚ್.ಗೋವಿಂದ ಉರಾಳ, ನಿಟ್ಟೂರು ಸುಂದರ ಶೆಟ್ಟಿ, ಮಹೇಶ ಡಿ.ಶೆಟ್ಟಿ ಸ್ಮರಣಾರ್ಥ ಪ್ರಶಸ್ತಿಗೆ ವಸಂತ ಶೆಟ್ಟಿ, ಮುಂಡ್ಕೂರು ಬಿ.ಜಗಜೀವನದಾಸ ಶೆಟ್ಟಿ ಸ್ಮರಣಾರ್ಥ ಪ್ರಶಸ್ತಿಗೆ ತೀರ್ಥಹಳ್ಳಿಯ ಕೆ.ಎಸ್. ಶಿವಶಂಕರ ಭಟ್, ಕೆ.ವಿಶ್ವಜ್ಞ ಶೆಟ್ಟಿ ಸ್ಮರಣಾರ್ಥ ಪ್ರಶಸ್ತಿಗೆ ಬೈಂದೂರಿನ ಸಂಜೀವ ಕೊಠಾರಿ.

ಕುತ್ಪಾಡಿ ಆನಂದ ಗಾಣಿಗ ಸ್ಮರಣಾರ್ಥ ಪ್ರಶಸ್ತಿಗೆ ಚಿಕ್ಕಮಗಳೂರಿನ ಸೀತೂರು ಎಚ್.ಎಸ್. ಅನಂತ ಪದ್ಮನಾಭ ರಾವ್, ಭಾಗವತ ನಾರ್ಣಪ್ಪ ಉಪ್ಪೂರ ಸ್ಮರಣಾರ್ಥ ಪ್ರಶಸ್ತಿಗೆ ಯಲ್ಲಾಪುರದ ಗಣಪತಿ ಭಾಗವತ, ಮಾರ್ವಿ ರಾಮಕೃಷ್ಣ ಹೆಬ್ಬಾರ, ಮಾರ್ವಿ ವಾದಿರಾಜ ಹೆಬ್ಬಾರ ಸ್ಮರಣಾರ್ಥ ಪ್ರಶಸ್ತಿಗೆ ಮಂದಾರ್ತಿಯ ಎಂ. ರಘುರಾಮ ಮಡಿವಾಳ.

ಸಿರಿಯಾರ ಮಂಜು ನಾಯ್ಕ ಸ್ಮರಣಾರ್ಥ ಪ್ರಶಸ್ತಿಗೆ ಹಾಲಾಡಿಯ ಕೋಡಿ ವಿಶ್ವನಾಥ ಗಾಣಿಗ, ಕೋಟ ವೈಕುಂಠ ಸ್ಮರಣಾರ್ಥ ಪ್ರಶಸ್ತಿಗೆ ಸಿದ್ದಾಪುರದ ಅಶೋಕ ಭಟ್ಟ, ಪಡಾರು ನರಸಿಂಹ ಶಾಸ್ತ್ರಿ ಸ್ಮರಣಾರ್ಥ ಪ್ರಶಸ್ತಿಗೆ ಗುಣವಂತೆಯ ಸುಬ್ರಾಯ ನಾರಾಯಣ ಭಂಡಾರಿ, ಕಡಿಯಾಳಿ ಸುಬ್ರಾಯ ಉಪಾಧ್ಯ ಸ್ಮರಣಾರ್ಥ ಪ್ರಶಸ್ತಿಗೆ ಚೋರಾಡಿ ವಿಠಲ ಕುಲಾಲ, ಮಲ್ಪೆ ಶಂಕರನಾರಾಯಣ ಸಾಮಗ ಸ್ಮರಣಾರ್ಥ ಪ್ರಶಸ್ತಿಗೆ ಎರ್ಮಾಳು ವೈ.ವಾಸುದೇವ ರಾವ್, ಐರೋಡಿ ರಾಮ ಗಾಣಿಗ ಸ್ಮರಣಾರ್ಥ ಪ್ರಶಸ್ತಿಗೆ ಸಾಗರದ ಪ್ರಭಾಕರ ಹೆಗಡೆ.

ತಿಮ್ಮಯ್ಯ ಸ್ಮರಣಾರ್ಥ ಪ್ರಶಸ್ತಿಗೆ ಕಾಸರಗೋಡು ಮಧೂರು ರಾಧಾಕೃಷ್ಣ ನಾವಡ, ಎಚ್. ಪರಮೇಶ್ವರ ಐತಾಳ್ ಸ್ಮರಣಾರ್ಥ ಪ್ರಶಸ್ತಿಗೆ ಪಡುಬಿದ್ರಿಯ ರತ್ನಾಕರ ಆಚಾರ್ಯ, ಕಡಂದೇಲು ಪುರುಷೋತ್ತಮ ಭಟ್ ಪ್ರಶಸ್ತಿಗೆ ಬಂಟ್ವಾಳದ ಗುಂಡಿಮಜಲು ಗೋಪಾಲ ಭಟ್ಟ, ಕಡತೋಕ ಕೃಷ್ಣ ಭಾಗವತ್ ಪ್ರಶಸ್ತಿಗೆ ಸಾಗರದ ಇಡುವಾಣಿಯ ತ್ರಯಂಬಕ ಹೆಗಡೆ, ಬಿ.ಪಿ. ಕರ್ಕೇರಾ ಪ್ರಶಸ್ತಿಗೆ ಬೆಳ್ತಂಗಡಿಯ ಸಿದ್ಧಕಟ್ಟೆ ಸದಾಶಿವ ಶೆಟ್ಟಿಗಾರ್, ಕೋಳ್ಯೂರು ರಾಮಚಂದ್ರ ರಾವ್ ಗೌರವಾರ್ಥ ಪ್ರಶಸ್ತಿಗೆ ಬೆಳ್ತಂಗಡಿ ಎನ್.ವಸಂತ ಗೌಡ ಕಾಯರ್ತಡ್ಕ, ಪ್ರಭಾವತಿ ವಿ. ಶೆಣೈ-ಯು.ವಿಶ್ವನಾಥ ಶೆಣೈ ಗೌರವಾರ್ಥ ಪ್ರಶಸ್ತಿಗೆ ಬಂಟ್ವಾಳದ ಶ್ರೀಧರ ಪೂಜಾರಿ ಪಂಜಾಜೆ ಅವರನ್ನು ಆಯ್ಕೆ ಮಾಡಲಾಗಿದೆ.

ಯಕ್ಷಚೇತನ ಪ್ರಶಸ್ತಿಯನ್ನು ಸಂಸ್ಥೆಯ ಹಿರಿಯ ಕಾರ್ಯಕರ್ತ ವಿಜಯಕುಮಾರ್ ಮುದ್ರಾಡಿ ಅವರಿಗೆ ನೀಡಲಾಗುವುದು. ಯಕ್ಷಚೇತನ ಪ್ರಶಸ್ತಿ ಹೊರತುಪಡಿಸಿ ಉಳಿದೆಲ್ಲಾ ಪ್ರಶಸ್ತಿಗಳು ತಲಾ ₹20,000 ನಗದು ಪ್ರಶಸ್ತಿ ಒಳಗೊಂಡಿವೆ.

ನ.18ರಂದು ಸಂಜೆ 5ಕ್ಕೆ ಕಟೀಲಿನ ಸರಸ್ವತಿ ಸದನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಎಂ.ಗಂಗಾಧರ ರಾವ್, ಕಾರ್ಯದರ್ಶಿ ಮುರಳಿ ಕಡೆಕಾರ್ ತಿಳಿಸಿದ್ದಾರೆ.

ನಟಿ ರಶ್ಮಿಕಾ ಮಂದಣ್ಣ ಪ್ರಕರಣ: ಸಾಮಾಜಿಕ ಜಾಲತಾಣಗಳಿಗೆ ಕೇಂದ್ರದ ಸೂಚನೆ

ತಿರುಚಿದ ವಿಡಿಯೊ ತೆರವಿಗೆ ಗಡುವು

ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣಗಳಾದ 'ಎಕ್ಸ್', ಇನ್‌ಸ್ಟಾಗ್ರಾಂ ಹಾಗೂ ಫೇಸ್‌ಬುಕ್‌ನಲ್ಲಿ ಯಾವುದೇ ವ್ಯಕ್ತಿಯ ಬಗ್ಗೆ ತಿರುಚಿದ ಛಾಯಾಚಿತ್ರಗಳು ಹಾಗೂ ವಿಡಿಯೊಗಳು ಹರಿದಾಡುತ್ತಿರುವ ಕುರಿತು ದೂರು ದಾಖಲಾದ 24 ಗಂಟೆಯೊಳಗೆ ಅದನ್ನು ತೆಗೆದುಹಾಕಬೇಕು ಎಂದು ಕೇಂದ್ರ ಸರ್ಕಾರ ಕಟ್ಟುನಿಟ್ಟಾಗಿ ಸೂಚಿಸಿದೆ.

ರಶ್ಮಿಕಾ ಮಂದಣ್ಣ

ನಟಿ ರಶ್ಮಿಕಾ ಮಂದಣ್ಣ ಅವರ ತಿರುಚಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಈ ವಿಡಿಯೊದಲ್ಲಿ ಬ್ರಿಟನ್‌ನಲ್ಲಿ ನೆಲೆಸಿರುವ ಭಾರತ ಮೂಲದ ಯುವತಿಯೊಬ್ಬರ ಮುಖವನ್ನು ಕೃತಕ ಬುದ್ಧಿಮತ್ತೆ ಬಳಸಿ, ರಶ್ಮಿಕಾ ಅವರ ಮುಖವನ್ನು ಹೋಲುವಂತೆಯೇ ಎಡಿಟ್ ಮಾಡಲಾಗಿತ್ತು. ಈ ಬಗ್ಗೆ ಬಾಲಿವುಡ್ ನಟ ಅಮಿತಾಬ್ ಬಚ್ಚನ್ ಸೇರಿದಂತೆ ನೆಟ್ಟಿಗರು ಆಕ್ರೋಶ ವ್ಯಕ್ತಪಡಿಸಿದ್ದರು. ಇದರ ಬೆನ್ನಲ್ಲೇ ಕೇಂದ್ರವು ಈ ಆದೇಶ ಹೊರಡಿಸಿದೆ.

'ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆಯ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಕೇಂದ್ರವು ಸೂಚಿಸಿದೆ' ಎಂದು ಮೂಲಗಳು ತಿಳಿಸಿವೆ.

ಯಾವುದೇ ವ್ಯಕ್ತಿಯನ್ನು ಹೋಲುವಂತಹ ತಿರುಚಿದ ವಿಡಿಯೊಗಳು ಹರಿದಾಡದಂತೆ ಎಚ್ಚರವಹಿಸುವುದು ಜಾಲತಾಣಗಳ ಹೊಣೆಗಾರಿಕೆಯಾಗಿದೆ. ದೂರು ನೀಡಿದ ತಕ್ಷಣವೇ ಕ್ರಮಕ್ಕೆ ಮುಂದಾಗಬೇಕು ಎಂದು ಸೂಚಿಸಿದೆ.

ನಿಯಮ ಉಲ್ಲಂಘನೆ ಮಾಡಿದರೆ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯದಿಂದ ಐ.ಟಿ ಕಾಯ್ದೆಯಡಿ ಕ್ರಮ ಜರುಗಿಸಲಾಗುತ್ತದೆಂದು ಕೇಂದ್ರವು ಎಚ್ಚರಿಕೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಸಚಿವರ ಆಕ್ಷೇಪ: ರಶ್ಮಿಕಾ ಅವರ ತಿರುಚಿದ ವಿಡಿಯೊ ಬಗ್ಗೆ 'ಎಕ್ಸ್'ನಲ್ಲಿ ಸೋಮವಾರ ಪ್ರತಿಕ್ರಿಯಿಸಿದ್ದ ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್, 'ಸಮಾಜಕ್ಕೆ ತಪ್ಪು ಮಾಹಿತಿ ನೀಡುವ ಇಂತಹ ವಿಡಿಯೊಗಳನ್ನು ತೆಗೆದುಹಾಕುವುದು ಸಾಮಾಜಿಕ ಜಾಲತಾಣ ನಿರ್ವಹಿಸುವ ಕಂಪನಿಗಳ ಹೊಣೆಯಾಗಿದೆ' ಎಂದಿದ್ದರು.

'ಮಾಹಿತಿ ತಂತ್ರಜ್ಞಾನ (ಐ.ಟಿ) ನಿಯಮ 7 ಅನ್ನು ಪಾಲಿಸುವುದು ಕಡ್ಡಾಯ' ಎಂದು ಹೇಳಿದ್ದಾರೆ.

ಕತ್ರಿನಾ ಕೈಫ್ ತಿರುಚಿದ ಚಿತ್ರ

ನವದೆಹಲಿ: ನಟಿ ರಶ್ಮಿಕಾ ಮಂದಣ್ಣ ಅವರ ತಿರುಚಿದ ಚಿತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ಬೆನ್ನಲ್ಲೇ, ಬಾಲಿವುಡ್ ನಟಿ ಕತ್ರಿನಾ ಕೈಫ್ ಅವರ ತಿರುಚಿದ ಚಿತ್ರವೊಂದು ವಿವಿಧ ವೇದಿಕೆಗಳಲ್ಲಿ ಹರಿದಾಡಿದೆ.

ಕತ್ರಿನಾ ಅವರ 'ಟೈಗರ್–3' ಚಿತ್ರದ ದೃಶ್ಯವನ್ನು ತಿರುಚಿ, ಹರಿಬಿಡಲಾಗಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ಕತ್ರಿನಾ ಅವರು ಟವೆಲ್ ಧರಿಸಿ, ಹಾಲಿವುಡ್ ಸ್ಟಂಟ್ ಕಲಾವಿದೆ ಜೊತೆ ಹೊಡೆದಾಡುತ್ತಿರುವುದನ್ನು ತೋರಿಸುವ ದೃಶ್ಯ ಮೂಲ ಛಾಯಾಚಿತ್ರದಲ್ಲಿದೆ. ಆದರೆ, ಚಿತ್ರವನ್ನು ತಿರುಚಲಾಗಿದ್ದು, ಕತ್ರಿನಾ ಅವರನ್ನು ತುಂಡುಡುಗೆಯಲ್ಲಿರುವಂತೆ ತೋರಿಸಲಾಗಿದೆ. ಕೃತಕಬುದ್ಧಿಮತ್ತೆ ಬಳಸಿ ಈ ಚಿತ್ರವನ್ನು ತಿರುಚಲಾಗಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ನಾವು ಜನಪ್ರಿಯತೆಯಲ್ಲಿರುವ ನಟಿಯರೇ ಆಗಿರಬಹುದು. ಈ ರೀತಿಯ ಕೃತ್ಯಗಳನ್ನು ಕಂಡಾಗ ಮೌನವಹಿಸಿದ್ದೇವೆ. ಆದರೆ ಇದು ಮೌನ ವಹಿಸುವ ಸಮಯವಲ್ಲ

ಮೃಣಾಲ್ ಠಾಕೂರ್, ನಟಿ

ರಾಜಕಾರಣವನ್ನು ಸ್ವಾರ್ಥಕ್ಕೆ ಬಳಸದ ನಿಷ್ಠುರವಾದಿ

• ಮೋಟಮ್ಮ

ನುಡಿ ನಮನ

ಈ ನಾಡು ಕಂಡ ಮುತ್ಸದ್ದಿ ಡಿ.ಬಿ ಚಂದ್ರೇಗೌಡರು, ಅಪ್ಪಟ ಪ್ರಜಾಪ್ರಭುತ್ವವಾದಿ. ರಾಷ್ಟ್ರಮಟ್ಟದ ರಾಜಕಾರಣಿಗಳ ಒಡನಾಟವಿದ್ದರೂ ಎಂದಿಗೂ ರಾಜಕಾರಣವನ್ನು ಸ್ವಾರ್ಥಕ್ಕೆ ಬಳಸದೆ, ಶುದ್ಧ ಹಸ್ತರಾಗಿಯೇ ನಮ್ಮಿಂದ ದೂರವಾದರು.

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ದಾರದಹಳ್ಳಿ ಗ್ರಾಮದ ಪಟೇಲ್ ಭೈರೇಗೌಡ ಹಾಗೂ ಪುಟ್ಟಮ್ಮ ಅವರ ಪುತ್ರ ಚಂದ್ರೇಗೌಡರು 1971ರಲ್ಲಿ ಕಾಂಗ್ರೆಸ್ ಪಕ್ಷದ ಮೂಲಕ ರಾಜಕೀಯ ಪ್ರವೇಶ ಮಾಡಿ ವಿಧಾನಸಭೆ, ವಿಧಾನ ಪರಿಷತ್ತು, ಲೋಕಸಭೆ, ರಾಜ್ಯಸಭೆಯ ಸದಸ್ಯರಾಗುವ ಮೂಲಕ ನಾಲ್ಕೂ ಸದನಗಳಲ್ಲಿ ಸದಸ್ಯರಾಗಿದ್ದ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ರಾಜ್ಯದಲ್ಲಿ ನೀರಾವರಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದರು. ಅಧಿಕಾರ ಸಿಕ್ಕಾಗ ಸ್ವಜನ ಪಕ್ಷಪಾತ ಮಾಡಿದ ಸಣ್ಣ ಅಪವಾದವೂ ಅವರ ಮೇಲಿಲ್ಲ. ಹತ್ತಿರದವರನ್ನು ಅಧಿಕಾರದ ಹತ್ತಿರಕ್ಕೂ ಬಿಟ್ಟುಕೊಳ್ಳದೆ ಆಡಳಿತ ನಡೆಸಿದವರು.

ಯಾವುದೇ ವ್ಯಕ್ತಿ ದೂರು ತಂದರೂ ಅದನ್ನು ಕೂಲಂಕಷವಾಗಿ ಪರಿಶೀಲಿಸದೆ ನಿರ್ಧಾರ ತೆಗೆದುಕೊಳ್ಳುತ್ತಿರಲಿಲ್ಲ. ತಪ್ಪು ಮಾಡಿದರೆ ಅಥವಾ ಕಾನೂನು ಬದ್ಧವಾಗಿಲ್ಲವಾದರೆ ಎಷ್ಟೇ ಹತ್ತಿರದವರಾದರೂ 'ಆಗುವುದಿಲ್ಲ' ಎನ್ನುತ್ತಿದ್ದ ನಿಷ್ಠುರವಾದಿ. 'ಹೀಗೆ ಹೇಳಿದರೆ ನಿಮ್ಮನ್ನೇ ನಂಬಿ ಬಂದವರಿಗೆ ಬೇಸರ ಆಗುವುದಿಲ್ಲವೇ' ಎಂದು ಒಮ್ಮೆ ಕೇಳಿದ್ದೆ. 'ಬೇಸರ ಆಗಬಹುದು. ನೋಡೋಣ ಎಂದು ಹೇಳಿ ಕಳುಹಿಸಿ ಕೆಲಸ ಮಾಡಿಕೊಡದಿದ್ದರೆ ಇನ್ನೂ ಬೇಸರ ಆಗುತ್ತದೆ. ಆದ್ದರಿಂದ ನೇರಾವಾಗಿ ಹೇಳುವುದು ಮೇಲು' ಎನ್ನುತ್ತಿದ್ದರು. ಸಂಸದರಾಗಿ ಚುನಾಯಿತರಾದ ವ್ಯಕ್ತಿಗೆ ಪಕ್ಷಕ್ಕಾಗಿ ರಾಜೀನಾಮೆ ನೀಡುವಂತಹ ಮನಃಸ್ಥಿತಿ ಇರುವುದಿಲ್ಲ. ಆದರೆ ಚಂದ್ರೇಗೌಡರು ಅದಕ್ಕೂ ಹಿಂಜರಿಯಲಿಲ್ಲ. 1978ರಲ್ಲಿ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರಿಗೆ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರವನ್ನು ಬಿಟ್ಟುಕೊಟ್ಟು ಅವರ ಗೆಲುವಿನ ರೂವಾರಿಯಾದರು. ಅವರಿಗೆ ಮುಖ್ಯಮಂತ್ರಿ ಸ್ಥಾನಕ್ಕೇರುವ ಅವಕಾಶಗಳಿದ್ದವು. ಆದರೆ, ಅದಕ್ಕಾಗಿ ಲಾಬಿ ಮಾಡದೆ, ಶುದ್ಧ ರಾಜಕಾರಣ ಮಾಡಿದರು.

'ರಾಜಕಾರಣದಲ್ಲಿ ಇಂದಿರಾ ಗಾಂಧಿ ಹಾಗೂ ದೇವರಾಜ ಅರಸು ಎರಡು ಕಣ್ಣುಗಳಿದ್ದಂತೆ. ಇಂದಿರಾ ಗಾಂಧಿಯವರ 20 ಅಂಶಗಳ ಕಾರ್ಯಕ್ರಮ ಫಲಬಿಟ್ಟಿತ್ತು. ಬಡವರ ಕಲ್ಯಾಣಕ್ಕಾಗಿ ದುಡಿದರೆ ರಾಜಕಾರಣಕ್ಕೆ ಬಂದದ್ದು ಸಾರ್ಥಕವಾಗುತ್ತದೆ. ಎಂದಿಗೂ ಕಟ್ಟಿದ ಮನೆಯ ಗಳ ಹಿರಿಯುವ ಕೆಲಸ ಮಾಡಬಾರದು' ಎಂಬ ಅವರ ಮಾತುಗಳನ್ನು ಮರೆಯಲಾಗದು.

ಚಂದ್ರೇಗೌಡರು ದೇವರಾಜ ಅರಸು ಬಣಕ್ಕೆ ಸೇರಿದವರಾದರೂ ಇಂದಿರಾ ಗಾಂಧಿ ವಿರುದ್ಧ ಮಾತನಾಡಿದ ಒಂದು ನಿದರ್ಶನವೂ ಇಲ್ಲ. ಇದು ಅವರ ಶುದ್ಧ ಮನಸ್ಸಿಗೆ ಕೈಗನ್ನಡಿ. ಅವರೊಬ್ಬ ಉತ್ತಮ ವಾಗ್ಮಿಯೂ ಆಗಿದ್ದರು.

ಯಾವ ಕಾರಣಕ್ಕೆ ಅವರು ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿ ಸೇರಿದರು ಎಂಬುದು ಇಂದಿಗೂ ಯಕ್ಷ ಪ್ರಶ್ನೆಯಾಗಿದೆ. ನನ್ನ ಮಗಳ ಗೆಲುವಿನ ಬಳಿಕ ಮನೆಯಲ್ಲಿ ಮಾತಿಗೆ ಸಿಕ್ಕಿದ್ದ ಅವರು 'ಬಿಜೆಪಿಯಲ್ಲಿ ಗರ್ಭಗುಡಿಯೊಳಗೇ ಬಿಟ್ಟಿಲ್ಲ' ಎಂದಿದ್ದ ಮಾತು ಇಂದಿಗೂ ಎದೆಯಾಳದಲ್ಲಿ ಚುಚ್ಚುತ್ತಿದೆ.

ಆಲದ ಮರ: ರಾಜಕಾರಣದಲ್ಲಿ ಅನುಭವ ಹೊಂದಿದ್ದ ಚಂದ್ರೇಗೌಡರು ಹೊಸಬರಿಗೆ ಮಾರ್ಗದರ್ಶನ ನೀಡುವ ಮೂಲಕ ಆಲದ ಮರವಾಗಿ ನಿಂತವರು. ನನ್ನನ್ನು ಸಕ್ರಿಯ ರಾಜರಾಣಕ್ಕೆ ಕರೆತಂದು ಬೆಳಸಿದವರೂ ಅವರೇ. ಅವರ ಆದರ್ಶದ ನಡೆ ನಮ್ಮೊಳಗೆ ಸದಾ ಉಳಿಯಲಿದೆ.

ಲೇಖಕಿ: ಮಾಜಿ ಸಚಿವೆ

ನಿರೂಪಣೆ: ವಿಜಯಕುಮಾರ್ ಎಸ್‌.ಕೆ.

ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲೂ ಆಸಕ್ತಿ

ಡಿ.ಬಿ. ಚಂದ್ರೇಗೌಡ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಚಿಕ್ಕಮಗಳೂರಿನಲ್ಲಿ, ಪದವಿ ಶಿಕ್ಷಣವನ್ನು ಬೆಂಗಳೂರಿನ ರೇಣುಕಾಚಾರ್ಯ ಕಾಲೇಜಿನಲ್ಲಿ, ಕಾನೂನು ಶಿಕ್ಷಣವನ್ನು ಬೆಳಗಾವಿಯ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಪಡೆದರು.

1966 ಮೇ 22ರಂದು ಪೂರ್ಣಿಮಾ ಅವರನ್ನು ವಿವಾಹವಾದರು. ಅವರ ಮನೆಯ ಹೆಸರು ಕೂಡ 'ಪೂರ್ಣಚಂದ್ರ'. ಈ ದಂಪತಿಗೆ ನಾಲ್ವರು ಹೆಣ್ಣು ಮಕ್ಕಳು. ಮೊದಲ ಪುತ್ರಿ ಪಲ್ಲವಿ ಬೆಂಗಳೂರಿನಲ್ಲಿ ಎಂಜಿನಿಯರ್ ಆಗಿದ್ದಾರೆ. 2ನೇ ಪುತ್ರಿ ಡಾ.ಶೃತಿ ಮತ್ತು 4ನೇ ಪುತ್ರಿ ಸಂಗೀತಾ ಅಮೆರಿಕದಲ್ಲಿ ನೆಲೆಸಿದ್ದಾರೆ. 3ನೇ ಪುತ್ರಿ ವೀಣಾ ಮುಂಬೈನಲ್ಲಿ ವಕೀಲಿ ವೃತ್ತಿ ಮಾಡುತ್ತಿದ್ದಾರೆ.

ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲೂ ಆಸಕ್ತಿ ಹೊಂದಿದ್ದ ಚಂದ್ರೇಗೌಡ ಅವರು 'ನನ್ನ ಗೋಪಾಲ' ಚಲನಚಿತ್ರದಲ್ಲೂ ಅಭಿನಯಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಮಾಜಿ ಸಚಿವ ಡಿ.ಬಿ. ಚಂದ್ರೇಗೌಡ ನಿಧನ

ಒಂದನೇ ಪುಟದಿಂದ...

ಚಂದ್ರೇಗೌಡ ಅವರ ಪಾರ್ಥಿವ ಶರೀರವನ್ನು ಮಂಗಳವಾರ ಮೂಡಿಗೆರೆ ಅಡ್ಯಂತಾಯ ರಂಗಮಂದಿರದಲ್ಲಿ ಸಾರ್ವಜನಿಕ ದರ್ಶನಕ್ಕೆ ಇರಿಸಲಾಗಿತ್ತು. ಬುಧವಾರ ಮಧ್ಯಾಹ್ನದ ನಂತರ, ದಾರದಹಳ್ಳಿಯ ಅವರ ಪೂರ್ಣಚಂದ್ರ ಎಸ್ಟೇಟ್‌ನಲ್ಲಿ ಅಂತ್ಯ ಸಂಸ್ಕಾರ ನಡೆಯಲಿದೆ.

1971ರಲ್ಲಿ ಚುನಾವಣಾ ಅಖಾಡಕ್ಕಿಳಿದ ಚಂದ್ರೇಗೌಡರು ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ಸಾಧಿಸಿದರು. 1977ರಲ್ಲಿ 2ನೇ ಬಾರಿಗೆ ಸಂಸದರಾಗಿ ಆಯ್ಕೆಯಾಗಿದ್ದ ಅವರು, ಇಂದಿರಾ ಗಾಂಧಿ ಸ್ಪರ್ಧೆಗಾಗಿ ರಾಜೀನಾಮೆ ನೀಡಿದರು.

ಬಳಿಕ ವಿಧಾನ ಪರಿಷತ್ತಿನ ಸದಸ್ಯರಾಗಿ ಡಿ.ದೇವರಾಜ ಅರಸು ಅವರ ಸಂಪುಟದಲ್ಲಿ ನೀರಾವರಿ ಸಚಿವರಾಗಿದ್ದರು. ಬದಲಾದ ರಾಜಕೀಯದಲ್ಲಿ ಅರಸು ಅವರೊಂದಿಗೆ ಕ್ರಾಂತಿರಂಗದಲ್ಲಿ ಗುರುತಿಸಿಕೊಂಡು 1980-81ರ ಅವಧಿಯಲ್ಲಿ ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿದ್ದರು.

1983 ಮತ್ತು 1987ರಲ್ಲಿ ಜನತಾ ಪಕ್ಷದಿಂದ ತೀರ್ಥಹಳ್ಳಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. 1983-85ರವರೆಗೆ ವಿಧಾನಸಭೆಯ ಸ್ಪೀಕರ್ ಆಗಿದ್ದರು. 1986ರಲ್ಲಿ ಜನತಾ ಪಕ್ಷದಿಂದ ರಾಜ್ಯಸಭಾ ಸದಸ್ಯರಾಗಿದ್ದರು.

1999ರಲ್ಲಿ ಶೃಂಗೇರಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದಿದ್ದ ಅವರು, ಎಸ್.ಎಂ. ಕೃಷ್ಣ ಅವರ ಸಂಪುಟದಲ್ಲಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿದ್ದರು. 2009ರಲ್ಲಿ ಬಿಜೆಪಿ ಸೇರಿದ್ದ ಅವರು ಬೆಂಗಳೂರು ಉತ್ತರ ಕ್ಷೇತ್ರದಿಂದ ಲೋಕಸಭಾಗೆ ಆಯ್ಕೆಯಾಗಿದ್ದರು.

2014ರಿಂದ ದಾರದಹಳ್ಳಿಯಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದರು.

ಕೃಷಿ ತ್ಯಾಜ್ಯ: 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ದೆಹಲಿ–ಎನ್‌ಸಿಆರ್‌ನಲ್ಲಿ ಗಾಳಿ ಗುಣಮಟ್ಟದಲ್ಲಿ ತುಸು ಸುಧಾರಣೆ ಕಂಡುಬಂದಿದ್ದು, 'ಗಂಭೀರ ಸ್ಥಿತಿ'ಯಿಂದ 'ತೀವ್ರ ಕಳಪೆ' ಮಟ್ಟಕ್ಕೆ ತಲುಪಿತು.

ಈ ಮಧ್ಯೆ, ಪರಿಸ್ಥಿತಿ ಸುಧಾರಿಸಲು ಸಮ–ಬೆಸ ಸಂಖ್ಯೆಗಳ ವಾಹನಗಳ ಸಂಚಾರ ಅವಕಾಶ ನಿರ್ಧಾರವು ಎಷ್ಟು ಪರಿಣಾಮಕಾರಿ ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ದೆಹಲಿ–ಎನ್‌ಸಿಆರ್ ವಲಯದಲ್ಲಿ ವಾಯುಮಾಲಿನ್ಯ ವಿಷಯದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ದೆಹಲಿ ಸರ್ಕಾರ ಪ್ರತಿನಿಧಿಸಿದ್ದ ವಕೀಲರಿಗೆ ಸಮ–ಬೆಸ ಸಂಖ್ಯೆ ವಾಹನಗಳ ಸಂಚಾರ ನಿರ್ಧಾರವು ಯಶಸ್ಸು ಕಂಡಿದೆಯೇ, ಎಂದಿನಿಂದ ಜಾರಿಗೆ ಬರಲಿದೆ ಎಂದು ಪ್ರಶ್ನಿಸಿದರು.

ದೆಹಲಿಯ ಪರಿಸರ ಸಚಿವ ಗೋಪಾಲ ರೈ ಅವರು, ಸಮ–ಬೆಸ ಸಂಖ್ಯೆ ವಾಹನಗಳ ಸಂಚಾರ ಕುರಿತು ನಿಯಮ ಅಂತಿಮಗೊಳಿಸುವಾಗ ವಾಯುಮಾಲಿನ್ಯ ಕುರಿತ ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಸರ್ಕಾರ ಪರಿಗಣಿಸಲಿದೆ ಎಂದು ತಿಳಿಸಿದರು.

ಇದೇ ವೇಳೆ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ಪೀಠವು ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶಗಳಲ್ಲಿ ಕೃಷಿ ತ್ಯಾಜ್ಯ ಸುಡುವುದನ್ನು ತಡೆಯಬೇಕು ಎಂದು ನಿರ್ದೇಶಿಸಿತು. ವಾತಾವರಣವು ವರ್ಷದಿಂದ ವರ್ಷಕ್ಕೆ ಹೀಗೆ ಹಾಳಾಗಲು ಬಿಡಬಾರದು ಎಂದು ಸೂಚಿಸಿತು.

'ಕೃಷಿ ತ್ಯಾಜ್ಯ ಸುಡುವುದನ್ನು ಉಲ್ಲೇಖಿಸಿ, ಇದು ಜನರ ಆರೋಗ್ಯದ ಕೊಲೆಯಲ್ಲದೇ ಮತ್ತೇನೂ ಅಲ್ಲ. ಬೇರೆ ಹೋಲಿಕೆ ನನ್ನ ಬಳಿ ಇಲ್ಲ' ಎಂದು ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಹೇಳಿದರು.

ನವದೆಹಲಿಯಲ್ಲಿ ಮಂಗಳವಾರವೂ ಹೊಗೆ ಮಂಜು ಆವರಿಸಿಕೊಂಡಿತ್ತು —ಪಿಟಿಐ ಚಿತ್ರ

ವಾಯುಮಾಲಿನ್ಯ ವಿಷಯ ರಾಜಭವನ ಮತ್ತು ದೆಹಲಿ ಸರ್ಕಾರದ ನಡುವೆ ಸಂಘರ್ಷಕ್ಕೆ ಎಡೆಯಾಗುವ ಸೂಚನೆಯೂ ಕಂಡುಬಂದಿತು. ರಾಜಭವನದ ಅಧಿಕಾರಿಗಳು, ಎಎಪಿ ಸರ್ಕಾರವು ಈ ವಿಷಯದಲ್ಲಿ ಜನರಿಗೆ ತಪ್ಪು ಮಾಹಿತಿ ನೀಡುತ್ತಿದೆ ಎಂದು ಆರೋಪಿಸಿದರು.

ಆಗ ಸಚಿವ ಗೋಪಾಲ ರೈ, ವಾಹನಗಳ ಸಂಚಾರ ಸಂಬಂಧಿತ ಕಡತವನ್ನು ನ. 4ರಂದು ಕಳುಹಿಸಿದ್ದು, 6ರಂದು ಅನುಮೋದನೆ ನೀಡಲಾಗಿದೆ ಎಂದು ಉಲ್ಲೇಖಿಸಿದರು.

ಮೀಸಲಾತಿ ಹೆಚ್ಚಳಕ್ಕೆ ಸಂಪುಟ ಅಸ್ತು

ಒಂದನೇ ಪುಟದಿಂದ...

ನಿತೀಶ್ ಕುಮಾರ್ ಅವರು ಸದನದಲ್ಲಿ ಮಂಗಳವಾರ ನೀಡಿರುವ ಹೇಳಿಕೆಯು ರಾಜ್ಯ ರಾಜಕಾರಣದ ಮೇಲೆ ಗಮನಾರ್ಹ ಪರಿಣಾಮ ಬೀರುವ ಸಾಧ್ಯತೆ ಇದೆ. ಅಲ್ಲದೆ, ಬಿಹಾರ ಸರ್ಕಾರದ ಈ ನಡೆಯು ದೇಶದ ಇತರ ಕಡೆಗಳಲ್ಲಿ ಮೀಸಲಾತಿ ಪ್ರಮಾಣದ ಹೆಚ್ಚಳಕ್ಕೆ ಬೇಡಿಕೆಯು ಬಲಗೊಳ್ಳಲು ಕಾರಣವಾಗಬಹುದು ಎನ್ನಲಾಗಿದೆ.

'ಕೆಲವು ನಿರ್ದಿಷ್ಟ ಸಮುದಾಯಗಳ ಜನಸಂಖ್ಯೆಯನ್ನು, ಇತರ ಸಮುದಾಯಗಳ ಜನರಿಗೆ ತೊಂದರೆಯಾಗುವ ರೀತಿಯಲ್ಲಿ ಹೆಚ್ಚಿಸಿ ತೋರಿಸಲಾಗಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಇವು ಬೋಗಸ್ ಆರೋಪಗಳು' ಎಂದು ನಿತೀಶ್ ಕುಮಾರ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದರು. ಜಾತಿ ಗಣತಿಯ ವರದಿಯು ಯಾದವ ಹಾಗೂ ಮುಸ್ಲಿಂ ಸಮುದಾಯದ ಜನಸಂಖ್ಯೆಯನ್ನು ಹೆಚ್ಚಾಗಿ ತೋರಿಸಿದೆ ಎಂದು ಶಾ ಆರೋಪಿಸಿದ್ದರು.

'ನನ್ನದೇ ಜಾತಿಯ (ಕುರ್ಮಿ) ಪ್ರಮಾಣ ಕಡಿಮೆ ಇದೆ ಎಂಬುದು ಸಮೀಕ್ಷೆಯಿಂದ ಗೊತ್ತಾಗಿದೆ' ಎಂದು ನಿತೀಶ್ ಹೇಳಿದ್ದಾರೆ. ಜಾತಿ ಗಣತಿಯ ವರದಿಯ ಪ್ರತಿಯೊಂದನ್ನು ಕೇಂದ್ರ ಸರ್ಕಾರಕ್ಕೆ ರವಾನಿಸಿ, ಸಮಾಜದ ದುರ್ಬಲ ವರ್ಗಗಳನ್ನು ಗುರಿಯಾಗಿಸಿ ಕೈಗೊಳ್ಳುವ ಕ್ರಮಗಳಿಗೆ ಹೆಚ್ಚಿನ ನೆರವು ಒದಗಿಸಬೇಕು ಎಂದು ಕೇಳಿಕೊಳ್ಳುವುದಾಗಿ ಅವರು ಹೇಳಿದ್ದಾರೆ.

ಜಾತಿ ಗಣತಿಯನ್ನು ರಾಷ್ಟ್ರದ ಎಲ್ಲೆಡೆ ನಡೆಸಬೇಕು ಎಂದು ಹಿಂದೆ ಸಲ್ಲಿಸಿದ್ದ ಮನವಿಯನ್ನು ಪುನರ್ ಪರಿಶೀಲಿಸುವುದಕ್ಕೆ ಬಿಹಾರದ ಸಮೀಕ್ಷೆಯು ಕಾರಣವಾಗಬಹುದು ಎಂದು ನಿತೀಶ್ ಹೇಳಿದ್ದಾರೆ. ರಾಷ್ಟ್ರವ್ಯಾಪಿ ಜಾತಿ ಗಣತಿ ನಡೆಸುವಂತೆ ನಿತೀಶ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಎರಡು ವರ್ಷಗಳ ಹಿಂದೆ ಆಗ್ರಹಿಸಿದ್ದರು.

ಬಡತನದಲ್ಲಿ ಶೇ 34ರಷ್ಟು ಕುಟುಂಬಗಳು

ಪಟ್ನಾ (ಪಿಟಿಐ): ಬಿಹಾರದ ಶೇಕಡ 34.13ರಷ್ಟು ಕುಟುಂಬಗಳು ಬಡತನದ ಬೇಗೆಯಲ್ಲಿವೆ. ಈ ಕುಟುಂಬಗಳ ತಿಂಗಳ ಆದಾಯ ₹6,000 ಅಥವಾ ಅದಕ್ಕಿಂತ ಕಡಿಮೆ.

ರಾಜ್ಯದ ಜಾತಿ ಗಣತಿಯ ವಿಸ್ತೃತ ವರದಿಯನ್ನು ವಿಧಾನ ಸಭೆಯಲ್ಲಿ ಮಂಗಳವಾರ ಮಂಡಿಸಲಾಗಿದ್ದು, ಆ ವರದಿಯಲ್ಲಿ ಈ ಅಂಶ ಇದೆ.

ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳಲ್ಲಿ ಇಷ್ಟು ಆದಾಯ ಹೊಂದಿರುವ ಕುಟುಂಬಗಳ ಪ್ರಮಾಣವು ಶೇ 43ರಷ್ಟು ಇದೆ. ರಾಜ್ಯದ 2.97 ಕೋಟಿ ಕುಟುಂಬಗಳ ಪೈಕಿ 94 ಲಕ್ಷಕ್ಕಿಂತ ಹೆಚ್ಚಿನ ಕುಟುಂಬಗಳ ತಿಂಗಳ ಆದಾಯವು ₹6,000ಕ್ಕಿಂತ ಕಡಿಮೆ.

ಬಿಹಾರದ ಸಂಸದೀಯ ವ್ಯವಹಾರಗಳ ಸಚಿವ ವಿಜಯ್ ಕುಮಾರ್ ಚೌಧರಿ ಅವರು ವರದಿಯನ್ನು ಮಂಡಿಸಿದರು. ಈಗ ಬಿಹಾರದ ಸಾಕ್ಷರತಾ ಪ್ರಮಾಣವು ಶೇ 79.8ಕ್ಕೆ ಏರಿಕೆ ಆಗಿದೆ. ಇದು 2011ರಲ್ಲಿ ಶೇ 69.8ರಷ್ಟು ಇತ್ತು.

ಬಿಹಾರದ 47 ಲಕ್ಷ ಮಂದಿ ಬೇರೆ ರಾಜ್ಯಗಳಲ್ಲಿ ಜೀವನೋಪಾಯ ಕಂಡುಕೊಂಡಿದ್ದಾರೆ ಎಂದು ಸಮೀಕ್ಷೆ ಹೇಳಿದೆ.

ಮುಂದುವರಿದ ಜಾತಿಗಳ ಸೇರಿದ ಶೇ 25ಕ್ಕಿಂತ ಹೆಚ್ಚು ಮಂದಿ ವರಮಾನವು ತಿಂಗಳಿಗೆ ₹6,000 ಅಥವಾ ಅದಕ್ಕಿಂತ ಕಡಿಮೆ ಇದೆ. ಸಂಖ್ಯೆಯ ದೃಷ್ಟಿಯಿಂದ ಬಹಳ ಕಡಿಮೆ ಇರುವ ಕಾಯಸ್ಥರು ಬಿಹಾರದಲ್ಲಿ ಆರ್ಥಿಕವಾಗಿ ಹೆಚ್ಚು ಅನುಕೂಲ ಹೊಂದಿದ್ದಾರೆ. ಈ ಸಮುದಾಯದ ಶೇ 13.83ರಷ್ಟು ಕುಟುಂಬಗಳು ಮಾತ್ರ ತಿಂಗಳಿಗೆ ₹6,000 ಅಥವಾ ಅದಕ್ಕಿಂತ ಕಡಿಮೆ ವರಮಾನ ಹೊಂದಿವೆ.

ಕುರ್ಮಿ ಸಮುದಾಯದ ಶೇಕಡ 30ರಷ್ಟು ಕುಟುಂಬಗಳ ವರಮಾನವು ಇಷ್ಟೇ ಇದೆ.

ಯಾವುದೇ ಜಾತಿ ಜನಸಂಖ್ಯೆ ಹೆಚ್ಚಾಗಿದ್ದರೆ ಅದೊಂದು ಸಾಧನೆ ಎಂದು ಭಾವಿಸಬೇಕಿಲ್ಲ. ಹಾಗೆಯೇ ಇನ್ನೊಂದು ಜಾತಿಯ ಜನಸಂಖ್ಯೆ ಕಡಿಮೆ ಆಗಿದೆ ಎಂದಾದರೆ ಅದು ಸೋಲು ಕೂಡ ಅಲ್ಲ.

ವಿಜಯ್ ಕುಮಾರ್ ಚೌಧರಿ, ಬಿಹಾರದ ಸಂಸದೀಯ ವ್ಯವಹಾರಗಳ ಸಚಿವ



ಈ ಹೊತ್ತಿಗೆ ಮುಗಿಯಬೇಕಿದ್ದ ರಾಷ್ಟ್ರೀಯ ಜನಗಣತಿಯು ಇನ್ನೂ ಆರಂಭ ಆಗಿಲ್ಲ. ಜನಗಣತಿಯ ಭಾಗವಾಗಿ ಕೇಂದ್ರವು ಜಾತಿ ಗಣತಿ ನಡೆಸುವುದನ್ನು ಪರಿಶೀಲಿಸಬಹುದು.

ನಿತೀಶ್ ಕುಮಾರ್, ಬಿಹಾರ ಮುಖ್ಯಮಂತ್ರಿ

'ಒಳಮೀಸಲು' ಪಟ್ಟು

ಒಂದನೇ ಪುಟದಿಂದ...

ಆದರೆ, ಸರ್ಕಾರ ರಚನೆಯಾಗಿ ಆರು ತಿಂಗಳು ಕಳೆದರೂ, ವರದಿ ಜಾರಿಯ ಪ್ರಸ್ತಾಪವೇ ಇಲ್ಲದಿರುವುದು ಎಡಗೈ ಸಮುದಾಯದ ನಾಯಕರ ಆಕ್ರೋಶಕ್ಕೆ ಕಾರಣವಾಗಿದೆ.

ಸೋಮವಾರ ನಡೆದ ಮಾದಿಗ ಸಮುದಾಯದ ಪ್ರಮುಖರ ಸಭೆಯಲ್ಲಿ ಮಾತನಾಡಿದ್ದ ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಬೆಳಗಾವಿಯಲ್ಲಿ ಡಿ. 4 ರಿಂದ ನಡೆಯಲಿರುವ ವಿಧಾನ ಮಂಡಲ ಅಧಿವೇಶನದಲ್ಲಿ ವರದಿಯನ್ನು ಮಂಡಿಸಲೇಬೇಕೆಂಬ ಮಾದಿಗ ಸಮುದಾಯದ ಬೇಡಿಕೆಗೆ ಶಕ್ತಿ ತುಂಬಿದ್ದಾರೆ.

ಈ ಬಗ್ಗೆ ಮಂಗಳವಾರ ಮಾತನಾಡಿದ ಗೃಹ ಸಚಿವ ಜಿ. ಪರಮೇಶ್ವರ, 'ಬೆಳಗಾವಿ ಅಧಿವೇಶನದಲ್ಲಿ ಸದಾಶಿವ ಆಯೋಗದ ವರದಿ ಜಾರಿ ಕುರಿತು ಚರ್ಚಿಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದ್ದೇವೆ. ಮೊದಲ ಅಧಿವೇಶನದಲ್ಲಿ ಈ ವರದಿ ಮಂಡಿಸುತ್ತೇವೆ ಎಂದು ಚಿತ್ರದುರ್ಗದಲ್ಲಿ ನಡೆದಿದ್ದ ಸಮಾವೇಶದಲ್ಲಿಯೇ ಘೋಷಣೆ ಮಾಡಿದ್ದೆವು' ಎಂದರು.

'ನಾನಾ ಕಾರಣಗಳಿಂದಾಗಿ ಮೊದಲ ಅಧಿವೇಶನದಲ್ಲಿ ಅದನ್ನು ಮಂಡಿಸಲು ಆಗಲಿಲ್ಲ. ಬೆಳಗಾವಿ ಅಧಿವೇಶನದಲ್ಲಿ ಮಂಡಿಸುವಂತೆ ನಾನು, ಮಹದೇವಪ್ಪ, ಮುನಿಯಪ್ಪ, ಪ್ರಿಯಾಂಕ್ ಖರ್ಗೆ ಎಲ್ಲರೂ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇವೆ. ಸಮುದಾಯದ ಮುಖಂಡರ ಜೊತೆ ಚರ್ಚಿಸಿ, ತೀರ್ಮಾನಿಸುವುದಾಗಿಯೂ ಸಿ.ಎಂ ತಿಳಿಸಿದ್ದಾರೆ' ಎಂದರು.

'ವರದಿ ಜಾರಿ ಮಾಡುವ ಮೊದಲು ಎಲ್ಲರ ಅಭಿಪ್ರಾಯ ತೆಗೆದುಕೊಳ್ಳಬೇಕು. ಎಲ್ಲರ ಮನಸ್ಸು ಒಂದಾಗಬೇಕು. ಹೀಗಾಗಿ, ಎಲ್ಲರ ಜೊತೆ ಮಾತನಾಡಿ ತೀರ್ಮಾನ ಮಾಡೋಣವೆಂದು ಮುಖ್ಯಮಂತ್ರಿ ಹೇಳಿದ್ದಾರೆ. ಒಳ ಮೀಸಲಾತಿ ಜಾರಿ ವಿಷಯದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ' ಎಂದೂ ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್‌.ಸಿ. ಮಹದೇವಪ್ಪ ಮಾತನಾಡಿ, 'ಮಾದಿಗ ಸಮುದಾಯ ಸಭೆ ಮಾಡಿರುವುದರಲ್ಲಿ ತಪ್ಪೇನಿದೆ? ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ದಶಕಗಳಿಂದ ಹೋರಾಟ ನಡೆಯುತ್ತಿದೆ. ಬಿಜೆಪಿ ಸರ್ಕಾರ ಈ ವರದಿಯನ್ನು ತಿರಸ್ಕರಿಸಿತ್ತು. ವರದಿ ಜಾರಿಗೊಳಿಸುವುದಾಗಿ ನಾವು (ಕಾಂಗ್ರೆಸ್) ಭರವಸೆ ನೀಡಿದ್ದೇವೆ. ಕಾನೂನು ಚೌಕಟ್ಟಿನಲ್ಲಿ ಏನು ಮಾಡಬಹುದೆಂದು ನೋಡುತ್ತೇವೆ. ಬಳಿಕ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದರು.

ಒಳ ಮೀಸಲಾತಿ ಆಗ್ರಹಿಸಿ ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಮನೆಗೆ ಮುತ್ತಿಗೆ ಹಾಕುವಂತೆ ಸಚಿವ ಕೆ.ಎಚ್. ಮುನಿಯಪ್ಪ ಕರೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, 'ಒಳ ಮೀಸಲಾತಿ ಜಾರಿ ಆಗ್ರಹಿಸಿ ಬೀದಿಗೆ ಇಳಿಯುವ ಅವಶ್ಯಕತೆ ಇಲ್ಲ. ಸಮುದಾಯ, ಸಚಿವ ಎರಡೂ ಇದ್ದಾಗ ಎರಡೂ ಕಡೆ ಇರಬೇಕಾಗುತ್ತದೆ. ಅದರ ಅರ್ಥ ಸರ್ಕಾರದ ವಿರುದ್ಧ ಎಂದು ಭಾವಿಸಬೇಕಿಲ್ಲ. ಸರ್ಕಾರ ಈ ವಿಷಯವನ್ನು ಇತ್ಯರ್ಥ ಮಾಡಲಿದೆ. ಆ ಮೂಲಕ, ನ್ಯಾಯ ಕೊಡಿಸುವ ಕೆಲಸ ಮಾಡಲಿದೆ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

PUBLIC NOTICE

My client intends to purchase the Property mentioned and described in the Schedule hereunder from (1) **Smt. Geethanjali Devi**, wife of Sri. S. Ghyanchand and (2) **Sri. S. Ghyanchand**, son of Late Sukhraj, (3) **Ms. Anju Ghyanchand**, daughter of Sri. S. Ghyanchand, (4) **Ms. Muskaan Pramod Jain**, daughter of Late Pramod Kumar Jain, (5) **Ms. Kashish Jain**, daughter of Late Pramod Kumar Jain, and (6) **Mrs. Usha Pramod Kumar Jain**, wife of Late Pramod Kumar Jain ("**Owners**"). The Owners represent that they are the absolute owners of the Schedule Property and have a good marketable, right, title and interest therein and that apart from them there are no other person's having any right or claim over the Schedule Property. The Owners further represents that, they have not entered into any Agreements/MoU with any third party and that the Owners have not mortgaged, created any right, interest, lien or encumbered the Schedule Property or any part thereof in any manner with any person/s. Any person/s having objection/s or claims, shall with documentary evidence lodge their objection/s or claims **within Fifteen (15) days** from the date of this Notice with the Undersigned, failing which, my client shall proceed with the above-mentioned transaction.

SCHEDULE

All that piece and parcel of the property bearing BBMP Khata No. 10/4-2 (earlier bearing Premises No. 7/10 and much earlier bearing Property No.8), BBMP PID No. 77-103-10/4-2, situated at Kumara Krupa Road, Sampangiramnagar, in BBMP Ward No. 93, Bengaluru, measuring East to West 60 feet and North to South 161 feet, totally measuring 9,604 square feet and bounded on the:
East by : Plot No. 9 in premises No. 7/10
West by : Kumara Krupa Road
North by: Plot No. 7 in premises No. 7/10
South by: Sites belonging to Sri. Gobindram Atmaram & family.

Jayanth M Pattanshetti
Advocate,
Jayanth Pattanshetti Associates LLP
102, Ground Floor,
"Rams Infantry Manor",
No. 70, Infantry Road,
Bengaluru-560 001.
Ph: 080 25593195/25581469
Bengaluru
Date : 07-11-2023

ಉದ್ಯೋಗಾವಕಾಶ

Multiple Vacancy

ವೆಜ್ ಹೋಟೆಲ್ಗೆ ಚೆಫ್, ದೋಸೆ ಮಾಸ್ಟರ್, ಕ್ಯಾಷಿಯರ್, ಟೀ ಮಾಸ್ಟರ್, ಕೌಂಟರ್ ಬಾಯ್ಸ್, ಕ್ಲೀನರ್ ಸಿಬ್ಬಂದಿ ಬೇಕಾಗಿದ್ದಾರೆ. +91 7019299055/ 8861453552

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Situation Required

ಕರ್ನಾಟಕದಲ್ಲಿ ತುರ್ತು ಅಗತ್ಯವಿರುವ ಟೆಲಿಕಾಲರ್ (ಪುರುಷ ಮತ್ತು ಮಹಿಳೆ) ಸಂಬಳ-16200/- CTC. ಕೌಶಲ್ಯಗಳು: ಕನ್ನಡ ಓದಲು ಬರೆಯಿರಿ ಮತ್ತು ಮಾತನಾಡಿ - ಆಸಕ್ತ ಅಭ್ಯರ್ಥಿ ಈ ಸಂಖ್ಯೆಗೆ ಮಿಸ್ ಕಾಲ್ ಮಾಡಿ: 7669250202

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ ರೂ.15,000/- ರಿಂದ 20,000/- EST, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 7899235388, 9148525233

ಬೆಂಗಳೂರಿನಲ್ಲಿರುವ SLV ಹೋಂ ನರ್ಸಿಂಗ್ ನಲ್ಲಿ ಕೆಲಸ ಮಾಡಲು ಹುಡುಗಿಯರು, ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು (18ರಿಂದ45). ಊಟ ವಸತಿಯೊಂದಿಗೆ ಟ್ರೈನಿಂಗ್ ಕೊಟ್ಟು ಸಂಬಳ 10000/ ರಿಂದ 20000/ ವರೆಗೆ ಕೊಡಲಾಗುವುದು. ಆಸಕ್ತಿ ಉಳ್ಳವರು ಕರೆ ಮಾಡಿ. 7019869181, 9886922255

Wanted

ಬೇಕಾಗಿದ್ದಾರೆ: ಮಾಜಿ ಆಡಿಟರ್ ಹಾಗೂ ತೆರಿಗೆ ಅಭ್ಯಾಸಕರ ಕಚೇರಿಗೆ ಕಂಪ್ಯೂಟರ್ ತಿಳಿದಿರುವ ಮಹಿಳಾ ಸಹಾಯಕಿ ಬೇಕಾಗಿದ್ದಾರೆ. ತಮ್ಮ ಅರ್ಜಿಯೊಂದಿಗೆ ಸಂಪರ್ಕಿಸಿ: 9448175385

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 12,000-17,000. 8951315839, 9141634619

ಶಿಕ್ಷಣ

Training

ಮಹಿಳೆಯರಿಗೆ ಸುವರ್ಣಾವಕಾಶ ಉಚಿತ ಬ್ಯೂಟಿಷಿಯನ್ ತರಬೇತಿ ನೀಡಲಾಗುವುದು. ಕಲಿತ ನಂತರ ಉದ್ಯೋಗಾವಕಾಶ ಕಲ್ಪಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 96869 01048.

ಭವಿಷ್ಯ

Astrology

★★ಒಂದೇ ಕರೆಯಲ್ಲಿ★★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

ಪ್ರವಾಸ

Travel

ಅಂಡಮಾನ್ ಹವಳದ್ವೀಪ ಪ್ರತಿ ಗುರುವರ 5/8ದಿನಗಳು ಹಡಗು/ವಿಮಾನದಲ್ಲಿ Royal Package 27.11.2023 ಮಾತು11.12.2023 ರಿಯಾಯಿತಿ ದರದಲ್ಲಿ 6ದಿನಗಳು ಕಾಶಿ ಗಯಾ ಅಲಹಾಬದ್ ಅಯೋಧ್ಯ(ಕೆಲವೇ ಸೀಟುಗಳಿವೆ) ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 21/12 ಗುಜರಾತ್ ಮಧ್ಯಪ್ರದೇಶ 4 ಜ್ಯೋತಿರ್ಲಿಂಗ. 18/12 ರಾಯಲ್ ರಾಜಸ್ಥಾನ.16/11: ಹೈದರಬಾದ್ ಪ್ಯಾಕೇಜ್. 9964527782/9591017782

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ.
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ವಿಧಾನಸಭೆಗೆ ಮೊದಲ ಹಂತದ ಮತದಾನ • ನಕ್ಸಲರ ಹಿಂಸಾಚಾರದ ನಡುವೆ ಮತದಾರರ ಉತ್ಸಾಹ

ಛತ್ತೀಸಗಢ: ಶೇ 71ರಷ್ಟು ಮತದಾನ

ರಾಯಪುರ (ಪಿಟಿಐ): ಛತ್ತೀಸಗಢ ವಿಧಾನಸಭೆಯ 20 ಕ್ಷೇತ್ರಗಳಲ್ಲಿ ಮಂಗಳವಾರ ನಡೆದ ಮೊದಲ ಹಂತದ ಮತದಾನದಲ್ಲಿ ನಕ್ಸಲರ ಹಿಂಸಾಚಾರ, ಮತದಾನ ಬಹಿಷ್ಕಾರ ಕರೆ ನಡುವೆಯೂ ಶೇ 71.10ರಷ್ಟು ಮತ ಚಲಾವಣೆ ಆಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

10 ಕ್ಷೇತ್ರಗಳಲ್ಲಿ ಮತದಾನವು ಬೆಳಿಗ್ಗೆ 7ರಿಂದ ಮಧ್ಯಾಹ್ನ 3ರವರೆಗೆ ನಡೆದರೆ, ಉಳಿದ 10 ಕ್ಷೇತ್ರಗಳಲ್ಲಿ ಬೆಳಿಗ್ಗೆ 8.15ರಿಂದ ಸಂಜೆ 5ರವರೆಗೆ ನಡೆಯಿತು. ನಕ್ಸಲ್ ಪೀಡಿತ ಬಸ್ತರ್ ವಿಭಾಗದಲ್ಲಿ ಪೊಲೀಸರು ಮತ್ತು ಅರೆ ಸೇನಾ ಸಿಬ್ಬಂದಿಯ ಬಿಗಿ ಭದ್ರತೆ ಇತ್ತು. ಮೊದಲ ಹಂತದ ಚುನಾವಣೆಗೆ 1 ಲಕ್ಷ ಭದ್ರತಾ ಸಿಬ್ಬಂದಿ ನೇಮಕ ಮಾಡಲಾಗಿತ್ತು. ಮತದಾನ ನಡೆದ 20 ಕ್ಷೇತ್ರಗಳ ಪೈಕಿ, 12 ಬುಡಕಟ್ಟು ಜನರಿಗೆ ಮೀಸಲಾಗಿದ್ದವು.

ಈ 20 ಕ್ಷೇತ್ರಗಳಲ್ಲಿ2018ರ ಚುನಾವಣೆಯಲ್ಲಿ ಕಾಂಗ್ರೆಸ್ 17 ಸ್ಥಾನಗಳನ್ನು ಪಡೆದಿದ್ದರೆ, ಬಿಜೆಪಿ 2 ಮತ್ತು ಅಜಿತ್ ಜೋಗಿ ಪಕ್ಷವು 1 ಸ್ಥಾನವನ್ನು ಪಡೆದುಕೊಂಡಿತ್ತು.

'ಮೊದಲ ಹಂತದಲ್ಲಿ ಸಂಜೆ 5ರವರೆಗೆ ಶೇ 70.87ರಷ್ಟು ಮತದಾನವಾಗಿದೆ. ಇನ್ನೂ ಕೆಲವು ಮತಗಟ್ಟೆಗಳಿಂದ ಮಾಹಿತಿ ಬರಬೇಕಿರುವುದರಿಂದ ಈ ಅಂಕಿ ಅಂಶ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ' ಎಂದು ಚುನಾವಣಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದ ಸಲ ಮೊದಲ 18 ಕ್ಷೇತ್ರಗಳಿಗೆ ನಡೆದ ಮೊದಲ ಹಂತದ ಮತದಾನದಲ್ಲಿ ಶೇ 76.47ರಷ್ಟು ಮತದಾನವಾಗಿತ್ತು. ಈ ವರ್ಷ ಮೊದಲ ಹಂತದಲ್ಲಿ ಇನ್ನೆರಡು ಕ್ಷೇತ್ರಗಳನ್ನು ಸೇರಿಸಲಾಗಿದೆ.

ಬಿಜೆಪಿ ನಾಯಕ ರಮಣ್ ಸಿಂಗ್, ಛತ್ತೀಸಗಢ ಕಾಂಗ್ರೆಸ್ ಮುಖ್ಯಸ್ಥ ದೀಪಕ್ ಬೈಜ್ ಮತ್ತು ಭೂಪೇಶ್ ಬಘೇಲ್ ಅವರ ಸಂಪುಟದ ಕನಿಷ್ಠ ಮೂವರು ಸಚಿವರುಗಳ ಭವಿಷ್ಯವು ಮಂಗಳವಾರ ಇವಿಎಂಗಳಲ್ಲಿ ಭದ್ರವಾಗಿದೆ.

ಸುಕ್ಮಾ, ನಾರಾಯಣ ಪುರ, ಬಿಜಾಪುರ ಮತ್ತು ಕಾಂಕೆರ್ ಜಿಲ್ಲೆಗಳಲ್ಲಿ ಹಿಂಸಾಚಾರ ವರದಿಯಾಗಿದೆ. ಸುಕ್ಮಾ ಜಿಲ್ಲೆಯ ಚಿಂತಾಗುಫ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಕ್ಸಲರೊಂದಿಗೆ ನಡೆದ ಘರ್ಷಣೆಯಲ್ಲಿ ಭದ್ರತಾ ಪಡೆಯ ನಾಲ್ವರು ಗಾಯಗೊಂಡಿದ್ದರೆ, ಇದೇ ಜಿಲ್ಲೆಯ ತೊಂಡಮಾರ್ಕ ಶಿಬಿರದಲ್ಲಿ ಬಳಿ ನಡೆದ ಐಇಡಿ ಸ್ಫೋಟದಲ್ಲಿ ಸಿಆರ್‌ಪಿಎಫ್ ಕಮಾಂಡೊಗೆ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾರಾಯಣಪುರ, ಬಿಜಾಪುರ ಮತ್ತು ಕಾಂಕೆರ್ ಜಿಲ್ಲೆಯಲ್ಲೂ ನಕ್ಸಲರು ಮತ್ತು ಭದ್ರತಾ ಸಿಬ್ಬಂದಿ ನಡುವೆ ಘರ್ಷಣೆಯಾದ ವರದಿಯಾಗಿದೆ.

ದೀಪಕ್ ಬೈಜ್ (ಚಿತ್ರಕೂಟ ಕ್ಷೇತ್ರ), ರಾಜ್ಯ ಸಚಿವರುಗಳಾದ ಕವಾಸಿ ಲಖ್ಮ, ಮೋಹನ್ ಮಾರ್ಕಂ ಮತ್ತು ಮೊಹಮದ್ ಅಕ್ಬರ್ ಅವರು ಕಣದಲ್ಲಿದ್ದ ಪ್ರಮುಖರು. ರಾಜ್‌ನಂದಗಾಂವ್‌ನಲ್ಲಿ ರಮಣ್‌ಸಿಂಗ್ ಅವರು ಕಾಂಗ್ರೆಸ್ ನಾಯಕ ಗಿರೀಶ್ ದೇವಾಂಗನ್ ವಿರುದ್ಧ ಸ್ಪರ್ಧಿಸಿದ್ದು ಕವರ್ಧದಲ್ಲಿ ಮತ ಚಲಾಯಿಸಿದರು.

ಎರಡನೇ ಹಂತದಲ್ಲಿ ಉಳಿದ 70 ಕ್ಷೇತ್ರಗಳಿಗೆ ಮತದಾನವು ಇದೇ 17ರಂದು ನಡೆಯಲಿದೆ. ಡಿಸೆಂಬರ್ 3ರಂದು ಮತ ಎಣಿಕೆ ನಡೆಯಲಿದೆ.

ಛತ್ತೀಸಗಢದಲ್ಲಿ ಈ ಬಾರಿ ಚುನಾವಣೆಯಲ್ಲಿ ಪ್ರಮುಖ ಪಕ್ಷಗಳಷ್ಟೆ ಅಲ್ಲದೆ ಆಪ್ ಸಬ್ಕಿ ಪಾರ್ಟಿ, ಪೀಪಲ್ಸ್ ಪಾರ್ಟಿ ಆಫ್ ಇಂಡಿಯಾ, ಶಕ್ತಿ ಸೇನಾ, ಪ್ರಬುದ್ಧ ರಿಪಬ್ಲಿಕ್ ಪಾರ್ಟಿ, ಸರ್ವಧರ್ಮ ಪಾರ್ಟಿ, ಗಾನ ಸುರಕ್ಷಾ ಪಾರ್ಟಿ ಸೇರಿ 24 ರಷ್ಟು ಪಕ್ಷಗಳು ರಾಜ್ಯದಾದ್ಯಂತ ವಿವಿಧೆಡೆ ಒಂದು ಅಥವಾ ಅದಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು.

ಹೊಸ ಮತಗಟ್ಟೆಗಳು: ಬಸ್ತರ್ ವಿಭಾಗದಲ್ಲಿ ಹೊಸದಾಗಿ ಸ್ಥಾಪಿಸಲಾದ 126 ಮತಗಟ್ಟೆಗಳಲ್ಲಿ ಮತದಾರರು ಮತದಾನ ಮಾಡಿದರು. ಸ್ವಾತಂತ್ರ್ಯಾನಂತರ ಇದೇ ಮೊದಲ ಬಾರಿಗೆ ಇಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ ಎಂದು ಚುನಾವಣಾ ಆಯೋಗ ಹೇಳಿದೆ.

ಈ ಮೊದಲು ಜನರು ಮತ ಚಲಾಯಿಸಲು ದಟ್ಟ ಅರಣ್ಯದಲ್ಲಿ ಬೆಟ್ಟ, ನದಿಗಳನ್ನು ದಾಟಿ ಮತಗಟ್ಟೆಗಳನ್ನು ತಲುಪಬೇಕಿತ್ತು. ಈಗ ಹೊಸ ಮತಗಟ್ಟೆಗಳ ಸ್ಥಾಪನೆಯಿಂದ ಇಂತಹ ಸಂಕಷ್ಟಗಳು ಇರುವುದಿಲ್ಲ ಎಂದು ಆಯೋಗ ಅಭಿಪ್ರಾಯ ಪಟ್ಟಿದೆ.

ಆಯೋಗದ ನಿಯಮದ ಪ್ರಕಾರ ಮತ ಚಲಾಯಿಸಲು ಜನರು 2 ಕಿ.ಮಿ ವ್ಯಾಪ್ತಿಗಿಂತ ಹೆಚ್ಚಿನ ದೂರ ಹೋಗುವಂತಿಲ್ಲ. ಇದರ ಅನ್ವಯವೇ ಮತಗಟ್ಟೆಗಳನ್ನು ನಿರ್ಮಿಸಲಾಗಿದೆ.

ಮುಖ್ಯಾಂಶಗಳು

- ಬಿಜೆಪಿ ನಾಯಕ ರಮಣ್ ಸಿಂಗ್ ಭವಿಷ್ಯ ಇವಿಎಂನಲ್ಲಿ ಭದ್ರ
- ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ಬಿಗಿ ಭದ್ರತೆ
- ಇದೇ 17ರಂದು ಎರಡನೇ ಹಂತದ ಮತದಾನ

ಛತ್ತೀಸಗಢ ವಿಧಾನಸಭೆಗೆ ಮಂಗಳವಾರ ನಡೆದ ಮೊದಲ ಹಂತದ ಮತದಾನದ ವೇಳೆ ಜಗದಲ್‌ಪುರದಲ್ಲಿ ಮತಗಟ್ಟೆಯೊಂದರ ಮುಂದೆ ಮತ ಚಲಾಯಿಸಲು ಸರತಿ ಸಾಲಿನಲ್ಲಿ ನಿಂತ ಮಹಿಳೆಯರು ತಮ್ಮ ಗುರುತಿನ ಚೀಟಿ ಪ್ರದರ್ಶಿಸಿದರು —ಪಿಟಿಐ ಚಿತ್ರ

ಅಂಕಿ-ಅಂಶ

223 ಒಟ್ಟು ಅಭ್ಯರ್ಥಿಗಳು

25 ಮಹಿಳಾ ಅಭ್ಯರ್ಥಿಗಳು

40,78,681 ಒಟ್ಟು ಮತದಾರರು

'ಪ್ರಧಾನಿಯಿಂದ ನೀತಿಸಂಹಿತೆ ಉಲ್ಲಂಘನೆ'

ನವದೆಹಲಿ (ಪಿಟಿಐ): ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪಿಎಂ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು ಐದು ವರ್ಷಗಳಿಗೆ ವಿಸ್ತರಿಸುವುದಾಗಿ ಹೇಳಿರುವುದು ಮಾದರಿ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಕಾಂಗ್ರೆಸ್ ಮಂಗಳವಾರ ಹೇಳಿದೆ. ಅಲ್ಲದೆ ಈ ಬಗ್ಗೆ ಚುನಾವಣಾ ಆಯೋಗದ ಮೊರೆ ಹೋಗುವುದಾಗಿ ತಿಳಿಸಿದೆ.

ಪ್ರಧಾನಿ ಅವರು ಛತ್ತೀಸಗಢದಲ್ಲಿ ಪ್ರಚಾರದ ವೇಳೆ ಈ ಘೋಷಣೆ ಮಾಡಿದ್ದಾರೆ. ಕೇಂದ್ರ ಸಂಪುಟ ಸಭೆಯ ಅನುಮೋದನೆ ಕೂಡ ಇದಕ್ಕೆ ಇನ್ನೂ ಪಡೆದಿಲ್ಲ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದರು.

ಈ ವಿಷಯ ಕುರಿತಂತೆ ಚುನಾವಣಾ ಆಯೋಗವನ್ನು ಭೇಟಿ ಮಾಡಿ ಮಧ್ಯ ಪ್ರವೇಶಿಸುವಂತೆ ಕೋರುವುದಾಗಿ ತಿಳಿಸಿದರು.

ಆಯೋಗದಿಂದ ಪಕ್ಷವು ಕಾಲಾವಕಾಶವನ್ನು ಕೋರಲಿದೆ. ಆದರೆ ಪ್ರಧಾನಿ ಘೋಷಣೆ ವಿರುದ್ಧ ಆನ್‌ಲೈನ್ ಮೂಲಕ ಕೂಡ ದೂರು ದಾಖಲಿಸಿದೆ. ಪ್ರಧಾನಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದೆ ಎಂದರು.

ಯೋಜನೆಯನ್ನು ಕಾಂಗ್ರೆಸ್ ವಿರೋಧಿಸುವುದಿಲ್ಲ. ಆದರೆ ಚುನಾವಣಾ ಪ್ರಕ್ರಿಯೆ ವೇಳೆ ಈ ಘೋಷಣೆ ಮಾಡಿರುವುದನ್ನು ವಿರೋಧಿಸಲಿವೆ. ಇದು ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಎಂದು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಚುನಾವಣಾ ಕಣದಲ್ಲಿ

- **20 ಬಾರಿ ಸ್ಪರ್ಧೆ:** ರಾಜಸ್ಥಾನದಲ್ಲಿ78 ವರ್ಷ ವಯಸ್ಸಿನ ತೀತರ್ ಸಿಂಗ್ ಅವರು 1970ರಿಂದ ಈವರೆಗೆ 20 ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಪ್ರತಿಸಲವೂ ಠೇವಣಿ ಕಳೆದುಕೊಂಡಿದ್ದಾರೆ.ನವೆಂಬರ್ 25ರಂದು ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲೂ ಕರಣಾಪುರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. 'ಪ್ರಚಾರಕ್ಕಾಗಿ ನಾನು ಸ್ಪರ್ಧಿಸುತ್ತಿಲ್ಲ. ಸರ್ಕಾರ ಎಲ್ಲರಿಗೂ ಜಮೀನು, ಸೌಕರ್ಯ ನೀಡಬೇಕು' ಎಂದು ಒತ್ತಾಯಿಸುತ್ತಾರೆ.
- **4ನೇ ಪಟ್ಟಿ ಬಿಡುಗಡೆ:** ನವೆಂಬರ್ 30ರಂದು ನಡೆಯಲಿರುವ ತೆಲಂಗಾಣ ವಿಧಾನಸಭೆ ಚುನಾವಣೆಗೆ 12 ಅಭ್ಯರ್ಥಿಗಳ ನಾಲ್ಕನೇ ಪಟ್ಟಿಯನ್ನು ಬಿಜೆಪಿ ಬಿಡುಗಡೆ ಮಾಡಿದೆ. ಇತ್ತೀಚೆಗೆ ಕಾಂಗ್ರೆಸ್‌ನಿಂದ ಬಿಜೆಪಿಗೆ ಸೇರಿದ್ದ ಚಲಮಲ ಕೃಷ್ಣಾರೆಡ್ಡಿ ಅವರಿಗೆ ಮುನುಗೊಡ್ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ದುರ್ಗಂ ಅಶೋಕ್, ವಿ. ಸುಭಾಷ್ ರೆಡ್ಡಿ, ಬೊಮ್ಮಾ ಶ್ರೀರಾಮ್ ಚಕ್ರವರ್ತಿ ಟಿಕೆಟ್ ಪಡೆದವರಲ್ಲಿ ಪ್ರಮುಖರು. ಒಟ್ಟು 119 ಸ್ಥಾನಗಳ ಪೈಕಿ ಬಿಜೆಪಿ 100 ಅಭ್ಯರ್ಥಿಗಳ ಹೆಸರು ಪ್ರಕಟಿಸಿದೆ. ಉಳಿದ 19 ಸ್ಥಾನಗಳನ್ನು ಪವನ್ ಕಲ್ಯಾಣ್ ನೇತೃತ್ವದ ಜನಸೇನಾಕ್ಕೆ ಬಿಟ್ಟುಕೊಡುವ ಸಾಧ್ಯತೆ ಇದೆ.
- **'ದಲಿತರ ಏಳಿಗೆಗೆ ಬದ್ಧ':** 1950ರ ದಶಕದಲ್ಲಿ ಸಂಸದೀಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಡಾ. ಬಿ.ಆರ್. ಅಂಬೇಡ್ಕರ್ ಅವರ ಸೋಲಿಗೆ ಕಾರಣವಾಗಿತ್ತು. ಆದರೆ ಬಿಆರ್‌ಎಸ್ ದಲಿತರ ಕಲ್ಯಾಣಕ್ಕೆ ಬದ್ಧವಾಗಿದೆ ಎಂದು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಹೇಳಿದರು.ತಮ್ಮ ಸರ್ಕಾರವು ವಿಶ್ವದಲ್ಲೇ ಅತ್ಯಂತ ಎತ್ತರದ (125 ಅಡಿ) ಅಂಬೇಡ್ಕರ್ ಪ್ರತಿಮೆಯನ್ನು ಹೈದರಾಬಾದ್‌ನಲ್ಲಿ ಸ್ಥಾಪಿಸಿದೆ ಎಂದರು.
- **'ಭ್ರಷ್ಟ ಸರ್ಕಾರ':** ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಕಾಂಗ್ರೆಸ್ ತಡೆಯೊಡ್ಡಿತು. ಆದರೆ ಪ್ರಧಾನಿ ನರೇಂದ್ರ ಮೋದಿ ಅವರು ಮಂದಿರ ನಿರ್ಮಾಣಕ್ಕೆ ಪೂಜೆ ನೆರವೇರಿಸಿದರು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.ರಾಜಸ್ಥಾನದ ಕುಚಾಮನ್‌ನಲ್ಲಿ ರ‍್ಯಾಲಿಯಲ್ಲಿ ಮಾತನಾಡಿದ ಅವರು, ರಾಜಸ್ಥಾನ ಸರ್ಕಾರ ಅತ್ಯಂತ ಭ್ರಷ್ಟ ಸರ್ಕಾರ. ಹಿಂದಿನ ಸರ್ಕಾರ ಆರಂಭಿಸಿದ್ದ ಕಲ್ಯಾಣ ಕಾರ್ಯಕ್ರಮಗಳನ್ನು ಮಾಯ ಮಾಡಿದೆ. ಮಾಂತ್ರಿಕ ಮಾತ್ರ ಇದನ್ನು ಮಾಡಲು ಸಾಧ್ಯ ಎಂದು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರನ್ನು ಟೀಕಿಸಿದರು.
- **'ಚುನಾವಣೆ ಫಲಿತಾಂಶ 'ಇಂಡಿಯಾ' ಪಾಲಿಗೆ ಫೆವಿಕಾಲ್':** ಡಿಸೆಂಬರ್ 3ರಂದು ಹೊರಬೀಳುವ ಐದು ರಾಜ್ಯಗಳ ವಿಧಾನಸಭೆ ಚುನಾವಣೆಗಳ ಫಲಿತಾಂಶವು ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟಕ್ಕೆ 'ಫೆವಿಕಾಲ್' ಆಗಿ ಪರಿಣಮಿಸಲಿದೆ ಎಂದು ಕಾಂಗ್ರೆಸ್‌ನ ನಾಯಕರೊಬ್ಬರು ಹೇಳಿದ್ದಾರೆ. ಮೈತ್ರಿಕೂಟದ ಹಿಡಿದಿಟ್ಟುಕೊಂಡಿರುವ ಶಕ್ತಿ ಎಂದರೆ ಕಾಂಗ್ರೆಸ್. ಪಕ್ಷ ಬಲಶಾಲಿಯಾದಷ್ಟು ಮೈತ್ರಿಕೂಟಕ್ಕೆ ಹಿತ. ರಾಜಸ್ಥಾನ, ಛತ್ತೀಸಗಢ, ಮಧ್ಯಪ್ರದೇಶ, ತೆಲಂಗಾಣ ಮತ್ತು ಮಿಜೋರಾಂ ರಾಜ್ಯಗಳಲ್ಲಿ ಕಾಂಗ್ರೆಸ್ ಉತ್ತಮ ಪ್ರದರ್ಶನ ನೀಡುವ ಭರವಸೆ ಇದೆ. ಬಳಿಕ ಮೈತ್ರಿಕೂಟದ ಮುಂದಿನ ರೂಪುರೇಷೆ ಸಿದ್ಧಪಡಿಸಬಹುದು. ಡಿಸೆಂಬರ್ 3ರ ಬಳಿಕ ಮೈತ್ರಿಕೂಟ ಎಲ್ಲಾ ಸದಸ್ಯ ಪಕ್ಷಗಳೂ 'ಫೆವಿಕಾಲ್'ನಂತೆ ಅಂಟಿಕೊಳ್ಳಲಿವೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ.

ನುಡಿ-ಕಿಡಿ

ಕೇಂದ್ರ ಸರ್ಕಾರವು ಪ್ರಧಾನಿ ಮೋದಿ ಅವರಿಗಾಗಿ ಸುಮಾರು ₹ 8,000 ಕೋಟಿ ಮೌಲ್ಯದ ಎರಡು ವಿಮಾನಗಳನ್ನು ಖರೀದಿಸಿತು. ₹ 20,000 ಕೋಟಿ ವ್ಯಯಿಸಿ ನೂತನ ಸಂಸತ್ ಭವನವನ್ನು ನಿರ್ಮಿಸಿತು. ಈ ಘೋಷಣೆಗಳನ್ನು ಅವರು ಮಾಡುವಾಗ ಉತ್ತರಪ್ರದೇಶದ ಕಬ್ಬು ಬೆಳೆಗಾರರು ಸರ್ಕಾರ ತಮಗೆ ನೀಡಬೇಕಿರುವ ₹15,000 ಕೋಟಿ ಬಾಕಿ ಮೊತ್ತವನ್ನು ಆಗ್ರಹಿಸಿ ರಸ್ತೆಗಿಳಿದಿದ್ದರು.

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ನಾಯಕಿ

ಅಕ್ಬರ್‌ನನ್ನು ಕಾಂಗ್ರೆಸ್ ಮಹಾಪುರುಷ ಎಂದು ಪರಿಗಣಿಸುತ್ತದೆ. ಆದರೆ ಬಿಜೆಪಿಯು ಮಹಾರಾಣಾ ಪ್ರತಾಪ್, ಛತ್ರಪತಿ ಶಿವಾಜಿ ಅವರನ್ನು ಮಹಾಪುರುಷರು ಎಂದು ಕರೆಯುತ್ತದೆ. ಕಾಂಗ್ರೆಸ್ ದೃಷ್ಟಿಯಲ್ಲಿ ದೇಶದ ಇತಿಹಾಸ ಆರಂಭವಾಗುವುದು ಜವಾಹರ್‌ಲಾಲ್ ನೆಹರೂ ಅವರ ಕಾಲಘಟ್ಟದಿಂದ. ಮುಂದಿನ ಪೀಳಿಗೆಯು ಕಾಂಗ್ರೆಸ್ ಇತಿಹಾಸವನ್ನು ತಿಳಿದರೆ ಅದರ ಬಳಿಯೂ ಅವರು ಸುಳಿಯುವುದಿಲ್ಲ.

ಯೋಗಿ ಆದಿತ್ಯನಾಥ, ಉತ್ತರಪ್ರದೇಶ ಮುಖ್ಯಮಂತ್ರಿ

ವಂಶಾಡಳಿತ, ಭ್ರಷ್ಟಾಚಾರ ಮತ್ತು ತುಷ್ಟೀಕರಣದಲ್ಲಿ ಕಾಂಗ್ರೆಸ್ ಮತ್ತು ಬಿಆರ್‌ಎಸ್ ಸರಿ ಸಮಾನವಾಗಿವೆ. ತೆಲಂಗಾಣದಲ್ಲಿ ಬಿಆರ್‌ಎಸ್ ತನ್ನ ಕುಟುಂಬದ ಹಿತ ಕಾಯುವುದರಲ್ಲೇ ಮಗ್ನವಾಗಿದೆ. ಹಿಂದುಳಿದ ವರ್ಗದವರ ಆಕಾಂಕ್ಷೆ, ಕನಸುಗಳನ್ನು ಈಡೇರಿಸುವುದನ್ನು ನಿರ್ಲಕ್ಷ್ಯಿಸಿದೆ. ಬಿಆರ್‌ಎಸ್ ಸರ್ಕಾರಕ್ಕೆ ಪಾಠ ಕಲಿಸಲು ತೆಲಂಗಾಣದ ಜನರು ಸಜ್ಜಾಗಿದ್ದಾರೆ. ಕಾಂಗ್ರೆಸ್ ಪಕ್ಷವು ಆಡಳಿತಾರೂಢ ಬಿಆರ್‌ಎಸ್‌ನ ಸಿ ಟೀಮ್ ಆಗಿದೆ. ಕಾಂಗ್ರೆಸ್ ಮತ್ತು ಬಿಆರ್‌ಎಸ್ ಎರಡೂ ಪಕ್ಷಗಳ ಡಿಎನ್‌ಎ ಒಂದೇ ಆಗಿದೆ.

ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಮಿಜೋರಾಂ: ಶೇ 77 ಮತದಾನ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಿಜೋರಾಂ ವಿಧಾನಸಭೆ ಚುನಾವಣೆಯ ಮತದಾನವು ಮಂಗಳವಾರ ಶಾಂತಿಯುತವಾಗಿ ನಡೆಯಿತು. ಸಂಜೆ 4 ಗಂಟೆ ವೇಳೆಗೆ ಶೇ 77 ರಷ್ಟು ಮತದಾನ ನಡೆದಿದೆ ಎಂದು ಚುನಾವಣಾ ಆಯೋಗದ ಅಂಕಿಅಂಶ ತಿಳಿಸಿದೆ.

ಬೆಳಿಗ್ಗೆ 7 ಗಂಟೆಯಿಂದ 4 ಗಂಟೆವರೆಗೆ ಮತದಾನ ನಡೆದಿದೆ. ಮತಗಟ್ಟೆಗಳಲ್ಲಿ ಬೆಳಿಗ್ಗೆ ಹೆಚ್ಚು ಮತದಾರರಿರಲಿಲ್ಲ. ಆದರೆ, ಮಧ್ಯಾಹ್ನ 1 ಗಂಟೆ ಬಳಿಕ ಶೇ 50.64ರಷ್ಟು ಮತದಾನ ನಡೆದಿದೆ.

40 ಸದಸ್ಯಬಲದ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ 174 ಅಭ್ಯರ್ಥಿಗಳು ಕಣದಲ್ಲಿದ್ದರು. ಅವರಲ್ಲಿ 16 ಅಭ್ಯರ್ಥಿಗಳು ಮಹಿಳೆಯರು. ರಾಜ್ಯದಲ್ಲಿ ಒಟ್ಟು 8.57 ಲಕ್ಷ ಮತದಾರರಿದ್ದಾರೆ.

1,276 ಮತಗಟ್ಟೆಗಳಲ್ಲಿ ಚುನಾವಣೆ ನಡೆಯಿತು. ಸುಮಾರು 6,000 ಭದ್ರತಾ ಸಿಬ್ಬಂದಿಯನ್ನು ನೇಮಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಡಳಿತಾರೂಢ ಎಂಎನ್‌ಎಫ್, ಪ್ರಮುಖ ವಿರೋಧ ಪಕ್ಷ ಝೋರಂ ಪೀಪಲ್ಸ್ ಮೂವ್‌ಮೆಂಟ್ (ಝಡ್‌ಪಿಎಂ) ಮತ್ತು ಕಾಂಗ್ರೆಸ್ ಎಲ್ಲಾ 40 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು. ಬಿಜೆಪಿ 23 ಕ್ಷೇತ್ರಗಳಲ್ಲಿ, ಎಎಪಿ ನಾಲ್ಕು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದವು.27ಪಕ್ಷೇತರಅಭ್ಯರ್ಥಿಗಳು ಕಣದಲ್ಲಿದ್ದರು.

ರಾಜ್ಯದ ಮುಖ್ಯಮಂತ್ರಿ, ಮಿಜೋ ನ್ಯಾಷನಲ್ ಫ್ರಂಟ್ ಅಧ್ಯಕ್ಷ ಝೋರಮ್‌ಥಂಗಾ, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಲಾಲ್‌ಸವ್ತಾ ಅವರು ಬೆಳಿಗ್ಗೆ 10 ಗಂಟೆಯೊಳಗೇ ಮತ ಚಲಾಯಿಸಿದವರಲ್ಲಿ ಪ್ರಮುಖರು.

'ನಾವು ಸ್ವಂತಬಲದ ಮೇಲೇ ಸರ್ಕಾರ ರಚಿಸುತ್ತೇವೆ' ಎಂದು ಝೋರಮ್‌ಥಂಗಾ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಿಧಾನಸಭೆಗೆ ಚುನಾವಣೆ ನಡೆಯುತ್ತಿರುವ ಐದು ರಾಜ್ಯಗಳ ಪೈಕಿ ಮಿಜೋರಾಂ ಅತ್ಯಂತ ಚಿಕ್ಕ ರಾಜ್ಯ.

2018ರಲ್ಲಿ ಇಲ್ಲಿ ಶೇ 81.61ರಷ್ಟು ಮತದಾನ ಆಗಿತ್ತು.

ಎಂಎನ್‌ಎಫ್, ಝೋರಂ ಪೀಪಲ್ಸ್ ಮೂವ್‌ಮೆಂಟ್ ಮತ್ತು ಕಾಂಗ್ರೆಸ್ ಎಲ್ಲಾ 40 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು. ಬಿಜೆಪಿಯು 23 ಕ್ಷೇತ್ರಗಳಲ್ಲಿ, ಎಎಪಿ 4 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. 27 ಮಂದಿ ಪಕ್ಷೇತರರು ಕೂಡ ಕಣದಲ್ಲಿದ್ದಾರೆ.

ದಿನಾಂಕ ಬದಲಿಗೆ ಆಗ್ರಹಿಸಿ ನಿರಶನ

ಐಜ್ವಾಲ್ (ಪಿಟಿಐ): ಮಿಜೋರಾಂ ವಿಧಾನಸಭೆ ಚುನಾವಣೆಯ ಮತಎಣಿಕೆ ದಿನಾಂಕ ಮುಂದೂಡುವ ಕುರಿತು ಚುನಾವಣಾ ಆಯೋಗ(ಇ.ಸಿ) ಮೌನವಹಿಸಿರುವುದನ್ನು ವಿರೋಧಿಸಿ ರಾಜ್ಯದ ಸಾಮಾಜಿಕ ಕಾರ್ಯಕರ್ತ ಲಾಲ್‌ಬಿಯಾಕ್‌ಥಂಗಾ (65) ಮಂಗಳವಾರ ನಿರಶನ ಕೈಗೊಂಡರು.

ಮತಎಣಿಕೆಯನ್ನು ಡಿಸೆಂಬರ್ 3ಕ್ಕೆ ಇ.ಸಿ ನಿಗದಿಪಡಿಸಿದೆ. ಆ ದಿನ ಭಾನುವಾರವಾಗಿರುವ ಕಾರಣ ಕ್ರೈಸ್ತ ಧರ್ಮೀಯರೇ ಹೆಚ್ಚಿನ ಸಂಖ್ಯೆಯಲ್ಲಿರುವ ರಾಜ್ಯದಲ್ಲಿ ಧಾರ್ಮಿಕ ಚಟುವಟಿಕೆಗಳಿಗೆ ಅಡ್ಡಿಯಾಗಲಿದೆ. ಹೀಗಾಗಿ ಮತಎಣಿಕೆ ದಿನಾಂಕವನ್ನು ಮುಂದೂಡಬೇಕು ಎಂದು ಎಲ್ಲಾ ರಾಜಕೀಯ ಪಕ್ಷಗಳು ಆಯೋಗಕ್ಕೆ ಮನವಿ ಮಾಡಿದ್ದವು. 'ವಾಕಥಾನ್ ಮ್ಯಾನ್' ಎಂದೇ ಪ್ರಸಿದ್ಧರಾಗಿರುವ ಲಾಲ್‌ಬಿಯಾಕ್‌ಥಂಗಾ ಅವರು ಕೂಡಾ ಇ.ಸಿಗೆ ಮನವಿ ಸಲ್ಲಿಸಿದ್ದರು.

ಮನವಿಗೆ ಇ.ಸಿ ಓಗೊಡದ ಕಾರಣ ಮತದಾನದ ದಿವಸ ಐಜ್ವಾಲ್‌ನಲ್ಲಿಯ ರಾಜ್ಯ ಸರ್ಕಾರದ 'ವನಾಪ ಹಾಲ್'ನಲ್ಲಿ ಅವರು ನಿರಶನ ಕೈಗೊಂಡಿದ್ದಾರೆ. ತಾವು ಮತದಾನವನ್ನೂ ಮಾಡುವುದಿಲ್ಲ ಎಂದು ಹೇಳಿದ್ದಾರೆ.

ಮತಎಣಿಕೆ ದಿನಾಂಕ ಬದಲಿಸುವಂತೆ ಆಗ್ರಹಿಸಿ ಮಿಜೋರಾಂನ ಐಜ್ವಾಲ್‌ನಲ್ಲಿ ಮಂಗಳವಾರ ನಿರಶನ ಕೈಗೊಂಡ ಸಾಮಾಜಿಕ ಕಾರ್ಯಕರ್ತ ಲಾಲ್‌ಬಿಯಾಕ್ತಂಗಾ —ಪಿಟಿಐ ಚಿತ್ರ

ಪ್ರಚಾರಕ್ಕೆ ಬಿಆರ್‌ಎಸ್‌ನಿಂದ ಬಹುಮಾಧ್ಯಮಗಳ ಬಳಕೆ

ಹೈದರಾಬಾದ್ (ಪಿಟಿಐ): ತೆಲಂಗಾಣದ ಆಡಳಿತಾರೂಢ ಬಿಆರ್‌ಎಸ್ ಪಕ್ಷವು ತನ್ನ ಆಡಳಿತದ ಬಗ್ಗೆ ಮತದಾರರಲ್ಲಿ ಸದಭಿಪ್ರಾಯ ಮೂಡಿಸಲು ಹಲವು ಮಾಧ್ಯಮಗಳನ್ನು ಬಳಸಿಕೊಳ್ಳುತ್ತಿದೆ. ಎಫ್‌ಎಂ ರೇಡಿಯೊ ವಾಹಿನಿಗಳ ಟಾಕ್ ಶೋ, ತೆಲುಗು ಸಿನಿಮಾ ನಟರ ಜೊತೆ ಸಂದರ್ಶನ, ಯೂಟ್ಯೂಬ್ ಹಾಗೂ ಲಿಂಕ್ಡ್‌ಇನ್ ಮೂಲಕ ವಿಡಿಯೊಗಳನ್ನು ಹಂಚಿಕೊಳ್ಳುವ ಕೆಲಸವನ್ನು ಬಿಆರ್‌ಎಸ್ ಮಾಡುತ್ತಿದೆ.

ಚುನಾವಣಾ ಪ್ರಚಾರದ ನಡುವೆಯೇ ಪಕ್ಷದ ಕಾರ್ಯಾಕಾರಿ ಅಧ್ಯಕ್ಷ ಕೆ.ಟಿ. ರಾಮ ರಾವ್ (ಕೆಟಿಆರ್) ಅವರು ತಮ್ಮ ಅಡುಗೆ ಕಲೆಯನ್ನು 20 ಲಕ್ಷಕ್ಕೂ ಹೆಚ್ಚಿನ ಚಂದಾದಾರರನ್ನು ಹೊಂದಿದ ಯೂಟ್ಯೂಬ್ ವಾಹಿನಿಯೊಂದರ ಮೂಲಕ ಪ್ರದರ್ಶಿಸಿದ್ದಾರೆ. ಇದನ್ನು ಎರಡು ದಿನಗಳಲ್ಲಿ 22 ಲಕ್ಷ ಮಂದಿ ವೀಕ್ಷಿಸಿದ್ದಾರೆ. ತೆಲುಗಿನ ಇಬ್ಬರು ಜನಪ್ರಿಯ ನಾಯಕ ನಟರ ಜೊತೆಗಿನ ಕೆಟಿಆರ್ ಅವರ ಸಂದರ್ಶನವು ಶೀಘ್ರದಲ್ಲಿಯೇ ಪ್ರಸಾರವಾಗಲಿದೆ ಎಂದು ಮೂಲಗಳು ತಿಳಿಸಿವೆ. ಪಕ್ಷದ ಪರವಾಗಿ ವಸ್ತು-ವಿಷಯಗಳನ್ನು ಸಿದ್ಧಪಡಿಸಿ, ಸಾಮಾಜಿಕ ಜಾಲತಾಣಗಳ ಮೂಲಕ ಅವುಗಳನ್ನು ಹಂಚುವ ಕೆಲಸದಲ್ಲಿ 750ಕ್ಕೂ ಹೆಚ್ಚು ಮಂದಿ ನಿರತರಾಗಿದ್ದಾರೆ.

ಬಿಆರ್‌ಎಸ್ ಪಕ್ಷವು 17 ಸಾವಿರ ವಾಟ್ಸ್‌ಆ್ಯಪ್ ಗುಂಪುಗಳನ್ನು ಹೊಂದಿದ್ದು, 16 ಲಕ್ಷಕ್ಕೂ ಹೆಚ್ಚಿನ ಸದಸ್ಯರು ಇವುಗಳಲ್ಲಿ ಇದ್ದಾರೆ. ಇವರಿಗೆ ಪ್ರತಿದಿನ ಕನಿಷ್ಠ ಎಂಟು ಸಂದೇಶಗಳನ್ನು ರವಾನಿಸಲಾಗುತ್ತಿದೆ.

₹500 ಕೋಟಿ ಮೌಲ್ಯದ ವಸ್ತುಗಳ ವಶ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ನಗದು, ಚಿನ್ನ, ಮದ್ಯ ಮತ್ತು ಉಡುಗೊರೆ ಸೇರಿದಂತೆ ಈವರೆಗೆ ₹ 518 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತೆಲಂಗಾಣ ಮುಖ್ಯ ಚುನಾವಣಾ ಅಧಿಕಾರಿಗಳ ಕಚೇರಿ ಹೇಳಿಕೆ ತಿಳಿಸಿದೆ.

₹ 177 ಕೋಟಿ ನಗದು, 292 ಕೆ.ಜಿ ಚಿನ್ನ, 1,168 ಕೆ.ಜಿ ಬೆಳ್ಳಿ, ₹ 66 ಕೋಟಿ ಮದ್ಯ, ₹ 30.7 ಕೋಟಿ ಗಾಂಜಾ ಅಲ್ಲದೆ ₹ 178 ಕೋಟಿ ಇತರ ಮೌಲ್ಯಯುತ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಇದೇ 30ರಂದು ಇಲ್ಲಿ ಚುನಾವಣೆ ನಡೆಯಲಿದೆ.

ಕಾಂಗ್ರೆಸ್‌ನ ಅಧೀರ್ ರಂಜನ್ ಆಕ್ಷೇಪ, ರಾಷ್ಟ್ರಪತಿಗೆ ಪತ್ರ

'ಸಿಐಸಿ ನೇಮಕ ಏಕಪಕ್ಷೀಯ'

ನವದೆಹಲಿ (ಪಿಟಿಐ): 'ಮುಖ್ಯ ಮಾಹಿತಿ ಆಯುಕ್ತರ ಆಯ್ಕೆಯಲ್ಲಿ ಸರ್ಕಾರ ನನ್ನನ್ನು ಕತ್ತಲಲ್ಲಿಟ್ಟಿತ್ತು' ಎಂದು ಆಯ್ಕೆ ಸಮಿತಿ ಸದಸ್ಯ, ಕಾಂಗ್ರೆಸ್‌ನ ಸಂಸದ ಅಧೀರ್ ರಂಜನ್ ಚೌಧರಿ ಆಕ್ಷೇಪಿಸಿದ್ದು, ಈ ಸಂಬಂಧ ರಾಷ್ಟ್ರಪತಿ ಅವರಿಗೆ ಪತ್ರ ಬರೆದಿದ್ದಾರೆ.

'ಈ ಮೂಲಕ ಸರ್ಕಾರವು ಮುಖ್ಯ ಮಾಹಿತಿ ಆಯುಕ್ತರ ಆಯ್ಕೆಯಲ್ಲಿ ಪ್ರಜಾಸತ್ತಾತ್ಮಕವಾದ ಎಲ್ಲ ಮಾನದಂಡಗಳು, ನಿಯಮಗಳು, ಪ್ರಕ್ರಿಯೆಗಳನ್ನು ಗಾಳಿಗೆ ತೂರಿದೆ' ಎಂದು ಅವರು ಪತ್ರದಲ್ಲಿ ಆರೋಪಿಸಿದ್ದಾರೆ.

ಆಯ್ಕೆ ಪ್ರಕ್ರಿಯೆಯಲ್ಲಿ ವಿರೋಧಪಕ್ಷದವರ ಮಾತುಗಳನ್ನು ಕಡೆಗಣಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹಿತವಾದ ಬೆಳವಣಿಗೆಯಲ್ಲ ಎಂದೂ ಚೌಧರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಾಜಿ ಐಎಎಸ್ ಅಧಿಕಾರಿ ಹೀರಾಲಾಲ್ ಸಮರೀಯ ಅವರು ಸೋಮವಾರವಷ್ಟೇ ಮುಖ್ಯ ಮಾಹಿತಿ ಆಯುಕ್ತರಾಗಿ ರಾಷ್ಟ್ರಪತಿ ಅವರಿಂದ ಪ್ರಮಾಣವಚನ ಸ್ವೀಕರಿಸಿದ್ದರು.

'ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಅಯ್ಕೆ ಸಮಿತಿಯ ಸಭೆಯನ್ನು ನ.3ರಂದು ಸಂಜೆ ಬದಲಾಗಿ ಬೆಳಿಗ್ಗೆ ನಿಗದಿಪಡಿಸಲು ಮನವಿ ಮಾಡಿದ್ದೆ. ಸ್ಪಂದಿಸಲಿಲ್ಲ. ಅಲ್ಲದೆ, ಆಯ್ಕೆ ಕುರಿತಂತೆ ತಮಗೆ ಮಾಹಿತಿಯನ್ನೂ ಒದಗಿಸಿಲ್ಲ' ಎಂದು ಹೇಳಿದ್ದಾರೆ.

'ಸಮಿತಿ ಸದಸ್ಯನಾಗಿ ನನ್ನನ್ನು ಈ ಆಯ್ಕೆ ಪ್ರಕ್ರಿಯೆಯಿಂದ ಸಂಪೂರ್ಣವಾಗಿ ಕತ್ತಲಲ್ಲಿಡಲಾಗಿದೆ. ಸಭೆಯು ನವೆಂಬರ್ 3ರಂದು ಪ್ರಧಾನಿ ಅವರ ನಿವಾಸದಲ್ಲಿ ನಡೆದಿತ್ತು' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ಸಭೆಯಲ್ಲಿ ಪ್ರಧಾನಿ ಮತ್ತು ಗೃಹ-ಸಚಿವರಷ್ಟೇ ಇದ್ದರು. ವಿರೋಧಪಕ್ಷದ ಪ್ರತಿನಿಧಿಯಾಗಿ ಸಮಿತಿಯ ಏಕೈಕ ಸದಸ್ಯನು ಆಗಿದ್ದ ನಾನು ಹಾಜರಿರಲಿಲ್ಲ. ಆದರೆ, ಈಗ ಆಯ್ಕೆ ಮುಗಿದು ಅವರ ಪ್ರಮಾಣವಚನ ಸ್ವೀಕಾರವು ಆಗಿದೆ. ಈ ಎಲ್ಲ ಬೆಳವಣಿಗೆಗಳು ಒಟ್ಟು ಆಯ್ಕೆ ಪ್ರಕ್ರಿಯೆಯೇ ಪೂರ್ಣನಿಯೋಜಿತವಾಗಿತ್ತು ಎಂಬುದನ್ನು ಸೂಚಿಸಲಿದೆ' ಎಂದರು. ವೈ.ಕೆ.ಸಿನ್ಹಾ ಅವರ ಅಧಿಕಾರವಧಿಯು ಮುಗಿದ ಬಳಿಕ ಅಕ್ಟೋಬರ್ 3ರಿಂದ ಮುಖ್ಯ ಮಾಹಿತಿ ಆಯುಕ್ತರ ಸ್ಥಾನ ಖಾಲಿ ಉಳಿದಿತ್ತು. ಸಮರೀಯ ಈ ಸ್ಥಾನಕ್ಕೆ ನೇಮಕವಾದ ದಲಿತ ಸಮುದಾಯದ ಪ್ರಥಮ ವ್ಯಕ್ತಿಯಾಗಿದ್ದು, ಹಿಂದೆ ಮಾಹಿತಿ ಆಯುಕ್ತರಾಗಿದ್ದರು.

ಸೋಮವಾರ ನಡೆದಿದ್ದ ಪ್ರಮಾಣವಚನ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಜಗದೀಪ್ ಧನ್‌ಕರ್, ಪ್ರಧಾನಿ ಮೋದಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯದ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಇತರರು ಹಾಜರಿದ್ದರು. ಮಾಹಿತಿ ಆಯುಕ್ತರ ಸ್ಥಾನಗಳನ್ನು ಭರ್ತಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಅಕ್ಟೋಬರ್ 30ರಂದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ತಿಳಿಸಿತು.

ಸಿಐಸಿ ದಲಿತರು ಎಂದೇ ಕಾಂಗ್ರೆಸ್ ಭಾಗವಹಿಸಿಲ್ಲ –ಮೋದಿ

ಸೀಧಿ, ಮಧ್ಯಪ್ರದೇಶ (ಪಿಟಿಐ): ನೂತನ ಮುಖ್ಯ ಮಾಹಿತಿ ಆಯುಕ್ತರು (ಸಿಐಸಿ) ದಲಿತರು ಎಂಬ ಕಾರಣದಿಂದಲೇ ಕಾಂಗ್ರೆಸ್ ಆಯ್ಕೆ ಸಮಿತಿ ಸಭೆಯಲ್ಲಿ ಭಾಗವಹಿಸಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇಲ್ಲಿ ಚುನಾವಣಾ ಸಭೆಯಲ್ಲಿ ಮಾತನಾಡಿದ ಅವರು, 'ಇದು, ಆ ಪಕ್ಷದ ದಲಿತ ವಿರೋಧಿ ಮನಸ್ಥಿತಿಯನ್ನು ತೋರಿಸುತ್ತದೆ. ಬುಡಕಟ್ಟು ಸಮುದಾಯದವರು ರಾಷ್ಟ್ರಪತಿ ಆಗುವುದನ್ನು ಆ ಪಕ್ಷ ವಿರೋಧಿಸಿತ್ತು' ಎಂದರು.

ಸಭೆ ಮುಂದಕ್ಕೆ: ಮಹುವಾ–ದುಬೆ ಜಟಾಪಟಿ

ನವದೆಹಲಿ(ಪಿಟಿಐ): ಪ್ರಶ್ನೆಗಾಗಿ ಹಣ ಪಡೆದ ಆರೋಪಗಳ ಕುರಿತು ವಿಚಾರಣೆ ನಡೆಸುತ್ತಿರುವ ಸಂಸತ್‌ನ ನೀತಿ–ನಿಯಮಗಳ ಸಮಿತಿಯ ಸಭೆ ಮುಂದೂಡಿಕೆಯಾದ ಬೆನ್ನಲ್ಲೇ, ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಹಾಗೂ ಬಿಜೆಪಿ ಸಂಸದ ನಿಶಿಕಾಂತ್ ದುಬೆ ನಡುವೆ ಮಂಗಳವಾರ ಜಟಾಪಟಿ ನಡೆದಿದೆ.

ಸಮಿತಿ ಸಭೆಯು ಮಂಗಳವಾರ ನಿಗದಿಯಾಗಿತ್ತು. ಅದನ್ನು ನವೆಂಬರ್ 9ಕ್ಕೆ ಮುಂದೂಡಲಾಗಿದೆ.

ಸಮಿತಿಯ ಕಾಂಗ್ರೆಸ್ ಸದಸ್ಯರೊಬ್ಬರನ್ನು ಸಭೆಯಿಂದ ದೂರ ಇಡುವುದಕ್ಕಾಗಿಯೇ ಮುಂದೂಡಿಕೆ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮಹುವಾ ಆರೋಪಿಸಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ಸಂಸದ ದುಬೆ, 'ಮಹುವಾ ಅವರಲ್ಲಿ ಮನೆ ಮಾಡಿರುವ ಅಪರಾಧಿ ಪ್ರಜ್ಞೆಯೇ ಸಮಿತಿ ಸಭೆ ಕುರಿತು ಅವರಲ್ಲಿ ಇಂಥ ಆತಂಕಕ್ಕೆ ಕಾರಣವಾಗಿದೆ' ಎಂದು ಛೇಡಿಸಿದ್ದಾರೆ.

ರಾಹುಲ್ ಗಾಂಧಿ–ವರುಣ್ ಭೇಟಿ

ನವದೆಹಲಿ (ಪಿಟಿಐ): ಕೇದಾರನಾಥದಲ್ಲಿ ಕಾಂಗ್ರೆಸ್‌ನಾಯಕರಾಹುಲ್‌ಗಾಂಧಿ ಹಾಗೂ ಬಿಜೆಪಿಯ ಸಂಸದ ವರುಣ್ ಗಾಂಧಿ ಮಂಗಳವಾರ ಭೇಟಿಯಾದರು ಎಂದು ಮೂಲಗಳು ತಿಳಿಸಿವೆ.

ಸಾರ್ವಜನಿಕವಾಗಿ ಅಪರೂಪಕ್ಕೆ ಒಟ್ಟಿಗೆ ಕಾಣಿಸಿಕೊಳ್ಳುವ ಸಹೋದರರ ಭೇಟಿಯು, ವರುಣ್ ಗಾಂಧಿಯ ರಾಜಕೀಯ ಭವಿಷ್ಯದ ಬಗ್ಗೆ ಕೆಲವು ಊಹಾಪೋಹಗಳನ್ನು ಸೃಷ್ಟಿಸಿದೆ.

ವರುಣ್ ಮಗಳನ್ನೂ ಭೇಟಿಯಾದ ರಾಹುಲ್ ಸಂತೋಷ ವ್ಯಕ್ತ ಪಡಿಸಿದರು. ಈ ವೇಳೆ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ' ಎಂದು ಮೂಲಗಳು ಹೇಳಿವೆ.

ಬೇರಿಯಂ ಇರುವ ಪಟಾಕಿಗಳ ನಿಷೇಧ • ಸುಪ್ರೀಂ ಕೋರ್ಟ್ ಸ್ಪಷ್ಟನೆ

'ಎಲ್ಲ ರಾಜ್ಯಗಳಿಗೂ ಆದೇಶ ಅನ್ವಯ'

ನವದೆಹಲಿ(ಪಿಟಿಐ): ಬೇರಿಯಂ ಇರುವ ಪಟಾಕಿಗಳ ಬಳಕೆ ನಿಷೇಧಿಸಿ ಹೊರಡಿಸಿರುವ ಆದೇಶ ರಾಷ್ಟ್ರ ರಾಜಧಾನಿ ದೆಹಲಿಗೆ ಮಾತ್ರ ಸೀಮಿತವಲ್ಲ. ಪ್ರತಿಯೊಂದು ರಾಜ್ಯವೂ ಈ ಆದೇಶವನ್ನು ಪಾಲಿಸಬೇಕು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ವಾಯು ಮತ್ತು ಶಬ್ದ ಮಾಲಿನ್ಯ ತಡೆಗಟ್ಟುವುದಕ್ಕಾಗಿ ಸಾಂಪ್ರದಾಯಿಕ ಪಟಾಕಿಗಳನ್ನು ಸಿಡಿಸುವುದನ್ನು ನಿಷೇಧಿಸಿ 2018ರಲ್ಲಿ ತಾನು ನೀಡಿದ್ದ ಆದೇಶಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಈ ಸ್ಪಷ್ಟನೆ ನೀಡಿದೆ.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿಗಳನ್ನು ಸಿಡಿಸುವುದಕ್ಕೆ ಸಂಬಂಧಿಸಿ ತಾನು ಈ ಮೊದಲು ನೀಡಿದ್ದ ನಿರ್ದೇಶನಗಳನ್ನು ಪಾಲಿಸುವಂತೆ ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಹಾಗೂ ಎಂ.ಎಂ. ಸುಂದ್ರೇಶ್ ಅವರಿದ್ದ ನ್ಯಾಯಪೀಠವು ರಾಜಸ್ಥಾನ ಸರ್ಕಾರಕ್ಕೆ ಇದೇ ಸಂದರ್ಭದಲ್ಲಿ ಸೂಚಿಸಿತು.

ಈ ವಿಷಯದಲ್ಲಿ ಜನರೇ ಮುಂದೆ ಬರಬೇಕು. ಪ್ರಸ್ತುತ, ಮಕ್ಕಳು ಪಟಾಕಿಗಳನ್ನು ಸುಡುವುದಿಲ್ಲ. ಈ ಪ್ರವೃತ್ತಿ ವಯಸ್ಕರಲ್ಲಿಯೇ ಹೆಚ್ಚು ಕಂಡುಬರುತ್ತದೆ ಎಂದೂ ಹೇಳಿತು. ಪಟಾಕಿಗಳನ್ನು ಸಿಡಿಸುವುದನ್ನು ನಿಷೇಧಿಸುವಂತೆ ಕೋರಿರುವ ಅರ್ಜಿಯೊಂದು ಬಾಕಿ ಇದ್ದು, ಇದೇ ವಿಷಯವಾಗಿ ಸಲ್ಲಿಕೆಯಾಗಿರುವ ಮಧ್ಯಂತರ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ದೀಪಾವಳಿ ಹಾಗೂ ಮದುವೆ ಸಮಾರಂಭಗಳ ಸಂದರ್ಭದಲ್ಲಿ ಉದಯಪುರ ನಗರದಲ್ಲಿ ವಾಯು ಮತ್ತು ಶಬ್ದ ಮಾಲಿನ್ಯ ತಡೆಯುವುದಕ್ಕಾಗಿ ಪಟಾಕಿಗಳ ಮೇಲೆ ನಿಷೇಧ ಹೇರುವಂತೆ ರಾಜಸ್ಥಾನ ಸರ್ಕಾರಕ್ಕೆ ಸೂಚಿಸುವಂತೆ ಅರ್ಜಿದಾರರು ಕೋರಿದ್ದರು.

'ಈ ವಿಚಾರವಾಗಿ ನ್ಯಾಯಾಲಯವು ಈಗಾಗಲೇ ಹಲವು ಆದೇಶಗಳನ್ನು ನೀಡಿದೆ. ಹೀಗಾಗಿ ಮಧ್ಯಂತರ ಅರ್ಜಿ ಕುರಿತಾಗಿ ನಿರ್ದಿಷ್ಟ ಆದೇಶ ಹೊರಡಿಸುವ ಅಗತ್ಯ ಇಲ್ಲ. ಈಗಾಗಲೇ ಹೊರಡಿಸಿರುವ ಆದೇಶವು ರಾಜಸ್ಥಾನ ಸೇರಿದಂತೆ ಎಲ್ಲ ರಾಜ್ಯಗಳಿಗೂ ಅನ್ವಯ. ಹಬ್ಬಗಳ ಸಂದರ್ಭದಲ್ಲಿ ಮಾತ್ರವಲ್ಲ, ಅದರ ನಂತರವೂ ಈ ಆದೇಶದ ಪಾಲನೆಯಾಗಬೇಕು' ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

ಇಸ್ರೇಲ್-ಹಮಾಸ್ ಸಂಘರ್ಷಕ್ಕೆ ತಿಂಗಳು

ಮಾಸದ ಯುದ್ಧ, 'ಕದನ ವಿರಾಮ' ಮರೀಚಿಕೆ

ಜೆರುಸಲೇಂ (ಪಿಟಿಐ): ಗಾಜಾದಲ್ಲಿ ಇಸ್ರೇಲ್ ಇದುವರೆಗೆ ಕೈಗೊಂಡಿರುವ ದಾಳಿಗಳಲ್ಲಿಯೇ ಅತಿಘಾತುಕ ಎನ್ನಲಾಗಿರುವ ಯುದ್ಧ ಶುರುವಾಗಿ ನ.7ಕ್ಕೆ ಒಂದು ತಿಂಗಳು ಪೂರ್ಣಗೊಂಡಿದೆ. ಹಮಾಸ್ ದಾಳಿಯೊಂದಿಗೆ ಅ.7ರಂದು ಯುದ್ಧ ಆರಂಭವಾಗಿತ್ತು. ಈವರೆಗೆ ನಾಗರಿಕರು ಸೇರಿದಂತೆ 10 ಸಾವಿರಕ್ಕೂ ಅಧಿಕ ಜನರು ಸಾವಿಗೀಡಾಗಿದ್ದಾರೆ.

ಇಸ್ರೇಲ್‌ನ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರು, 'ಹಮಾಸ್ ಪ್ರತ್ಯೇಕತಾವಾದಿಗಳು ಒತ್ತೆ ಇರಿಸಿಕೊಂಡಿರುವ 240 ಜನರ ಬಿಡುಗಡೆವರೆಗೂ ಕದನ ವಿರಾಮ ಘೋಷಿಸುವುದಿಲ್ಲ' ಎಂದು ಪುನರುಚ್ಚರಿಸಿದ್ದಾರೆ. ಯುದ್ಧದ ಬಳಿಕ ಗಾಜಾದ ಮೇಲೆ ಇಸ್ರೇಲ್ 'ಪೂರ್ಣ ಹಿಡಿತ' ಸಾಧಿಸಲಿದೆ ಎಂದೂ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಆದರೆ, ಒತ್ತೆಯಾಳುಗಳ ಬಿಡುಗಡೆ ಹಾಗೂ ಈ ಪ್ರಾಂತ್ಯದಲ್ಲಿ ಸಿಲುಕಿರುವ ಸುಮಾರು ಲಕ್ಷಾಂತರ ಜನರಿಗೆ ಅಗತ್ಯ ವಸ್ತುಗಳ ಪೂರೈಕೆಗೆ ಅನು ವಾಗಲು ದಾಳಿಗೆ 'ತುಸು ಬಿಡುವು' ನೀಡಲಾಗುವುದು ಎಂದು ತಿಳಿಸಿದರು.

ಗಾಜಾ ನಗರದಿಂದ ಪ್ಯಾಲೆಸ್ಟೀನಿಯರು ಗಾಜಾಪಟ್ಟಿಯ ಆಗ್ನೇಯ ಭಾಗದತ್ತ ಮಂಗಳವಾರ ಗುಳೆ ಹೊರಟರು —ಎ.ಪಿ ಚಿತ್ರ

ಹಮಾಸ್ ದಾಳಿಯಿಂದಾಗಿ ಇಸ್ರೇಲ್‌ನಲ್ಲಿ 1,400 ಜನರು ಬಲಿಯಾಗಿದ್ದು, ಇದರ ಹಿಂದೆಯೇ ಇಸ್ಲಾಮಿಸ್ಟ್ ಬಂಡುಕೋರರ ನೆಲೆ ನಾಶ ಪಡಿಸುವುದಾಗಿ ಇಸ್ರೇಲ್ ಪಟ್ಟು ಹಿಡಿದಿದೆ.

ಆ ನಂತರ ಇಸ್ರೇಲ್ ನಿರಂತರವಾಗಿ ಗಾಜಾ ನಗರದಲ್ಲಿ ಹಮಾಸ್ ನೆಲೆಗಳಲ್ಲೇ ನಾಗರಿಕರ ನೆಲೆಗಳ್ನನು ಗುರಿಯಾಗಿಸಿ ದಾಳಿ ನಡೆಸುತ್ತಿದೆ. 12 ಸಾವಿರಕ್ಕೂ ಅಧಿಕ ವಾಯುದಾಳಿಗಳು ನಡೆದಿವೆ. ಭೂಸೇನೆಯು ಗಾಜಾ ನಗರವನ್ನು ಸುತ್ತುವರಿದಿದ್ದು, ಆಕ್ರಮಣ ನಡೆಸಲು ಸಿದ್ಧವಾಗಿದೆ.

ಇಸ್ರೇಲ್‌ನ ಸೇನೆಯು ಸದ್ಯ ಗಾಜಾ ಪಟ್ಟಿಯ ಉತ್ತರ ಭಾಗದಲ್ಲಿನ ಹಮಾಸ್ ಉಗ್ರಗಾಮಿ ಸಂಘಟನೆ ಪ್ರಾಬಲ್ಯ ಹೊಂದಿದ್ದ ಪ್ರದೇಶಗಳ ಮೇಲೆ ಹಿಡಿತ ಸಾಧಿಸಿದೆ. ಗಾಜಾಪಟ್ಟಿಗೆ ಹೊಂದಿಕೊಂಡಂತೆ ಕ್ಷಿಪಣಿ ದಾಳಿ ವಾಹಕಗಳು,ಟ್ಯಾಂಕರ್‌ಗಳು, ಶಸ್ತ್ರಾಸ್ತ್ರಗಳನ್ನು ನಿಯೋಜಿಸಲಾಗಿದೆ ಎಂದಿದೆ.

ದಾಳಿ, ಮರುದಾಳಿಯಿಂದಾಗಿ ಗಾಜಾ ಪಟ್ಟಿಯಲ್ಲಿ ನರಕಸದೃಶ ವಾತಾವರಣ ನಿರ್ಮಾಣವಾಗಿದೆ. ಆಸ್ಪತ್ರೆಗಳ ಆವರಣದಲ್ಲಿ ಶ್ವೇತವಸ್ತ್ರದಲ್ಲಿ ಸುತ್ತಿಟ್ಟ ಶವಗಳ ಸಾಲು ಸಾಮಾನ್ಯವಾಗಿದೆ. ನಿರಾಶ್ರಿತರ ಶಿಬಿರಗಳ ಮೇಲೂ ನಡೆದ ದಾಳಿಯಿಂದಾಗಿ ಅನೇಕ ನಾಗರಿಕರು ಬಲಿಯಾಗಿದ್ದಾರೆ.

ನಿರಾಶ್ರಿತರ ಶಿಬಿರದ ಮೇಲಿನ ದಾಳಿಯನ್ನು 'ನರಮೇಧ' ಎಂದು ಗಾಜಾದ ನಿವಾಸಿಗಳು ಬಣ್ಣಿಸಿದ್ದಾರೆ. ವಸತಿ ಸಂಕೀರ್ಣಗಳು ಸೇರಿದಂತೆ ದಾಳಿಯಿಂದ ಹಲವು ಕಟ್ಟಡಗಳು ನೆಲಸಮವಾಗಿವೆ. ಅವಶೇಷಗಳ ನಡುವೆ ಸಿಲುಕಿದವರ, ಮೃತಪಟ್ಟವರ ಶವಗಳಿಗಾಗಿ ಶೋಧ ನಡೆಸುತ್ತಿರುವುದು ಸಾಮಾನ್ಯ ದೃಶ್ಯವಾಗಿದೆ.

ಇಸ್ರೇಲ್–ಹಮಾಸ್ ಸಮರ

ಷೇರುಪೇಟೆ ವಹಿವಾಟು 16



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,411
ಇಂದಿನ ಅಂತ್ಯ	19,406
▼	5
ದಿನದ ಕನಿಷ್ಠ	19,329

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹580
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹583

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹915 (910)
ಸೂರ್ಯಕಾಂತಿ (ರಿಫೈನ್ಡ್)	₹910 (915)
ಪಾಮೋಲಿನ್	₹820 (818)

ವಿನಿಮಯ ದರ

$ ಡಾಲರ್	83.27
£ ಪೌಂಡ್	103.28
€ ಯುರೊ	89.42
¥ ಯೆನ್ (100ಕ್ಕೆ)	55

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹143
ಗುಡ್ ಲಾಟ್	₹132

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹240-455
ದ್ವಿತಳಿ (ಬಿ.ವಿ)	₹205-569

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-8205
ತಿಪಟೂರು	₹8000-9000
ತುರುವೇಕೆರೆ	₹8000-8200

ಐರೋಪ್ಯ ಒಕ್ಕೂಟದಿಂದ ಕಾರ್ಬನ್ ಟ್ಯಾಕ್ಸ್: ಗೋಯಲ್ ಅಸಮಾಧಾನ

‘ಉಚಿತವಲ್ಲದ ತೆರಿಗೆ ದೇಶ ಒಪ್ಪಲ್ಲ’

ಮುಖ್ಯಾಂಶಗಳು
- ಡಬ್ಲ್ಯುಟಿಒ ಜೊತೆ ಮಾತುಕತೆ: ಗೋಯಲ್
- 2026ರಿಂದ ಕಾರ್ಬನ್ ಟ್ಯಾಕ್ಸ್ ಜಾರಿಗೊಳಿಸಲಿರುವ ಐರೋಪ್ಯ ಒಕ್ಕೂಟ

ನವದೆಹಲಿ (ಪಿಟಿಐ): ಉಕ್ಕು, ಅಲ್ಯುಮಿನಿಯಂ ಮೇಲೆ ಐರೋಪ್ಯ ಒಕ್ಕೂಟವು ನ್ಯಾಯೋಚಿತವಲ್ಲದ ತೆರಿಗೆ ವಿಧಿಸುವುದನ್ನು ಭಾರತ ಒಪ್ಪುವುದಿಲ್ಲ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಐರೋಪ್ಯ ಒಕ್ಕೂಟವು ಉಕ್ಕು, ಅಲ್ಯುಮಿನಿಯಂ ಸೇರಿದಂತೆ ಆಯ್ದ ಉತ್ಪನ್ನಗಳ ಆಮದು ಮೇಲೆ ‘ಕಾರ್ಬನ್ ಟ್ಯಾಕ್ಸ್’ ವಿಧಿಸುವ ನಿರ್ಧಾರ ಮಾಡಿರುವುದಕ್ಕೆ ತೀವ್ರ ಕಳವಳ ವ್ಯಕ್ತಪಡಿಸಿರುವ ಅವರು, ದೇಶದ ತಯಾರಕರು ಮತ್ತು ರಫ್ತುದಾರರಿಗೆ ಉಚಿತವಾದ ತೆರಿಗೆ ಪ್ರಮಾಣ ನಿಗದಿ ಮಾಡುವ ಸಂಬಂಧ ಹೋರಾಟ ನಡೆಸಲಾಗುವುದು ಎಂದಿದ್ದಾರೆ.

ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಈ ತೆರಿಗೆ ವಿಧಿಸಲಾಗುತ್ತಿದೆ. ಕಲ್ಲಿದ್ದಲು, ಪೆಟ್ರೋಲ್ ಮತ್ತು ನೈಸರ್ಗಿಕ ಅನಿಲ ಬಳಸುವ ಕೈಗಾರಿಕೆಗಳಿಗೆ ಈ ತೆರಿಗೆ ವಿಧಿಸಲಾಗುತ್ತದೆ.

ಐರೋಪ್ಯ ಒಕ್ಕೂಟವು 2026ರ ಜನವರಿ 1 ರಿಂದ ಕೆಲವು ಆಮದು ಉತ್ಪನ್ನಗಳ ಮೇಲೆ ‘ಕಾರ್ಬನ್ ಟ್ಯಾಕ್ಸ್’ ವಿಧಿಸಲು ನಿರ್ಧರಿಸಿದೆ. ಹೀಗಾಗಿ ಭಾರತದ ಉಕ್ಕು, ಸಿಮೆಂಟ್, ರಸಗೊಬ್ಬರ, ಅಲ್ಯುಮಿನಿಯಂ ಮತ್ತು ಹೈಡ್ರೊಕಾರ್ಬನ್ ಸೇರಿದಂತೆ ಒಟ್ಟು ಏಳು ವಲಯಗಳು ಇಂಗಾಲ ಹೊರಸೂಸುವಿಕೆಯ ಪ್ರಮಾಣದ ಕುರಿತು ಐರೋಪ್ಯ ಒಕ್ಕೂಟದೊಂದಿಗೆ ಈ ವರ್ಷದ ಅಕ್ಟೋಬರ್‌ನಿಂದಲೇ ಮಾಹಿತಿ ಹಂಚಿಕೊಳ್ಳಬೇಕಾಗಿದೆ.

ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಶಿಯೇಟಿವ್ (ಜಿಟಿಆರ್‌ಐ) ವರದಿ ಪ್ರಕಾರ, ಆಯ್ದ ಉತ್ಪನ್ನಗಳ ಆಮದಿಗೆ 2026 ಜನವರಿ 1ರಿಂದ ಶೇ 20 ರಿಂದ ಶೇ 35ರವರೆಗೆ ತೆರಿಗೆ ವಿಧಿಸಲು ಐರೋಪ್ಯ ಒಕ್ಕೂಟ ಮುಂದಾಗಿದೆ.

ಉಕ್ಕು ಉದ್ಯಮದ ಕಾರ್ಯಕ್ರಮದಲ್ಲಿ ಮಾತನಾಡಿದ ಗೋಯಲ್, ಕಾರ್ಬನ್ ಟ್ಯಾಕ್ಸ್ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಈ ಕುರಿತು ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯುಟಿಒ) ಜೊತೆ ಮಾತುಕತೆ ನಡೆಸಲಾಗುತ್ತಿದೆ. ಭಾರತದ ತಯಾರಕರು ಮತ್ತು ರಫ್ತುದಾರರಿಗೆ ಉಚಿತವಾದ ತೆರಿಗೆ ದರ ನಿಗದಿ ಆಗುವಂತೆ ಮಾಡಲು ಎಲ್ಲ ರೀತಿಯ ಪ್ರಯತ್ನ ನಡೆಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ಭಾರತದ ಒಟ್ಟು ರಫ್ತಿನಲ್ಲಿ ಶೇ 26.6ರಷ್ಟು ಕಬ್ಬಿಣದ ಅದಿರಿನ ಉಂಡೆ, ಕಬ್ಬಿಣ, ಉಕ್ಕು ಮತ್ತು ಅಲ್ಯುಮಿನಿಯಂ ಉತ್ಪನ್ನಗಳು ಐರೋಪ್ಯ ಒಕ್ಕೂಟಕ್ಕೆ ರಫ್ತಾಗುತ್ತಿವೆ. ಕಾರ್ಬನ್ ಟ್ಯಾಕ್ಸ್ ವಿಧಿಸುವುದರಿಂದ ಈ ಉತ್ಪನ್ನಗಳ ರಫ್ತು ಮೇಲೆ ಪರಿಣಾಮ ಬೀರಲಿದೆ. 2023ರಲ್ಲಿ ಭಾರತವು ₹61,420 ಕೋಟಿ ಮೌಲ್ಯದ ರಫ್ತನ್ನು ಮಾಡಿದೆ.

ಮುಕ್ತ ವ್ಯಾಪಾರ ಒಪ್ಪಂದದ ಮೂಲಕ (ಎಫ್‌ಟಿಎ) ಅನ್ಯ ದೇಶಗಳೊಂದಿಗೆ ವಹಿವಾಟು ನಡೆಸಲು ಸಹ ದೇಶದ ಉಕ್ಕು ಉದ್ಯಮಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

‘ದಿವಾಳಿ ಪ್ರಕ್ರಿಯೆಗೆ ವಿ-ವರ್ಕ್ ಗ್ಲೋಬಲ್ ಭಾರತದಲ್ಲಿ ವಹಿವಾಟಿಗೆ ಇಲ್ಲ ಅಡ್ಡಿ’

ನವದೆಹಲಿ (ಪಿಟಿಐ): ಅಮೆರಿಕದಲ್ಲಿ ವಿ-ವರ್ಕ್ ಗ್ಲೋಬಲ್ ಕಂಪನಿಯು ದಿವಾಳಿ ಪ್ರಕ್ರಿಯೆಗೆ ಒಳಗಾಗಿದೆ. ಆದರೆ, ಇದರಿಂದಾಗಿ ಭಾರತದ ವಹಿವಾಟಿನ ಮೇಲೆ ಯಾವುದೇ ಪರಿಣಾಮ ಇಲ್ಲ ಎಂದು ವಿ-ವರ್ಕ್ ಇಂಡಿಯಾ ಮಂಗಳವಾರ ಸ್ಪಷ್ಟಪಡಿಸಿದೆ.

ಬೆಂಗಳೂರಿನ ಎಂಬಸಿ ಸಮೂಹವು ವಿ-ವರ್ಕ್ ಇಂಡಿಯಾದಲ್ಲಿ ಶೇ 73ರಷ್ಟು ಷೇರುಪಾಲು ಹೊಂದಿದೆ. ಇನ್ನುಳಿದ ಶೇ 27ರಷ್ಟು ರುಪಾಲು ವಿ-ವರ್ಕ್ ಗ್ಲೋಬಲ್ ಬಳಿ ಇದೆ.

ವಿ-ವರ್ಕ್ ಇಂಡಿಯಾ ಕಂಪನಿಯು ಸ್ವತಂತ್ರವಾಗಿ ಕಾರ್ಯಾಚರಣೆ ನಡೆಸುತ್ತಿದ್ದ, ವಿ-ವರ್ಕ್ ಗ್ಲೋಬಲ್‌ನಿಂದ ಪ್ರತ್ಯೇಕವಾಗಿದೆ. ಹೀಗಾಗಿ ಇಲ್ಲಿನ ಕಾರ್ಯಾಚರಣೆ ಮೇಲೆ ಅದರ ಪರಿಣಾಮ ಆಗುವುದಿಲ್ಲ ಎಂದು ವಿ-ವರ್ಕ್ ಇಂಡಿಯಾದ ಸಿಇಒ ಕರಣ್ ವೀರ್ವಾಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಚೇರಿ ಕೆಲಸಗಳಿಗೆ ಅಗತ್ಯವಿರುವ ಸೇವೆಗಳನ್ನು ಒಂದೇ ಕಡೆ ನೀಡುವ ಕಂಪನಿ ಇದಾಗಿದೆ.

ದೇಶದ 7 ನಗರಗಳಲ್ಲಿ 50ಕ್ಕೂ ಅಧಿಕ ಕೇಂದ್ರಗಳನ್ನು ಕಂಪನಿ ಹೊಂದಿದೆ. ಹಿಂದಿನ ಹಣಕಾಸು ವರ್ಷದಲ್ಲಿ ವಿ-ವರ್ಕ್ ಇಂಡಿಯಾ ₹1,400 ಕೋಟಿ ಮೊತ್ತದ ವಹಿವಾಟು ನಡೆಸಿದೆ.

ವಿ-ವರ್ಕ್ ಗ್ಲೋಬಲ್ ಸಂಸ್ಥೆಯು ಒಂದು ಹಂತದಲ್ಲಿ ಸಾಫ್ಟ್ ಬ್ಯಾಂಕ್ ಒಳಗೊಂಡು ಹಲವು ವೆಂಚರ್ ಕ್ಯಾಪಿಟಲ್‌ಗಳಿಂದ ಭಾರಿ ಪ್ರಮಾಣದಲ್ಲಿ ಬಂಡವಾಳ ಸಂಗ್ರಹಿಸಿತ್ತು. ₹4.06 ಲಕ್ಷ ಕೋಟಿ ಮೌಲ್ಯ ಹೊಂದುವ ಮೂಲಕ 2019ರಲ್ಲಿ ಅಮೆರಿಕದ ಅತ್ಯಂತ ಮೌಲ್ಯಯುತ ನವೋದ್ಯಮ ಆಗಿತ್ತು.

ಸಾಲದ ಹೊರೆ ಹೆಚ್ಚಾಗಿದ್ದು, ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ದಿವಾಳಿ ಪ್ರಕ್ರಿಯೆಗೆ ಒಳಗಾಗಲು ನಿರ್ಧರಿಸಲಾಯಿತು ಎಂದು ವಿ-ವರ್ಕ್ ಗ್ಲೋಬಲ್ ತಿಳಿಸಿದೆ. ದಿವಾಳಿ ಪ್ರಕ್ರಿಯೆಗೆ ಒಳಗಾಗಿರುವುದರಿಂದ ಅಮೆರಿಕ ಮತ್ತು ಕೆನಡಾದ ಕಾರ್ಯಾಚರಣೆ ಮೇಲೆ ಪರಿಣಾಮ ಆಗಲಿದೆ. ಜಾಗತಿಕ ಕಾರ್ಯಾಚರಣೆಯು ಎಂದಿನಂತೆಯೇ ನಡೆಯುವ ನಿರೀಕ್ಷೆ ಇದೆ ಎಂದು ಅದು ತಿಳಿಸಿದೆ.

ಚಿನ್ನದ ದರ ₹250, ಬೆಳ್ಳಿ ₹650 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನದ ದರ 10 ಗ್ರಾಂಗೆ ₹250ರಷ್ಟು ಇಳಿಕೆಯಾಗಿ, ₹61,500ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹650ರಷ್ಟು ಕಡಿಮೆ ಆಗಿ ₹74,550ಕ್ಕೆ ತಲುಪಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಮಂಗಳವಾರ ಇಳಿಕೆ ಆಗಿದ್ದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

07-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	880 (875)
ಪಾಮ್ ವಾರದ ಡೆಲಿವರಿ	822 (820)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,400 (60,850)
ಬೆಳ್ಳಿ ಕೆ.ಜಿ 70,800 (72,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವೆಂಕಟೇಶ್

● **ಪ್ರಶ್ನೆ:** ನನಗೆ ಜನವರಿ 2016 ರಿಂದ ಅಕ್ಟೋಬರ್ 2022ರ ವರೆಗಿನ ಬಾಕಿ ಇದ್ದ ವೇತನ ಒಂದೇ ಬಾರಿಗೆ ಜೂನ್ 2023ರಲ್ಲಿ ಪಾವತಿ ಆಗಿದೆ. ಶೇಕಡಾ 30 ರ ದರದಲ್ಲಿ ಆದಾಯ ತೆರಿಗೆ ಕಡಿತಗೊಳಿಸಿದ್ದಾರೆ. ಇದಕ್ಕೆ ರಿಟರ್ನ್ಸ್ ಸಲ್ಲಿಸಿ ತೆರಿಗೆ ಹಿಂಪಡೆಯಲು 2024 ರ ಏಪ್ರಿಲ್‌ವರೆಗೆ ಕಾಯಬೇಕೆ? ಅಥವಾ ಈಗಲೇ ರಿಟರ್ನ್ಸ್ ಸಲ್ಲಿಸಬಹುದೇ?

ಉತ್ತರ: ಹಿಂದಿನ ವರ್ಷಕ್ಕೆ ಸಂಬಂಧಿಸಿದ ವೇತನ ಒಂದೇ ಬಾರಿಗೆ ಪಾವತಿಸಿದಾಗ ಸಹಜವಾಗಿ ಅಂತಹ ವೇತನ ಪಾವತಿಯಾದ ಆರ್ಥಿಕ ವರ್ಷದಲ್ಲಿ ಹೆಚ್ಚಿನ ದರದಲ್ಲಿ ಆದಾಯ ತೆರಿಗೆ ಕಡಿತ ಆಗುತ್ತದೆ. ಆದಾಯ ತೆರಿಗೆ ಕಾಯ್ದೆಯ ಪ್ರಕಾರ, ಉದ್ಯೋಗಿಗೆ ಬಾಕಿ ವೇತನವನ್ನು ನೀಡುವಾಗ ಹಿಂದಿನ ತೆರಿಗೆ ವರ್ಷದ ಅವಧಿಯಲ್ಲಿ ಅಂತಹ ಆದಾಯವನ್ನು ತೆರಿಗೆ ಲೆಕ್ಕಕ್ಕೆ ಪರಿಗಣಿಸದಿದ್ದರೆ, ಆ ಮೊತ್ತವನ್ನು ಪಾವತಿಯ ವರ್ಷದಲ್ಲಿ ಆದಾಯವಾಗಿ ಪರಿಗಣಿಸಬೇಕಾಗುತ್ತದೆ. ಈ ಕಾರಣಗಳಿಂದ ಆ ವರ್ಷದಲ್ಲಿ ಗರಿಷ್ಠ ದರದಲ್ಲಿ ತೆರಿಗೆ ಕಡಿತವಾಗುತ್ತದೆ. ಇಂತಹ ಸಮಸ್ಯೆಗೆ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವ ಸಂದರ್ಭದಲ್ಲಿ ಕೆಲವು ವಿಶೇಷ ರಿಯಾಯಿತಿಗಳಿವೆ.

ಆದಾಯ ತೆರಿಗೆಯ ಸೆಕ್ಷನ್ 89 ಅಡಿ ಕೆಲವು ಪರ್ಯಾಯ ವ್ಯವಸ್ಥೆಗಳಿವೆ. ಹಳೆಯ ವರ್ಷಗಳಿಗೆ ಸಂಬಂಧಿಸಿ ತೆರಿಗೆದಾರರ ವೇತನ ಬಾಕಿ ಪಾವತಿಯನ್ನು ಆಯಾ ವರ್ಷದಲ್ಲೇ ಪಾವತಿಸಿದ್ದಿದ್ದರೆ ಏನು ತೆರಿಗೆ ಬರುತ್ತಿತ್ತು ಹಾಗೂ ಪ್ರಸ್ತುತ ಒಂದೇ ಬಾರಿ ವೇತನ ಪಾವತಿಸಿದ ಕಾರಣ ತೆರಿಗೆಯಲ್ಲಾದ ಒಟ್ಟಾರೆ ವ್ಯತ್ಯಾಸದ ಪರಿಣಾಮವನ್ನು ಗಣನೆಗೆ ತೆಗೆದುಕೊಂಡು, ನೀವು ಎಷ್ಟು ಹೆಚ್ಚುವರಿ ತೆರಿಗೆ ಪಾವತಿಸಬೇಕಾಯಿತು ಎಂಬುದನ್ನು ಗೊತ್ತುಮಾಡಲಾಗುತ್ತದೆ. ಇಂತಹ ತೆರಿಗೆ ಪರಿಣಾಮವನ್ನು ಕಡಿಮೆಗೊಳಿಸಲು ಅಗತ್ಯವಿರುವ ಮಾಹಿತಿಯನ್ನು ರಿಟರ್ನ್ಸ್ ಸಲ್ಲಿಸುವ ಮೊದಲು 'ಫಾರಂ 10 ಇ' ಸಲ್ಲಿಸುವ ಮೂಲಕ ತೆರಿಗೆದಾರರು ಹೆಚ್ಚುವರಿ ಪಾವತಿಸಿದ ತೆರಿಗೆಗೆ ರಿಯಾಯಿತಿ ಪಡೆಯಬಹುದು. ಈ ತೆರಿಗೆ ಲೆಕ್ಕಾಚಾರ ಪ್ರಕ್ರಿಯೆಯನ್ನು ನೀವು ರಿಟರ್ನ್ಸ್ ಸಲ್ಲಿಸುವ ಸಂದರ್ಭದಲ್ಲಿ ಪರಿಣತರ ನೆರವು ಪಡೆದು ಪೂರೈಸಬಹುದು. ಪ್ರತಿ ಆರ್ಥಿಕ ವರ್ಷ ಮಾರ್ಚ್ ತಿಂಗಳಲ್ಲಿ ಅಂತ್ಯವಾಗುವ ಕಾರಣ, ರಿಟರನ್ಸ್ ಅನ್ನು ತದನಂತರದ ನಾಲ್ಕು ತಿಂಗಳೊಳಗೆ ಸಲ್ಲಿಸುವ ಅವಕಾಶವಿರುತ್ತದೆ. ಅಲ್ಲಿಯ ತನಕ ನೀವು ಕಾಯಬೇಕಾಗುತ್ತದೆ.

ಸುರೇಶ್ ಎನ್. ನಾಯಕ್,
ಕುಮಟಾ, ಉತ್ತರ ಕನ್ನಡ ಜಿಲ್ಲೆ

● **ಪ್ರಶ್ನೆ:** ನಾನು ನಿವೃತ್ತ ಉದ್ಯೋಗಿ ಹಾಗೂ ತೆರಿಗೆ ಪಾವತಿದಾರನಾಗಿದ್ದೇನೆ. ಸಮಯಕ್ಕೆ ಸರಿಯಾಗಿ ತೆರಿಗೆ ರಿಟರ್ನ್ಸ್‌ಗಳನ್ನು ಸಲ್ಲಿಸುತ್ತಿದ್ದೇನೆ. ಆಗಸ್ಟ್ 2023 ರಲ್ಲಿ, ₹20 ಲಕ್ಷದ ಮಿತಿ ಮೀರಿ ನಗದು ಹಿಂಪಡೆದಾಗ ಅದಕ್ಕೆ ನನ್ನ ಬ್ಯಾಂಕ್ ಖಾತೆಯಿಂದ ₹ 460ನ್ನು ಆದಾಯ ತೆರಿಗೆಯಾಗಿ ಕಡಿತಗೊಳಿಸಲಾಯಿತು. ಇದಾದ ನಂತರ ನಾನು ಬ್ಯಾಂಕಿಗೆ ನನ್ನ 3 ವರ್ಷಗಳ ಐ.ಟಿ. ದಾಖಲೆ ಸಲ್ಲಿಸಿದ್ದೇನೆ. ನನ್ನ ಮನೆ ನಿರ್ಮಾಣ ಹಂತದಲ್ಲಿರುವುದರಿಂದ, ಕಾರ್ಮಿಕರಿಗೆ ಪಾವತಿಗಾಗಿ ನನಗೆ ನಗದು ಅಗತ್ಯವಿದೆ. ದಯವಿಟ್ಟು ಈ ಬಗ್ಗೆ ಇರುವ ವಿವರವನ್ನು ನನಗೆ ತಿಳಿಸಿ. ಕಡಿತಗೊಳಿಸಲಾದ ತೆರಿಗೆಯ ಮೊತ್ತವನ್ನು ಮರಳಿ ಪಡೆಯಬಹುದು? ಕ್ಲೈಮ್ ಮಾಡುವ ವಿಧಾನವನ್ನು ತಿಳಿಸಿ ಕೊಡಿ.

ಉತ್ತರ: ಆದಾಯ ತೆರಿಗೆ ನಿಯಮದಡಿ ನಗದು ವ್ಯವಹಾರಗಳ ಮೇಲೆ ನಿಯಂತ್ರಣ ಹಾಗೂ ನಿಗಾ ಇಡುವ ದೃಷ್ಟಿಯಿಂದ 'ಸೆಕ್ಷನ್ 194 ಎನ್' ಅನ್ನು 2019 ರ ಬಜೆಟ್‌ನಲ್ಲಿ ಜಾರಿಗೊಳಿಸಲಾಯಿತು. ಪ್ರತಿ ಬ್ಯಾಂಕ್ ಗಳು, ಸಹಕಾರಿ ಬ್ಯಾಂಕ್‌ಗಳು ಅಥವಾ ಅಂಚೆ ಕಚೇರಿಗಳು ತಮ್ಮಲ್ಲಿರುವ ಗ್ರಾಹಕರ ಖಾತೆಯಿಂದ ವರ್ಷದಲ್ಲಿ ನಿಗದಿತ ಮಿತಿಗಿಂತ ಅಧಿಕ ಮೊತ್ತವನ್ನು ನಗದು ರೂಪದಲ್ಲಿ ಪಡೆದಾಗ ಈ ನಿಯಮ ಬಾಧಿತವಾಗುತ್ತದೆ. ಇದರಂತೆ ತೆರಿಗೆಯನ್ನು ಶೇ 2 ಅಥವಾ ಶೇ 5 ದರದಲ್ಲಿ ಕಡಿತಗೊಳಿಸಲಾಗುತ್ತದೆ. ಆದರೆ ಈ ನಿಯಮಕ್ಕೆ ಕೆಲವೆಲ್ಲ ವಿನಾಯಿತಿಗಳಿವೆ. ಅಂತಹ ವಿನಾಯಿತಿಯ ವ್ಯಾಪ್ತಿಯಿಂದ ಹೊರಗಿದ್ದಾಗ ಮಾತ್ರ ತೆರಿಗೆ ಕಡಿತಗೊಳಿಸುವುದು ಬ್ಯಾಂಕುಗಳಿಗೆ ಅನಿವಾರ್ಯವಾಗಿರುತ್ತದೆ.

ಮೊದಲನೆಯದಾಗಿ, ಖಾತೆದಾರ ಹಿಂದಿನ ಮೂರು ಆರ್ಥಿಕ ವರ್ಷಗಳಿಗೆ ಸಂಬಂಧಿಸಿ ಎಲ್ಲಾ ಮೂರು ವರ್ಷಗಳಲ್ಲೂ ತೆರಿಗೆ ರಿಟರ್ನ್ಸ್ ಸಲ್ಲಿಸದೆ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ₹ 20 ಲಕ್ಷಕ್ಕಿಂತ ಅಧಿಕ, ಆದರೆ ಒಂದು ಕೋಟಿಗಿಂತ ಕಡಿಮೆ ಹಣವನ್ನು ನಗದು ರೂಪದಲ್ಲಿ ಹಿಂಪಡೆದರೆ, ಶೇ 2 ರ ದರದಲ್ಲಿ ತೆರಿಗೆ ಕಡಿತಗೊಳಿಸಬೇಕಾಗುತ್ತದೆ. ಇದೇ ಸನ್ನಿವೇಶದಲ್ಲಿ ನಗದು ಹಿಂಪಡೆದ ಮೊತ್ತ ಒಂದು ಕೋಟಿಗೂ ಹೆಚ್ಚಿನ ಮೊತ್ತವಾಗಿದ್ದರೆ, ಶೇ 2 ರ ಬದಲು, ಹೆಚ್ಚುವರಿ ಮೊತ್ತದ ಮೇಲೆ ಶೇ 5 ರ ದರದಲ್ಲಿ ತೆರಿಗೆ ಕಡಿತ ಅನ್ವಯವಾಗುತ್ತದೆ.

ಇನ್ನು, ಸರಿಯಾಗಿ ರಿಟರ್ನ್ಸ್ ಸಲ್ಲಿಸುವ ತೆರಿಗೆದಾರರಾಗಿದ್ದರೂ, ನಗದು ಪಡೆದ ಮೊತ್ತ ಒಂದು ಕೋಟಿ ರೂಪಾಯಿಗೂ ಅಧಿಕವಾದಾಗ, ಸಹಜವಾಗಿ ಯಾವುದೇ ವ್ಯಕ್ತಿಗಾದರೂ ಶೇ 2 ರ ದರದಲ್ಲಿ ತೆರಿಗೆ ಕಡಿತ ಮಾಡಲಾಗುತ್ತದೆ. ಈ ಮೊತ್ತ ಒಂದೇ ಬ್ಯಾಂಕಿನ ಎಲ್ಲಾ ಶಾಖೆಗಳಿಂದ ಪಡೆಯುವ ಒಟ್ಟು ಮೊತ್ತವಾಗಿರುತ್ತದೆ. ಈ ರೀತಿ ಕಡಿತವಾದ ತೆರಿಗೆ ಮೊತ್ತ, ತೆರಿಗೆದಾರರ ಪ್ಯಾನ್ ಖಾತೆಯಲ್ಲಿ ಬ್ಯಾಂಕ್ ಅಥವಾ ಅಂಚೆ ಕಚೇರಿಗಳು ಜಮಾ ಮಾಡಿ ಆದಾಯ ತೆರಿಗೆ ಇಲಾಖೆಗೆ ವರದಿ ಮಾಡುತ್ತವೆ. ಯಾವುದೇ ತೆರಿಗೆದಾರರು ಆದಾಯ ತೆರಿಗೆಯ ವೆಬ್‌ಸೈಟ್‌ನಲ್ಲಿ ತಮ್ಮ ಪ್ಯಾನ್ ಖಾತೆಯಲ್ಲಿ ಜಮಾ ಆದ ಮೊತ್ತವನ್ನು ಪರಿಶೀಲಿಸಬಹುದು. ಈ ಮೊತ್ತವನ್ನು ಆಯಾ ವರ್ಷದ ತೆರಿಗೆ ಪಾವತಿಗೆ ಜಮಾ ಮಾಡಬಹುದು ಅಥವಾ ತೆರಿಗೆಗೆ ಒಳಪಡುವ ಆದಾಯವಿಲ್ಲದಿದ್ದರೆ ಸಂಪೂರ್ಣ ಹಿಂಪಡೆಯುವ ಅವಕಾಶ ಇರುತ್ತದೆ. ಇದಕ್ಕಾಗಿ ನೀವು ಮುಂದಿನ ವರ್ಷ ಏಪ್ರಿಲ್ ನಂತರ-ಜುಲೈ ತಿಂಗಳೊಳಗೆ ತೆರಿಗೆ ರಿಟರ್ನ್ಸ್ ಸಲ್ಲಿಸುವುದು ಅನಿವಾರ್ಯ.

ಯಾವುದೇ ಮೂಲದಿಂದ ಖಾತೆಗೆ ಹಣ ಜಮಾ ಆದಾಗ ಹಾಗೂ ಅಂತಹ ಮೊತ್ತವನ್ನು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸದೆ, ಹಿಂಪಡೆಯುವುದನ್ನು ತಡೆಯಲು ಇಂತಹ ತೆರಿಗೆ ಕಡಿತ ನೆರವಾಗುತ್ತದೆ. ಹೀಗಾಗಿ, ಯಾವುದೇ ವ್ಯಕ್ತಿ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದರೂ, ಇಂತಹ ದೊಡ್ಡ ಮೊತ್ತದ ನಗದು ವ್ಯವಹಾರ ಮಾಡುವಾಗ ತೆರಿಗೆ ರಿಟರ್ನ್ಸ್‌ಗಳನ್ನು ಖಾತೆ ಇರುವ ಬ್ಯಾಂಕ್, ಅಂಚೆ ಕಚೇರಿಗೆ ನೀಡುವುದು ಅನಿವಾರ್ಯವಾಗುತ್ತದೆ. ಇಲ್ಲದಿದ್ದರೆ, ತೆರಿಗೆ ಕಡಿತಕ್ಕೆ ಒಳಗಾಗಬೇಕಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-27500
ಹಳತು	43500-48500
ಭದ್ರಾವತಿ	
ರಾಶಿ	38199-46509
ಚನ್ನಗಿರಿ	
ರಾಶಿ	38199-46509
ಹೊನ್ನಾವರ	
ಹಳೆಚಾಲಿ	37000-39000
ಹೊಸಚಾಲಿ	25000-34000
ಕಾರ್ಕಳ	
ಹೊಸತು	25000-36500
ಹಳತು	30000-48500
ಪುತ್ತೂರು	
ಹೊಸತು	27000-36500
ಸಾಗರ	
ಬಿಳಿಗೋಟು	32199-32409
ಚಾಲಿ	38099-38439
ರಾಶಿ	41699-46359
ಸಿಪ್ಪೆಗೋಟು	19600-20899
ಶಿವಮೊಗ್ಗ	
ಬೆಟ್ಟೆ	46119-53000
ಗೊರಬಾಲು	24009-37119
ಹೊಸತು	42199-45699
ರಾಶಿ	35169-47198
ಸಿದ್ದಾಪುರ	
ಬಿಳಿಗೋಟು	31499-34699
ಚಾಲಿ	37629-40069
ಕೋಕ	29099-33309
ಕೆಂಪುಗೋಟು	31000-33589
ರಾಶಿ	42809-46069
ತಟ್ಟಿಬೆಟ್ಟೆ	41099-43099
ಶಿರಸಿ	
ಬೆಟ್ಟೆ	37009-44099
ಬಿಳಿಗೋಟು	27899-35999
ಚಾಲಿ	37009-41239
ರಾಶಿ	44608-47709
ಯಲ್ಲಾಪುರ	
ಅಪಿ	58985-88009
ಬಿಳಿಗೋಟು	25612-36099
ಚಾಲಿ	36809-41099
ಕೋಕ	18201-32899
ಕೆಂಪುಗೋಟು	26999-35299
ರಾಶಿ	45300-55599
ತಟ್ಟಿಬೆಟ್ಟೆ	38799-43890

ಎಫ್‌ಎಂಸಿಜಿ ಬೆಳವಣಿಗೆ ಶೇ 8.6

ನವದೆಹಲಿ (ಪಿಟಿಐ): ಎಫ್‌ಎಂಸಿಜಿ ಉದ್ಯಮವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 8.6ರಷ್ಟು ಬೆಳವಣಿಗೆ ಕಂಡಿದೆ. ಹಣದುಬ್ಬರ ಕಡಿಮೆ ಆಗಿದ್ದರಿಂದ ಜನರು ಖರೀದಿಸುವ ಪ್ರಮಾಣ ಹೆಚ್ಚಾಗಿದೆ. ಇದು ಉದ್ಯಮದ ಬೆಳವಣಿಗೆಗೆ ಕಾರಣವಾಯಿತು ಎಂದು ದತ್ತಾಂಶ ವಿಶ್ಲೇಷಣಾ ಸಂಸ್ಥೆ ನೀಲ್ಸನ್‌ಐಕ್ಯೂ ಹೇಳಿದೆ.

ಗ್ರಾಮೀಣ ಮಾರುಕಟ್ಟೆಯು ಹಲವು ತ್ರೈಮಾಸಿಕಗಳ ಬಳಿಕ ಚೇತರಿಸಿಕೊಳ್ಳುವ ಸೂಚನೆ ನೀಡುತ್ತಿದೆ. ನಗರ ಮಾರುಕಟ್ಟೆಯು ಸ್ಥಿರವಾದ ಬೆಳವಣಿಗೆ ದರವನ್ನು ಕಾಯ್ದುಕೊಂಡಿದೆ ಎಂದು ಈಚಿನ ವರದಿಯಲ್ಲಿ ತಿಳಿಸಿದೆ.

ನಿರುದ್ಯೋಗ ಪ್ರಮಾಣ ಇಳಿಕೆ ಮತ್ತು ಎಲ್‌ಪಿಜಿ ದರ ಕಡಿಮೆ ಆಗಿರುವುದು ಜನರನ್ನು ಖರೀದಿ ಮಾಡುವುದರತ್ತ ಗಮನ ಹರಿಸುವಂತೆ ಮಾಡಿದೆ ಎಂದು ಅದು ಹೇಳಿದೆ. ಆಹಾರ ಉತ್ಪನ್ನಗಳ ಮಾರಾಟವು ಕಳೆದ ವರ್ಷದಷ್ಟೇ ಶೇ 8.7ರಷ್ಟು ಇದೆ. ಈ ವರ್ಷದ ಎರಡನೇ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 8.5ರಷ್ಟು ಏರಿಕೆ ಆಗಿದೆ.

ವಾರದಲ್ಲಿ 3 ದಿನ ಕಚೇರಿಯಿಂದ ಕೆಲಸ: ವಿಪ್ರೊ

ಬೆಂಗಳೂರು (ರಾಯಿಟರ್ಸ್): ವಿಪ್ರೊ ಕಂಪನಿಯು ನವೆಂಬರ್ 15ರಿಂದ ಜಾರಿಗೆ ಬರುವಂತೆ ವಾರದಲ್ಲಿ ಕನಿಷ್ಠ ಮೂರು ದಿನ ಕಚೇರಿಯಿಂದ ಕೆಲಸ ಮಾಡುವುದನ್ನು ತನ್ನೆಲ್ಲಾ ಉದ್ಯೋಗಿಗಳಿಗೆ ಕಡ್ಡಾಯ ಮಾಡಿದೆ. ಕಂಪನಿಯು ಉದ್ಯೋಗಿಗಳಿಗೆ ಕಳುಹಿಸಿರುವ ಇ-ಮೇಲ್‌ನಲ್ಲಿ ಈ ಸೂಚನೆ ನೀಡಿರುವುದಾಗಿ ರಾಯಿಟರ್ಸ್ ತಿಳಿಸಿದೆ.

ಕಂಪನಿಯು ಮೇ ತಿಂಗಳಿನಿಂದಲೇ ಉದ್ಯೋಗಿಗಳಿಗೆ ಕಚೇರಿಯಿಂದ ಕೆಲಸ ಮಾಡುವಂತೆ ಸೂಚನೆ ನೀಡುತ್ತಿದೆ. ಒಟ್ಟು ಸಿಬ್ಬಂದಿಯಲ್ಲಿ ಸದ್ಯ ಶೇ 55ರಷ್ಟು ಕೆಲಸಗಾರರು ಕಚೇರಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಕಂಪನಿಯು ವಕ್ತಾರರೊಬ್ಬರು ತಿಳಿಸಿದ್ದಾರೆ. ಸೆಪ್ಟೆಂಬರ್ 30ರ ಅಂತ್ಯಕ್ಕೆ ಕಂಪನಿಯಲ್ಲಿ ಒಟ್ಟು 2.4 ಲಕ್ಷ ಸಿಬ್ಬಂದಿ ಇದ್ದಾರೆ.

ಕೋವಿಡ್ ಸಾಂಕ್ರಾಮಿಕದ ನಿರ್ಬಂಧಗಳು ತೆರವಾದ ಬಳಿಕ ಹಲವು ಕಂಪನಿಗಳು ಸಿಬ್ಬಂದಿಗೆ ಮನೆಯಿಂದ ಕೆಲಸ ಮಾಡುವ ವ್ಯವಸ್ಥೆಯನ್ನು ಕೈಬಿಡುತ್ತಿವೆ. ತಿಂಗಳಲ್ಲಿ ಕನಿಷ್ಠ 10 ದಿನ ಕಚೇರಿಯಿಂದ ಕೆಲಸ ಮಾಡುವಂತೆ ಇನ್ಫೊಸಿಸ್ ಕಂಪನಿಯು ಕಳೆದ ವಾರ ತನ್ನ ಸಿಬ್ಬಂದಿಗೆ ಸೂಚನೆ ನೀಡಿದೆ. ವಾರದಲ್ಲಿ ಐದು ದಿನ ಕಚೇರಿಯಿಂದ ಕೆಲಸ ಮಾಡುವಂತೆ ಟಿಸಿಎಸ್ ಹೇಳಿದೆ.

ಟಿಟಿ: ಯುಕ್ತಾ ಹರ್ಷ, ಸಾತ್ವಿಕ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಕ್ತಾ ಹರ್ಷ ಮತ್ತು ಎಂ. ಸಾತ್ವಿಕ್ ಅವರು ಮಲ್ಲೇಶ್ವರಂನಲ್ಲಿ ನಡೆಯುತ್ತಿರುವ 25ನೇ ಎಂ.ಎಸ್. ರಾಮಯ್ಯ ಸ್ಮಾರಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಹೋಪ್ಸ್ ಬಾಲಕಿಯರ ಮತ್ತು ಬಾಲಕರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಮಂಗಳವಾರ ನಡೆದ ಬಾಲಕಿಯರ ವಿಭಾಗದ ಫೈನಲ್ ಸ್ಪರ್ಧೆಯಲ್ಲಿ ಯುಕ್ತಾ 11-13, 11-4, 11-6, 11-8 ರಿಂದ ಮಿಹಿಕಾ ಆರ್. ಉಡುಪ ಅವರನ್ನು ಮಣಿಸಿದರು.

ಸೆಮಿಫೈನಲ್‌ನಲ್ಲಿ ಮಹಿಕಾ 11-6, 11-8, 11-9ರಿಂದ ಆರ್. ಇತಿಹಾ ಅವರನ್ನು; ಯುಕ್ತಾ 11-6, 5-11, 11-6, 8-11, 11-5 ರಿಂದ ಲಕ್ಷ್ಮಿ ಆಶ್ರಿತಾ ಅವರನ್ನು ಸೋಲಿಸಿದ್ದರು.

ಬಾಲಕರ ವಿಭಾಗದ ಸ್ಪರ್ಧೆಯಲ್ಲಿ ಸಾತ್ವಿಕ್ 8-11, 11-7, 11-9, 10-12, 12-10ರಿಂದ ಎಂ ಸಿದ್ಧಾಂತ್ ಅವರನ್ನು ಪರಾಭವಗೊಳಿಸಿದರು.

ಟ್ರೋಫಿಯೊಂದಿಗೆ ಎಂ. ಸಾತ್ವಿಕ್ ಮತ್ತು ಯುಕ್ತಾ ಹರ್ಷ

ಸೆಮಿಫೈನಲ್‌ನಲ್ಲಿ ಸಿದ್ಧಾಂತ್ 11-9, 11-7 , 8-11, 11-8ರಿಂದ ಸುದರ್ಶನ್ ಎ.ರಾಜ್ ಅವರನ್ನು; ಸಾತ್ವಿಕ್ 7-11, 11-9, 11-8, 11-7ರಿಂದ ಅಂಕುಶ್ ಬಾಳಿಗಾ ಅವರನ್ನು ಮಣಿಸಿದ್ದರು.

ಬಿಯುಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಬಿಯುಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–0ಯಿಂದ ರಿಯಲ್ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ಎಚ್‌ಎಎಲ್ ಎಫ್‌ಸಿ ತಂಡವು 1–1ರಿಂದ ಎಫ್‌ಸಿ ಅಗ್ನಿಪುತ್ರ ತಂಡದೊಂದಿಗೆ ಡ್ರಾ ಸಾಧಿಸಿತು.

ಎಚ್‌ಎಎಲ್‌ನ ಎಸ್.ಜಾನಿ ಕೋಮ್ (44ನೇ) ಮತ್ತು ಅಗ್ನಿಪುತ್ರ ತಂಡದ ಫ್ಲೇವಿಯಸ್ ಲಾಲ್ ರುತ್‌ಕಿಮಾ (65ನೇ) ತಲಾ ಒಂದು ಗೋಲು ಗಳಿಸಿದರು.

ಚಿರಂತ್, ದಾನೇಶ್ವರಿ, ವಾರುಣಿ ಚಾಂಪಿಯನ್ಸ್

ಪ್ರಾಥಮಿಕ, ಪ್ರೌಢಶಾಲೆ ವಿದ್ಯಾರ್ಥಿಗಳ ರಾಜ್ಯಮಟ್ಟದ ಜಿಮ್ನಾಸ್ಟಿಕ್ಸ್ ಸ್ಪರ್ಧೆಗೆ ತೆರೆ

ಪ್ರಜಾವಾಣಿ ವಾರ್ತೆ

ಧಾರವಾಡ: ಬೆಂಗಳೂರು ದಕ್ಷಿಣದ ಚಿರಂತ್ ವಿ.ಶೆಟ್ಟಿ ಮತ್ತು ಧಾರವಾಡದ ದಾನೇಶ್ವರಿ ಕಮ್ಮಾರ್ ಅವರು ಮಂಗಳವಾರ ನಗರದಲ್ಲಿ ನಡೆದ ಪ್ರಾಥಮಿಕ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳ ರಾಜ್ಯಮಟ್ಟದ ಜಿಮ್ನಾಸ್ಟಿಕ್ಸ್ ಸ್ಪರ್ಧೆಯ 17 ವರ್ಷದೊಳಗಿನ ಆಲ್‌ರೌಂಡರ್ ವಿಭಾಗದಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಪಟ್ಟ ಗಳಿಸಿದರು.

ಬೆಂಗಳೂರು ದಕ್ಷಿಣದ ವಾರುಣಿ ಬಿ.ಎಸ್. ಅವರು ರಿದಮ್ಯಾಟಿಕ್ ಜಿಮ್ನಾಸ್ಟಿಕ್ಸ್ ಸ್ಪರ್ಧೆಯ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಬಾಲಕರ ಆಲ್‌ರೌಂಡರ್ ಚಾಂಪಿಯನ್ ವಿಭಾಗದಲ್ಲಿ ಧಾರವಾಡದ ಗಂಗಾಧರ ಮಟ್ಟಿ ದ್ವಿತೀಯ ಮತ್ತು ಶ್ರೇಯಸ್ ಮಾನೆ ತೃತೀಯ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ದಕ್ಷಿಣದ ರಿಷ್ಯಾ ಕೆ. ದ್ವಿತೀಯ ಹಾಗೂ ಸೋನಿಕಾ ಗೌಡ ತೃತೀಯ ಸ್ಥಾನ ಗಳಿಸಿದರು.

ಪದಕದೊಂದಿಗೆ ಚಿರಂತ್ ವಿ.ಶೆಟ್ಟಿ, ದಾನೇಶ್ವರಿ ಕಮ್ಮಾರ್, ವಾರುಣಿ ಬಿ.ಎಸ್.

ರಿದಮ್ಯಾಟಿಕ್ ಜಿಮ್ನಾಸ್ಟಿಕ್ಸ್ ಸ್ಪರ್ಧೆಯ ಬಾಲಕಿಯರ ಚಾಂಪಿಯನ್ ವಿಭಾಗದಲ್ಲಿ ಬೆಂಗಳೂರು ದಕ್ಷಿಣದ ಪ್ರಾರ್ಥನಾ ಕೆ.ಆರ್. ದ್ವಿತೀಯ ಹಾಗೂ ಧಾರವಾಡದ ಸೌಮ್ಯಾ ಕಿತ್ತೂರು ತೃತೀಯ ಸ್ಥಾನ ಪಡೆದರು.

ವಿವಿಧ ವಿಭಾಗಗಳ ಫಲಿತಾಂಶ: ಬಾಲಕರ ವಿಭಾಗ– ಟೇಬಲ್ ವಾಲ್ಟ್: ಚಿರಂತ್ ವಿ. ಶೆಟ್ಟಿ–1, ಗಂಗಾಧರ್ ಮಟ್ಟಿ–2 ಹಾಗೂ ಶ್ರೇಯಸ್ ಮಾನೆ–3; ಪ್ಯಾರಲಲ್ ಬಾರ್ಸ್: ಗಂಗಾಧರ್ ಮಟ್ಟಿ–1, ಶ್ರೇಯಸ್ ಮಾನೆ–2 ಹಾಗೂ ಚಿರಂತ್ ವಿ.ಶೆಟ್ಟಿ–3; ಹಾರಿಜಾಂಟಲ್ ಬಾರ್ಸ್: ಚಿರಂತ್ ವಿ.ಶೆಟ್ಟಿ–1, ಗಂಗಾಧರ್ ಮಟ್ಟಿ–2 ಹಾಗೂ ಧಾರವಾಡದ ಸಮೃದ್ಧ ಹಿರೇಗೌಡರ್–3; ಪೊಮೆಲ್ ಹಾರ್ಸ್: ಗಂಗಾಧರ್ ಮಟ್ಟಿ–1, ಚಿರಂತ್ ವಿ. ಶೆಟ್ಟಿ–2 ಹಾಗೂ ಕೊಡಗಿನ ರಾಕೇಶ್–3; ಫ್ಲೋರ್ ಎಕ್ಸರ್‌ಸೈಸ್: ಚಿರಂತ್ ವಿ. ಶೆಟ್ಟಿ–1, ಶ್ರೇಯಸ್ ಮಾನೆ–2 ಹಾಗೂ ಸಮೃದ್ಧ ಹಿರೇಗೌಡರ್–3; ಸ್ಟಿಲ್ ರಿಂಗ್ಸ್: ಗಂಗಾಧರ್ ಮಟ್ಟಿ–1, ಶ್ರೇಯಸ್ ಮಾನೆ–2 ಹಾಗೂ ಚಿರಂತ್ ವಿ.ಶೆಟ್ಟಿ–3.

ಬಾಲಕಿಯರ ವಿಭಾಗ– ಫ್ಲೋರ್ ಎಕ್ಸರ್‌ಸೈಸ್: ದಾನೇಶ್ವರಿ ಕಮ್ಮಾರ್–1, ರಿಷ್ಯಾ ಕೆ.–2 ಹಾಗೂ ಸೋನಿಕಾ ಗೌಡ–3; ಅನ್‌ಇವನ್ ಬಾರ್ಸ್: ರಿಷ್ಯಾ ಕೆ.–1, ಧಾರವಾಡದ ಅಭಿನಯ ಮಾನೆ–2 ಹಾಗೂ ದಾನೇಶ್ವರಿ ಕಮ್ಮಾರ್–3; ಬ್ಯಾಲೆನ್ಸಿಂಗ್ ಬೀಮ್: ದಾನೇಶ್ವರಿ ಕಮ್ಮಾರ್–1, ರಿಷ್ಯಾ ಕೆ.–2 ಹಾಗೂ ಸೋನಿಕಾ ಗೌಡ–3; ಟೇಬಲ್ ವಾಲ್ಟ್: ಸೋನಿಕಾ ಗೌಡ–1, ರಿಷ್ಯಾ ಕೆ. 2 ಹಾಗೂ ದಾನೇಶ್ವರಿ ಕಮ್ಮಾರ್–3.

ರಿದಮ್ಯಾಟಿಕ್ ಜಿಮ್ನಾಸ್ಟಿಕ್ಸ್ – ಹೂಪ್: ವಾರುಣಿ ಬಿ.ಎಸ್.–1, ಪ್ರಾರ್ಥನಾ ಕೆ.ಆರ್–2 ಹಾಗೂ ಸೌಮ್ಯಾ ಕಿತ್ತೂರು–3; ಬಾಲ್: ವಾರುಣಿ ಬಿ.ಎಸ್.–1, ಕೋಮಲಾ ಆರ್.–2 ಹಾಗೂ ಧಾರವಾಡದ ಕೀರ್ತಿ ಗೋಕಾವಿ–3; ಕ್ಲಬ್ಸ್: ವಾರುಣಿ ಬಿ.ಎಸ್.–1, ಸೌಮ್ಯಾ ಕಿತ್ತೂರು–2 ಹಾಗೂ ಪ್ರಾರ್ಥನಾ ಕೆ.ಆರ್–3; ರಿಬ್ಬನ್: ವಾರುಣಿ ಬಿ.ಎಸ್.–1, ಪ್ರಾರ್ಥನಾ ಕೆ.ಆರ್–2 ಹಾಗೂ ತುಮಕೂರಿನ ನವ್ಯಶ್ರೀ ಸಿ.ಎಸ್–3.

ಸ್ಪೀಡ್ ರೋಲರ್ ಸ್ಕೇಟಿಂಗ್ ನಾಳೆಯಿಂದ

ಮಂಗಳೂರು: ದಕ್ಷಿಣ ಕನ್ನಡ ರೋಲರ್ ಸ್ಪೋರ್ಟ್ಸ್ ಅಸೋಸಿಯೇಷನ್ (ಡಿಕೆಆರ್‌ಎಸ್‌ಎ) ವತಿಯಿಂದ ಕರ್ನಾಟಕ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ಸಹಯೋಗದಲ್ಲಿ ನ. 9ರಿಂದ 12ರವರೆಗೆ ಇಲ್ಲಿನ ಅಶೋಕನಗರದ ಹೊಯಿಗೆಬೈಲಿನಲ್ಲಿರುವ ಫ್ರಾನ್ಸಿಸ್ ಡೋರಿಸ್ ಸ್ಕೇಟ್ ಸಿಟಿಯಲ್ಲಿ 39ನೇ ಕರ್ನಾಟಕ ರಾಜ್ಯ ಸ್ಪೀಡ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್ ಮತ್ತು ಆಯ್ಕೆ ಟ್ರಯಲ್ಸ್ ಆಯೋಜಿಸಲಾಗಿದೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಆಯೋಜನಾ ಸಮಿತಿ ಅಧ್ಯಕ್ಷ, ಮೇಯರ್ ಸುಧೀರ್ ಶೆಟ್ಟಿ, ‘ಈ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯದ 500 ಸ್ಕೇಟರ್‌ಗಳು ಭಾಗವಹಿಸಲಿದ್ದಾರೆ. ಇಲ್ಲಿ ವಿಜೇತರಾದವರು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗುತ್ತಾರೆ. ವಿವಿಧ ವಯೋಮಾನದ ಬಾಲಕರು, ಬಾಲಕಿಯರು, ಪುರುಷರು, ಮಹಿಳೆಯರಿಗೆ ರಿಂಕ್ ಮತ್ತು ರೋಡ್ ವಿಭಾಗಗಳಲ್ಲಿ ಸ್ಪರ್ಧೆ ನಡೆಯುತ್ತವೆ. ವಿಶೇಷ ಚೇತನರೂ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಫ್ರಾನ್ಸಿಸ್ ಡೋರಿಸ್ ಸ್ಕೇಟ್ ಸಿಟಿಯಲ್ಲಿ ರಿಂಕ್ ಹಾಗೂ ಮುಂಚೂರಿನ ನಾರ್ತರ್ನ್ ಸ್ಕೈ ಲೇಔಟ್‌ನಲ್ಲಿ ರಸ್ತೆ ವಿಭಾಗದ ಸ್ಪರ್ಧೆ ನಡೆಯುತ್ತದೆ’ ಎಂದು ತಿಳಿಸಿದರು.

ನ.9ರಂದು ಸಂಜೆ 5.30ಕ್ಕೆ ಫ್ರಾನ್ಸಿಸ್ ಡೋರಿಸ್ ಸ್ಕೇಟ್ ಸಿಟಿಯಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಡಿಕೆಆರ್‌ಎಸ್‌ಎ ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ್ ಶೆಟ್ಟಿ ಮಾತನಾಡಿ, ಫ್ರಾನ್ಸಿಸ್, ಡೋರಿಸ್ ದಂಪತಿ ಇಲ್ಲಿ ಸುಸಜ್ಜಿತ ಸ್ಕೇಟಿಂಗ್ ರಿಂಕ್ ನಿರ್ಮಿಸಿದ್ದಾರೆ ಎಂದರು.

ಟ್ರೋಫಿಯೊಂದಿಗೆ ಇಗಾ ಶ್ವಾಂಟೆಕ್

ಟೆನಿಸ್: ಅಗ್ರಸ್ಥಾನಕ್ಕೆ ಏರಿದ ಇಗಾ ಶ್ವಾಂಟೆಕ್

ಕ್ಯಾಂಕೂನ್, ಮೆಕ್ಸಿಕೊ (ಎಎಫ್‌ಪಿ): ಪೋಲೆಂಡ್‌ನ ಇಗಾ ಶ್ವಾಂಟೆಕ್ ಅವರು ಡಬ್ಲ್ಯುಟಿಎ ಫೈನಲ್ಸ್ ಟೂರ್ನಿಯನ್ನು ಗೆದ್ದುಕೊಂಡು, ವಿಶ್ವ ರ‍್ಯಾಂಕಿಂಗ್‌ನಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿದರು.

ಸೋಮವಾರ ನಡೆದ ಫೈನಲ್‌ನಲ್ಲಿ ಶ್ವಾಂಟೆಕ್ 6–1, 6–0 ರಿಂದ ಜೆಸ್ಸಿಗಾ ಪೆಗುಲಾ ಅವರನ್ನು ಮಣಿಸಿದರು. ಕೇವಲ 59 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು.

ವೃತ್ತಿಜೀವನದ 17ನೇ ಪ್ರಶಸ್ತಿ ಜಯಿಸಿದ ಶ್ವಾಂಟೆಕ್ ಅವರು ಡಬ್ಲ್ಯುಟಿಎ ರ‍್ಯಾಂಕಿಂಗ್‌ನಲ್ಲಿ ಈ ಋತುವನ್ನು ಅಗ್ರಸ್ಥಾನದೊಂದಿಗೆ ಕೊನೆಗೊಳಿಸಲಿದ್ದಾರೆ. ಅರಿನಾ ಸಬಲೆಂಕಾ ಎರಡನೇ ಸ್ಥಾನಕ್ಕೆ ಜಾರಲಿದ್ದಾರೆ

ಕುಸ್ತಿ: ಉತ್ತರ ಕನ್ನಡ ಬಾಲಕಿಯರು ಚಾಂಪಿಯನ್

ಹಳಿಯಾಳ (ಉತ್ತರ ಕನ್ನಡ ಜಿಲ್ಲೆ): ಉತ್ತರ ಕನ್ನಡ ಜಿಲ್ಲೆಯು ರಾಜ್ಯ ಮಟ್ಟದ ಪದವಿಪೂರ್ವ ಕಾಲೇಜಿನ ಕುಸ್ತಿ ಪಂದ್ಯಾವಳಿಯ ಬಾಲಕಿಯರ ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಪಡೆದುಕೊಂಡಿತು. ಬಾಲಕರ ಫ್ರೀಸ್ಟೈಲ್ ವಿಭಾಗದಲ್ಲಿ ಚಿಕ್ಕೋಡಿ ಜಿಲ್ಲೆ ಮತ್ತು ಗ್ರೀಕೋ ರೋಮನ್ ವಿಭಾಗದಲ್ಲಿ ದಾವಣಗೆರೆ ಜಿಲ್ಲೆ ಸಮಗ್ರ ಪ್ರಶಸ್ತಿ ಪಡೆಯಿತು.

ಇಲ್ಲಿನ ಜಿಲ್ಲಾ ಕುಸ್ತಿ ಅಖಾಡದಲ್ಲಿ ಎರಡು ದಿನ ನಡೆದ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿ ಮಂಗಳವಾರ ಸಮಾರೋಪಗೊಂಡಿತು.

ಗ್ರೀಕೋ ರೋಮನ್ ಬಾಲಕರ 97 ಕೆಜಿ ವಿಭಾಗದ ಪಂದ್ಯದಲ್ಲಿ ದಾವಣಗೆರೆಯ ಆದಿತ್ಯ ಹಾಗೂ ಚಿಕ್ಕೋಡಿಯ ಪ್ರಜ್ವಲ್ ನಡುವೆ ತೀವ್ರ ಹಣಾಹಣಿ ನಡೆಯಿತು. ಸೈಡ್ ಲೆಗ್ ಅಟ್ಯಾಕ್ ತಂತ್ರದಿಂದ ಪ್ರಜ್ವಲ್ ಅವರನ್ನು ಚಿತ್ ಮಾಡುವ ಮೂಲಕ ಆದಿತ್ಯ ಗೆಲುವಿನ ನಗೆ ಬೀರಿದರು. 130 ಕೆಜಿ ವಿಭಾಗದ ಪಂದ್ಯದಲ್ಲಿ ಚಿಕ್ಕೋಡಿಯ ಕೃಷ್ಣ ಪವಾರ ದಾವಣಗೆರೆಯ ದರ್ಶನ್ ಅವರನ್ನು ಡಾಕ್ ತಂತ್ರ ಬಳಸಿ ಚಿತ್ ಮಾಡುವ ಮೂಲಕ ಸೋಲಿಸಿದರು.

ಬಾಲಕಿಯರ 76 ಕೆಜಿ ವಿಭಾಗದಲ್ಲಿ ದಕ್ಷಿಣ ಕನ್ನಡದ ಕಂದಿಜಾ ನೊಹಾ ಧಾರವಾಡದ ರಾಣಿ ಕುಂಬಾರ ಅವರನ್ನು ಚಿತ್ ಮಾಡಿದರು.

ಅಜೇಯ 201 ರನ್ ಸಿಡಿಸಿದ ಗ್ಲೆನ್ • ಸೆಮಿಫೈನಲ್‌ಗೆ ಆಸ್ಟ್ರೇಲಿಯಾ ಲಗ್ಗೆ • ಹಷ್ಮತ್‌ಉಲ್ಲಾ ಬಳಗಕ್ಕೆ ನಿರಾಸೆ

ಅಫ್ಗನ್ ಜಯ ಕಸಿದ ಮ್ಯಾಕ್ಸ್‌ವೆಲ್

ಮುಂಬೈ (ಪಿಟಿಐ/ಎಎಫ್‌ಪಿ): ಏಕದಿನ ಕ್ರಿಕೆಟ್ ವಿಶ್ವಕಪ್ ಇತಿಹಾಸದಲ್ಲಿ ಸ್ಮರಣೀಯ ಇನಿಂಗ್ಸ್‌ವೊಂದಕ್ಕೆ ವಾಂಖೆಡೆ ಕ್ರೀಡಾಂಗಣ ಮಂಗಳವಾರ ಸಾಕ್ಷಿಯಾಯಿತು. ಕಾಲುನೋವು ಲೆಕ್ಕಿಸದೆ ಏಕಾಂಗಿ ಹೋರಾಟದ ಮೂಲಕ ಅಜೇಯ ದ್ವಿಶತಕ ಗಳಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಆಸ್ಟ್ರೇಲಿಯಾ ತಂಡವನ್ನು ಸೆಮಿಫೈನಲ್‌ಗೆ ಮುನ್ನಡೆಸಿದರು.

ಕ್ರಿಕೆಟ್ ಪ್ರೇಮಿಗಳ ಮನಸ್ಸಿನಲ್ಲಿ ಬಹುಕಾಲದವರೆಗೆ ಉಳಿಯಬಲ್ಲ ಇನಿಂಗ್ಸ್ ಕಟ್ಟಿದ ಮ್ಯಾಕ್ಸ್‌ವೆಲ್ (ಔಟಾಗದೆ 201; 128 ಎ., 4X21, 6X10) ಅವರು ಅಫ್ಗನ್ ವಿರುದ್ಧ ಆಸ್ಟ್ರೇಲಿಯಾಕ್ಕೆ ಮೂರು ವಿಕೆಟ್‌ಗಳ ಜಯ ತಂದುಕೊಟ್ಟರು.

ಮೊದಲು ಬ್ಯಾಟ್ ಮಾಡಿದ ಅಫ್ಗನ್, ಇಬ್ರಾಹಿಂ ಜದ್ರಾನ್ (ಔಟಾಗದೆ 129; 143 ಎ., 4X8, 6X3) ಅವರ ಅಜೇಯ ಶತಕದ ನೆರವಿನಿಂದ 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 291 ರನ್ ಪೇರಿಸಿತು. ಪ್ಯಾಟ್ ಕಮಿನ್ಸ್ ಬಳಗ 46.5 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 293 ರನ್ ಗಳಿಸಿ ಜಯ ಸಾಧಿಸಿತು.

ಈ ಜಯದೊಂದಿಗೆ ಎಂಟು ಪಂದ್ಯಗಳಿಂದ 12 ಪಾಯಿಂಟ್ಸ್ ಸಂಗ್ರಹಿಸಿದ ಆಸ್ಟ್ರೇಲಿಯಾ, ನಾಲ್ಕರಘಟ್ಟ ಪ್ರವೇಶಿಸಿತು. ಸೋಲು ಅನುಭವಿಸಿದ ಅಫ್ಗನ್ ತಂಡದ ಸೆಮಿ ಸಾಧ್ಯತೆ ಕ್ಷೀಣಿಸಿದೆ. 91 ರನ್ ಗಳಿಸುವಷ್ಟರಲ್ಲಿ ಏಳು ವಿಕೆಟ್ ಕಳೆದುಕೊಂಡು ಸೋಲಿನ ಹಾದಿ ಹಿಡಿದಿದ್ದ ತಂಡವನ್ನು ಮ್ಯಾಕ್ಸ್‌ವೆಲ್ ಅಮೋಘ ರೀತಿಯಲ್ಲಿ ದಡ ಸೇರಿಸಿದರು. ನಾಯಕ ಕಮಿನ್ಸ್ ಜತೆ ಮುರಿಯದ ಎಂಟನೇ ವಿಕೆಟ್‌ಗೆ 170 ಎಸೆತಗಳಲ್ಲಿ 202 ರನ್ ಸೇರಿಸಿದರು. ಇದರಲ್ಲಿ ಕಮಿನ್ಸ್ ಪಾಲು 12 ರನ್‌ಗಳು ಮಾತ್ರ! ಅದಕ್ಕಾಗಿ ಅವರು 68 ಎಸೆತಗಳನ್ನು ತೆಗೆದುಕೊಂಡರು.

ಸ್ನಾಯು ಸೆಳೆತಕ್ಕೆ ಒಳಗಾದ ಮ್ಯಾಕ್ಸ್‌ವೆಲ್ ರನ್ ತೆಗೆಯಲು ಕಷ್ಟಪಟ್ಟರು. ತಂಡದ ವೈದ್ಯರಿಂದ ಹಲವು ಸಲ ಚಿಕಿತ್ಸೆ ಪಡೆದುಕೊಂಡರು. ಆದರೂ ಛಲ ಬಿಡದೆ ಹೋರಾಡಿದರು. ಕೇವಲ ಬೌಂಡರಿ ಮತ್ತು ಸಿಕ್ಸರ್‌ಗಳ ಮೂಲಕವೇ ಇನಿಂಗ್ಸ್ ಬೆಳೆಸಿದರು. ಮುಜೀಬ್ ಉರ್ ರೆಹಮಾನ್ ಬೌಲ್ ಮಾಡಿದ 47ನೇ ಓವರ್‌ನ ಐದನೇ ಎಸೆತವನ್ನು ಸಿಕ್ಸರ್‌ಗೆ ಅಟ್ಟಿ ದ್ವಿಶತಕ ಪೂರೈಸಿದರಲ್ಲದೆ, ತಂಡಕ್ಕೆ ಗೆಲುವು ತಂದುಕೊಟ್ಟರು.

33 ರನ್ ಗಳಿಸಿದ್ದ ವೇಳೆ ಮ್ಯಾಕ್ಸ್‌ವೆಲ್‌ಗೆ ಜೀವದಾನ ಲಭಿಸಿತ್ತು. ನೂರ್ ಅಹಮದ್ ಬೌಲಿಂಗ್‌ನಲ್ಲಿ ಮುಜೀಬ್ ಉರ್ ರೆಹಮಾನ್ ಅವರು ಕ್ಯಾಚ್ ಕೈಚೆಲ್ಲಿದರು. ಇದು ಅಫ್ಗನ್‌ಗೆ ಮುಳುವಾಗಿ ಪರಿಣಮಿಸಿತು.

ಆರಂಭಿಕ ಆಘಾತ: ಆಸ್ಟ್ರೇಲಿಯಾ ತಂಡದ ಆರಂಭ ಆಘಾತಕಾರಿಯಾಗಿತ್ತು. ನವೀನ್ ಉಲ್ ಹಕ್ ಅವರು ಎರಡನೇ ಓವರ್‌ನಲ್ಲಿ ಟ್ರ್ಯಾವಿಸ್ ಹೆಡ್ (0) ವಿಕೆಟ್ ಪಡೆದರು. ಮಿಚೆಲ್ ಮಾರ್ಷ್ (24; 11 ಎ.) ಸ್ಫೋಟಕ ಆರಂಭ ಪಡೆದರೂ, ನವೀನ್‌ಗೆ ವಿಕೆಟ್ ಒಪ್ಪಿಸಿದರು.

ಅಜ್ಮತ್‌ಉಲ್ಲಾ ಒಮರ್‌ಝೈ ಅವರು 9ನೇ ಓವರ್‌ನ ಸತತ ಎರಡು ಎಸೆತಗಳಲ್ಲಿ ಡೇವಿಡ್ ವಾರ್ನರ್ (18; 29 ಎ) ಮತ್ತು ಜೋಶ್ ಇಂಗ್ಲಿಸ್ ಅವರನ್ನು ಔಟ್ ಮಾಡಿದರು. ವಾರ್ನರ್ ಬೌಲ್ಡ್ ಆದರೆ, ಇಂಗ್ಲಿಸ್, ವಿಕೆಟ್‌ಕೀಪರ್‌ಗೆ ಕ್ಯಾಚ್ ಕೊಟ್ಟರು. ಅಲ್ಪ ಸಮಯದ ಬಳಿಕ ಮಾರ್ನಸ್ ಲಾಬುಶೇನ್ (14; 28 ಎ) ರನೌಟ್ ಆದರು.

ಮಾರ್ಕಸ್ ಸ್ಟೊಯಿನಿಸ್ (6) ಮತ್ತು ಮಿಚೆಲ್ ಸ್ಟಾರ್ಕ್ (3) ಅವರು ರಶೀದ್ ಖಾನ್‌ಗೆ ವಿಕೆಟ್ ಒಪ್ಪಿಸಿದಾಗ ಆಸ್ಟ್ರೇಲಿಯಾ ತಂಡದ ಸ್ಕೋರ್ 91ಕ್ಕೆ 7. ಆದರೆ, ಮ್ಯಾಕ್ಸ್‌ವೆಲ್ ಅವರು ಗೆಲುವನ್ನು ಅಫ್ಗನ್ ಕೈಯಿಂದ ಕಿತ್ತುಕೊಂಡರು.

ಜದ್ರಾನ್ ಶತಕ: ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಅಫ್ಗಾನಿಸ್ತಾನ ತಂಡದ ಪರ 21 ವರ್ಷದ ಜದ್ರಾನ್ ಅವರು ಅಮೋಘ ಶತಕದ ಮೂಲಕ ಮಿಂಚಿದರು.

ಏಕದಿನ ವಿಶ್ವಕಪ್‌ನಲ್ಲಿ ಅಫ್ಗನ್ ಪರ ಶತಕ ಗಳಿಸಿದ ಮೊದಲ ಆಟಗಾರ ಎಂಬ ಗೌರವ ಅವರಿಗೆ ಒಲಿಯಿತು. 2015ರ ಟೂರ್ನಿಯಲ್ಲಿ ಸ್ಕಾಟ್ಲೆಂಡ್ ವಿರುದ್ಧ ಸಮೀವುಲ್ಲಾ ಶಿನ್ವರಿ ಅವರು 96 ರನ್ ಗಳಿಸಿದ್ದು ಇದುವರೆಗಿನ ಗರಿಷ್ಠ ಮೊತ್ತ ಆಗಿತ್ತು. ಅಫ್ಗನ್ ತಂಡ ರಹಮಾನುಲ್ಲಾ ಗುರ್ಬಾಜ್ (21; 25 ಎ) ಅವರನ್ನು ಬೇಗನೇ ಕಳೆದುಕೊಂಡಿತು. ಜೋಶ್ ಹ್ಯಾಜೆಲ್‌ವುಡ್ ಬೌಲಿಂಗ್‌ನಲ್ಲಿ ಮಿಚೆಲ್ ಸ್ಟಾರ್ಕ್ ಅವರಿಗೆ ಕ್ಯಾಚಿತ್ತು ನಿರ್ಗಮಿಸಿದರು.

ಜದ್ರಾನ್ ಮತ್ತು ರಹಮತ್ ಶಾ (30; 44 ಎ.) ಎರಡನೇ ವಿಕೆಟ್‌ಗೆ 100 ಎಸೆತಗಳಲ್ಲಿ 83 ರನ್ ಸೇರಿಸಿ ಇನಿಂಗ್ಸ್‌ಗೆ ಬಲ ತುಂಬಿದರು. ಬಳಿಕ ಬಂದ ಹಷ್ಮತ್‌ಉಲ್ಲಾ ಶಹೀದಿ (26) ಮತ್ತು ಅಜ್ಮತ್‌ಉಲ್ಲಾ ಒಮರ್‌ಝೈ (22) ಅವರೂ ಜದ್ರಾನ್‌ಗೆ ತಕ್ಕ ಸಾಥ್ ನೀಡಿದರು.

ಆಸ್ಟ್ರೇಲಿಯಾದ ವೇಗ ಮತ್ತು ಸ್ಪಿನ್ ದಾಳಿಯನ್ನು ಛಲದಿಂದ ಎದುರಿಸಿದ ಜದ್ರಾನ್, ಏಕದಿನ ಕ್ರಿಕೆಟ್‌ನಲ್ಲಿ ಐದನೇ ಶತಕ ಗಳಿಸಿದರು. ಇದು ಅವರಿಗೆ 26ನೇ ಪಂದ್ಯ ಆಗಿತ್ತು.

ಕೊನೆಯಲ್ಲಿ ರಶೀದ್ ಖಾನ್ (ಔಟಾಗದೆ 35; 18) ರಟ್ಟೆಯರಳಿಸಿದ ಕಾರಣ ತಂಡದ ಮೊತ್ತ 300ರ ಸನಿಹ ತಲುಪಿತು. ರಶೀದ್ ಎರಡು ಬೌಂಡರಿ ಹಾಗೂ ಮೂರು ಸಿಕ್ಸರ್ ಹೊಡೆದರು. ಅವರ ಅಬ್ಬರದಿಂದ ಕೊನೆಯ ಐದು ಓವರ್‌ಗಳಲ್ಲಿ 64 ರನ್‌ಗಳು ಹರಿದುಬಂದವು.

ಸಚಿನ್ ಮಾತು ಸ್ಫೂರ್ತಿ ತುಂಬಿತು: 'ಸೋಮವಾರ ಸಚಿನ್ ತೆಂಡೂಲ್ಕರ್ ಜತೆ ಮಾತನಾಡಿದ್ದೆ. ಅವರು ತಮ್ಮ ಅನುಭವಗಳನ್ನು ನನ್ನೊಂದಿಗೆ ಹಂಚಿಕೊಂಡರು. ಅವರ ಸಲಹೆ ಮತ್ತು ಸ್ಫೂರ್ತಿಯುತ ಮಾತುಗಳು ನನ್ನಲ್ಲಿ ಆತ್ಮವಿಶ್ವಾಸ ತುಂಬಿದವು' ಎಂದು ಜದ್ರಾನ್ ಬಳಿಕ ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸ್ಕೋರ್: **ಅಫ್ಗಾನಿಸ್ತಾನ** 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 291 (ರಹಮಾನುಲ್ಲಾ ಗುರ್ಬಾಜ್ 21, ಇಬ್ರಹಿಂ ಜದ್ರಾನ್ ಔಟಾಗದೆ 129, ರಹಮತ್ ಶಾ 30, ರಶೀದ್ ಖಾನ್ ಔಟಾಗದೆ 35, ಜೋಶ್ ಹ್ಯಾಜೆಲ್‌ವುಡ್ 39ಕ್ಕೆ 2);
ಆಸ್ಟ್ರೇಲಿಯಾ: 46.5 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 293 (ಡೇವಿಡ್ ವಾರ್ನರ್ 18, ಮಿಚೆಲ್ ಮಾರ್ಷ್ 24, ಗ್ಲೆನ್ ಮ್ಯಾಕ್‌ವೆಲ್ ಔಟಾಗದೆ 201, ಪ್ಯಾಟ್ ಕಮಿನ್ಸ್ ಔಟಾಗದೆ 12, ನವೀನ್ ಉಲ್ ಹಕ್ 47ಕ್ಕೆ 2, ಅಜ್ಮತ್‌ಉಲ್ಲಾ ಒಮರ್‌ಝೈ 52ಕ್ಕೆ 2, ರಶೀದ್ ಖಾನ್ 44ಕ್ಕೆ 2)
ಫಲಿತಾಂಶ: ಆಸ್ಟ್ರೇಲಿಯಾಕ್ಕೆ 3 ವಿಕೆಟ್ ಗೆಲುವು
ಪಂದ್ಯಶ್ರೇಷ್ಠ: ಗ್ಲೆನ್ ಮ್ಯಾಕ್ಸ್‌ವೆಲ್



ರನ್ ಅಜೇಯ	201
ಎಸೆತ	128
ಬೌಂಡರಿ	21
ಸಿಕ್ಸರ್	10

ವಿಶ್ವಕಪ್‌ನಲ್ಲಿ ದ್ವಿಶತಕ ಗಳಿಸಿದವರು

ರನ್	ಆಟಗಾರ	ದೇಶ	ಎದುರಾಳಿ	ವರ್ಷ
215	ಕ್ರಿಸ್‌ಗೇಲ್	ವೆಸ್ಟ್ ಇಂಡೀಸ್	ಜಿಂಬಾಬ್ವೆ	2015
237	ಮಾರ್ಟಿನ್‌ಗಪ್ಟಿಲ್	ನ್ಯೂಜಿಲೆಂಡ್	ವೆಸ್ಟ್ ಇಂಡೀಸ್	2015
201	ಗ್ಲೆನ್‌ಮ್ಯಾಕ್ಸ್‌ವೆಲ್	ಆಸ್ಟ್ರೇಲಿಯಾ	ಅಫ್ಗಾನಿಸ್ತಾನ	2023

ಅಜೇಯ ದ್ವಿಶತಕ ಗಳಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಚೆಂಡನ್ನು ಸಿಕ್ಸರ್‌ಗೆ ಅಟ್ಟಿದ ಪರಿ –ಪಿಟಿಐ ಚಿತ್ರ

ಮೂರು ತಂಡಗಳ ನಡುವೆ ಪೈಪೋಟಿ

ವಿಶ್ವಕಪ್ ಟೂರ್ನಿಯಲ್ಲಿ ಭಾರತ (16 ಅಂಕ), ದಕ್ಷಿಣ ಆಫ್ರಿಕಾ (12 ಅಂಕ) ಮತ್ತು ಆಸ್ಟ್ರೇಲಿಯಾ (12 ಅಂಕ) ತಂಡಗಳು ಈಗಾಗಲೇ ಸೆಮಿಫೈನಲ್ ಪ್ರವೇಶಿಸಿವೆ. ಇನ್ನೊಂದು ಸ್ಥಾನಕ್ಕೆ ನ್ಯೂಜಿಲೆಂಡ್, ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ (ತಲಾ 8 ಅಂಕ) ತಂಡಗಳ ನಡುವೆ ಪೈಪೋಟಿ ಏರ್ಪಟ್ಟಿದೆ.

ಕೊನೆಯ ಲೀಗ್ ಪಂದ್ಯಗಳಲ್ಲಿ ನ್ಯೂಜಿಲೆಂಡ್ ತಂಡವು ಶ್ರೀಲಂಕಾವನ್ನು (ನ.9), ಪಾಕಿಸ್ತಾನವು ಇಂಗ್ಲೆಂಡ್ ತಂಡವನ್ನು (ನ.11) ಮತ್ತು ಅಫ್ಗಾನಿಸ್ತಾನ ತಂಡವು ದಕ್ಷಿಣ ಆಫ್ರಿಕಾವನ್ನು (ನ.10) ಎದುರಿಸಲಿವೆ.

ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಭಾರತವು ನಾಲ್ಕನೇ ಸ್ಥಾನ ಪಡೆಯುವ ತಂಡವನ್ನು ಸೆಮಿಫೈನಲ್‌ನಲ್ಲಿ ಎದುರಿಸಲಿದೆ.

ಅಫ್ಗಾನಿಸ್ತಾನ ತಂಡದ ಇಬ್ರಾಹಿಂ ಜದ್ರಾನ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	8	8	0	0	16	2.456
ದಕ್ಷಿಣ ಆಫ್ರಿಕಾ	8	6	2	0	12	1.376
ಆಸ್ಟ್ರೇಲಿಯಾ	8	6	2	0	12	0.861
ನ್ಯೂಜಿಲೆಂಡ್	8	4	4	0	8	0.398
ಪಾಕಿಸ್ತಾನ	8	4	4	0	8	-0.036
ಅಫ್ಗಾನಿಸ್ತಾನ	8	4	4	0	8	-0.338
ಬಾಂಗ್ಲಾದೇಶ	8	2	6	0	4	-1.142
ಶ್ರೀಲಂಕಾ	8	2	6	0	4	-1.160
ನೆದರ್ಲೆಂಡ್ಸ್	7	2	5	0	4	-1.398
ಇಂಗ್ಲೆಂಡ್	7	1	6	0	2	-1.504

ಬಾಂಗ್ಲಾದ ಕೊನೆಯ ಪಂದ್ಯಕ್ಕೆ ಶಕಿಬ್ ಅಲಭ್ಯ: ಅನಾಮುಲ್ ಸೇರ್ಪಡೆ

ಶಕಿಬ್ ಅಲ್ ಹಸನ್

ನವದೆಹಲಿ (ಪಿಟಿಐ): ಬಾಂಗ್ಲಾದೇಶದ ಕ್ರಿಕೆಟ್ ತಂಡದ ನಾಯಕ ಶಕಿಬ್ ಅಲ್ ಹಸನ್ ಅವರು ಬೆರಳಿನ ಮೂಳೆಮುರಿತದಿಂದಾಗಿ ಏಕದಿನ ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಕೊನೆಯ ಲೀಗ್ ಪಂದ್ಯವನ್ನು ಕಳೆದುಕೊಳ್ಳಲಿದ್ದಾರೆ.

ಸೋಮವಾರ ದೆಹಲಿಯಲ್ಲಿ ಶ್ರೀಲಂಕಾ ವಿರುದ್ಧ ಪಂದ್ಯದಲ್ಲಿ ಬ್ಯಾಟಿಂಗ್ ವೇಳೆ ಶಕಿಬ್ ಅವರ ತೋರು ಬೆರಳಿಗೆ ಗಾಯವಾಗಿತ್ತು. ಪಂದ್ಯದ ನಂತರ ಎಕ್ಸ್‌ರೇ ಪರೀಕ್ಷೆಯಲ್ಲಿ ಬೆರಳಿನ ಮೂಳೆಗೆ ಪೆಟ್ಟಾಗಿರುವುದು ಪತ್ತೆಯಾಗಿದೆ. ಬಾಂಗ್ಲಾದೇಶ ತನ್ನ ಕೊನೆಯ ಪಂದ್ಯವನ್ನು ಶನಿವಾರ ಪುಣೆಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಆಡಲಿದೆ

'ಇನಿಂಗ್ಸ್‌ನ ಆರಂಭದಲ್ಲೇ ಅವರಿಗೆ ಗಾಯವಾಗಿತ್ತು. ಆದರೆ ಬೆರಳಿಗೆ ಬ್ಯಾಂಡೇಜ್ ಮತ್ತು ನೋವುನಿವಾರಕಗಳನ್ನು ತೆಗೆದುಕೊಂಡು ಅವರು ಬ್ಯಾಟ್ ಮಾಡಿದರು' ಎಂದು ಬಾಂಗ್ಲಾದೇಶದ ಫಿಜಿಯೊ ಬೇಯ್ಜುದುಲ್ ಇಸ್ಲಾಂ ಖಾನ್ ಅವರು ಮಂಗಳವಾರ ತಿಳಿಸಿದ್ದಾರೆ.

ಅವರು ಮಂಗಳವಾರವೇ ತವರಿಗೆ ಮರಳಿದ್ದು ಚಿಕಿತ್ಸೆಯ ಪ್ರಕ್ರಿಯೆ ಆರಂಭಿಸಿದ್ದಾರೆ. ಶಕಿಬ್ ಸ್ಥಾನದಲ್ಲಿ ಅನಾಮುಲ್ ಹಖ್ ಬಿಜೊಯ್ ಅವರು ತಂಡವನ್ನು ಸೇರಿಕೊಳ್ಳಲಿದ್ದಾರೆ.

ಸೋಮವಾರ ಏಂಜೆಲೊ ಮ್ಯಾಥ್ಯೂಸ್ ಅವರ ವಿವಾದಾತ್ಮಕ ಟೈಮ್ಡ್ ಔಟ್ ಪ್ರಕರಣದಲ್ಲಿ ಶಕಿಬ್ ಅವರು ಕೇಂದ್ರಬಿಂದುವಾಗಿದ್ದಾರೆ. ಅವರ ಮನವಿಯ ಮೇಲೆ ಅಂಪೈರ್‌ಗಳು ಶ್ರೀಲಂಕಾದ ಆಲ್‌ರೌಂಡರ್‌ಗೆ ಔಟ್ ತೀರ್ಪು ನೀಡಿದ್ದರು.

ಅಗ್ರ ಐವರು

ಬ್ಯಾಟಿಂಗ್

ಕ್ವಿಂಟನ್‌ ಡಿ ಕಾಕ್ (ದಕ್ಷಿಣ ಆಫ್ರಿಕಾ)	550
ವಿರಾಟ್‌ ಕೊಹ್ಲಿ (ಭಾರತ)	543
ರಚಿನ್‌ ರವೀಂದ್ರ (ನ್ಯೂಜಿಲೆಂಡ್)	523
ಡೇವಿಡ್‌ ವಾರ್ನರ್ (ಆಸ್ಟ್ರೇಲಿಯಾ)	446
ರೋಹಿತ್‌ ಶರ್ಮಾ (ಭಾರತ)	442

ಬೌಲಿಂಗ್

ದಿಲ್ಶಾನ್‌ ಮಧುಶಂಕ (ಶ್ರೀಲಂಕಾ)	21
ಜಂಪಾ (ಆಸ್ಟ್ರೇಲಿಯಾ)	20
ಮಾರ್ಕೊ ಯಾನ್ಸನ್ (ದಕ್ಷಿಣ ಆಫ್ರಿಕಾ)	17
ಮೊಹಮ್ಮದ್‌ ಶಮಿ (ಭಾರತ)	16
ಶಹೀನ್‌ ಶಾ ಅಫ್ರಿದಿ (ಪಾಕಿಸ್ತಾನ)	16

ಇಂಗ್ಲೆಂಡ್– ನೆದರ್ಲೆಂಡ್ಸ್ ಪೈಪೋಟಿ ಇಂದು; ಒತ್ತಡದಲ್ಲಿ ಬಟ್ಲರ್ ಬಳಗ

ಚಾಂಪಿಯನ್ಸ್ ಟ್ರೋಫಿಗೆ ಅರ್ಹತೆ ಗುರಿ

ಪುಣೆ (ಪಿಟಿಐ): ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವ ಅವಕಾಶ ಕಳೆದುಕೊಂಡಿರುವ ಇಂಗ್ಲೆಂಡ್ ಮತ್ತು ನೆದರ್ಲೆಂಡ್ಸ್ ತಂಡಗಳು ಬುಧವಾರ ಇಲ್ಲಿ ಪರಸ್ಪರ ಎದುರಾಗಲಿದ್ದು, 2025ರ ಚಾಂಪಿಯನ್ಸ್ ಟ್ರೋಫಿಗೆ ಅರ್ಹತೆ ಪಡೆಯಲು ಪ್ರಯತ್ನಿಸಲಿವೆ.

ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡ ಟೂರ್ನಿಯಲ್ಲಿ ಅತ್ಯಂತ ಕಳಪೆ ಪ್ರದರ್ಶನ ನೀಡಿದ್ದು, ಏಳು ಪಂದ್ಯಗಳಲ್ಲಿ ಕೇವಲ ಒಂದು ಗೆಲುವು ಸಾಧಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ. ಎರಡು ಗೆಲುವುಗಳೊಂದಿಗೆ ನಾಲ್ಕು ಪಾಯಿಂಟ್ಸ್ ಹೊಂದಿರುವ ನೆದರ್ಲೆಂಡ್ಸ್, ಒಂಬತ್ತನೇ ಸ್ಥಾನದಲ್ಲಿದೆ.

ಶನಿವಾರ ನಡೆದಿದ್ದ ಪಂದ್ಯದಲ್ಲಿ ಸಾಂಪ್ರದಾಯಿಕ ಪ್ರತಿಸ್ಪರ್ಧಿ ಆಸ್ಟ್ರೇಲಿಯಾ ಕೈಯಲ್ಲಿ ಎದುರಾಗಿದ್ದ 33 ರನ್‌ಗಳ ಸೋಲು ಇಂಗ್ಲೆಂಡ್‌ನ ಶವಪೆಟ್ಟಿಗೆಗೆ ಕೊನೆಯ ಮೊಳೆಯಾಗಿ ಪರಿಣಮಿಸಿತ್ತು. ನೆದರ್ಲೆಂಡ್ಸ್ ಕೂಡಾ ಸೆಮಿ 'ರೇಸ್'ನಿಂದ ಈಗಾಗಲೇ ಹೊರಬಿದ್ದಿದೆ.

ಮುಂದಿನ ವರ್ಷ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಆತಿಥೇಯ ಪಾಕಿಸ್ತಾನದ ಜತೆಯಲ್ಲಿ ಈ ವಿಶ್ವಕಪ್‌ನಲ್ಲಿ ಅಗ್ರ ಏಳು ಸ್ಥಾನಗಳನ್ನು ಪಡೆಯುವ ತಂಡಗಳು ಅರ್ಹತೆ ಪಡೆಯಲಿವೆ ಎಂದು ಐಸಿಸಿ ಈಚೆಗೆ ಹೇಳಿತ್ತು. ಆದ್ದರಿಂದ ಏಳರೊಳಗಿನ ಸ್ಥಾನಕ್ಕಾಗಿ ಇಂಗ್ಲೆಂಡ್ ಸೇರಿದಂತೆ ಕೆಲವು ತಂಡಗಳ ನಡುವೆ ಪೈಪೋಟಿ ಏರ್ಪಟ್ಟಿವೆ.

ಪ್ರತಿಷ್ಠಿತ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡುವ ಅವಕಾಶವಂಚಿತರಾಗಿ ಅವಮಾನಕ್ಕೆ ಗುರಿಯಾಗುವುದನ್ನು ತಪ್ಪಿಸಲು ಜೋಸ್ ಬಟ್ಲರ್ ಬಳಗಕ್ಕೆ ಇನ್ನುಳಿದ ಎರಡು ಪಂದ್ಯಗಳಲ್ಲಿ ಜಯ ಅನಿವಾರ್ಯ. ಇಂಗ್ಲೆಂಡ್ ತನ್ನ ಕೊನೆಯ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ಆದರೆ ಆತ್ಮವಿಶ್ವಾಸ ಮತ್ತು ಫಾರ್ಮ್ ಕಳೆದುಕೊಂಡಿರುವ ತಂಡಕ್ಕೆ ಗೆಲುವಿನ ಹಾದಿಗೆ ಮರಳುವುದು ಅಷ್ಟು ಸುಲಭವಲ್ಲ. ತಂಡದ ಬ್ಯಾಟಿಂಗ್ ವಿಭಾಗ ಪೂರ್ಣ ವಿಫಲವಾಗಿದೆ. ಜಾನಿ ಬೆಸ್ಟೊ ಮತ್ತು ಡೇವಿಡ್ ಮಲಾನ್ ಉತ್ತಮ ಆರಂಭ ನೀಡುವಲ್ಲಿ ಎಡವಿದ್ದಾರೆ. ಸ್ಥಿರ ಪ್ರದರ್ಶನಕ್ಕೆ ಹೆಸರಾಗಿದ್ದ ಜೋ ರೂಟ್ ಅವರೂ ಗಮನ ಸೆಳೆದಿಲ್ಲ. ನಾಯಕ ಬಟ್ಲರ್ ಮತ್ತು ಸ್ಫೋಟಕ ಬ್ಯಾಟರ್ ಲಿಯಾಮ್ ಲಿವಿಂಗ್‌ಸ್ಟೋನ್ ಅವರಿಗೂ ಫಾರ್ಮ್ ಕೈಕೊಟ್ಟಿದೆ.

ಸೋಲಿನ ಸರಪಳಿ ಕಡಿಯಬೇಕಾದರೆ ಬ್ಯಾಟರ್‌ಗಳಿಂದ ಜವಾಬ್ದಾರಿಯುತ ಆಟ ಮೂಡಿಬರಬೇಕಿದೆ. ಬ್ಯಾಟರ್‌ಗಳಿಗೆ ಹೋಲಿಸಿದರೆ ಇಂಗ್ಲೆಂಡ್‌ನ ಬೌಲರ್‌ಗಳು ಸ್ವಲ್ಪ ಉತ್ತಮ ಪ್ರದರ್ಶನ ನೀಡಿದ್ದಾರೆ. ಆದರೂ ಭಾರತದ ಪಿಚ್‌ಗಳಿಗೆ ಹೊಂದಿಕೊಳ್ಳಲು ಅವರಿಗೆ ಸಾಧ್ಯವಾಗಿಲ್ಲ.

ನೆದರ್ಲೆಂಡ್ಸ್ ತಂಡದ ಆಟಗಾರರ ಅಭ್ಯಾಸ –ಪಿಟಿಐ ಚಿತ್ರ

ಇಂಗ್ಲೆಂಡ್ ತಂಡದ ಆಟಗಾರ ಸ್ಯಾಮ್ ಕರನ್ –ಎಎಫ್‌ಪಿ ಚಿತ್ರ

ಸ್ಕಾಟ್ ಎಡ್ವರ್ಡ್ಸ್ ನಾಯಕತ್ವದ ನೆದರ್ಲೆಂಡ್ಸ್ ಕೂಡಾ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಅರ್ಹತೆ ಪಡೆಯುವತ್ತ ಚಿತ್ತ ನೆಟ್ಟಿದೆ. 'ಆರೆಂಜ್ ಆರ್ಮಿ'ಯು ದಕ್ಷಿಣ ಆಫ್ರಿಕಾ ಮತ್ತು ಬಾಂಗ್ಲಾದೇಶ ತಂಡಗಳಿಗೆ ಆಘಾತ ನೀಡಿದೆ. ಇಂಗ್ಲೆಂಡ್ ವಿರುದ್ಧ ಗೆದ್ದರೆ, ಈ ಟೂರ್ನಿಯು ಸ್ಮರಣೀಯ ಎನಿಸಲಿದೆ.

ಆಲ್‌ರೌಂಡರ್‌ಗಳನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಒಳಗೊಂಡಿರುವ ನೆದರ್ಲೆಂಡ್ಸ್ ತಂಡದ ಮೇಲಿನ ಕ್ರಮಾಂಕದ ಬ್ಯಾಟರ್‌ಗಳು ಮತ್ತು ಬೌಲರ್‌ಗಳು ಪ್ರದರ್ಶನದಲ್ಲಿ ಸ್ಥಿರತೆ ಕಂಡುಕೊಳ್ಳಬೇಕಿದೆ. ಅಫ್ಗಾನಿಸ್ತಾನ ವಿರುದ್ಧದ ಪಂದ್ಯದಲ್ಲಿ ವಿಫಲರಾಗಿದ್ದ ವೆಸ್ಲಿ ಬ್ಯಾರೆಸಿ ಬದಲು ವಿಕ್ರಮ್‌ಜೀತ್ ಸಿಂಗ್ ಅವರಿಗೆ ಮತ್ತೆ ಅವಕಾಶ ಲಭಿಸುವ ಸಾಧ್ಯತೆಯಿದೆ.

ಬಲಾಬಲ
ಇಂಗ್ಲೆಂಡ್ ಮತ್ತು ನೆದರ್ಲೆಂಡ್ಸ್ ತಂಡಗಳು ವಿಶ್ವಕಪ್‌ನಲ್ಲಿ ಮೂರು ಪಂದ್ಯಗಳು ಸೇರಿದಂತೆ ಏಕದಿನ ಕ್ರಿಕೆಟ್‌ನಲ್ಲಿ ಒಟ್ಟು ಆರು ಸಲ ಎದುರಾಗಿದ್ದು, ಎಲ್ಲದರಲ್ಲೂ ಇಂಗ್ಲೆಂಡ್ ಗೆದ್ದಿದೆ. 1996, 2003 ಮತ್ತು 2011ರ ವಿಶ್ವಕಪ್‌ನಲ್ಲಿ ಉಭಯ ತಂಡಗಳು ಪೈಪೋಟಿ ನಡೆಸಿದ್ದವು.
ಪಂದ್ಯ ಆರಂಭ: ಮಧ್ಯಾಹ್ನ 2
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬ್ಯಾಸ್ಕೆಟ್‌ಬಾಲ್: ಜೆಎಸ್‌ಸಿ ತಂಡ ಕ್ವಾರ್ಟರ್ ಫೈನಲ್‌ಗೆ

ಬೆಂಗಳೂರು: ಜೆಎಸ್‌ಸಿ ತಂಡ ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪುರುಷರ ವಿಭಾಗದಲ್ಲಿ 98–71ರಿಂದ ಬೆಂಗಳೂರು ವ್ಯಾನ್ಗಾರ್ಡ್ಸ್ ತಂಡವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ಪ್ರಿ ಕ್ವಾರ್ಟರ್ ಫೈನಲ್ ಹಂತದ ಪಂದ್ಯಗಳು ನಡೆದವು.

ಫಲಿತಾಂಶ: ಕೆಎಸ್‌ಪಿ 91–78ರಿಂದ ಎಚ್‌ಬಿಆರ್ ತಂಡವನ್ನು, ಯಂಗ್ ಓರಿಯನ್ಸ್ 63–43ರಿಂದ ವಿಬಿಸಿ ಮಂಡ್ಯವನ್ನು, ಬ್ಯಾಂಕ್ ಆಫ್ ಬರೋಡಾ 95–51ರಿಂದ ಆರ್ಯನ್ಸ್ ಮೈಸೂರನ್ನು, ಸೌಥರ್ನ್ ಬ್ಲೂಸ್ 64–44ರಿಂದ ಸಹಕಾರ ನಗರವನ್ನು, ಎಂಇಜಿ 80–45ರಿಂದ ವಿವೇಕ್ಸ್ ಅನ್ನು, ಬೀಗಲ್ಸ್ 84–72ರಿಂದ ಓರಿಯನ್ಸ್ ಅನ್ನು ಮಣಿಸಿದವು.

ಮಹಿಳೆಯರ ವಿಭಾಗ: ಮೌಂಟ್ಸ್ ಬಿ.ಸಿ. ತಂಡವು ಎಂಎನ್‌ಕೆ ರಾವ್ ವಿರುದ್ಧ, ಡಿವೈಇಎಸ್ ಮೈಸೂರು ತಂಡವು ವ್ಯಾನ್ಗಾರ್ಡ್ಸ್ ವಿರುದ್ಧ, ರಾಜ್‌ಮಹಲ್ ತಂಡವು ಬೆಂಗಳೂರು ಸ್ಪೋರ್ಟಿಂಗ್ ವಿರುದ್ಧ, ಕೆ.ಎಸ್. ಹೆಗ್ಡೆ ತಂಡವು ಹೆಬ್ಬಾಳ ವಿರುದ್ಧ, ಬೀಗಲ್ಸ್ ತಂಡವು ಡಿವೈಇಎಸ್ ವಿದ್ಯಾನಗರ ವಿರುದ್ಧ, ಸಿಜೆಸಿ ತಂಡ ರೋವರ್ಸ್ ಧಾರವಾಡ ವಿರುದ್ಧ ಗೆಲುವು ಸಾಧಿಸಿದವು.

ಕ್ರೀಡಾ ಸಚಿವರ ನಿರ್ಧಾರ ಅನೂರ್ಜಿತ: ಶ್ರೀಲಂಕಾ ಕ್ರಿಕೆಟ್ ಮಂಡಳಿಗೆ ಮತ್ತೆ ಅಧಿಕಾರ

ಕೊಲಂಬೊ (ಎಎಫ್‌ಪಿ): ಶ್ರೀಲಂಕಾ ಕ್ರಿಕೆಟ್ ಮಂಡಳಿಯನ್ನು ವಜಾಗೊಳಿಸಿರುವ ಕ್ರೀಡಾ ಸಚಿವರ ಕ್ರಮವನ್ನು ಅಲ್ಲಿನ ಮೇಲ್ಮನವಿ ನ್ಯಾಯಾ ಲಯ ಪೂರ್ಣಪ್ರಮಾಣದ ವಿಚಾರಣೆ ಬಾಕಿ ಯಿರಿಸಿ ಮಂಗಳವಾರ ಅನೂರ್ಜಿತಗೊಳಿಸಿದೆ. ಹೀಗಾಗಿ ಹಳೆಯ ಮಂಡಳಿಯ ಪದಾಧಿಕಾರಿಗಳು ಸದ್ಯ ಅಧಿಕಾರದಲ್ಲಿ ಮುಂದುವರಿಯಲಿದ್ದಾರೆ.

ಮಂಡಳಿ ವಜಾಗೊಳಿಸಿ, ಮಧ್ಯಂತರ ಸಮಿತಿಯನ್ನು ನೇಮಿಸಿದ ಕ್ರೀಡಾ ಸಚಿವ ರೋಷನ್ ರಣಸಿಂಘೆ ಅವರ ಕ್ರಮವನ್ನು ಪ್ರಶ್ನಿಸಿ ಮಂಡಳಿ ಅಧ್ಯಕ್ಷ ಶಮ್ಮಿ ಸಿಲ್ವ ಅವರು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಂಡ ನ್ಯಾಯಾಲಯ ಈ ಆದೇಶ ಪ್ರಕಟಿಸಿತು.

'ಆದರೆ ಅನೂರ್ಜಿತ ಆದೇಶ ಎರಡು ವಾರಗಳವರೆಗೆ ಮಾತ್ರ ಚಾಲ್ತಿಯಲ್ಲಿರಲಿದೆ. ನಂತರ ನ್ಯಾಯಾಲಯ ವಿಚಾರಣೆ ಮುಂದುವರಿಸಲಿದೆ' ಎಂದು ನ್ಯಾಯಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

ರಣಸಿಂಘೆ ಮತ್ತು ಮಂಡಳಿ ನಡುವೆ ತಿಂಗಳಿಂದ ಘರ್ಷಣೆ ನಡೆಯುತ್ತಿದೆ. ಮಂಡಳಿಯಲ್ಲಿ ವ್ಯಾಪಕ ಪ್ರಮಾಣ ಭ್ರಷ್ಟಾಚಾರ ನಡೆಯು ತ್ತಿದೆ ಎಂದು ಸಚಿವರು ಆರೋಪಿಸುತ್ತಿದ್ದರು. ವಿಶ್ವಕಪ್ ಪಂದ್ಯದಲ್ಲಿ ಭಾರತ ಕೈಲಿ ಹೀನಾಯ ವಾಗಿ ಸೋತ ಎರಡೇ ದಿನದ ನಂತರ ಅವರು ಮಂಡಳಿಯನ್ನು ವಜಾಗೊಳಿಸಿದ್ದರು. ಆರ್ಥಿಕ ಬಿಕ್ಕಟ್ಟಿನಿಂದ ಕಂಗೆಟ್ಟಿರುವ ಈ ದೇಶದಲ್ಲಿ ಕ್ರಿಕೆಟ್ ಮಂಡಳಿ ಮಾತ್ರ ಶ್ರೀಮಂತ ಸಂಸ್ಥೆಯಾಗಿದೆ.

ನ್ಯಾಯಾಲಯದ ಆದೇಶ ಓದಿ ಹೇಳುತ್ತಿದ್ದಂತೆ 1996ರ ವಿಶ್ವಕಪ್ ತಂಡದ ನಾಯಕ ಹಾಗೂ ಮಧ್ಯಂತರ ಸಮಿತಿ ಅಧ್ಯಕ್ಷ ಅರ್ಜುನ ರಣತುಂಗ ಮತ್ತು ಇತರ ಪದಾಧಿಕಾರಿಗಳು ಮಂಡಳಿಯ ಕಚೇರಿಯಿಂದ ನಿರ್ಗಮಿಸಿದರು. ಹಳೆಯ ಪದಾಧಿಕಾರಿಗಳು ಮತ್ತೆ ಅಧಿಕಾರ ವಹಿಸಿಕೊಂಡರು.

ಪುರುಷರ ಹಾಕಿ ಫೈನಲ್‌ಗೆ ಕರ್ನಾಟಕ

ರಾಷ್ಟ್ರೀಯ ಕ್ರೀಡಾಕೂಟ: 200 ಪದಕ ಗೆದ್ದ ಮಹಾರಾಷ್ಟ್ರ

ಪಣಜಿ: ಕರ್ನಾಟಕ ತಂಡ, ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡೆಗಳ ಪುರುಷರ ಹಾಕಿ ಸ್ಪರ್ಧೆಯ ಸೆಮಿಫೈನಲ್‌ನಲ್ಲಿ ಮಂಗಳವಾರ ರೋಚಕ ಹೋರಾಟದಲ್ಲಿ ಮಹಾರಾಷ್ಟ್ರ ತಂಡವನ್ನು 5–4 ಗೋಲುಗಳಿಂದ ಸೋಲಿಸಿ ಫೈನಲ್ ತಲುಪಿತು.

ಕ್ರೀಡಾಕೂಟದಲ್ಲಿ ಮಹಾರಾಷ್ಟ್ರ ತಂಡ ಪ್ರಾಬಲ್ಯ ಮುಂದುವರಿಸಿದ್ದು, ಗೆದ್ದಿರುವ ಪದಕಗಳ ಸಂಖ್ಯೆ 200 ದಾಟಿತು. ಈ ಕೂಟದಲ್ಲಿ ಮಹಾರಾಷ್ಟ್ರ 70 ಚಿನ್ನ, 64 ಬೆಳ್ಳಿ, 69 ಕಂಚಿನ ಪದಕ ಗೆದ್ದುಕೊಂಡಿತು. ಸರ್ವಿಸಸ್ ಮತ್ತು ಹರಿಯಾಣ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದೆ.

ಕರ್ನಾಟಕ ಪುರುಷರ ತಂಡ ಹಾಕಿ ಫೈನಲ್‌ನಲ್ಲಿ ಹರಿಯಾಣವನ್ನು ಎದುರಿಸಲಿದೆ. ಹರಿಯಾಣ ಇನ್ನೊಂದು ಸೆಮಿಫೈನಲ್‌ನಲ್ಲಿ 1–0 ಗೋಲಿನಿಂದ ಉತ್ತರ ಪ್ರದೇಶ ತಂಡವನ್ನು ಸೋಲಿಸಿತು.

ಕೊಕ್ಕೊ ಮಹಿಳೆಯರ ವಿಭಾಗದ ಸೆಮಿಫೈನಲ್‌ನಲ್ಲಿ ಮಹಾರಾಷ್ಟ್ರ 54–30 ಪಾಯಿಂಟ್‌ಗಳಿಂದ ಕರ್ನಾಟಕವನ್ನು ಸೋಲಿಸಿತು. ಕಂಪಾಲಾ ಕ್ರೀಡಾ ಗ್ರಾಮದಲ್ಲಿ ನಡೆದ ಕಳರಿಪಯಟ್ಟು ಸ್ಪರ್ಧೆಯಲ್ಲಿ ಕೇರಳ ಪಣಕ್ಕಿದ್ದ ಎಲ್ಲ 11 ಚಿನ್ನಗಳನ್ನು ಬಾಚಿಕೊಂಡಿತು.

ಪುರುಷರ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಸರ್ವಿಸಸ್ ಏಳು ಫೈನಲ್‌ಗಳ ಪೈಕಿ ಆರರಲ್ಲಿ ಫೈನಲ್ ತಲುಪಿತು. ಹರಿಯಾಣವನ್ನು ಪ್ರತಿನಿಧಿಸಿದ ವಿಶ್ವ ಚಾಂಪಿಯನ್ ಸವಿತಿ ಬೂರಾ, 70 ರಿಂದ 75 ಕೆ.ಜಿ. ವಿಭಾಗದಲ್ಲಿ ಫೈನಲ್ ತಲುಪಿದರು.

ಮಹಿಳೆಯರ ಕೆನೊ ವೈಯಕ್ತಿಕ ವಿಭಾಗದಲ್ಲಿ ಕರ್ನಾಟಕದ ಎ.ಧನಲಕ್ಷ್ಮಿ ಬೆಳ್ಳಿ ಪದಕ ಗೆದ್ದುಕೊಂಡರು.

ನಿವೃತ್ತಿ ಬಗ್ಗೆ ನಿರ್ಧರಿಸಿಲ್ಲ: ಚೆಟ್ರಿ

ನವದೆಹಲಿ (ಪಿಟಿಐ): ವೃತ್ತಿಜೀವನದ 'ಬೋನಸ್ ಅವಧಿ'ಯಲ್ಲಿರುವುದಾಗಿ ಹೇಳಿರುವ ಭಾರತ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಚೆಟ್ರಿ, ನಿವೃತ್ತಿಯ ಬಗ್ಗೆ ನಿರ್ಧರಿಸಿಲ್ಲ ಎಂದಿದ್ದಾರೆ.

'ಈಗಲೂ ಆಡುತ್ತಿದ್ದೇನೆ ಎಂಬುದು ಸಂತಸದ ವಿಷಯ. ನನಗೆ ಇದು ಬೋನಸ್ ಅವಧಿಯಾಗಿದ್ದು, ಅದನ್ನು ಆನಂದಿಸುತ್ತಿದ್ದೇನೆ. ಇದು ಯಾವಾಗ ಕೊನೆಗೊಳ್ಳುತ್ತದೆ ಎಂಬುದು ತಿಳಿದಿಲ್ಲ' ಎಂದು ಚೆಟ್ರಿ ಹೇಳಿದ್ದಾರೆ.

'ನನಗೆ ಈಗ 39 ವರ್ಷ. ಯಾವುದೇ ದೀರ್ಘಾವಧಿಯ ಗುರಿಗಳನ್ನು ಹಾಕಿಕೊಂಡಿಲ್ಲ. ಮುಂದಿನ 3 ತಿಂಗಳುಗಳ ಬಗ್ಗೆ ಮಾತ್ರ ಯೋಚಿಸುತ್ತೇನೆ. ಅದು ಪೂರ್ಣಗೊಂಡ ಬಳಿಕ ಬಳಿಕ ಮತ್ತೆ 3 ತಿಂಗಳುಗಳ ಬಗ್ಗೆ ಯೋಚಿಸುವೆನು. ಇದು ಎಷ್ಟು ಕಾಲ ಮುಂದುವರಿಯಲಿದೆ ಎಂಬುದನ್ನು ನೋಡೋಣ' ಎಂದು ಫಿಫಾ.ಕಾಮ್ ಜತೆ ಮುಕ್ತವಾಗಿ ಮಾತನಾಡಿದ್ದಾರೆ.

'ದೈಹಿಕವಾಗಿ ಸಮರ್ಥನಿದ್ದೇನೆ ಎಂದು ನನಗನಿಸುತ್ತಿದೆ. ರಾಷ್ಟ್ರೀಯ ತಂಡ ಮತ್ತು ಕ್ಲಬ್‌ಗೆ ಇನ್ನಷ್ಟು ಕೊಡುಗೆ ನೀಡುವುದನ್ನು ಎದುರು ನೋಡುತ್ತಿದ್ದೇನೆ' ಎಂದರು.

ಭಾರತ ತಂಡವು 2026ರ ಫಿಫಾ ವಿಶ್ವಕಪ್ ಟೂರ್ನಿಯ ಎರಡನೇ ಸುತ್ತಿನ ಅರ್ಹತಾ ಟೂರ್ನಿಯಲ್ಲಿ ನ.16 ರಂದು ಕುವೈತ್ ವಿರುದ್ಧ 'ಅವೇ' ಪಂದ್ಯ ಆಡಲಿದೆ. ನ.21 ರಂದು ಭುವನೇಶ್ವರದಲ್ಲಿ ಕತಾರ್ ತಂಡವನ್ನು ಎದುರಿಸಲಿದೆ.

ಹಾಕಿ ವಿಶ್ವ ರ್‍ಯಾಂಕಿಂಗ್: ಅಗ್ರಸ್ಥಾನದಲ್ಲಿ ನೆದರ್ಲೆಂಡ್ಸ್

ಆರನೇ ಸ್ಥಾನಕ್ಕೇರಿದ ಮಹಿಳಾ ತಂಡ

ನವದೆಹಲಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ಎಫ್‌ಐಎಚ್ ವಿಶ್ವ ರ್‍ಯಾಂಕಿಂಗ್‌ನಲ್ಲಿ ಮತ್ತೆ ಆರನೇ ಸ್ಥಾನಕ್ಕೇರಿದೆ.

ರಾಂಚಿಯಲ್ಲಿ ಭಾನುವಾರ ಕೊನೆಗೊಂಡ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಚಿನ್ನ ಜಯಿಸಿದ್ದು, ಎರಡು ಸ್ಥಾನ ಮೇಲಕ್ಕೇರಲು ಕಾರಣ. ಸವಿತಾ ಪೂನಿಯಾ ಬಳಗ ಈ ಟೂರ್ನಿಗೆ ಮುನ್ನ ಎಂಟನೇ ಸ್ಥಾನದಲ್ಲಿತ್ತು.

2368.83 ರೇಟಿಂಗ್ ಪಾಯಿಂಟ್ಸ್‌ಗಳೊಂದಿಗೆ ಭಾರತ ತಂಡ ಇಂಗ್ಲೆಂಡ್‌ಗಿಂತ ಒಂದು ಸ್ಥಾನ ಮುಂದಿದೆ. ಕಳೆದ ವರ್ಷ ಜೂನ್‌ನಲ್ಲಿ ಆರನೇ ಸ್ಥಾನದಲ್ಲಿದ್ದ ತಂಡ, ಬಳಿಕ ಕುಸಿತ ಕಂಡಿತ್ತು.

3422.40 ಪಾಯಿಂಟ್ಸ್‌ಗಳೊಂದಿಗೆ ನೆದರ್ಲೆಂಡ್ಸ್ ತಂಡ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಆಸ್ಟ್ರೇಲಿಯಾ ಮತ್ತು ಅರ್ಜೆಂಟೀನಾ ತಂಡಗಳು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನಗಳಲ್ಲಿವೆ. ಭಾರತಕ್ಕಿಂತ ಮುಂದಿರುವ ಇನ್ನೆರಡು ತಂಡಗಳೆಂದರೆ ಬೆಲ್ಜಿಯಂ ಮತ್ತು ಜರ್ಮನಿ.

ವಿಶ್ವ ರ್‍ಯಾಂಕಿಂಗ್‌ನಲ್ಲಿ ಮೇಲಕ್ಕೇರಿರುವುದು ಪ್ಯಾರಿಸ್ ಒಲಿಂಪಿಕ್ಸ್ ಅರ್ಹತಾ ಟೂರ್ನಿಗೆ ಸಜ್ಜಾಗಲಿರುವ ಭಾರತ ತಂಡದ ಆಟಗಾರ್ತಿಯರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಒಲಿಂಪಿಕ್ಸ್ ಅರ್ಹತಾ ಟೂರ್ನಿ ರಾಂಚಿಯಲ್ಲಿ ಮುಂದಿನ ಜನವರಿ 13 ರಿಂದ 19ರ ವರೆಗೆ ನಡೆಯಲಿದೆ.

ಭಾರತ ತಂಡವು ಜರ್ಮನಿ, ನ್ಯೂಜಿಲೆಂಡ್, ಜಪಾನ್, ಚಿಲಿ, ಅಮೆರಿಕ, ಇಟಲಿ ಮತ್ತು ಜೆಕ್ ರಿಪಬ್ಲಿಕ್ ತಂಡಗಳ ಜತೆ ಪೈಪೋಟಿ ನಡೆಸಲಿದೆ.

ಸರ್ಟಿಫೈಡ್ ವಜ್ರಗಳು, ₹ 4999/-ರಿಂದ* ಆರಂಭ

Available At Exclusive Mia Stores: Indiranagar – Ph:08049770998, Jayanagar – Ph: 080-43027444, RMZ Galleria Mall, Yelahanka – Ph: 08068137455, Vega City Mall – Ph: 7483061064, Nexus Mall, Koramangala – Ph: 080-22067865, Phoenix Market City, – Ph: 8049626611, Nexus Shantiniketan Mall – Ph: -088025018037, HSR Layout – Ph: 07005002542, Sarjapura Road – Ph: 9008536515, Marathahalli - Ph : 9535750418, New BEL Road - Ph: 08041492186, Malleshwaram – Ph: 9845367809, Banashankari - Ph: 89044 61212, Falcon City Mall – Ph: 8904091516, JP Nagar – Ph: 7760432299, Koramangala 4th Block - Ph : 9916559899, KR Puram – Ph: 8981265096, Lulu Mall – Ph: 7259149790, Mia Whitefield – Ph: 9740984275, Mall of Asia - Ph: 9080667966. **Available At All Tanishq Stores Near You. Customer Support: 1-800-266-0123**

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

*Terms and Condition apply. Product shown in the picture may vary from the actual product available in the market. Accessories shown in the product are not part of the standard equipment. Features may vary with colours & variants.

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9844478636; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com